ಮಂಗಳೂರು
ಮಂಗಳವಾರ, 16 ಜೂನ್ 2026
ಸಂಪುಟ 48, ಸಂಚಿಕೆ 89, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಅಮೆರಿಕ-ಇರಾನ್ ಶಾಂತಿ ಒಪ್ಪಂದ ಅಂತಿಮ | 09
ಒಪ್ಪಂದ ಸ್ವಾಗತಿಸಿದ ಮೋದಿ | 09
ಕೇರಳ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ | 09

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಆರ್ದ್ರ

ದಿನದ ಮಾತು

ಅನುಭವ ಒಳ್ಳೆಯ ಉಪಾಧ್ಯಾಯನಂತೆ. ಅದು ಮೊದಲು ಪರೀಕ್ಷೆ ಮಾಡಿ ನಂತರ ಪಾಠ ಕಲಿಸುತ್ತದೆ.

▲ ನಾಣ್ನುಡಿ

ಕಂಪನಿ ದೊಡ್ಡದಾಗಲಿಕ್ಕೆ, ದೊಡ್ಡ ಸದ್ದು ಮಾಡಲೇಬೇಕಿಲ್ಲ

ರಾಘವಾಂಕಣ

• ರಾಘವೇಂದ್ರ ಸುಬ್ರಹ್ಮಣ್ಯ

• ಪುಟ ೬

ಕಿರುಸುದ್ದಿ

ಯಾವ ಗ್ಯಾರಂಟಿಯೂ ನಿಲ್ಲೋದಿಲ್ಲ: ಸಿಎಂ ಡಿಕೆಶಿ

• **ಬೆಂಗಳೂರು:** ಮಹಿಳೆಯರಿಗೆ ಆರ್ಥಿಕ ಶಕ್ತಿ ತುಂಬಲು, ನಮ್ಮ ಸರ್ಕಾರ ಪ್ರೀತಿಯಿಂದ ಕೊಟ್ಟಿರುವ ಗ್ಯಾರಂಟಿ ಯೋಜನೆಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು. ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಲಾಗುತ್ತಿದೆ ಎಂದು ವಿರೋಧ ಪಕ್ಷಗಳ ಪ್ರಚಾರಕ್ಕೆ ತಿರುಗೇಟು ನೀಡಿದ ಅವರು, ವಿಪಕ್ಷಗಳಿರುವುದೇ ಟೀಕೆ ಮಾಡಲು. ನಾವು ಏನೇ ಒಳ್ಳೆಯದು ಮಾಡಲು ಮುಂದಾದರೂ ಅದಕ್ಕೆ ಅಡ್ಡಗಾಲು ಹಾಕುವುದಕ್ಕೆ ವಿರೋಧ ಪಕ್ಷಗಳಿರುವುದು ಎಂದರು. ➡ಪುಟ ೪

ಮಾವನ ಪ್ರಾಣ ಉಳಿಸಿದ ಅಳಿಯ:ವಿಚ್ಛೇದನ ಪತ್ರ ಹರಿದು ಪತಿಯ ಅಪ್ಪಿಕೊಂಡ ಪತ್ನಿ !

• **ಹೊಸದಿಲ್ಲಿ:** ಇಂದು ವಿವಾಹ ವಿಚ್ಛೇದನಕ್ಕೆ ಬಂದ ಬಹುತೇಕ ಪ್ರಕರಣಗಳೂ ಕೇವಲ ಅಹಂ, ಒಣ ಪ್ರತಿಷ್ಠೆ, ಕ್ಷುಲ್ಲಕ ವಿಷಯಗಳನ್ನು ಆಧರಿಸಿರುವಂಥದ್ದು ಎಂಬುದು ಸರ್ವವಿದಿತ.ಸಣ್ಣ ಮಾತು, ಸಣ್ಣ ವಿಷಯಗಳಿಗೂ ವಿಚ್ಛೇದನ ಕೋರುವ ಪ್ರಕರಣಗಳು ನ್ಯಾಯಾಲಯದಲ್ಲಿ ತುಂಬಿರುವುದು ವರದಿಯಾಗುತ್ತಲೇ ಇದೆ.ಆದರೆ ಇಂತಹ ಕ್ಷುಲ್ಲಕ ವಿಷಯಗಳನ್ನು ಮುಂದಿಟ್ಟುಕೊಂಡು ವರ್ಷಗಳ ಕಾಲ ನಡೆಯುವ ಕಾನೂನು ಹೋರಾಟ, ಕೋಪ, ಅಹಂಕಾರ ಮತ್ತು ನೋವು ಸಾಧಿಸದ ಕೆಲಸವನ್ನು ಒಂದು ಸಣ್ಣ ಮಾನವೀಯ ನಡೆ ಸಾಧಿಸಿಬಿಡುತ್ತದೆ ಎಂಬುದಕ್ಕೆ ದಿಲ್ಲಿ ನ್ಯಾಯಾಲಯವೊಂದರಲ್ಲಿ ನಡೆದ ಘಟನೆಯೊಂದು ಸಾಬೀತುಪಡಿಸಿದೆ.

2020ರಲ್ಲಿ ವಿವಾಹವಾಗಿದ್ದ ಸಂಭ್ರಮದ ವೈವಾಹಿಕ ಜೀವನ ಆರಂಭಿಸಿದ್ದ ಶಿಖಾ ಮತ್ತು ಸೌರಭ್ ಕೆಲವೇ ವರ್ಷಗಳಲ್ಲಿ ಮುನಿಸು, ಆರೋಪ-ಪ್ರತ್ಯಾರೋಪ, ಕಲಹಗಳಿಂದ ವಿಚ್ಛೇದನಕ್ಕಾಗಿ ಕೋರ್ಟ್ ಮೆಟ್ಟಿಲೇರುವ ಹಂತಕ್ಕೆ ತಲುಪಿತ್ತು. ➡ಪುಟ ೫



ಸಿಂಧೂ ಬಳಿಕ ಚೆನಾಬ್ ಅಭಿವೃದ್ಧಿಗೆ ಉತ್ತೇಜನ

• ಪುಟ ೨

ಸುದ್ದಿ ಸಮಗ್ರ

ಕೃಷಿ ಕಾರ್ಯಕ್ಕೆ ಪ್ರಕೃತಿ ವಿಕೋಪ ಅಡ್ಡಿ ಆಗದಂತೆ ನಿಗಾ ವಹಿಸಿ

ಡ್ರೋನ್, ಎಐ ತಂತ್ರಜ್ಞಾನ ತಲುಪಿಸಿ: ಸಿಎಂ ಡಿಕೆಶಿ ಸೂಚನೆ

ಬರ ಎದುರಿಸಲು ಸಜ್ಜಾಗಿ

• **ಬೆಂಗಳೂರು:** ಬಿತ್ತನೆ ಬೀಜ, ರಸಗೊಬ್ಬರ ಸಮರ್ಪಕ ಪೂರೈಕೆ ಖಾತರಿಗೆ ಸಿಎಂ ಡಿ.ಕೆ. ಶಿವಕುಮಾರ್ ಸೂಚನೆ ನೀಡಿದ್ದು, ಅಧಿಕಾರಿಗಳು ಬರ ಪರಿಸ್ಥಿತಿ ಎದುರಿಸಲು ತುರ್ತು ಕ್ರಮಗಳ ಪೂರ್ವ ಸಿದ್ಧತೆ ಕೈಗೊಳ್ಳಬೇಕು. ಡ್ರೋನ್, ಎಐ ಮತ್ತಿತರ ಆಧುನಿಕ ತಂತ್ರಜ್ಞಾನವನ್ನು ರೈತರಿಗೆ ತಲುಪಿಸುವ ವ್ಯವಸ್ಥೆ ಮಾಡಿ ಎಂದಿದ್ದಾರೆ.

ವಿಧಾನಸೌಧದಲ್ಲಿ ಸೋಮವಾರ ಕೃಷಿ, ರೇಷ್ಮೆ, ತೋಟಗಾರಿಕೆ ಹಾಗೂ ಮೀನುಗಾರಿಕೆ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಇಲಾಖೆ ಪ್ರಗತಿ ಪರಿಶೀಲನೆ ನಡೆಸಿದ ಮುಖ್ಯಮಂತ್ರಿಗಳು, ಪ್ರಕೃತಿ ವೈಪರೀತ್ಯಗಳಿಂದ ರೈತರ ಕೃಷಿ ಚಟುವಟಿಕೆಗೆ ತೊಂದರೆ ಆಗಬಾರದು. ಕ್ರಿಮಿನಾಶಕ ಮತ್ತಿತರ ಔಷಧ ಸಿಂಪರಣೆ ಸಲಕರಣೆಗಳ ನೆರವನ್ನು ರೈತರಿಗೆ ಒದಗಿಸಬೇಕು ಎಂದು ಸೂಚನೆ ನೀಡಿದರು.

ಅಧ್ಯಯನ ವರದಿ ನೀಡಿ: ರೈತರ ಆದಾಯ ಹೆಚ್ಚಿಸಲು ಈಗಾಗಲೇ ಸೂಚಿಸಿರುವ ಕ್ರಮಗಳನ್ನು ಸಮರ್ಪಕವಾಗಿ ಜಾರಿ ಮಾಡಬೇಕಿದ್ದು, ಕೃಷಿ ಇಲಾಖೆ ಅಧೀನದಲ್ಲಿರುವ ಐದು ನಿಗಮ ಮತ್ತು ಮಂಡಳಿಗಳ ಸ್ಥಿತಿಗತಿಯ ಅಧ್ಯಯನ ನಡೆಸಿ ವರದಿ ನೀಡಿ. ರೈತರಿಗೆ ನೀಡಬೇಕಾದ ಪೂರಕ ಮಾಹಿತಿಗಳನ್ನು ವರದಿಯಲ್ಲಿ ಉಲ್ಲೇಖಿಸಿ ಎಂದು ಸೂಚಿಸಿದ್ದು, ಕೃಷಿ ಹೊಂಡಗಳಿಗೆ ಬಿದ್ದು ಸಾವನ್ನಪ್ಪುವ ಘಟನೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಹೊಂಡಗಳಿಗೆ ಬೇಲಿ ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಇದಕ್ಕೆ ಹಣಕಾಸಿನ ನೆರವು ಸಂಬಂಧ ಅಗತ್ಯ ಯೋಜನೆ ರೂಪಿಸಲು ತಿಳಿಸಿದರು.

ಖಾಲಿ ಹುದ್ದೆ ಭರ್ತಿಗೆ ಕ್ರಮ: ಇತರೆ ರಾಜ್ಯಗಳಲ್ಲಿರುವ ಮಾದರಿ ಯೋಜನೆ, ಮಾರ್ಗಗಳನ್ನು ಅಧ್ಯಯನ ಮಾಡಿ ರಾಜ್ಯದ ಕೃಷಿ ಸಂಸ್ಕೃತಿ ಮತ್ತು ಬೆಳೆ ಮಾದರಿಗಳಿಗೆ ಅನುಗುಣವಾಗಿ ಕಾರ್ಯರೂಪಕ್ಕೆ ತರಬೇಕು. ➡ಪುಟ ೪

> **ರೈತರಿಗೆ ಸಬ್ಸಿಡಿ ದರದಲ್ಲಿ ಕೊಟ್ಟಿರುವ ಸವಲತ್ತುಗಳು ಎಷ್ಟು ಪ್ರಯೋಜನಕಾರಿಯಾಗಿವೆ ಎನ್ನುವ ಬಗ್ಗೆ ಪರಿಶೀಲನೆ ನಡೆಸಿ. ಸಬ್ಸಿಡಿ ನೀಡಿರುವ ಉದ್ದೇಶ ಜಾರಿ ಆಗುತ್ತಿದೆಯೇ ಎಂಬುದರ ಬಗ್ಗೆ ಅಧಿಕಾರಿಗಳು ವರದಿ ನೀಡಿ.**
> ■ ಡಿ.ಕೆ. ಶಿವಕುಮಾರ್, ಸಿಎಂ



ಮಾವು ಬೆಳೆಗಾರರಿಗೆ ನಷ್ಟ ಪರಿಹಾರ

ಈ ವರ್ಷ 1,068 ಕೋಟಿ ರೂ. ಮೌಲ್ಯದ ಮಾವು ಬೆಳೆ ನಾಶ ಆಗಿದ್ದು, ಈ ಪೈಕಿ ಶೇ.25 ರಷ್ಟು ಅಂದರೆ 229 ಕೋಟಿ ರೂ. ಪರಿಹಾರ ಕೊಡಬೇಕಿದೆ. ಕರ್ನಾಟಕ ಸರಕಾರ 114 ಕೋಟಿ ಹಾಗೂ ಕೇಂದ್ರ ಸರಕಾರ 115 ಕೋಟಿ ನಷ್ಟ ಪರಿಹಾರ ಭರಿಸಬೇಕಿದೆ. ಕಾನೂನು ಪ್ರಕಾರ ಮಾವು ಬೆಳೆಗಾರರಿಗೆ ನಷ್ಟ ಪರಿಹಾರ ಸಿಗುವಂತೆ ಗಮನ ಹರಿಸಿ ಎಂದು ಅಧಿಕಾರಿಗಳಿಗೆ ತಿಳಿಸಿದರು.

ರಫ್ತು ಉತ್ತೇಜಿಸಿ

ಕೆಪೆಕ್ ಮೂಲಕ ರಫ್ತು ಎಷ್ಟು ಹೆಚ್ಚಾಗಿದೆ. ರಫ್ತು ಉತ್ತೇಜಿಸಲು ಏನೇನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಪ್ರಶ್ನಿಸಿದ ಸಿಎಂ, ರಫ್ತು ಉತ್ತೇಜನಕ್ಕೆ ಯೋಜನೆ ರೂಪಿಸಲು ಆರ್ಥಿಕ ಸಲಹೆಗಾರ ಎಲ್.ಕೆ.ಅತೀಕ್, ಎಸಿಎಸ್ ತುಷಾರ ಗಿರಿನಾಥ್‌ರಿಗೆ ಸೂಚಿದರು.

ಬಡ್ಡಿರಹಿತ ಸಾಲ ದುರ್ಬಳಕೆಗೆ ಬ್ರೇಕ್

ಸಹಕಾರ ಇಲಾಖೆ ಅಡಿಯಲ್ಲಿ ಯಾವ್ಯಾವ ಸಂಸ್ಥೆಗಳಿಗೆ ಚುನಾವಣೆ ಆಗಬೇಕಿದೆಯೋ ಎಲ್ಲದಕ್ಕೂ ಚುನಾವಣೆ ನಡೆಸಬೇಕಿದೆ. ಕಾಸ್ಕಾರ್ಡ್ ಬ್ಯಾಂಕ್‌ಗಳು ಕೊಡುವ ಬಡ್ಡಿರಹಿತ ಸಾಲದ ಸೌಲಭ್ಯ ಅಗತ್ಯವಿರುವವರಿಗೆ ತಲುಪುತ್ತಿಲ್ಲ. ಬ್ಯಾಂಕ್‌ನವರೇ ತಮಗೆ ಬೇಕಾದವರ ಹೆಸರಲ್ಲಿ ಸಾಲ ಪಡೆಯುತ್ತಿದ್ದಾರೆ. ರೈತರಿಗೆ ವಂಚನೆ ಆಗಲು ಬಿಡಬಾರದು. 5 ಲಕ್ಷದವರೆಗೂ ಬಡ್ಡಿರಹಿತ ಸಾಲ ಸೌಲಭ್ಯ ದುರುಪಯೋಗ ಆಗುತ್ತಿರುವ ಬಗ್ಗೆ ರೈತರು ನನ್ನ ಬಳಿ ಬಂದು ದೂರುತ್ತಿದ್ದಾರೆ. ಇದಕ್ಕೆ ಕಟ್ಟುನಿಟ್ಟಿನ ಬ್ರೇಕ್ ಹಾಕಬೇಕೆಂದು ಆದೇಶ ನೀಡಿದ ಮುಖ್ಯಮಂತ್ರಿಗಳು, ಅಗತ್ಯ ಇರುವ ಫಲಾನುಭವಿಗಳಿಗೆ ಸಾಲ ಸವಲತ್ತು ತಲುಪುವಂತೆ ನೋಡಿಕೊಳ್ಳಿ ಎಂದರು.

ಎಪಿಎಂಸಿ ಜಾಗಗಳ ಸಂರಕ್ಷಣೆ • ಪುಟ ೪

ಧರ್ಮಸ್ಥಳ ವಿರುದ್ಧ ಷಡ್ಯಂತ್ರ | ಸಿಎಂ ಡಿ.ಕೆ.ಶಿವಕುಮಾರ್‌ಗೆ ಸಿ.ಟಿ.ರವಿ ಪತ್ರ

ಸಿಬಿಐನಿಂದ ತನಿಖೆ ನಡೆಸಲು ಒತ್ತಾಯ

• **ಬೆಂಗಳೂರು:** ಶ್ರೀ ಕ್ಷೇತ್ರ ಧರ್ಮಸ್ಥಳ ಮತ್ತು ಧರ್ಮಾಧಿಕಾರಿ ಡಾ. ಡಿ.ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ನಡೆದಿರುವ ಷಡ್ಯಂತ್ರದ ಸಮಗ್ರ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಒತ್ತಾಯಿಸಿ ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

ಧರ್ಮಸ್ಥಳದ ವಿಚಾರದಲ್ಲಿ ಇತ್ತೀಚೆಗೆ ಹೊರ ಬರುತ್ತಿರುವ ಬೆಳವಣಿಗೆಗಳು ನನ್ನನ್ನಷ್ಟೇ ಅಲ್ಲದೆ, ಕೋಟ್ಯಂತರ ಭಕ್ತರ ಮನಸ್ಸಿನಲ್ಲೂ ಆತಂಕ ಮತ್ತು ಅನುಮಾನಗಳನ್ನು ಹುಟ್ಟುಹಾಕಿವೆ. ಈ ಕಾರಣದಿಂದಲೇ ಈ ಪತ್ರ ಬರೆಯುತ್ತಿದ್ದೇನೆ. ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ.ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ಕಳೆದ ಕೆಲವು ವರ್ಷಗಳಿಂದ ನಿರಂತರವಾಗಿ ಆರೋಪಗಳು, ಅಪಪ್ರಚಾರಗಳು ಮತ್ತು ಅನುಮಾನಗಳ ವಾತಾವರಣ ಸೃಷ್ಟಿ ಮಾಡುತ್ತಿರುವುದನ್ನು ರಾಜ್ಯದ ಜನ ಗಮನಿಸುತ್ತಿದ್ದಾರೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಈಗ ಉಚ್ಚ ನ್ಯಾಯಾಲಯದ ಮುಂದೆ ಸಲ್ಲಿಕೆಯಾಗಿರುವ ಅರ್ಜಿಯು ಈ ಪ್ರಕರಣಕ್ಕೆ ಮತ್ತೊಂದು ಗಂಭೀರ ಆಯಾಮ ನೀಡಿದೆ. ಮಾಧ್ಯಮ ವರದಿಗಳ ಪ್ರಕಾರ, ಆ ಅರ್ಜಿಯಲ್ಲಿ ನಟ ಪ್ರಕಾಶ್ ರಾಜ್, ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣನವರ್, ವಿಠಲ್ ಗೌಡ, ಜಯಂತ್ ಹಾಗೂ ಯುಟ್ಯೂಬರ್‌ಗಳಾದ ಸಮೀರ್ ಎಂ.ಡಿ., ಅಜಯ್, ದಿನೇಶ್ ಸೇರಿದಂತೆ ಹಲವರ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ➡ಪುಟ ೪

> **ಧರ್ಮಸ್ಥಳದ ವಿರುದ್ಧ ನಡೆದಿರುವ ಹುನ್ನಾರವನ್ನು ಲಘುವಾಗಿ ಪರಿಗಣಿಸಲು ಸಾಧ್ಯವಿಲ್ಲ. ಪ್ರಕರಣವನ್ನು ರಾಜ್ಯ ಪೊಲೀಸ್ ಇಲಾಖೆಯಿಂದ ತನಿಖೆ ನಡೆಸಿದರೆ ಸಾಕಾಗುವುದಿಲ್ಲ. ಆದ್ದರಿಂದ, ಕೇಂದ್ರ ಮಟ್ಟದ ತನಿಖಾ ಸಂಸ್ಥೆಗಳಿಂದ ತನಿಖೆ ನಡೆಸಿದರೆ ಮಾತ್ರವೇ ಷಡ್ಯಂತ್ರದ ಹಿಂದಿರುವವರು ಯಾರು ಎನ್ನುವುದು ಬೆಳಕಿಗೆ ಬರಲು ಸಾಧ್ಯ.**
> ■ ಸಿ.ಟಿ. ರವಿ, ವಿಧಾನಪರಿಷತ್ ಸದಸ್ಯ



ಹಿಂದು ಶ್ರದ್ಧಾ ಕೇಂದ್ರಗಳ ವಿರುದ್ಧ ಷಡ್ಯಂತ್ರವೇ?

ಇತ್ತೀಚಿನ ದಿನಗಳಲ್ಲಿ ಹಿಂದು ಶ್ರದ್ಧಾಕೇಂದ್ರಗಳು, ಪುರಾತನ ದೇವಾಲಯಗಳು ಮತ್ತು ಸಮಾಜದಲ್ಲಿ ಅಪಾರ ಗೌರವ ಹೊಂದಿರುವ ಧಾರ್ಮಿಕ ಸಂಸ್ಥೆಗಳನ್ನು ಗುರಿಯಾಗಿಸಿಕೊಂಡು ಅಪನಂಬಿಕೆ ಸೃಷ್ಟಿಸುವ ಯಾವುದೇ ದೊಡ್ಡ ಕಾರ್ಯತಂತ್ರದ ಭಾಗ ಇದಾಗಿತ್ತೇ? ಈ ಪ್ರಕ್ರಿಯೆಗೆ ಹೊರಗಿನಿಂದ ಹಣ ಹೂಡಿಕೆ ಯಾಗಿತ್ತೇ? ರಾಜ್ಯದ ಹೊರಗಿನ ಅಥವಾ ದೇಶದ ಹೊರಗಿನ ಯಾವುದೇ ಸಂಘಟಿತ ಶಕ್ತಿಗಳು ಇದರಲ್ಲಿ ಭಾಗಿಯಾಗಿವೆಯೇ ಎಂಬ ಅನುಮಾನ ಮೂಡುತ್ತಿದೆ. ➡ಪುಟ ೪

ಭಾರತ ಜತೆಗಿನ ಬಾಂಧವ್ಯ ಉನ್ನತೀಕರಣ | 11 ಒಪ್ಪಂದಕ್ಕೆ ಸಹಿ

ಸ್ಲೊವಾಕಿಯಾ ಸಂಬಂಧ ಸುಮಧುರ

• **ಬ್ರಾಟಿಸ್ಲಾವಾ:** ಭಾರತ ಮತ್ತು ಸ್ಲೊವಾಕಿಯಾ ಸೋಮವಾರ ತಮ್ಮ ದ್ವಿಪಕ್ಷೀಯ ಬಾಂಧವ್ಯವನ್ನು ಸಮಗ್ರ ಪಾಲುದಾರಿಕೆಯ ಮಟ್ಟಕ್ಕೆ ಉನ್ನತೀಕರಿಸಿವೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಸ್ಲೊವಾಕಿಯಾ ಪ್ರಧಾನಿ ರಾಬರ್ಟ್ ಫಿಕೊ ನಡುವಿನ ಮಾತುಕತೆಯ ನಂತರ ವಲಸೆ, ಡಿಜಿಟಲ್ ತಂತ್ರಜ್ಞಾನ ಮತ್ತು ರಕ್ಷಣೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಹಕಾರವನ್ನು ವಿಸ್ತರಿಸಲು ಉಭಯ ದೇಶಗಳು 11 ಒಪ್ಪಂದಗಳನ್ನು ಅಂತಿಮಗೊಳಿಸಿವೆ.



ಈ ಒಪ್ಪಂದಗಳಲ್ಲಿ, ಕಾರ್ಮಿಕ ವಲಸೆ, ರಕ್ಷಣೆ, ಡಿಜಿಟಲ್ ತಂತ್ರಜ್ಞಾನಗಳು, ಉನ್ನತ ಶಿಕ್ಷಣ, ಕ್ವಾಂಟಮ್ ಸಂವಹನ ಕ್ಷೇತ್ರಗಳಲ್ಲಿ ಆಳವಾದ ಸಹಕಾರ ಒದಗಿಸಲಿವೆ. ಈ ಪಾಲುದಾರಿಕೆ, ಇರುವ ಸಂಬಂಧವನ್ನು ಬಲಪಡಿಸುವ ಮತ್ತು ಆಳವಾದ ಸಹಕಾರಕ್ಕೆ ಹೊಸ ಮಾರ್ಗಗಳನ್ನು ಅನ್ವೇಷಿಸುವ ಉದ್ದೇಶ ಹೊಂದಿದೆ. ಪ್ರಧಾನಿ ಮೋದಿ ತಮ್ಮ ಒಂದು ವಾರದ ಯುರೋಪ್ ಪ್ರವಾಸದ ಭಾಗವಾಗಿ ಬ್ರಾಟಿಸ್ಲಾವಾಕ್ಕೆ ಭೇಟಿ ನೀಡಿದ್ದಾರೆ. ➡ಪುಟ ೪



ತ್ರಿಶೂರ್‌ನಲ್ಲಿ ಸರಸಂಘಚಾಲಕ ಡಾ.ಭಾಗವತ್ ಅಭಿಪ್ರಾಯ

ಆರೆಸ್ಸೆಸ್‌ಗೆ ನೋಂದಣಿ ಅಗತ್ಯವಿಲ್ಲ

• **ತ್ರಿಶೂರ್:** ಆರ್‌ಎಸ್‌ಎಸ್ ನೋಂದಣಿ ಬಗ್ಗೆ ಕರ್ನಾಟಕದಲ್ಲಿ ಸುದ್ದಿಯಾಗುತ್ತಿರುವ ನಡುವೆಯೇ, ಆರ್‌ಎಸ್‌ಎಸ್ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರು ಪ್ರತಿಕ್ರಿಯೆ ನೀಡಿದ್ದು, ಸಂಘಕ್ಕೆ ಯಾವುದೇ ನೋಂದಣಿ ಅಗತ್ಯವಿಲ್ಲ. ಹಾಗೆಯೇ ಇಂಥ ಸಂಗತಿಗಳಿಗೆ ಉತ್ತರಿಸುವುದು ಅಗತ್ಯವಿಲ್ಲ ಎಂದಿದ್ದಾರೆ.

ಕೇರಳದ ತ್ರಿಶೂರ್‌ನಲ್ಲಿ ನಡೆದ ಸಂಘದ 100 ವರ್ಷಗಳ ಪಯಣ ಸಂವಾದ ಕಾರ್ಯಕ್ರಮದಲ್ಲಿ ಸಭಿಕರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಇದಕ್ಕೆ ನಾನು ಪ್ರತಿಕ್ರಿಯಿಸುವ ಅಗತ್ಯವಿಲ್ಲ. ನೋಂದಣಿಯಾಗದ ಅನೇಕ ವಿಷಯಗಳು ನಡೆಯುತ್ತಿವೆ. ನಾವು ಯಾವುದೇ ರಹಸ್ಯವನ್ನು ಕಾಯ್ದುಕೊಂಡಿಲ್ಲ. ನಾವು ತೆರೆದ ಮೈದಾನದಲ್ಲಿ ಕೆಲಸ ಮಾಡುತ್ತಿದ್ದೇವೆ. ಜನರನ್ನು ಕರೆಯುತ್ತಿದ್ದೇವೆ ಮತ್ತು ಅವರಿಗೆ ಸಂಘದ ಬಗ್ಗೆ ಹೇಳುತ್ತಿದ್ದೇವೆ ಎಂದು ಹೇಳಿದರು.

ರಾಜಕೀಯ ಗಿಮಿಕ್: ಇಂಥ ಸಂಗತಿಗಳು ಕೇವಲ ರಾಜಕೀಯದ ಗಿಮಿಕ್‌ಗಳಷ್ಟೇ. ಅದನ್ನು ಮಾಡಲು ಹೋಗಬೇಡಿ. ನಮಗೆ ಇದೆಲ್ಲವೂ ಅಭ್ಯಾಸವಾಗಿದೆ. ➡ಪುಟ ೪



- ನಾವು ಬ್ರಿಟಿಷರ ಕಾಲದಿಂದಲೇ ಸಂಘದ ಕೆಲಸ ಆರಂಭಿಸಿದ್ದೇವೆ
- ಇತಿಹಾಸದಿಂದಲೂ ಸಂಘಕ್ಕೆ ಅಡ್ಡಿ ಮಾಡುವ ಕೆಲಸ ನಿರಂತರ
- ಸರ್ಕಾರವೇ ನಿಷೇಧಿಸಿತ್ತು ಎಂದ ಭಾಗವತ್
- ಭಾನುವಾರ ಸಭಿಕರೊಬ್ಬರ ಪ್ರಶ್ನೆಯೊಂದಕ್ಕೆ ಭಾಗವತ್ ಉತ್ತರ

ಗೃಹ ಸಚಿವ ಖರ್ಗೆಯಿಂದ ಆರೆಸ್ಸೆಸ್‌ಗೆ ಸುದೀರ್ಘ ಪತ್ರ

• **ಬೆಂಗಳೂರು:** ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಅವರಿಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸುದೀರ್ಘ ಪತ್ರವೊಂದನ್ನು ಬರೆದಿದ್ದಾರೆ. 100 ವರ್ಷಗಳನ್ನು ಪೂರೈಸಿದ್ದಕ್ಕಾಗಿ ಆರ್‌ಎಸ್‌ಎಸ್‌ಗೆ ಅಭಿನಂದನೆ ಸಲ್ಲಿಸಿರುವ ಅವರು, ಸಾಂಸ್ಥಿಕ ಸ್ಥಿತಿಯ ಕುರಿತು ಕಾನೂನು ಸ್ಪಷ್ಟೀಕರಣಕ್ಕಾಗಿ ವಿನಂತಿಸಿಕೊಂಡಿದ್ದಾರೆ. ಅಲ್ಲದೆ, 8 ಪ್ರಶ್ನೆಗಳಿಗೆ ಉತ್ತರಿಸುವಂತೆ ಮನವಿ ಮಾಡಿದ್ದಾರೆ. 100 ವರ್ಷ ಪೂರೈಸಿದ ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಭಾರತ, ವಿದೇಶಗಳಲ್ಲಿ 60,000ಕ್ಕೂ ಹೆಚ್ಚು ಶಾಖೆಗಳು, ಕೋಟಿ ಸ್ವಯಂಸೇವಕರನ್ನು ಹೊಂದಿದೆ ಎಂದು ಹೇಳಿಕೊಳ್ಳುವ ಈ ಸಂಸ್ಥೆ ನಿಸ್ಸಂದೇಹವಾಗಿ ಸಾರ್ವಜನಿಕ ಜೀವನ, ಸಮಾಜದಲ್ಲಿ ಗಮನಾರ್ಹ ಪ್ರಭಾವ ಹೊಂದಿದೆ. ➡ಪುಟ ೪



ಪರಿಷತ್‌ನ 7 ಸ್ಥಾನಗಳಿಗೆ ಚುನಾವಣೆ ಹಿನ್ನೆಲೆ

ಇಂದು ರೆಸಾರ್ಟ್‌ನಲ್ಲೇ ಕೈ ಶಾಸಕಾಂಗ ಪಕ್ಷದ ಸಭೆ

• **ಬೆಂಗಳೂರು:** ವಿಧಾನಪರಿಷತ್ತಿನ 7 ಸ್ಥಾನಗಳಿಗೆ ಜೂ.18 (ಗುರುವಾರ) ರಂದು ನಡೆಯುವ ಚುನಾವಣೆಯಲ್ಲಿ ಅಡ್ಡ ಮತದಾನಕ್ಕೆ ಅವಕಾಶ ಇಲ್ಲದಂತೆ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವು ಸುಗಮವಾಗುವಂತೆ ನೋಡಿಕೊಳ್ಳಲು ಎಲ್ಲ ಕಾಂಗ್ರೆಸ್ ಶಾಸಕರನ್ನು ಮಂಗಳವಾರ (ಜೂ.16)ದಂದು ರೆಸಾರ್ಟ್‌ಗೆ ಕರೆದೊಯ್ಯಲಾಗುತ್ತಿದ್ದು, ಅಲ್ಲಿಯೇ ಶಾಸಕಾಂಗ ಸಭೆ ನಡೆಯಲಿದೆ.

ವಿಧಾನಪರಿಷತ್ತಿನ ಚುನಾವಣೆ ಹಿನ್ನೆಲೆಯಲ್ಲಿ ಮಂಗಳವಾರ(ಜೂ.16) ಸಂಜೆ 6 ಗಂಟೆಗೆ ಬಿಡದಿ ಬಳಿಯ ಖಾಸಗಿ ರೆಸಾರ್ಟ್‌ನಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಯಲಿದ್ದು, ಈ ಸಭೆಯಲ್ಲಿ ಪಾಲ್ಗೊಳ್ಳುವ ಕಾಂಗ್ರೆಸ್ ಶಾಸಕರು ಮಂಗಳವಾರ ಮತ್ತು ಬುಧವಾರ ಎರಡು ದಿನ ರೆಸಾರ್ಟ್‌ಲ್ಲೇ ವಾಸ್ತವ್ಯ ಹೂಡಿ ಗುರುವಾರ ಅಲ್ಲಿಂದಲೇ ನೇರವಾಗಿ ವಿಧಾನಸೌಧಕ್ಕೆ ಮತದಾನಕ್ಕೆ ಬರಲಿದ್ದಾರೆ. ➡ಪುಟ ೪

> **ಮಂಗಳವಾರ ನಡೆಯುವ ಶಾಸಕಾಂಗ ಪಕ್ಷದ ಸಭೆಯಲ್ಲಿ ಸುರ್ಜೇವಾಲ ಸೇರಿ ನಮ್ಮ ನಾಯಕರೆಲ್ಲ ಭಾಗಿಯಾಗಲಿದ್ದಾರೆ. ದೂರವಾಣಿ, ಪತ್ರದ ಮೂಲಕ ಎಲ್ಲ ಶಾಸಕರನ್ನು ಆಹ್ವಾನಿಸಲಾಗಿದೆ. ಸದಸ್ಯರು ಬರದಿದ್ದರೆ ವಿಪ್ ಜಾರಿ ಮಾಡುತ್ತೇವೆ. ನಾಲ್ಕೈದು ಶಾಸಕರು ಅನಾರೋಗ್ಯ, ಇತರೆ ಕಾರಣಕ್ಕಾಗಿ ಗೈರಾಗಲಿದ್ದಾರೆ.**
> ■ ಅಲ್ಲಮಪ್ರಭು ಪಾಟೀಲ್, ಶಾಸಕಾಂಗ ಪಕ್ಷದ ಕಾರ್ಯದರ್ಶಿ

ವಿಮೆ ಹಣಕ್ಕಾಗಿ ಮಾಜಿ ಸೈನಿಕನ ಹತ್ಯೆಗೈದ ಪತ್ನಿ

ಕೊಲೆ ಕೇಸ್: ಎಫ್‌ಎಸ್ಸೆಲ್ ಅಧಿಕಾರಿಗಳೂ ಶಾಮೀಲು

• **ಬೆಳಗಾವಿ:** ಎರಡು ಕೋಟಿ ರೂಪಾಯಿ ವಿಮೆ ಹಣ ಪಡೆಯುವ ಉದ್ದೇಶದಿಂದ ಪತ್ನಿಯೇ ತನ್ನ ಪ್ರಿಯಕರನೊಂದಿಗೆ ಸೇರಿ ಪತಿಯ ಹತ್ಯೆ ಮಾಡಿಸಿರುವ ಪ್ರಕರಣದಲ್ಲಿ ಇದೀಗ ಮತ್ತೊಂದು ಮಹತ್ವದ ಬೆಳವಣಿಗೆ ನಡೆದಿದ್ದು, ಪ್ರಕರಣದ ತನಿಖೆಯ ವೇಳೆ ಎಫ್‌ಎಸ್‌ಎಲ್ (ಫೊರೆನ್ಸಿಕ್ ಸೈನ್ಸ್ ಲ್ಯಾಬೊರೇಟರಿ) ಅಧಿಕಾರಿಗಳ ಪಾತ್ರವೂ ಬೆಳಕಿಗೆ ಬಂದಿದೆ.



ಅಧಿಕಾರಿಗಳು ಸೇರಿ ಐವರ ಬಂಧನ

ರಾಜ್ಯದಲ್ಲೇ ಮೊದಲ ಬಾರಿಗೆ ಕೊಲೆ ಪ್ರಕರಣವೊಂದರಲ್ಲಿ ಎಫ್‌ಎಸ್‌ಎಲ್ ಅಧಿಕಾರಿಗಳು ನೇರವಾಗಿ ಭಾಗಿಯಾಗಿರುವ ಆರೋಪ ಕೇಳಿ ಬಂದಿರುವುದು ವ್ಯಾಪಕ ಚರ್ಚೆಗೆ ಕಾರಣವಾಗಿದೆ. ಯಮಕನಮರಡಿ ಪೊಲೀಸ್ ಠಾಣಾ ವ್ಯಾಪ್ತಿಯ ಘಡಗೋರಿ ಗ್ರಾಮದ ಮಾಜಿ ಸೈನಿಕ ಸಂದೀಪ್ ಮಂಜರಗಿ ಅವರ ಸಾವನ್ನು ಆರಂಭಿಕ ಹಂತದಲ್ಲಿ ರಸ್ತೆ ಅಪಘಾತ ಎಂದು ಬಿಂಬಿಸಲಾಗಿತ್ತು.

ಆದರೆ, ಪ್ರಕರಣದ ತನಿಖೆಯನ್ನು ಆಳವಾಗಿ ನಡೆಸಿದಾಗ ಇದು ಪೂರ್ವ ನಿಯೋಜಿತವಾಗಿ ರೂಪಿಸಲಾದ ಕೊಲೆ ಎಂಬುದು ಬಹಿರಂಗವಾಗಿದೆ. ತನಿಖೆಯ ವೇಳೆ ಮರಣೋತ್ತರ ಪರೀಕ್ಷೆ ಹಾಗೂ ಎಫ್‌ಎಸ್‌ಎಲ್ ವರದಿಗಳನ್ನು ತಿರುಚಿ ಪ್ರಕರಣದ ದಿಕ್ಕು ತಪ್ಪಿಸಲು ಯತ್ನ ನಡೆದಿರುವ ಶಂಕೆ ವ್ಯಕ್ತವಾಗಿದ್ದು, ಈ ಹಿನ್ನೆಲೆಯಲ್ಲಿ ಹಲವು ಅಧಿಕಾರಿಗಳನ್ನು ಪೊಲೀಸರು ಬಂಧಿಸಿದ್ದಾರೆ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,58,000(2,52,000)	ಅಪರಂಜಿ ಚಿನ್ನ 15,100(14,853)	ಆಭರಣ ಚಿನ್ನ: 13,890(13,665)	ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)	ಷೇರು ಸೂಚ್ಯಂಕ	ಬಿಎಸ್‌ಇ 76,264(736↑)	ಎನ್‌ಎಸ್‌ಇ 23,853(231↑)	$1 = ₹95.12

ಅಮೆರಿಕ-ಇರಾನ್ ಶಾಂತಿ ಒಪ್ಪಂದ ಅಂತಿಮ
ಸಂಘರ್ಷಕ್ಕೆ ತೆರೆ

ಇಸ್ಲಾಮಾಬಾದ್/ವಾಷಿಂಗ್ಟನ್: ಕಳೆದ 107 ದಿನಗಳಿಂದ ಜಾಗತಿಕ ರಾಜಕೀಯ ಮತ್ತು ತೈಲ ಮಾರುಕಟ್ಟೆಯನ್ನು ತಲ್ಲಣಗೊಳಿಸಿದ್ದ ಅಮೆರಿಕ-ಇರಾನ್ ಸಂಘರ್ಷಕ್ಕೆ ಅಂತ್ಯ ಹಾಡುವ ಮಹತ್ವದ ಶಾಂತಿ ಒಪ್ಪಂದ ಅಂತಿಮಗೊಂಡಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಈ ಒಪ್ಪಂದಕ್ಕೆ ಜೂ.19ರಂದು ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಅಧಿಕೃತವಾಗಿ ಸಹಿ ಹಾಕಲಾಗುವುದು ಎಂದು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ತಿಳಿಸಿದ್ದಾರೆ. ಟ್ರಂಪ್ ತಮ್ಮ ಸಾಮಾಜಿಕ ಜಾಲತಾಣದಲ್ಲಿ, ಇರಾನ್ ಇಸ್ಲಾಮಿಕ್ ಗಣರಾಜ್ಯದೊಂದಿಗೆ ಒಪ್ಪಂದ ಪೂರ್ಣಗೊಂಡಿದೆ. ಎಲ್ಲರಿಗೂ ಅಭಿನಂದನೆಗಳು ಎಂದು ಬರೆದು ಶಾಂತಿ ಒಪ್ಪಂದದ ಸುದ್ದಿಯನ್ನು ಬಹಿರಂಗಪಡಿಸಿದ್ದಾರೆ. ಈ ಘೋಷಣೆಯ ಬಳಿಕ ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ನೆಮ್ಮದಿ ಕಂಡುಬಂದಿದೆ.

ಮತ್ತೆ ತೆರೆಯಲಿದೆ ಹಾರ್ಮುಜ್: ಒಪ್ಪಂದದ ಪ್ರಮುಖ ಅಂಶಗಳಲ್ಲಿ ಒಂದಾಗಿ ಜಾಗತಿಕ ತೈಲ ಸರಬರಾಜಿನ ಸುಮಾರು ಐದನೇ ಭಾಗ ಸಾಗುವ ಹಾರ್ಮುಜ್ ಜಲಸಂಧಿಯನ್ನು ಪುನಃ ತೆರೆಯಲು ನಿರ್ಧರಿಸಲಾಗಿದೆ. ಜತೆಗೆ ಇರಾನ್ ಬಂದರುಗಳ ಮೇಲಿನ ಅಮೆರಿಕದ ನೌಕಾ ನಿರ್ಬಂಧವನ್ನೂ ತೆಗೆದುಹಾಕಲಾಗುತ್ತದೆ. ಜಲಸಂಧಿಯನ್ನು ಟೋಲ್ ರಹಿತವಾಗಿ ತೆರೆಯಲು ಹಾಗೂ ನೌಕಾ ನಿರ್ಬಂಧವನ್ನು ತಕ್ಷಣವೇ ತೆರವುಗೊಳಿಸಲು ಅನುಮತಿ ನೀಡಿದ್ದೇನೆ. ವಿಶ್ವದ ಹಡಗುಗಳು ಮತ್ತೆ ಸಂಚಾರ ಆರಂಭಿಸಲಿ, ತೈಲ ಹರಿಯಲಿ ಎಂದು ಟ್ರಂಪ್ ಹೇಳಿದ್ದಾರೆ. ಆದರೆ ಜಲಸಂಧಿ ಅಧಿಕೃತ ಒಪ್ಪಂದಕ್ಕೆ ಸಹಿಯಾದ ಬಳಿಕವೇ ಕಾರ್ಯಾಚರಣೆಗೆ ತೆರೆಯಲಾಗುವುದು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಕತಾರ್, ಪಾಕ್ ಮಧ್ಯಸ್ಥಿಕೆ: ಈ ಶಾಂತಿ ಪ್ರಕ್ರಿಯೆಯಲ್ಲಿ ಪಾಕಿಸ್ತಾನ ಮತ್ತು ಕತಾರ್ ಪ್ರಮುಖ ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸಿವೆ. ಏ.8ರಂದು ಆರಂಭಿಕ ಕದನ ವಿರಾಮ ಒಪ್ಪಂದ ಸಾಧಿಸಲಾಗಿದ್ದು, ನಂತರ ಮಾತುಕತೆ ಪೂರ್ಣಗೊಳ್ಳುವವರೆಗೆ ಅದನ್ನು ವಿಸ್ತರಿಸಲಾಗಿತ್ತು. ಶೆಹಬಾಜ್ ಷರೀಫ್ ಈ ಒಪ್ಪಂದವನ್ನು ಐತಿಹಾಸಿಕ ಮೈಲಿಗಲ್ಲು ಎಂದು ಬಣ್ಣಿಸಿದ್ದು, ಅಮೆರಿಕ ಮತ್ತು ಇರಾನ್ ಎರಡೂ ರಾಷ್ಟ್ರಗಳು ರಾಜತಾಂತ್ರಿಕ ಪರಿಹಾರಕ್ಕೆ ಬದ್ಧತೆ ತೋರಿರುವುದನ್ನು ಶ್ಲಾಘಿಸಿದ್ದಾರೆ. ಕತಾರ್, ಟರ್ಕಿ ಮತ್ತು ಸೌದಿ ಅರೇಬಿಯಾದ ಸಹಕಾರಕ್ಕೂ ಅವರು ಕೃತಜ್ಞತೆ ಸಲ್ಲಿಸಿದ್ದಾರೆ.

ಇನ್ನೂ ಸಂಪೂರ್ಣ ಅಂತ್ಯವಾಗಿಲ್ಲ ಉದ್ವಿಗ್ನತೆ: ಏತನ್ಮಧ್ಯೆ, ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್, ದಕ್ಷಿಣ ಲೆಬನಾನ್‌ನಲ್ಲಿ ಇಸ್ರೇಲಿ ಸೇನೆ ಮುಂದುವರಿಯಲಿದೆ ಎಂದು ಹೇಳಿದ್ದು, ಇರಾನ್ ದಾಳಿ ನಡೆಸಿದರೆ ಭಾರೀ ಪ್ರತಿದಾಳಿ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಆದಾಗ್ಯೂ, ಜೂ.19ರಂದು ನಡೆಯಲಿರುವ ಅಧಿಕೃತ ಸಹಿ ಸಮಾರಂಭದೊಂದಿಗೆ ಮಧ್ಯಪ್ರಾಚ್ಯದಲ್ಲಿ ಶಾಂತಿಯ ಹೊಸ ಅಧ್ಯಾಯ ಆರಂಭವಾಗುವ ನಿರೀಕ್ಷೆ ಮೂಡಿದೆ. ಈ ಒಪ್ಪಂದವು ಜಾಗತಿಕ ತೈಲ ಮಾರುಕಟ್ಟೆ, ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕತೆ ಹಾಗೂ ಪ್ರಾದೇಶಿಕ ಸ್ಥಿರತೆಗೆ ಮಹತ್ವದ ಉತ್ತೇಜನ ನೀಡುವ ಸಾಧ್ಯತೆ ಇದೆ.



- ಬರೋಬ್ಬರಿ 107 ದಿನಗಳ ಯುದ್ಧಕ್ಕೆ ಅಂತ್ಯ
- ಜೂನ್ 19ರಂದು ಶಾಂತಿ ಒಪ್ಪಂದಕ್ಕೆ ಸಹಿ
- ಜಾಗತಿಕ ತೈಲ ಮಾರುಕಟ್ಟೆಗೆ ನೆಮ್ಮದಿ


ವಿಶ್ವ ನಾಯಕರಿಂದ ಸ್ವಾಗತ
ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಈ ಒಪ್ಪಂದವನ್ನು ಸ್ವಾಗತಿಸಿದ್ದು, ಇದು ಶಾಂತಿಯುತ ಪರಿಹಾರದತ್ತ ಮಹತ್ವದ ಹೆಜ್ಜೆ ಎಂದಿದ್ದಾರೆ. ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್, ಭಾರತೀಯ ಮೂಲದ ಅಮೆರಿಕ ಸಂಸದ ರೋ ಖನ್ನಾ ಸೇರಿದಂತೆ ಹಲವು ನಾಯಕರು ಒಪ್ಪಂದವನ್ನು ಶ್ಲಾಘಿಸಿದ್ದಾರೆ.

ಇರಾನ್ ಷರತ್ತುಗಳೇನು?
ಇರಾನ್ ಉಪ ವಿದೇಶಾಂಗ ಸಚಿವ ಕಾಜೆಮ್ ಘರಿಬಬಾದಿ ಪ್ರಕಾರ, ಒಪ್ಪಂದಕ್ಕೆ ಸಹಿಯಾದ ನಂತರ 60 ದಿನಗಳ ವಿಶೇಷ ಮಾತುಕತೆ ನಡೆಯಲಿದ್ದು, ಅದು ಕೇವಲ ಅಣು ಕಾರ್ಯಕ್ರಮ ಮತ್ತು ನಿರ್ಬಂಧಗಳ ತೆರವು ಕುರಿತ ವಿಷಯಗಳ ಮೇಲೆ ಕೇಂದ್ರೀಕೃತವಾಗಿರುತ್ತದೆ. ಇರಾನ್ ತನ್ನ ಬದ್ಧತೆಗಳನ್ನು ಪರಸ್ಪರ ಸಹಕಾರ ಮತ್ತು ಒಪ್ಪಂದದ ಅನುಷ್ಠಾನದ ಆಧಾರದ ಮೇಲೆ ಮಾತ್ರ ಜಾರಿಗೊಳಿಸಲಿದೆ ಎಂದು ತಿಳಿಸಿದೆ. ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಕೂಡ ಒಪ್ಪಂದವನ್ನು ಜಾರಿಗೊಳಿಸುವ ಜವಾಬ್ದಾರಿ ಅಮೆರಿಕದ ಮೇಲಿದೆ ಎಂದು ಹೇಳಿದ್ದಾರೆ.

ಪ್ರಮುಖ ಯೋಜನೆಗಳಿಗೆ ಮಂಜೂರಾತಿ
ಕೇಂದ್ರ ಸರ್ಕಾರ ಚೆನಾಬ್ ನದಿ ವ್ಯವಸ್ಥೆಗೆ ಸಂಬಂಧಿಸಿದ ಎರಡು ಬೃಹತ್ ಯೋಜನೆಗಳನ್ನು ಅನುಮೋದಿಸಿದೆ. ಮೊದಲನೆಯದು ಹಿಮಾಚಲ ಪ್ರದೇಶದಲ್ಲಿ 2,352 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಾಣವಾಗಲಿರುವ ಚೆನಾಬ್-ಬಿಯಾಸ್ ಲಿಂಕ್ ಸುರಂಗ ಯೋಜನೆ. ಎರಡನೆಯದು ಜಮ್ಮು ಮತ್ತು ಕಾಶ್ಮೀರದ ಸಲಾಲ್ ಅಣೆಕಟ್ಟಿನಲ್ಲಿ 268 ಕೋಟಿ ರೂ. ವೆಚ್ಚದ ಹೂಳು ನಿರ್ವಹಣಾ ಯೋಜನೆ. ಈ ಯೋಜನೆಗಳು ಭಾರತದ ಸ್ವಂತ ಜಲಸಂಪನ್ಮೂಲಗಳ ಬಳಕೆಯನ್ನು ಬಲಪಡಿಸುವುದರ ಜತೆಗೆ ಜಲವಿದ್ಯುತ್ ಉತ್ಪಾದನೆ ಮತ್ತು ನೀರು ನಿರ್ವಹಣೆಗೆ ನೆರವಾಗಲಿವೆ. ಸಿಂಧೂ ಜಲ ಒಪ್ಪಂದವನ್ನು ಅಮಾನತುಗೊಳಿಸಿದ ನಂತರ ಈ ಅನುಮೋದನೆಗಳು ಸಿಕ್ಕಿವೆ. ಉದ್ದೇಶಿತ ಸುರಂಗ ಯೋಜನೆಯಲ್ಲಿ, ಚೆನಾಬ್ ಜಲಾನಯನ ಪ್ರದೇಶದ ನೀರನ್ನು ಬಿಯಾಸ್ ನದಿ ವ್ಯವಸ್ಥೆಗೆ ತಿರುಗಿಸಲಾಗುವುದು. ಇದರಿಂದಾಗಿ ಭಾರತ ತನ್ನದೇ ಭೂಪ್ರದೇಶದ ಜಲಸಂಪನ್ಮೂಲಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳಲು ಸಾಧ್ಯವಾಗಲಿದೆ.

ಸಿಂಧೂ ಬಳಿಕ ಚೆನಾಬ್ ಅಭಿವೃದ್ಧಿ

ಪಾಕಿಸ್ತಾನದೊಂದಿಗಿನ ಸಿಂಧೂ ಜಲ ಒಪ್ಪಂದವನ್ನು ಅಮಾನತುಗೊಳಿಸಿದ ಬೆನ್ನಲ್ಲೇ, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಚೆನಾಬ್ ನದಿಗೆ ಸಂಬಂಧಿಸಿದ 2,600 ಕೋಟಿ ರೂ.ಗೂ ಅಧಿಕ ಮೊತ್ತದ ಎರಡು ಪ್ರಮುಖ ಮೂಲಸೌಕರ್ಯ ಯೋಜನೆಗಳಿಗೆ ಅನುಮೋದನೆ ನೀಡಿದೆ. ಇದರಲ್ಲಿ ಹಿಮಾಚಲ ಪ್ರದೇಶದ ಅತ್ಯಂತ ಮಹತ್ವಾಕಾಂಕ್ಷೆಯ ಚೆನಾಬ್-ಬಿಯಾಸ್ ಲಿಂಕ್ ಸುರಂಗ ಯೋಜನೆಯೂ ಸೇರಿದೆ.



ವಿದ್ಯುತ್ ಉತ್ಪಾದನೆ, ನೀರಿನ ಪ್ರಯೋಜನ
ಈ ಯೋಜನೆ, ಹಿಮಾಚಲ ಪ್ರದೇಶದಲ್ಲಿ ಜಲವಿದ್ಯುತ್ ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚಿಸಲಿದೆ. ಈ ನೀರು ತಿರುಗಿಸುವಿಕೆಯಿಂದಾಗಿ ಸುಮಾರು 4,000 ಮೆಗಾವ್ಯಾಟ್ ಹೆಚ್ಚುವರಿ ಜಲವಿದ್ಯುತ್ ಸಾಮರ್ಥ್ಯವನ್ನು ಪಡೆಯಬಹುದು. ಚಂದ್ರಭಾಗಾ ನದಿ ಜಲಾನಯನ ಪ್ರದೇಶ ಒಟ್ಟು 11,000 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಹೊಂದಿದ್ದು, 700 ಮೀಟರ್ ಹೆಡ್‌ನಲ್ಲಿ 8 ಕಿಮೀ ಸುರಂಗವೊಂದರಿಂದಲೇ 3,000 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಬಹುದು. ಬೇಸಿಗೆಯ ತಿಂಗಳುಗಳಲ್ಲಿ ಹೆಚ್ಚಾಗಿ ನೀರಿನ ಮಟ್ಟ ಕುಸಿಯುವ ಬಿಯಾಸ್ ಜಲಾನಯನ ಪ್ರದೇಶದ ನೀರಿನ ಹರಿವನ್ನು ಹೆಚ್ಚಿಸಲು ಕೂಡ ಈ ಯೋಜನೆ ಸಹಕಾರಿಯಾಗಲಿದೆ. ಇದು ದೇಶದ ಹಲವಾರು ರಾಜ್ಯಗಳಲ್ಲಿನ ನೀರಿನ ಕೊರತೆಯನ್ನು ನೀಗಿಸಲು ಮತ್ತು ಬಿಯಾಸ್ ನದಿ ವ್ಯವಸ್ಥೆಗೆ ದೀರ್ಘಕಾಲೀನ ಬೆಂಬಲ ನೀಡಲು ಸಹಾಯ ಮಾಡುತ್ತದೆ ಎಂದು ನಂಬಲಾಗಿದೆ.



ದಶಕದ ಹಿಂದಿನ ಪ್ರಸ್ತಾವನೆಗೆ ಮರುಜೀವ
ಈ ಸುರಂಗ ಯೋಜನೆ, ಸುಮಾರು ಒಂದು ದಶಕದ ಹಿಂದೆ ಸುಸ್ಥಿರ ಅಭಿವೃದ್ಧಿ ಕೇಂದ್ರದ ಕಾರ್ಯನಿರ್ವಾಹಕ ನಿರ್ದೇಶಕ ಪ್ರವೀಣ್ ಶರ್ಮಾ ಮಂಡಿಸಿದ್ದ ಪರಿಕಲ್ಪನೆ ಎಂಬುದು ವಿಶೇಷ. ಶರ್ಮಾ, ಪ್ರಧಾನ ಮಂತ್ರಿ ಕಾರ್ಯಾಲಯ(ಪಿಎಂಒ) ಮತ್ತು ಜಲಸಂಪನ್ಮೂಲ ಸಚಿವಾಲಯಕ್ಕೆ ನಿರಂತರವಾಗಿ ಪತ್ರಗಳನ್ನು ಬರೆಯುವ ಮೂಲಕ ಸಿಂಧೂ ಜಲ ಒಪ್ಪಂದಕ್ಕೆ ಸಂಬಂಧಿಸಿದ ಬದಲಾವಣೆಗಳನ್ನು ತರಲು ಮತ್ತು ಚೆನಾಬ್‌ನ ಉಪನದಿ ಚಂದ್ರಭಾಗಾ ನದಿಯಿಂದ ನೀರನ್ನು ತಿರುಗಿಸಲು ಒತ್ತಾಯಿಸಿದ್ದರು. ಶರ್ಮಾ ಪ್ರಕಾರ, ಅವರು 2016ರಲ್ಲಿ ವಿವರವಾದ ಲೇಖನವೊಂದರ ಮೂಲಕ ಈ ವಿಷಯವನ್ನು ಮೊದಲು ಮುಂಚೂಣಿಗೆ ತಂದಿದ್ದರು.

ಚೆನಾಬ್-ಬಿಯಾಸ್ ಲಿಂಕ್ ಸುರಂಗ
ಚೆನಾಬ್-ಬಿಯಾಸ್ ಲಿಂಕ್ ಸುರಂಗ ಯೋಜನೆ, ಹಿಮಾಚಲ ಪ್ರದೇಶದ ಬುಡಕಟ್ಟು ಜಿಲ್ಲೆಯಾದ ಲಾಹೌಲ್-ಸ್ಪಿತಿಯಲ್ಲಿ ಸ್ಥಾಪನೆಯಾಗಲಿದೆ. ನ್ಯಾಷನಲ್ ಹೈಡ್ರೋಎಲೆಕ್ಟ್ರಿಕ್ ಪವರ್ ಕಾರ್ಪೊರೇಷನ್ (ಎನ್‌ಎಚ್‌ಪಿಸಿ) ಮೂಲಕ ಅನುಷ್ಠಾನಗೊಳ್ಳಲಿರುವ ಈ ಯೋಜನೆ, 8.7 ಕಿಮೀ ಉದ್ದದ ಸುರಂಗ ನಿರ್ಮಾಣವನ್ನು ಒಳಗೊಂಡಿದೆ. ಇದು ಚೆನಾಬ್ ಜಲಾನಯನ ಪ್ರದೇಶದಿಂದ ಹೆಚ್ಚುವರಿ ನೀರನ್ನು ಬಿಯಾಸ್ ನದಿಗೆ ತಿರುಗಿಸುತ್ತದೆ. ಈ ಯೋಜನೆ, ಅಂತರ-ಜಲಾನಯನ ನದಿ ಜೋಡಣೆಯಂಥ ದೊಡ್ಡ ಯೋಜನೆಯ ಒಂದು ಭಾಗ. ಇದು ಸುರಂಗಗಳು ಮತ್ತು ಹೈಡ್ರಾಲಿಕ್ ರಚನೆಗಳ ಮೂಲಕ ಚಂದ್ರಭಾಗಾ ನದಿಯ ನೀರನ್ನು ಬಿಯಾಸ್ ಜಲಾನಯನ ಪ್ರದೇಶದ ಕಡೆಗೆ ತಿರುಗಿಸಲಿದೆ. ಮೊದಲ ಹಂತ, ಲಾಹೌಲ್ ಕಣಿವೆಯ ಕೋಕ್ಸರ್ ಗ್ರಾಮದ ಬಳಿ ಚಂದ್ರ ನದಿಗೆ 19 ಮೀಟರ್ ಎತ್ತರದ ಬ್ಯಾರೇಜ್ ನಿರ್ಮಾಣವನ್ನು ಒಳಗೊಂಡಿದೆ. ಅಲ್ಲಿಂದ ಮೇಲಿನ ಚೆನಾಬ್ ಜಲಾನಯನ ಪ್ರದೇಶದ ನೀರನ್ನು ಬಿಯಾಸ್ ವ್ಯವಸ್ಥೆಗೆ ಹರಿಸಲಾಗುತ್ತದೆ. ಮೇಲಿನ ಚೆನಾಬ್ ಅನ್ನು ರೂಪಿಸುವ ಚಂದ್ರ ಮತ್ತು ಭಾಗಾ ನದಿಗಳ ನೀರನ್ನು ಅಂತಿಮವಾಗಿ 113 ಕಿಮೀ ಉದ್ದದ ಕಾಲುವೆ ಜಾಲದ ಮೂಲಕ ವರ್ಗಾಯಿಸಲಾಗುತ್ತದೆ. ಚೆನಾಬ್ ನದಿಯ ಒಟ್ಟು ವಾರ್ಷಿಕ ಹರಿವು ಸುಮಾರು 35 ಮಿಲಿಯನ್ ಎಕರೆ-ಅಡಿಗಳಷ್ಟಿದ್ದರೂ, ಉದ್ದೇಶಿತ ತಿರುವು ಯೋಜನೆಗೆ ಕೇವಲ 1 ಮಿಲಿಯನ್ ಎಕರೆ-ಅಡಿಗಿಂತ ಕಡಿಮೆ ನೀರನ್ನು ಬಳಸಲಾಗುತ್ತದೆ.

ಪಾಕಿಸ್ತಾನಕ್ಕೆ ಏಕೆ ಆತಂಕ?
ತನ್ನ ಸಂಪನ್ಮೂಲಗಳನ್ನು ಗರಿಷ್ಠಗೊಳಿಸಲು ಪ್ರಯತ್ನಿಸುತ್ತಿರುವ ಭಾರತವು ಸಿಂಧೂ ಜಲ ಒಪ್ಪಂದವನ್ನು ಉಲ್ಲಂಘಿಸಿದೆ ಎಂದು ಪಾಕಿಸ್ತಾನದ ಆರೋಪವಿದೆ. ಭಾರತ ಮತ್ತು ಪಾಕಿಸ್ತಾನ ಸೆಪ್ಟೆಂಬರ್ 19, 1960ರಂದು ಸಿಂಧೂ ಜಲ ಒಪ್ಪಂದಕ್ಕೆ ಸಹಿ ಹಾಕಿದ್ದವು. ಇದು ಸಿಂಧೂ ಜಲಾನಯನ ಪ್ರದೇಶದ ಆರು ನದಿಗಳನ್ನು ಎರಡು ದೇಶಗಳ ನಡುವೆ ವಿಭಜಿಸಿತು. ಅದರ ನಿಬಂಧನೆಗಳಲ್ಲಿ, ಪೂರ್ವದ ಮೂರು ನದಿಗಳಾದ ರಾವಿ, ಬಿಯಾಸ್ ಮತ್ತು ಸಟ್ಲೆಜ್‌ಗಳನ್ನು ಭಾರತಕ್ಕೆ ನೀಡಲಾಯಿತು. ಆದರೆ ಸಿಂಧೂ, ಝೇಲಂ ಮತ್ತು ಚೆನಾಬ್ ಸೇರಿದಂತೆ ಮೂರು ಪಶ್ಚಿಮ ನದಿಗಳನ್ನು ಪಾಕಿಸ್ತಾನಕ್ಕೆ ನೀಡಲಾಯಿತು. ಪಶ್ಚಿಮ ನದಿಗಳ ಮೇಲೆ ಭಾರತದ ಅಣೆಕಟ್ಟುಗಳು ಮತ್ತು ಜಲವಿದ್ಯುತ್ ಯೋಜನೆಗಳಿಂದ ಪಾಕಿಸ್ತಾನಕ್ಕೆ ನೀರಿನ ಅಭಾವ ಉಂಟಾಗುತ್ತದೆ ಎಂದು ಈ ಯೋಜನೆಗೆ ಪಾಕಿಸ್ತಾನ ಆಕ್ಷೇಪ ವ್ಯಕ್ತಪಡಿಸುತ್ತಲೇ ಬಂದಿದೆ. ಇದು ತನ್ನ ನೀರಿನ ಭದ್ರತೆಯ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಉಂಟುಮಾಡುತ್ತದೆ ಎಂಬುದು ನೆರೆ ರಾಷ್ಟ್ರದ ಆರೋಪ.

ಒಪ್ಪಂದ ಸ್ವಾಗತಿಸಿದ ಮೋದಿ



ಬ್ರಾಟಿಸ್ಲಾವಾ: ಪಶ್ಚಿಮ ಏಷ್ಯಾದ ಸಂಘರ್ಷವನ್ನು ಕೊನೆಗೊಳಿಸಲು ಅಮೆರಿಕ ಮತ್ತು ಇರಾನ್ ನಡುವೆ ನಡೆದಿರುವ ಒಪ್ಪಂದವನ್ನು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಸ್ವಾಗತಿಸಿದ್ದು, ಇದರಿಂದ ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆ ಪುನಃಸ್ಥಾಪನೆಯಾಗಲಿದೆ ಎಂಬ ನಿರೀಕ್ಷೆ ವ್ಯಕ್ತಪಡಿಸಿದ್ದಾರೆ. ಈ ಸಂಘರ್ಷ ವಿಶ್ವದಾದ್ಯಂತ ಆರ್ಥಿಕ ಆತಂಕಗಳನ್ನು ಉಂಟುಮಾಡಿದ್ದು, ಹಲವು ದೇಶಗಳಲ್ಲಿ ಜೀವಹಾನಿಗೂ ಕಾರಣವಾಗಿದೆ. ಒಪ್ಪಂದದ ಅನುಷ್ಠಾನದಿಂದ ನೌಕಾಯಾನ ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ಸ್ವಾತಂತ್ರ್ಯ ದೊರೆಯಲಿದ್ದು, ಅಂತಿಮ ಒಪ್ಪಂದಕ್ಕೆ ದಾರಿ ಸುಗಮವಾಗಲಿದೆ ಎಂದು ಮೋದಿ ಹೇಳಿದರು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅಮೆರಿಕ ಮತ್ತು ಇರಾನ್ ನಡುವಿನ ಶತ್ರುತ್ವ ಕೊನೆಗೊಳಿಸಲು, ಹಾರ್ಮುಜ್ ಜಲಸಂಧಿಯನ್ನು ಪುನಃ ತೆರೆಯಲು ಹಾಗೂ ಅಮೆರಿಕದ ನೌಕಾ ನಿರ್ಬಂಧವನ್ನು ತೆಗೆದುಹಾಕಲು ಒಪ್ಪಂದ ಪೂರ್ಣಗೊಂಡಿದೆ ಎಂದು ಘೋಷಿಸಿದ ಬಳಿಕ ಮೋದಿ ಈ ಪ್ರತಿಕ್ರಿಯೆ ನೀಡಿದ್ದಾರೆ.


ಕಿರುಸುದ್ದಿ

ಕೇರಳದಲ್ಲೂ ಮಹಿಳೆಯರಿಗೆ ಉಚಿತ ಬಸ್‌ಪ್ರಯಾಣ
ತಿರುವನಂತಪುರಂ: ಪ್ರಮುಖ ಚುನಾವಣಾ ಭರವಸೆಯನ್ನು ಈಡೇರಿಸಿದ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರ್ಕಾರವು ಸೋಮವಾರ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಯೋಜನೆಯನ್ನು ಜಾರಿಗೆ ತಂದಿದೆ. ಮುಖ್ಯಮಂತ್ರಿ ವಿ.ಡಿ. ಸತೀಶನ್ ಇದನ್ನು ಹೊಸ ಕೇರಳವನ್ನು ನಿರ್ಮಿಸುವ ನಿರ್ಣಾಯಕ ಹೆಜ್ಜೆ ಎಂದು ಕರೆದಿದ್ದಾರೆ. ಪ್ರಿಯದರ್ಶಿನಿ ಯೋಜನೆಯನ್ನು ಪ್ರಾರಂಭಿಸುವುದರೊಂದಿಗೆ, ಕೇರಳವು ಕಾಂಗ್ರೆಸ್ ಆಡಳಿತದ ಕರ್ನಾಟಕ ಮತ್ತು ತೆಲಂಗಾಣ ಸೇರಿದಂತೆ ಇತರ ದಕ್ಷಿಣದ ರಾಜ್ಯಗಳೊಂದಿಗೆ ಸೇರಿ, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣವನ್ನು ನೀಡಿದೆ. ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳು ಸಹ ಮಹಿಳೆಯರಿಗೆ ಇದೇ ರೀತಿಯ ಸವಲತ್ತುಗಳನ್ನು ನೀಡಿವೆ.

ಅಯೋಧ್ಯೆ ದೇಣಿಗೆ ಬಗ್ಗೆ ಎಸ್‌ಐಟಿಯಿಂದ ತನಿಖೆ
ಲಖನೌ: ಅಯೋಧ್ಯೆ ರಾಮಮಂದಿ ದೇಣಿಗೆ ಸಂಗ್ರಹದಲ್ಲಿ ಅಕ್ರಮಗಳು ನಡೆದಿವೆ ಎಂಬ ಆರೋಪಗಳ ಬಗ್ಗೆ ವಿಶೇಷ ತನಿಖಾ ತಂಡ(ಎಸ್‌ಐಟಿ) ತನಿಖೆ ಪ್ರಾರಂಭಿಸಿದೆ. ದೇವಾಲಯದ ಅರ್ಪಣೆಗಳಿಗೆ ಸಂಬಂಧಿಸಿದ ಕಳ್ಳತನ ಮತ್ತು ಹಣಕಾಸಿನ ದುರುಪಯೋಗದ ಆರೋಪಗಳು ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷ ಸಮಾಜವಾದಿ ಪಕ್ಷದ ನಡುವೆ ರಾಜಕೀಯ ಸಂಘರ್ಷವನ್ನು ಪ್ರಚೋದಿಸಿದ ನಂತರ ಈ ಬೆಳವಣಿಗೆ ಸಂಭವಿಸಿದೆ. ಎಸ್‌ಐಟಿ ಅಯೋಧ್ಯೆಗೆ ತಲುಪಿ ತನ್ನ ತನಿಖೆಯನ್ನು ಪ್ರಾರಂಭಿಸಿದೆ. ಮುಂದಿನ 15 ದಿನಗಳಲ್ಲಿ ತಂಡವು ತನ್ನ ಅಂತಿಮ ವರದಿಯನ್ನು ಸಲ್ಲಿಸುವ ನಿರೀಕ್ಷೆಯಿದೆ.

ಮೋದಿ ಕರೆಯ ಪ್ರೇರಣೆ ಚಿನ್ನ ಖರೀದಿಸದ ಕುಟುಂಬ
ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿಯವರ ಮನವಿಯಿಂದ ಪ್ರೇರಿತರಾಗಿ ಮಹಾರಾಷ್ಟ್ರದ ವಾರ್ಧಾದ ಕುಟುಂಬವೊಂದು ತಮ್ಮ ಮಗನ ಮದುವೆಗೆ ಚಿನ್ನದ ಆಭರಣಗಳನ್ನು ಖರೀದಿಸದಿರಲು ನಿರ್ಧರಿಸಿದೆ. ಚಿನ್ನದ ಕರಿಮಣಿ ಸರ ಬದಲಿಗೆ ತಮ್ಮ ಭಾವಿ ಸೊಸೆಗೆ ತಮ್ಮ ಮಡದಿಯಮಂಗಳಸೂತ್ರ ನೀಡಲು ನಿರ್ಧರಿಸಿದ್ದಾರೆ. ಮೋದಿಯವರನ್ನು ಉದ್ದೇಶಿಸಿ ಬರೆದ ಪತ್ರದಲ್ಲಿ, ವಾರ್ಧಾದ ಪುಲ್ಗಾಂವ್‌ನಲ್ಲಿ ಪೂಜಾ ಸಾಮಗ್ರಿಗಳ ಅಂಗಡಿಯನ್ನು ನಡೆಸುತ್ತಿರುವ ಸತೀಶ್ ಗೌರಿಶಂಕರ್ ಚೌಬೆ, ರಾಷ್ಟ್ರದ ಹಿತದೃಷ್ಟಿಯಿಂದ ಜವಾಬ್ದಾರಿಯುತ ಖರ್ಚು ಮಾಡುವ ಪ್ರಧಾನ ಮಂತ್ರಿಯ ಕರೆಯಿಂದ ಪ್ರಭಾವಿತರಾಗಿ ವಧುವಿಗೆ ಹೊಸ ಕರಿಮಣಿ ಸರ ಖರೀದಿಸದಿರಲು ತಮ್ಮ ಕುಟುಂಬ ನಿರ್ಧರಿಸಿದೆ ಎಂದು ಹೇಳಿದ್ದಾರೆ.

ಹಾರ್ಮುಜ್ ದಾಟಿದ ಭಾರತ ಹಡಗು ದಿಶಾ
ಹೊಸದಿಲ್ಲಿ: ಭಾರತದ ಎಲ್‌ಎನ್‌ಜಿ ಕಾರ್ಗೋ ನೌಕೆ ದಿಶಾ ಸ್ಟ್ರೈಟ್ ಆಫ್ ಹಾರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿದೆ. ಈ ಮೂಲಕ ಕಳೆದ ಮೂರು ತಿಂಗಳಿಗೂ ಹೆಚ್ಚು ಅವಧಿಯಲ್ಲಿ ಯುದ್ಧ ಪೀಡಿತ ವಲಯದಿಂದ ಯಶಸ್ವಿಯಾಗಿ ಹೊರಬಂದ ಭಾರತದ ಧ್ವಜ ಹೊಂದಿದ ಮೊದಲ ಎಲ್‌ಎನ್‌ಜಿ ನೌಕೆ ಎಂಬ ಹೆಗ್ಗಳಿಕೆಗೆ ಇದು ಪಾತ್ರವಾಗಿದೆ. ಶಿಪ್ಪಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ನೇತೃತ್ವದ ಒಕ್ಕೂಟದ ಉಸ್ತುವಾರಿಯಲ್ಲಿರುವ ಈ ನೌಕೆ, 62,370 ಮೆಟ್ರಿಕ್ ಟನ್ ಎಲ್‌ಎನ್‌ಜಿ ಸರಕನ್ನು ಹೊತ್ತು ಸಾಗುತ್ತಿದೆ. ಬಂದರು, ಹಡಗು ಮತ್ತು ಜಲಮಾರ್ಗ ಸಚಿವಾಲಯದ ನಿರ್ದೇಶಕ ಒಪೇಶ್ ಕುಮಾರ್ ಶರ್ಮಾ ಪ್ರಕಾರ, ಈ ನೌಕೆ ಜೂ.18ರಂದು ದಹೇಜ್ ಬಂದರು ತಲುಪುವ ನಿರೀಕ್ಷೆಯಿದೆ. ಭಾರತೀಯ ನಾವಿಕರ ಸುರಕ್ಷತೆ ಮತ್ತು ಕಲ್ಯಾಣವನ್ನು ಖಚಿತಪಡಿಸಿಕೊಳ್ಳಲಾಗುತ್ತಿದೆ.



ಕಳೆದ 96 ಗಂಟೆಗಳಲ್ಲಿ ಸಚಿವಾಲಯದ ನಿಯಂತ್ರಣ ಕೊಠಡಿ 12,737 ಕರೆಗಳನ್ನು ಮತ್ತು 28,299ಕ್ಕೂ ಹೆಚ್ಚು ಇಮೇಲ್‌ಗಳನ್ನು ನಿರ್ವಹಿಸಿದೆ. ಈ ನಿರ್ದಿಷ್ಟ ಅವಧಿಯಲ್ಲಿ 406 ಕರೆಗಳು ಮತ್ತು 784 ಇಮೇಲ್‌ಗಳನ್ನು ಸ್ವೀಕರಿಸಲಾಗಿದೆ ಎಂದು ಹಡಗು ಮತ್ತು ಜಲಮಾರ್ಗ ಸಚಿವಾಲಯ ತಿಳಿಸಿದೆ. ಇಲ್ಲಿಯವರೆಗೆ 3,587ಕ್ಕೂ ಹೆಚ್ಚು ಭಾರತೀಯ ನಾವಿಕರನ್ನು ಯಶಸ್ವಿಯಾಗಿ ಸ್ವದೇಶಕ್ಕೆ ಕರೆತರಲಾಗಿದ್ದು, ಇದರಲ್ಲಿ ಕಳೆದ 96 ಗಂಟೆಗಳಲ್ಲಿ ವಾಪಸಾದ 50 ನಾವಿಕರು ಸೇರಿದ್ದಾರೆ.

ದೇಶದಲ್ಲಿ ರಸಗೊಬ್ಬರ ಕೊರತೆಯಿಲ್ಲ: ಕೇಂದ್ರ
ಹೊಸದಿಲ್ಲಿ: ಪ್ರಸಕ್ತ ಮುಂಗಾರು ಋತುವಿನಲ್ಲಿ ರಸಗೊಬ್ಬರಗಳ ಕೊರತೆಯಿಲ್ಲ ಎಂದು ಕೇಂದ್ರ ಸರ್ಕಾರ ಸೋಮವಾರ ಹೇಳಿದೆ. ರೈತರು ಈಗಾಗಲೇ ನಿರೀಕ್ಷಿತ ಅಗತ್ಯದ ಶೇ.37ಕ್ಕಿಂತ ಹೆಚ್ಚು ಮತ್ತು ದೇಶಾದ್ಯಂತ ಲಭ್ಯವಿರುವ ಗಣನೀಯ ದಾಸ್ತಾನುಗಳನ್ನು ಖರೀದಿಸಿದ್ದಾರೆ. ರಸಗೊಬ್ಬರ ಇಲಾಖೆಯ ಪ್ರಕಾರ, ರೈತರು ಈ ಋತುವಿನಲ್ಲಿ ಈವರೆಗೆ 102.78 ಲಕ್ಷ ಟನ್ ರಾಸಾಯನಿಕ ರಸಗೊಬ್ಬರಗಳನ್ನು ಖರೀದಿಸಿದ್ದಾರೆ. ಕೃಷಿ ಸಚಿವಾಲಯವು ಖಾರಿಫ್‌ಗೆ ಒಟ್ಟು 383.9 ಲಕ್ಷ ಟನ್ ರಸಗೊಬ್ಬರದ ಅಗತ್ಯವನ್ನು ಮರುಮೌಲ್ಯಮಾಪನ ಮಾಡಿದೆ.



ಸೋಮವಾರದ ಹೊತ್ತಿಗೆ, ಸ್ಟಾಕ್‌ಗಳು 196.65 ಲಕ್ಷ ಟನ್‌ಗಳಷ್ಟಿವೆ. ಇದು ಸಾಮಾನ್ಯ ಬಫರ್ ಮಟ್ಟಕ್ಕಿಂತ ಗಮನಾರ್ಹವಾಗಿ ಹೆಚ್ಚಾಗಿದೆ. ಬಾಕಿ ಇರುವ ಬಳಕೆ 281.12 ಲಕ್ಷ ಟನ್ ಆಗಿದ್ದು, ಅದರಲ್ಲಿ ಇಂದು ನಮ್ಮ ಬಳಿ 196 ಲಕ್ಷ ಟನ್ ಲಭ್ಯವಿದೆ ಎಂದು ರಸಗೊಬ್ಬರ ಇಲಾಖೆಯ ಜಂಟಿ ಕಾರ್ಯದರ್ಶಿ ಬಂದನಾ ಪ್ರೇಯಶಿ ಸುದ್ದಿಗಾರರಿಗೆ ತಿಳಿಸಿದರು. ದೃಢವಾದ ದೇಶೀಯ ಉತ್ಪಾದನೆ ಮತ್ತು ಸಮಯೋಚಿತ ಆಮದುಗಳಿಂದಾಗಿ ಸ್ಟಾಕ್ ಸ್ಥಾನವು ಆರಾಮದಾಯಕವಾಗಿದೆ ಎಂದು ಅವರು ಹೇಳಿದರು. ಪ್ರಸ್ತುತ ಅವಧಿಯಲ್ಲಿ, ಸರ್ಕಾರವು 50 ಲಕ್ಷ ಟನ್‌ಗಳಿಗಿಂತ ಹೆಚ್ಚು ಯುರಿಯಾ ಮತ್ತು ಫಾಸ್ಫೇಟಿಕ್ ಮತ್ತು ಪೊಟಾಸಿಕ್(ಪಿ ಮತ್ತು ಕೆ) ರಸಗೊಬ್ಬರಗಳನ್ನು ಪಡೆದುಕೊಂಡಿದೆ. ಪೂರೈಕೆಯನ್ನು ಮತ್ತಷ್ಟು ಬಲಪಡಿಸಲು ಸರ್ಕಾರವು ಹೆಚ್ಚುವರಿ 17 ಲಕ್ಷ ಟನ್ ಯೂರಿಯಾವನ್ನು ಆಮದು ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿದೆ.

ವ್ಯವಹಾರವಾಗಿ ಮಾರ್ಪಟ್ಟ ಆರ್ಟಿಐ ಹೋರಾಟ: ಸುಪ್ರೀಂ
ಹೊಸದಿಲ್ಲಿ: ಮಾಹಿತಿ ಹಕ್ಕು (ಆರ್‌ಟಿಐ) ಹೋರಾಟ ಈಗ ಹೊಸ ವ್ಯವಹಾರವಾಗಿ ಮಾರ್ಪಟ್ಟಿದೆ ಎಂದು ಕಟುವಾಗಿ ಅಭಿಪ್ರಾಯಪಟ್ಟ ಸುಪ್ರೀಂ ಕೋರ್ಟ್, ರಸ್ತೆ ನಿರ್ಮಾಣ ಕಾಮಗಾರಿಗೆ ಅಡ್ಡಿಪಡಿಸಿದ ಆರೋಪ ಎದುರಿಸುತ್ತಿರುವ ಆರ್‌ಟಿಐ ಕಾರ್ಯಕರ್ತ ಹಾಗೂ ಮತ್ತೊಬ್ಬ ಆರೋಪಿಗೆ ನಿರೀಕ್ಷಣಾ ಜಾಮೀನು ನೀಡಲು ಸೋಮವಾರ ನಿರಾಕರಿಸಿದೆ. ನ್ಯಾಯಮೂರ್ತಿಗಳಾದ ಸಂದೀಪ್ ಮೆಹ್ತಾ ಹಾಗೂ ವಿಜಯ್ ಬಿಷ್ಣೋಯಿ ಅವರ ಪೀಠವು ಆರ್‌ಟಿಐ ಕಾರ್ಯಕರ್ತ ರಾಕೇಶ್ ಕುಮಾರ್ ಬೆಹ್ಲ್ ಮತ್ತು ಅವರ ಸಹಚರರ ಅರ್ಜಿಯನ್ನು ವಜಾಗೊಳಿಸಿತು. ರಸ್ತೆ ಕಾಮಗಾರಿಯ ಮೇಲ್ವಿಚಾರಣೆ ನಡೆಸಲು ಇವರಿಗೆ ಯಾವ ಅಧಿಕಾರವಿದೆ ಎಂದು ಪೀಠ ಪ್ರಶ್ನಿಸಿತು. ಆರ್‌ಟಿಐ ಕಾರ್ಯಕರ್ತರು ಎಂಬ ಹೆಸರಿನಲ್ಲಿ ಕೆಲವರು ಸಾರ್ವಜನಿಕ ಕಾಮಗಾರಿಗಳಿಗೆ ಅಡ್ಡಿಯಾಗುತ್ತಿದ್ದಾರೆ. ಕೇಂದ್ರ ಸರ್ಕಾರ ಹಣ ಮಂಜೂರು ಮಾಡಿದೆ. ರಸ್ತೆ ನಿರ್ಮಾಣದ ಜವಾಬ್ದಾರಿ ಸರ್ಕಾರದ್ದೇ. ನೀವು ಯಾರು? ಸ್ವಯಂ ಘೋಷಿತ ಆರ್‌ಟಿಐ ಕಾರ್ಯಕರ್ತರು ಎಂದು ನ್ಯಾಯಮೂರ್ತಿ ಮೆಹ್ತಾ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ನ್ಯಾಯಮೂರ್ತಿ ಬಿಷ್ಣೋಯಿ ಸಹ, ಎಲ್ಲ ರಸ್ತೆ ಕಾಮಗಾರಿಗಳ ಮೇಲ್ವಿಚಾರಣೆ ನಡೆಸಲು ನೀವು ಯಾವುದಾದರೂ ಉನ್ನತ ಅಧಿಕಾರಿಗಳೇ? ಎಂದು ಪ್ರಶ್ನಿಸಿದರು. ಪಂಜಾಬ್‌ನ ಗುರುದಾಸ್ಪುರ ಜಿಲ್ಲೆಯ ಬಟಾಲಾ ಪ್ರದೇಶದಲ್ಲಿ ನಡೆಯುತ್ತಿದ್ದ ರಸ್ತೆ ನಿರ್ಮಾಣ ಕಾಮಗಾರಿಗೆ ಅಡ್ಡಿಪಡಿಸಿದ, ಕಾರ್ಮಿಕರು ಮತ್ತು ಮೇಲ್ವಿಚಾರಕರಿಗೆ ಬೆದರಿಕೆ ಹಾಕಿದ ಹಾಗೂ ಹಲ್ಲೆ ನಡೆಸಿದ ಆರೋಪದಡಿ ಬೆಹ್ಲ್ ಮತ್ತು ಮತ್ತೊಬ್ಬರ ವಿರುದ್ಧ ಪ್ರಕರಣ ದಾಖಲಾಗಿತ್ತು.

ಆಧಾರ್ ಕೇವಲ ಗುರುತಿನ ಪುರಾವೆ; ಇಂದು ವಿಚಾರಣೆ
ಹೊಸದಿಲ್ಲಿ: ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರವು ನೀಡಿದ ಆಧಾರ್ ಕಾರ್ಡ್‌ಗಳನ್ನು ಪೌರತ್ವ, ವಾಸಸ್ಥಳ ಮತ್ತು ವಸತಿ ವಿಳಾಸದ ಪುರಾವೆಯಾಗಿ ದುರುಪಯೋಗಪಡಿಸಿಕೊಳ್ಳಲಾಗಿದೆ. ಗುರುತಿನ ಪರಿಶೀಲನೆಗಾಗಿ ಅದರ ಬಳಕೆಯನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಲು ನಿರ್ದೇಶನಗಳನ್ನು ಕೋರಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂಕೋರ್ಟ್ ಮಂಗಳವಾರ ನಡೆಸಲಿದೆ.



ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ವಿ.ಮೋಹನಾ ಅವರನ್ನೊಳಗೊಂಡ ಪೀಠವು ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸುವ ಸಾಧ್ಯತೆಯಿದೆ. ಪೌರತ್ವ, ವಾಸಸ್ಥಾನ, ವಿಳಾಸ ಮತ್ತು ಹುಟ್ಟಿದ ದಿನಾಂಕದ ಪುರಾವೆಯಾಗಿ ಅಲ್ಲ, ಗುರುತಿನ ಪುರಾವೆಯಾಗಿ ಆಧಾರವನ್ನು ಬಳಸುವುದನ್ನು ಖಚಿತಪಡಿಸಿಕೊಳ್ಳಲು ಅದು ಕೇಂದ್ರ, ರಾಜ್ಯಗಳು ಮತ್ತು ಚುನಾವಣಾ ಆಯೋಗಕ್ಕೆ ನಿರ್ದೇಶನಗಳನ್ನು ಕೋರಿದೆ.

ಅಟ್ಯಾಕ್ ಕ್ಷಿಪಣಿ ಪರೀಕ್ಷೆ ಯಶಸ್ವಿ
ಹೊಸದಿಲ್ಲಿ: ಒಡಿಶಾ ಕರಾವಳಿಯ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ದ್ವೀಪದಿಂದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(ಡಿಆರ್‌ಡಿಒ) ಸೋಮವಾರ ಲಾಂಗ್ ರೇಂಜ್ ಲ್ಯಾಂಡ್ ಅಟ್ಯಾಕ್ ಕ್ರೂಸ್ ಕ್ಷಿಪಣಿ(ಎಲ್‌ಆರ್‌ಎಲ್‌ಎಸಿಎಂ) ಹಾರಾಟ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದೆ. ಚಾಂದಿಪುರದ ಇಂಟಿಗ್ರೇಟೆಡ್ ಟೆಸ್ಟ್ ರೇಂಜ್ ನಿಯೋಜಿಸಿರುವ ವಿವಿಧ ಟ್ರ್ಯಾಕಿಂಗ್ ಉಪಕರಣಗಳಿಂದ ಸೆರೆಹಿಡಿಯಲಾದ ಮಾಹಿತಿಯ ಪ್ರಕಾರ, ಎಲ್ಲಾ ಪರೀಕ್ಷಾ ಉದ್ದೇಶಗಳನ್ನು ಸಂಪೂರ್ಣವಾಗಿ ಪೂರೈಸಲಾಗಿದೆ. ಎಲ್‌ಆರ್‌ಎಲ್‌ಎಸಿಎಂ ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ಕ್ಷಿಪಣಿಯಾಗಿದ್ದು, ವಿವಿಧ ಡಿಆರ್‌ಡಿಒ ಪ್ರಯೋಗಾಲಯಗಳು ಮತ್ತು ಭಾರತೀಯ ಕೈಗಾರಿಕಾ ಪಾಲುದಾರರು ಅಭಿವೃದ್ಧಿಪಡಿಸಿದ ಎಲ್ಲಾ ಉಪ-ವ್ಯವಸ್ಥೆಗಳನ್ನು ಹೊಂದಿದೆ. ಕ್ಷಿಪಣಿಯು ಎಲ್ಲಾ ಮಿಷನ್ ಉದ್ದೇಶಗಳನ್ನು ಸಾಧಿಸಿತು, ನಿರ್ಣಾಯಕ ತಂತ್ರಜ್ಞಾನಗಳನ್ನು ಮೌಲ್ಯೀಕರಿಸಿದೆ. ಭಾರತದ ಬೆಳೆಯುತ್ತಿರುವ ದೀರ್ಘ-ಶ್ರೇಣಿಯ ನಿಖರ ದಾಳಿ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ಈ ಉಡಾವಣೆಗೆ ಡಿಆರ್‌ಡಿಒದ ಹಿರಿಯ ಅಧಿಕಾರಿಗಳು, ನೌಕಾಪಡೆ ಮತ್ತು ವಾಯುಪಡೆಯ ಪ್ರತಿನಿಧಿಗಳು ಸಾಕ್ಷಿಯಾದರು.

ಭಾರತವನ್ನು ಜೋಡಿಸಿದ್ದು ಋಷಿಗಳು ಮತ್ತು ಸಂತರು: ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್
ಭಾರತದ ಏಕತೆಯ ಪರಿಕಲ್ಪನೆ ಪ್ರಾಚೀನ ನಾಗರಿಕತೆಯ ವಾಸ್ತವ

ಹೊಸದಿಲ್ಲಿ: ಭಾರತದ ಏಕತೆಯ ಪರಿಕಲ್ಪನೆ ಹೊಸತಲ್ಲ, ಇದು ಪ್ರಾಚೀನ ಭಾರತೀಯ ನಾಗರಿಕತೆಯ ವಾಸ್ತವವಾಗಿದೆ. ಭಾರತವನ್ನು ನಿಜವಾಗಿಯೂ ಜೋಡಿಸಿದವರು ಋಷಿಗಳು ಮತ್ತು ಸಂತಶ್ರೇಷ್ಠರು ಎಂಬುದಾಗಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಸೋಮವಾರ ಹೇಳಿದರು. ಅವರು ದಿಲ್ಲಿಯ ಉಪರಾಷ್ಟ್ರಪತಿ ಭವನದಲ್ಲಿ "ಅಗತ್ಯಾರ್-ದ ಯುನಿಫೈಯರ್" ತಮಿಳು ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು. ಈಗಾಗಲೇ ಈ ಕೃತಿ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಭಾಷಾಂತರಗೊಂಡು ಬಿಡುಗಡೆಯಾಗಿರುವುದನ್ನು ಇಲ್ಲಿ ಸ್ಮರಿಸಬಹುದು. ಭಾರತೀಯ ನಾಗರಿಕ ಏಕತೆ ಅಥವಾ ರಾಷ್ಟ್ರೀಯ ಸಮಗ್ರತೆಯ ಬಗ್ಗೆ ಮಾತನಾಡುವ ವೇಳೆ ರಾಜರನ್ನು, ರಾಜಕೀಯ ಸಂಸ್ಥೆಗಳನ್ನು ಪದೆ ಪದೆ ಉಲ್ಲೇಖಿಸಲಾಗುತ್ತದೆ. ಆದರೆ ಭಾರತೀಯ ಏಕತೆಯ ನಿಜವಾದ ಶಿಲ್ಪಿಗಳೆಂದರೆ ಅದು ಋಷಿಗಳು ಮತ್ತು ಸಂತಶ್ರೇಷ್ಠರಾಗಿದ್ದಾರೆ. ಇಂತಹ ಋಷಿಗಡಣದಲ್ಲಿ ಅಗಸ್ತ್ಯರು ಭಾರತೀಯ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಏಕತೆಯ ಮಹಾನ್ ಸಂಕೇತಗಳಲ್ಲಿ ಒಬ್ಬರಾಗಿದ್ದಾರೆ ಎಂದು ಅವರು ನುಡಿದರು.

ಅಗಸ್ತ್ಯರು ಉತ್ತರ ಭಾರತ ಮತ್ತು ದಕ್ಷಿಣ ಭಾರತೀಯ ಪರಂಪರೆಗಳೆರಡರಲ್ಲೂ ಸಮಾನವಾಗಿ ಗೌರವಿಸಲ್ಪಟ್ಟ ಋಷಿ ಶ್ರೇಷ್ಠರು. ಅಗಸ್ತ್ಯರು ಹಿಮಾಲಯದಿಂದ ಹಿಂದು ಮಹಾಸಾಗರದವರೆಗೆ ವ್ಯಾಪಿಸಿರುವ ಭಾರತೀಯ ಏಕತೆಯ ಸಂಕೇತವಾಗಿದ್ದಾರೆ. ತಮಿಳ್ನಾಡಿನ ಪೋತಿಗಾಯಿ ಪರ್ವತಗಳು ಮತ್ತು ಕಾವೇರಿ ನದಿಯನ್ನು ಉಲ್ಲೇಖಿಸಿದ ಅವರು, ಇವು ಅಗಸ್ತ್ಯರ ಸ್ಮರಣೆಯನ್ನು ಶಾಶ್ವತವಾಗಿರಿಸುತ್ತವೆ. ತಮಿಳು ವ್ಯಾಕರಣದ ಅಭಿವೃದ್ಧಿ ಹಾಗೂ ತಮಿಳ್ ಸಂಗಮ್ ಪರಂಪರೆಗೆ ಅಗಸ್ತ್ಯರದು ಮಹತ್ವದ ಕೊಡುಗೆಯಾಗಿರುವುದನ್ನು ಎತ್ತಿ ತೋರಿದ ಅವರು , ಅಗಸ್ತ್ಯರು ಉತ್ತರ ಭಾರತ ಮತ್ತು ದಕ್ಷಿಣ ಭಾರತೀಯ ಸಂಸ್ಕೃತಿಗಳ ನಡುವಣ ಸೇತುವಾಗಿದ್ದಾರೆ ಎಂದು ಬಣ್ಣಿಸಿದರು. ಭಾರತೀಯ ಭಾಷೆಗಳಾವುವೂ ಸ್ಪರ್ಧಿಗಳಲ್ಲ, ಬದಲಿಗೆ ಸಹೋದರಿ ಭಾಷೆಗಳಾಗಿದ್ದು, ಅವು ಪರಸ್ಪರ ಗೌರವಿಸುವ ಮೂಲಕ ಒಂದು ಇನ್ನೊಂದನ್ನು ಸಮೃದ್ಧಗೊಳಿಸುವಂತಹವುಗಳಾಗಿವೆ. ಭಾರತೀಯ ಏಕತೆಯು ಇತ್ತೀಚಿನ ನಿರ್ಮಾಣವಲ್ಲ, ಬದಲಿಗೆ ಪ್ರಾಚೀನ ನಾಗರಿಕತೆಯ ವಾಸ್ತವವಾಗಿ ಸಾವಿರಾರು ವರ್ಷಗಳಿಂದ ಸಾಧು, ಸಂತ, ಋಷಿ ಮುನಿಗಳಿಂದ ಬೆಳೆದು ಬಂದಿರುವಂಥದ್ದು. ಅಗಸ್ತ್ಯರ ಬದುಕೇ ಇದಕ್ಕೆ ಸಾಕ್ಷಿ ಎಂದರು. ಭಾಷೆಯ ಹೆಸರಿನಲ್ಲಿ ಅನಗತ್ಯ ಚರ್ಚೆಗಳನ್ನು ಹುಟ್ಟು ಹಾಕಿ ಜನರನ್ನು ವಿಭಜಿಸುವ ಕೆಲವು ಶಕ್ತಿಗಳ ಹುನ್ನಾರದ ವಿರುದ್ಧ ಜನತೆಯನ್ನು ಎಚ್ಚರಿಸಿ ಇಂತಹ ದುಷ್ಪ್ರವೃತ್ತಿಗಳಿಗೆ ಬಲಿಯಾಗಬೇಡಿ. ಯಾವುದೇ ಶಕ್ತಿಯೂ ಭಾರತದಲ್ಲಿ ವಿಭಜನೆ ಸೃಷ್ಟಿಸಲು ಸಾಧ್ಯವಿಲ್ಲ ಎಂದು ದೃಢವಾಗಿ ಸಾರಿದ ಅವರು, ಯುವಜನತೆಯಲ್ಲಿ ಭಾರತೀಯ ಸಂಸ್ಕೃತಿ ಮತ್ತು ನಾಗರಿಕತೆಯ ಪರಂಪರೆಯ ಬಗೆಗೆ ಸಕಾರಾತ್ಮಕ ಅರಿವು ಮೂಡಿಸುವಂತಹ ಚರ್ಚೆಗಳಿಗೆ ಕರೆ ನೀಡಿದರು.



ಸಮಾರಂಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನೀಲ್ ಅಂಬೇಕರ್, ಪ್ರಕಾಶನ ಸಂಸ್ಥೆ ಕಲೈಮಗಳ್ ಸಾಪ್ತಾಹಿಕದ ಸಂಪಾದಕ ಕೀಲಂಬೂರ್ ಶಂಕರ ಸುಬ್ರಹ್ಮಣ್ಯನ್, ಹಿರಿಯ ಪತ್ರಕರ್ತ ಶ್ರೀ ಮಾಲನ್, ಲೇಖಿಕರಾದ ಕರ್ನಾಟಕದ ಓ.ಶ್ಯಾಮ್ ಭಟ್ ಮತ್ತು ಡಾ.ಎಂ.ಎನ್.ಸುಧಾ , ಪುಸ್ತಕವನ್ನು ತಮಿಳಿಗೆ ಭಾಷಾಂತರಿಸಿದ ಪ್ರೊ.ಕಲ್ಯಾಣಿ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಕಿರುಸುದ್ದಿ

ಜೂ.19: ಒಡಿಯೂರಿನಲ್ಲಿ ಸಮಾಲೋಚನಾ ಸಭೆ

• ಪುತ್ತೂರು: ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದಲ್ಲಿ ಆ.8ರಂದು ನಡೆಯುವ ಶ್ರೀಗಳವರ ಜನ್ಮದಿನೋತ್ಸವ–ಗ್ರಾಮೋತ್ಸವವಾಗಿ ಸೇವಾ ಸಂಭ್ರಮದ ಅಂಗವಾಗಿ ಜೂ.19ರಂದು ಬೆಳಗ್ಗೆ 10.30ಕ್ಕೆ ಒಡಿಯೂರು ಶ್ರೀ ಗುರುದೇವ ಜ್ಞಾನ ಮಂದಿರದಲ್ಲಿ ಶ್ರೀ ಗುರುದೇವಾನಂದ ಸ್ವಾಮೀಜಿಗಳ ದಿವ್ಯ ಉಪಸ್ಥಿತಿಯಲ್ಲಿ ಸಮಾಲೋಚನಾ ಸಭೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರೊ.ಭಗವಾನ್ ವಿರುದ್ಧ ಸುಮೋಟೋ ಕೇಸಿಗೆ ಸರಕಾರಕ್ಕೆ ಒತ್ತಾಯ

• ಪುತ್ತೂರು: ಹಿಂದೂ ಧರ್ಮದ ದೇವರ ಕುರಿತು ಪದೇ ಪದೇ ಅವಹೇಳನ ಮಾಡುತ್ತಿರುವ ಪ್ರೊ.ಭಗವಾನ್ ವಿರುದ್ಧ ಸುಮೋಟೋ ಕೇಸು ದಾಖಲಿಸಲು ಪೊಲೀಸ್ ಇಲಾಖೆಗೆ ನಿರ್ದೇಶನ ನೀಡಲು ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರಿಗೆ ಒತ್ತಾಯಿಸುವುದಾಗಿ ಪುತ್ತೂರು ಶಾಸಕ ಅಶೋಕ್ ರೈ ಹೇಳಿದ್ದಾರೆ.



ಅಶೋಕ್ ರೈ ಅವರು ಭಗವಾನ್ ವಿಚಾರದಲ್ಲಿ ಗೃಹ ಸಚಿವರ ಜತೆ ಮಾತನಾಡಬೇಕು ಎಂಬ ಶ್ರೀರಾಮನ ಭಕ್ತರು ಆಗ್ರಹಿಸಿರುವ ವಿಚಾರದಲ್ಲಿ ಸೋಮವಾರ ಮಾಧ್ಯಮದ ಜತೆ ಮಾತನಾಡಿದ ಅವರು, ನನಗೆ ಯಾರೂ ಮನವಿ ಕೊಟ್ಟಿಲ್ಲ. ಕೊಡದಿದ್ದರೂ ಪರವಾಗಿಲ್ಲ. ಇಂತಹ ವಿಚಾರಗಳು ನಡೆಯಬಾರದು. ಅವರವರ ಧರ್ಮ, ಅವರವರ ನಂಬಿಕೆ. ಅದಕ್ಕೆ ಅವಹೇಳನಕಾರಿಯಾಗಿ ಮಾತನಾಡುವುದು ಖಂಡಿತ ತಪ್ಪು. ಭಗವಾನ್ ನಡೆಯನ್ನು ತಾನೂ ಖಂಡಿಸುವುದಾಗಿ ಹೇಳಿದರು. ಪ್ರೊ. ಭಗವಾನ್ ಈ ಹಿಂದೆ ಕೂಡ ಹಿಂದೂ ದೇವರ ಕುರಿತು ಅವಹೇಳನದ ಹೇಳಿಕೆ ನೀಡಿದ್ದಾರೆ. ಅವರು ಯಾವ ಧರ್ಮವನ್ನು ನಂಬುತ್ತಾರೆ ಗೊತ್ತಿಲ್ಲ, ಆದರೆ, ಒಂದು ಧರ್ಮದ ಬಗ್ಗೆ ಈ ರೀತಿ ಮಾತನಾಡುವುದು ಆ ಧರ್ಮವನ್ನು ನಂಬುವ ಜನರ ಭಾವನೆ ಕೆದಕುವ ವರ್ತನೆ ಸಲ್ಲದು. ಇದರಿಂದ ಅವರಿಗೆ ಯಾವುದೇ ಪ್ರಯೋಜನವಿಲ್ಲ. ಈ ರೀತಿ ಮಾತನಾಡುವವನ್ನು ಕೂಡಲೇ ಬಂಧಿಸಿ ಕಠಿನ ಕ್ರಮವನ್ನು ಸರಕಾರ ತೆಗೆದುಕೊಳ್ಳಬೇಕು. ಸುಮೋಟೋ ಕೇಸು ದಾಖಲಿಸಲು ಇಲಾಖೆಗೆ ನಿರ್ದೇಶನ ನೀಡುವಂತೆ ಸಿಎಂ ಹಾಗೂ ಗೃಹ ಸಚಿವರನ್ನು ಭೇಟಿಯಾಗಿ ಒತ್ತಾಯಿಸುತ್ತೇನೆ ಎಂದು ಅಶೋಕ್ ರೈ ತಿಳಿಸಿದ್ದಾರೆ.

ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನದಲ್ಲಿ ಮಲ್ಲಿಗೆ ಹೂವಿನ ಅಲಂಕಾರ

• ಮಂಗಳೂರು: ನಗರದ ರಥಬೀದಿ ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನದಲ್ಲಿ ಅಧಿಕ ಮಾಸದ ಪ್ರಯುಕ್ತ ಭಕ್ತಾಗಳಿಂದ ಭಾನುವಾರ ಶ್ರೀ ಕ್ಷೇತ್ರದ ಎಲ್ಲಾ ದೇವರಿಗೆ ಮಲ್ಲಿಗೆ ಹೂವಿನ ಅಲಂಕಾರ ಪೂಜೆ ನಡೆಯಿತು. ಸುಮಾರು 306 ಚೆಂಡು ಮಲ್ಲಿಗೆ ಭಕ್ತಾದಿಗಳು ಸಮರ್ಪಿಸಿದರು. ಶ್ರೀ ಕ್ಷೇತ್ರದ ಆಡಳಿತಾಧಿಕಾರಿ ಕೆ. ಉಮೇಶ್ ಆಚಾರ್ಯ ಪಾಂಡೇಶ್ವರ, ಅರ್ಚಕರು, ಮಾಜಿ ಮೊಕ್ತೇಸರರು, ಮಾಜಿ ಆಡಳಿತ ಮಂಡಳಿ ಸದಸ್ಯರು, ಶ್ರೀ ಕಾಳಿಕಾಂಬಾ ಸೇವಾ ಸಮಿತಿ, ವಿಶ್ವಬ್ರಾಹ್ಮಣ ಮಹಿಳಾ ಸಮಿತಿ ಸದಸ್ಯರು, ಇನ್ನಿತರ ಸಂಘ ಸಂಸ್ಥೆ ಸದಸ್ಯರು, ಭಕ್ತಾದಿಗಳು ಉಪಸ್ಥಿತರಿದ್ದರು.



1.50 ಲಕ್ಷ ರೂ ಮೌಲ್ಯದ ಸರ ಸೆಳೆದು ಪರಾರಿ

• ಮಂಗಳೂರು: ನಡೆದುಕೊಂಡು ಹೋಗುತ್ತಿದ್ದ ಮಹಿಳೆಯೊಬ್ಬರ ಕುತ್ತಿಗೆಯಲ್ಲಿದ್ದ ಸುಮಾರು 1.50 ಲಕ್ಷ ರೂಪಾಯಿ ಮೌಲ್ಯದ ಚಿನ್ನದ ಸರವನ್ನು ಅಪರಿಚಿತರಿಬ್ಬರು ಸೆಳೆದುಕೊಂಡು ಪರಾರಿಯಾದ ಘಟನೆ ನಗರದ ಸೂಟರ್ ಪೇಟೆ ಬಳಿ ಸೋಮವಾರ ನಡೆದಿದೆ. ಪ್ರಭಾವತಿ (64) ಚಿನ್ನದ ಸರ ಕಳೆದುಕೊಂಡವರು. ಸಂಕ್ರಮಣ ಪೂಜೆ ನಿಮಿತ್ತ ಸೂಟರ್ ಪೇಟೆಗೆ ಹೋಗಲು ಎಕ್ಕೂರು ಬಸ್ಸು ನಿಲ್ದಾಣದಲ್ಲಿ ಬಸ್ಸಿನಿಂದ ಇಳಿದು ನಡೆದುಕೊಂಡು ಹೋಗುವಾಗ ಘಟನೆ ನಡೆದಿದೆ. ಗ್ರಾಮ ಲೆಕ್ಕಾಧಿಕಾರಿ ಕಚೇರಿ ಬಳಿ ನಡೆದುಕೊಂಡು ಹೋಗುವಾಗ ದಾರಿಯಲ್ಲಿ ಹಳದಿ ಬಣ್ಣದ ರೈನ್ ಕೋಟ್ ಧರಿಸಿದ್ದ ಇಬ್ಬರು ಬೈಕ್‌ನಲ್ಲಿ ಚಿನ್ನದ ಸರವನ್ನು ಸೆಳೆದುಕೊಂಡು ಪರಾರಿಯಾಗಿದ್ದಾರೆ. ಈ ಬಗ್ಗೆ ಪಾಂಡೇಶ್ವರ ಠಾಣೆಗೆ ದೂರು ನೀಡಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಕೆ ಜಿ ಎಫ್ ಖ್ಯಾತಿಯ ಚಿತ್ರ ನಟಿ ಹಾಗೂ ಭರತನಾಟ್ಯ ಕಲಾವಿದೆ ಅರ್ಚನಾ ಜೋಯಿಸ್ ಅವರು ಶ್ರೀ ಕೃಷ್ಣ ಮಠಕ್ಕೆ ಭೇಟಿ ನೀಡಿ ದೇವರ ದರುಶನ ಪಡೆದು ಪರ್ಯಾಯ ಪೀಠಾಧೀಶರಾದ ಶ್ರೀ ವೇದವರ್ಧನ ತೀರ್ಥ ಶ್ರೀ ಪಾದರಿಂದ ಫಲ ಮಂತ್ರಾಕ್ಷತೆ ಪಡೆದುಕೊಂಡರು.

ಕಾಡು ಪ್ರಾಣಿ ಹಾವಳಿ ನಿಯಂತ್ರಣ ಪ್ರತಿಯೊಬ್ಬರ ಜವಾಬ್ದಾರಿ: ಪೊನ್ನಣ್ಣ

• ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಕಾಡಾನೆ ಹಾವಳಿ ಹಲವು ವರ್ಷಗಳಿಂದ ಸಮಸ್ಯೆಯಾಗಿ ಉಳಿದಿದ್ದು, ಕಾಡಾನೆಗಳ ಸಂಖ್ಯೆ ಹೆಚ್ಚಾಗುವುದೇ ಇದಕ್ಕೆ ಕಾರಣ. ಆ ನಿಟ್ಟಿನಲ್ಲಿ ಕಾಡಾನೆ ಹಾವಳಿ ನಿಯಂತ್ರಣಕ್ಕೆ ಪ್ರತಿಯೊಬ್ಬರ ಜವಾಬ್ದಾರಿ ಇದೆ ಎಂದು ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ನುಡಿದರು.



ವಿ.ಬಾಡಗ ಗ್ರಾಮದಲ್ಲಿ, ಕಾಡಾನೆ ಹಾವಳಿ ನಿಯಂತ್ರಣ ಸಂಬಂಧ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ವರ್ಷದಿಂದ ವರ್ಷಕ್ಕೆ ಕಾಡಾನೆಗಳ ಸಂಖ್ಯೆ ಹೆಚ್ಚಾಗುತ್ತಿದೆ. ಈ ಕಾಡಾನೆಗಳ ನಿಯಂತ್ರಣ ಸಂಬಂಧ ಹಲವು ಯೋಜನೆ ರೂಪಿಸಲಾಗಿದೆ. ಆನೆ ಕಂದಕ, ತಂತಿಬೇಲಿ, ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಹೀಗೆ ಹಲವು ಕ್ರಮ ಕೈಗೊಳ್ಳಲಾಗಿದೆ. ಇದಕ್ಕೆ ಶಾಶ್ವತ ಪರಿಹಾರ ಒದಗಿಸಬೇಕಿದ್ದು, ಪಕ್ಷಾತೀತವಾಗಿ ಎಲ್ಲರೂ ಜೊತೆಗೂಡಿ ಕಾರ್ಯಕ್ರಮ ರೂಪಿಸಬೇಕಿದೆ ಎಂದು ಹೇಳಿದರು.

ರಸ್ತೆ ಕಾಮಗಾರಿ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಶಾಸಕರು, ಹಣ ನೀಡಿದರೂ ಸಹ ಡಾಮರು ಸಿಗುತ್ತಿಲ್ಲ. ಯುದ್ಧದಿಂದಾಗಿ ಜನರು ತತ್ತರಿಸುವಂತಾಗಿದೆ. ಇಂಧನ ಸರಿಯಾಗಿ ಪೂರೈಕೆಯಾಗುತ್ತಿಲ್ಲ. ವ್ಯವಸಾಯ ಆಧಾರಿತ ಜಿಲ್ಲೆಯಾದ ಕೊಡಗಿನಲ್ಲಿ ಟ್ರ್ಯಾಕ್ಟರ್ ಮತ್ತು ಟಿಲ್ಲರ್‌ಗಳಿಗೆ ಇಂಧನ ಸಿಗದೆ ತೊಂದರೆ ಅನುಭವಿಸುವಂತಾಗಿದೆ ಎಂದರು.

ವಿರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಅನೇಕ ರಸ್ತೆಗಳ ಅಭಿವೃದ್ಧಿಗೆ ಟೆಂಡರ್ ಆಗಿದೆ. ಆದರೆ ಡಾಮರ ತೊಂದರೆಯಿಂದ ರಸ್ತೆ ಕಾಮಗಾರಿಗಳು ನಿಂತಿವೆ. ದೇಶದ ನಾಗರಿಕರ ರಕ್ಷಣೆ ಪ್ರತಿಯೊಬ್ಬರ ಆದ್ಯತೆ ಆಗಬೇಕು ಎಂದರು.

ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ತಾಲೂಕು ಘಟಕದ ಅಧ್ಯಕ್ಷ ಕಾಳೆಮಾಡ ಪ್ರಶಾಂತ್, ಸ್ಥಳೀಯರಾದ ಕಂಜಿತಂಡ ಗಣಿ ಮೊಣ್ಣಪ್ಪ, ಕಂಜಿತಂಡ ಪೂವಣ್ಣ, ಕೊಂಗಂಡ ಕಾಶಿ ಕಾವೇರಪ್ಪ, ಕೊಲ್ಲೀರ ಬೋಪಣ್ಣ, ಉಮೇಶ್ ಕೇಚಮಯ್ಯ ಮತ್ತಿತರರು ಹಾಜರಿದ್ದರು.

ಕಾಸರಗೋಡು ಪ್ರಿಯದರ್ಶಿನಿ ಬಸ್‌ಗಳು | 5–11 ಪ್ರಾಯದ ಗಂಡು ಮಕ್ಕಳಿಗೆ ಅರ್ಧ ಟಿಕೆಟ್

ಉಚಿತ ಪ್ರಯಾಣ ಉದ್ಘಾಟನೆ

• ಕಾಸರಗೋಡು: ಯುಡಿಎಫ್ ಸರಕಾರದ ಮಹತ್ತರ ಯೋಜನೆಗಳಲ್ಲೊಂದಾಗಿರುವ ಕೆಎಸ್ ಆರ್‌ಟಿಸಿ ಬಸ್‌ಗಳಲ್ಲಿ ಪ್ರಿಯದರ್ಶಿನಿ ಹೆಸರಿನಲ್ಲಿ ಮಹಿಳೆಯರಿಗಾಗಿರುವ ಉಚಿತ ಪ್ರಯಾಣಕ್ಕೆ ಸೋಮವಾರ ಬೆಳಗ್ಗೆ ಚಾಲನೆ ನೀಡಲಾಯಿತು.

ತಿರುವನಂತಪುರದ ತಂಬಾನೂರು ಟರ್ಮಿನಲ್ಲಿ ನಡೆದಸಮಾರಂಭದಲ್ಲಿಮುಖ್ಯಮಂತ್ರಿ ವಿ.ಡಿ.ಸತೀಶನ್ ಇಬ್ಬರು ಮಹಿಳೆಯರಿಗೆ ಉಚಿತ ಪ್ರಯಾಣದ ಮೊದಲ ಝೀರೋ ಟಿಕೆಟ್‌ಗಳನ್ನು ನೀಡುವ ಮೂಲಕ ಈ ಯೋಜನೆಗೆ ವಿದ್ಯುಕ್ತ ಚಾಲನೆ ನೀಡಿದರು. ಸಾರಿಗೆ ಸಚಿವ ಸಿ.ಪಿ.ಜೋನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ತಂಬಾನ್ನೂರಿನಿಂದ ಮೊದಲು ಉಚಿತ ಸೇವೆ ಆರಂಭಿಸಿದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಮುಖ್ಯಮಂತ್ರಿ ಮತ್ತು ಸಾರಿಗೆ ಸಚಿವರು ಪ್ರಯಾಣಿಸಿದರು. ವಿಶೇಷವೆಂದರೆ ಪಿಎಸ್‌ಸಿ ಮೂಲಕ ಮೊದಲ ಬಾರಿ ನೇಮಕ ಲಭಿಸಿದ ಮಹಿಳಾ ಚಾಲಕಿಯಾಗಿರುವ ಪೆರುಂಬಾವೂರು ಡಿಪ್ಪೋದ ಎ.ಸಿ.ಶೀಲಾ ಮೊದಲ ಬಾರಿಗೆ ಈ ಬಸ್ ಸೇವೆಯ ಸಾರಥ್ಯ ವಹಿಸಿದ್ದರು. ಜಯಕುಮಾರಿ ಈ ಬಸ್‌ನ ನಿರ್ವಾಹಕರಾಗಿದ್ದಾರೆ.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಈ ಯೋಜನೆಯ ಜಿಲ್ಲಾಮಟ್ಟದ ಉದ್ಘಾಟನೆಗಳು ನಡೆಯಿತು.

ರಾಜ್ಯದಲ್ಲಿ ಕೆಎಸ್‌ಆರ್‌ಟಿಸಿ ಒಟ್ಟಾರೆಯಾಗಿ 3125 ಆರ್ಡಿನರಿ ಬಸ್‌ಗಳಿದ್ದು ಅದರಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಜಾರಿಗೊಂಡಿದೆ. ಈ ಬಸ್‌ಗಳಲ್ಲಿ ಪ್ರಯಾಣಿಸುವ ಮಹಿಳೆಯರಿಗೂ ಝೀರೋ ರೂ. ಟಿಕೆಟ್ ನೀಡಲಾಗುತ್ತದೆ.

ಕಾಸರಗೋಡುಜಿಲ್ಲೆಯಲ್ಲಿಕಾಸರಗೋಡುಡಿಪ್ಪೋದ 75 ಸೇರಿದಂತೆ ಒಟ್ಟು 135 ಆರ್ಡಿನರಿ ಕೆಎಸ್‌ಆರ್‌ಟಿಸಿ ಬಸ್‌ಗಳಿದ್ದು ಅವುಗಳಲ್ಲಿ ಮಹಿಳೆಯರಿಗೆ ಪ್ರಯಾಣ ಉಚಿತವಾಗಿದೆ. ಹೀಗೆ ಉಚಿತವಾಗಿ ಪ್ರಯಾಣಿಸುವ ಮಹಿಳೆಯರ ಜೊತೆ 5 ವರ್ಷಕ್ಕಿಂದ 11ರ ಮಧ್ಯೆ ಪ್ರಯಾದ ಗಂಡು ಮಕ್ಕಳಿದ್ದರೆ ಅವರಿಗೆ ಅರ್ಧ ಟಿಕೆಟ್ ಪಡೆಬೇಕು. ಹೀಗೆ ಉಚಿತ ಸೇವೆ ನಡೆಸುತ್ತಿರುವ ಎಲ್ಲಾ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಪ್ರಿಯದರ್ಶಿನಿ ಎಂಬ ಲೇಬಲ್‌ಗಳನ್ನು ಲಗತ್ತಿಸಲಾಗಿದೆ.


ಪ್ರಯಾಣಿಕರ ಅನುಕೂಲಕ್ಕಾಗಿ ಯೋಜನೆಯಲ್ಲಿ ಸೇರಿಸಲಾದ ಬಸ್‌ಗಳಿಗೆ ವಿಶೇಷ ಸ್ಟಿಕ್ಕರ್‌ಗಳನ್ನು ಕೂಡಾ ಅಂಟಿಸಲಾಗಿದೆ. ಇಂದಿರಾ ಗ್ಯಾರಂಟಿಗಳ ಭಾಗವಾಗಿ ರಾಜ್ಯದಲ್ಲಿ ಪ್ರಿಯದರ್ಶಿನಿ ಯೋಜನೆಯನ್ನು ಜಾರಿಗೆ ತರಲಾಯಿತು. ಪ್ರಯಾಣಿಕರು ಸುಲಭವಾಗಿ ಗುರುತಿಸಲು ಉಚಿತ ಪ್ರಯಾಣಕ್ಕೆ ಅವಕಾಶ ನೀಡಲಾದ ಬಸ್‌ಗಳಿಗೆ ವಿಶೇಷ ಸ್ಟಿಕ್ಕರ್‌ಗಳನ್ನು ಅಂಟಿಸಲಾಗಿದೆ. ಬಸ್‌ನ ಮುಂಭಾಗದ ಕಿಟಕಿಯ ಮೇಲೆ ಮತ್ತು ಎರಡೂ ಬಾಗಿಲುಗಳ ಬದಿಗಳಲ್ಲಿ ಚಾಲಕನ ನೋಟಕ್ಕೆ ಮರೆಯಾಗದ ರೀತಿಯಲ್ಲಿ ಸ್ಟಿಕ್ಕರ್‌ಗಳನ್ನು ಅಂಟಿಸಲಾಗಿದೆ.



ಕಾರ್ಡ್‌ಗಳ ಅಗತ್ಯವಿಲ್ಲ

ಪ್ರಿಯದರ್ಶಿನಿ ಯೋಜನೆಯಲ್ಲಿ ಮಹಿಳೆಯರು ಮತ್ತು ಟ್ರಾನ್ಸ್‌ಜೆಂಡರ್‌ಗಳು ಒಳಗೊಂಡಿದ್ದಾರೆ. ಉಚಿತ ಪ್ರಯಾಣಕ್ಕೆ ಯಾವುದೇ ವಿಶೇಷ ನೋಂದಣಿ, ಕಾರ್ಡ್‌ಗಳು ಅಥವಾ ಪ್ರಮಾಣಪತ್ರಗಳು ಅಗತ್ಯವಿಲ್ಲ. ನಿರ್ವಾಹಕರು ಇಲೆಕ್ಟ್ರಾನಿಕ್ ಟಿಕೆಟ್ ಯಂತ್ರಗಳ ಮೂಲಕ ಝೀರೋ ಟಿಕೆಟ್‌ಗಳನ್ನು ನೀಡುತ್ತಾರೆ.

ಹಳೆಯಂಗಡಿ: ತ್ಯಾಜ್ಯನೀರು ಹೆದ್ದಾರಿಗೆ ಬಹು ಮಹಡಿ ಕಟ್ಟಡದ ದಾರಿ ಬಂದ್ ಮಾಡಿದ ಹೆದ್ದಾರಿ ಇಲಾಖೆ ಸಿಬ್ಬಂದಿ



• ಮುಲ್ಕಿ: ರಾಷ್ಟ್ರೀಯ ಹೆದ್ದಾರಿ 66ರ ಹಳೆಯಂಗಡಿ ಬಸ್ ನಿಲ್ದಾಣ ಬಳಿಯಲ್ಲಿ ಕಾರ್ಯಾಚರಿಸುತ್ತಿರುವ ಬಹು ಮಹಡಿ ಕಟ್ಟಡದ ತ್ಯಾಜ್ಯ ನೀರನ್ನು ಕಟ್ಟಡದ ಸಿಬ್ಬಂದಿಗಳು ರಾತ್ರಿ ಹೊತ್ತು ಹೆದ್ದಾರಿಗೆ ಬಿಡುತ್ತಿದ್ದು, ಈ ಬಗ್ಗೆ ಕಟ್ಟಡದ ಮಾಲೀಕರಿಗೆ ಅನೇಕ ಬಾರಿ ಹೆದ್ದಾರಿ ಇಲಾಖೆ ಎಚ್ಚರಿಕೆ ನೀಡಿದ್ದರೂ ಯಾವುದೇ ಕ್ರಮ ಕೈಗೊಳ್ಳದ ಹಿನ್ನಲೆಯಲ್ಲಿ ಸ್ಥಳೀಯ ನಾಗರಿಕರ ದೂರಿನ ಅನ್ವಯ ಹೆದ್ದಾರಿ ಇಲಾಖೆ ಬಹು ಮಹಡಿ ಕಟ್ಟಡಕ್ಕೆ ಹೋಗುವ ದಾರಿಯನ್ನು ಬಂದ್ ಮಾಡಿದ್ದಾರೆ.

ಸೋಮವಾರ ಮಧ್ಯಾಹ್ನ ಹೆದ್ದಾರಿ ಇಲಾಖೆ ಸಿಬ್ಬಂದಿ ಕ್ರೇನ್ ಮೂಲಕ ಬೃಹದಾಕಾರದ ಎರಡು ಕಲ್ಲುಗಳನ್ನು ಬಹು ಮಹಡಿ ಕಟ್ಟಡಕ್ಕೆ ಹೋಗುವ ಪ್ರಧಾನ ದಾರಿಗೆ ಅಡ್ಡಲಾಗಿ ಇಟ್ಟಿದ್ದಾರೆ. ಈ ಸಂದರ್ಭ ಬಹು ಮಹಡಿ ಕಟ್ಟಡದಲ್ಲಿ ವಾಸಿಸುತ್ತಿರುವ ನಾಗರಿಕರಿಗೆ ಹಾಗೂ ಹೆದ್ದಾರಿ ಇಲಾಖೆಯ ಸಿಬ್ಬಂದಿಗಳ ನಡುವೆ ಮಾತಿನ ಚಕಮಕಿ ನಡೆಯಿತು.

ಹಳೆಯಂಗಡಿ ಗ್ರಾಮ ಪಂಚಾಯತ್ ಮಾಜೀ ಸದಸ್ಯ ನಾಗರಾಜ್ ಮಾತನಾಡಿ, ಕಳೆದ ಕೆಲ ತಿಂಗಳಿನಿಂದ ಬಹು ಮಹಡಿ ಕಟ್ಟಡದ ತ್ಯಾಜ್ಯ ನೀರು ಹೆದ್ದಾರಿ ಪ್ರಧಾನ ರಸ್ತೆಯಲ್ಲಿ ಹರಿಯುತ್ತಿದ್ದು ದುರ್ವಾಸನೆಯುಕ್ತ ವಾತಾವರಣ ಸೃಷ್ಟಿಯಾಗಿ ರೋಗದ ಭೀತಿ ಎದುರಾಗಿದೆ. ಈ ಬಗ್ಗೆ ಅನೇಕ ಬಾರಿ ಕಟ್ಟಡದ ಮಾಲೀಕರಿಗೆ ನೋಟೀಸ್ ನೀಡಿ ಸರಿಪಡಿಸಲು ಎಚ್ಚರಿಕೆ ನೀಡಿದರೂ ಇದುವರೆಗೂ ಸರಿಯಾಗಿಲ್ಲ. ಇದರಿಂದ ಹೆದ್ದಾರಿ ಇಲಾಖೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡಿದ್ದಾರೆ ಎಂದು ಹೇಳಿದರು. ಮತ್ತೆ ಕಟ್ಟಡದ ಮಾಲೀಕರು ತ್ಯಾಜ್ಯ ನೀರನ್ನು ಹೆದ್ದಾರಿಗೆ ಹರಿಯ ಬಿಟ್ಟರೆ ಮುಂದಿನ ದಿನಗಳಲ್ಲಿ ಹೆದ್ದಾರಿ ಇಲಾಖೆ ಮತ್ತಷ್ಟು ಬಿಗಿ ಕ್ರಮ ಕೈಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸುರತ್ಕಲ್ ಬಂಟರ ಸಂಘದಿಂದ ವಿದ್ಯಾರ್ಥಿ ವೇತನ ವಿತರಣೆ

ಮಕ್ಕಳು ವಿದೇಶಕ್ಕೆ, ಮನೆ ಪಾಳು ಸ್ಥಿತಿಗೆ

• ಮಂಗಳೂರು: ಬಂಟರ ಸಂಘ ಸುರತ್ಕಲ್ ಇದರ 26ನೇ ವಾರ್ಷಿಕ ಮಹಾಸಭೆ, ಅಭಿನಂದನೆ, ಸಹಾಯಹಸ್ತ, ವಿದ್ಯಾರ್ಥಿ ವೇತನ, ದತ್ತಿ ನಿಧಿ ಹಾಗೂ ಸಮೂಹ ನೃತ್ಯ ಸ್ಪರ್ಧೆ ಕಾರ್ಯಕ್ರಮ ಸುರತ್ಕಲ್ ಬಂಟರ ಸಂಘದಲ್ಲಿ ಭಾನುವಾರ ಜರುಗಿತು.



ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಬಂಟರ ಯಾನೆ ನಾಡವರ ಮಾತೃಸಂಘದ ಅಧ್ಯಕ್ಷ ಕೆ. ಅಜಿತ್ ಕುಮಾರ್ ರೈ ಮಾಲಾಡಿ, ಬಂಟ ಸಮಾಜ ಇಂದು ಬಹಳಷ್ಟು ಮುಂದುವರಿದಿದೆ. ಆದರೆ, ಮಕ್ಕಳು ವಿದ್ಯೆ ಪಡೆದು ವಿದೇಶ ಸೇರಿದರೆ ಮನೆ ನಿರ್ವಹಣೆ ಇಲ್ಲದೆ ಪಾಳು ಬೀಳುತ್ತಿದೆ, ಹೆತ್ತವರು ಒಂಟಿಯಾಗುತ್ತಿದ್ದಾರೆ. ಇದು ಸರಿಯಲ್ಲ. ನಮ್ಮ ಸಮಾಜ ಈ ಬಗ್ಗೆ ತುರ್ತು ಗಮನಿಸಬೇಕು. ಮಕ್ಕಳಿಗೆ ಶಿಕ್ಷಣದ ಜೊತೆ ಉತ್ತಮ ಸಂಸ್ಕಾರವನ್ನು ನೀಡಬೇಕು. ಹುಟ್ಟಿ ಬೆಳೆದ ಮನೆ, ಹೆತ್ತವರು ಮತ್ತು ಊರನ್ನು ಮಕ್ಕಳು ಮರೆಯಬಾರದು ಎಂದರು.

ಮುಂಬೈ ಬಂಟರ ಸಂಘದ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿ, ಪಡುಬಿದ್ರಿ ಬಂಟರ ಸಂಘದ ಅಧ್ಯಕ್ಷ ದೇವಿಪ್ರಸಾದ್ ಶೆಟ್ಟಿ ಬೆಳಪು, ನಿವೃತ್ತ ಸೇನಾಧಿಕಾರಿ ಕರ್ನಲ್ ನಿಟ್ಟೆಗುತ್ತು ಶರತ್ ಭಂಡಾರಿ ಶುಭ ಹಾರೈಸಿದರು. ಸುರತ್ಕಲ್ ಬಂಟರ ಸಂಘದ ಅಧ್ಯಕ್ಷ ಬಾಳ ಜಗನ್ನಾಥ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು.

ಸಂಘದ ಮಾಜಿ ಅಧ್ಯಕ್ಷ ಎಂ. ದೇವಾನಂದ ಶೆಟ್ಟಿ, ನಿಕಟಪೂರ್ವ ಅಧ್ಯಕ್ಷ ಎಂ. ಲೋಕಯ್ಯ ಶೆಟ್ಟಿ, ಉಪಾಧ್ಯಕ್ಷ ಪ್ರವೀಣ್ ಶೆಟ್ಟಿ, ಕೋಶಾಧಿಕಾರಿ ರತ್ನಾಕರ ಶೆಟ್ಟಿ, ಜತೆಕಾರ್ಯದರ್ಶಿ ಮೀರಾವಾಣಿ ಎಂ. ಶೆಟ್ಟಿ, ಸಾಂಸ್ಕೃತಿಕ ಕಾರ್ಯದರ್ಶಿ ದೇವೇಂದ್ರ ಶೆಟ್ಟಿ, ಸಂಘಟನಾ ಕಾರ್ಯದರ್ಶಿ ಪುಷ್ಪರಾಜ್ ಶೆಟ್ಟಿ ಕುಡುಂಬೂರು, ಕ್ರೀಡಾ ಕಾರ್ಯದರ್ಶಿ ಪುಷ್ಪರಾಜ್ ಶೆಟ್ಟಿ ಮಧ್ಯ, ಮಹಿಳಾ ವೇದಿಕೆ ಅಧ್ಯಕ್ಷೆ ಸರೋಜ ಟಿ. ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ವಿಕಲ ಚೇತನರಿಗೆ ಸಹಾಯಧನ, ಎಲ್ಲಾ ಸಮಾಜದ ಮಕ್ಕಳಿಗೆ ವಿದ್ಯಾರ್ಥಿವೇತನ ನೀಡಲಾಯಿತು. ಶೈಕ್ಷಣಿಕ ಮತ್ತು ಇತರ ಕ್ಷೇತ್ರಗಳಲ್ಲಿ ಸಾಧನೆಗೈದವರನ್ನು ಗೌರವಿಸಲಾಯಿತು.

ಸಂಘದ ಪ್ರಧಾನ ಕಾರ್ಯದರ್ಶಿ ಲೀಲಾಧರ್ ಶೆಟ್ಟಿ ಕಟ್ಲ ಸ್ವಾಗತಿಸಿದರು. ಪ್ರವೀಣ್ ಶೆಟ್ಟಿ ವಂದಿಸಿದರು. ರಾಜೇಶ್ವರಿ ಡಿ ಶೆಟ್ಟಿ ಮತ್ತು ಡಾ. ಸುಧಾ ಚಂದ್ರಶೇಖರ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ವಿಶೇಷ ಮಹಾಸಭೆ ಮತ್ತು ವಾರ್ಷಿಕ ಮಹಾಸಭೆಬಳಿಕಗ್ರಾಮವಾರುಸಾಂಸ್ಕೃತಿಕ ಸ್ಪರ್ಧೆ ನಡೆಯಿತು. ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಇಡ್ಯಾ ಗ್ರಾಮ, ದ್ವಿತೀಯ ಕೃಷ್ಣಾಪುರ– ಕಾಟಿಪಳ್ಳ ಗ್ರಾಮ, ತೃತೀಯ ಬಹುಮಾನವನ್ನು ಚೇಳಾರ್ ಗ್ರಾಮ ಮತ್ತು ಕುಡುಂಬೂರು ಗ್ರಾಮ ಪಡೆದುಕೊಂಡಿತು. ತೀರ್ಪುಗಾರರಾಗಿ ಶ್ವೇತಾ ಅರೆಹೊಳೆ, ತ್ರಿಶಾ ಶೆಟ್ಟಿ, ವಿನಾಯಕ ಆಚಾರ್ಯ ಭಾಗವಹಿಸಿದ್ದರು. ಸಾಂಸ್ಕೃತಿಕ ಸ್ಪರ್ಧೆಯನ್ನು ನಿತೇಶ್ ಶೆಟ್ಟಿ ಎಕ್ಕಾರ್ ನಿರೂಪಿಸಿದರು.

ಬಿಜೆಪಿ ರಾಷ್ಟ್ರೀಯ ಪ್ರ. ಕಾರ್ಯದರ್ಶಿ ರಾಧಾಮೋಹನ್ ಅಗರ್ವಾಲ್

ಬೂತ್ ಮಟ್ಟದಲ್ಲೇ ಸಂಘಟಿತರಾಗಿರಿ

• ಕೊಣಾಜೆ; ಭಾರತೀಯ ಜನತಾ ಪಾರ್ಟಿಯ ಕಾರ್ಯಕರ್ತರು ಪಕ್ಷದ ಬೆನ್ನೆಲುಬಾಗಿದ್ದು, ಕೇಂದ್ರ ಸರ್ಕಾರದ ಯೋಜನೆಗಳನ್ನು ಮನೆ ಮನೆಗೂ ತಲುಪಿಸುವ ಕಾರ್ಯವಾಗಬೇಕು. ಅಲ್ಲದೆ ಬೂತ್ ಮಟ್ಟದಲ್ಲೇ ಸಂಘಟನಾತ್ಮಕವಾಗಿ ಕಾರ್ಯೋನ್ಮುಖರಾದರೆ ಮುಂದಿನ 2028 ರಲ್ಲಿ ಉಳ್ಳಾಲ ಕ್ಷೇತ್ರದಲ್ಲಿಯೂ ಬಿಜೆಪಿಯ ಶಾಸಕರು ಜಯಗಳಿಸಲು ಸಾಧ್ಯ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ರಾಧಾಮೋಹನ್ ಅಗರ್ವಾಲ್ ಅವರು ಹೇಳಿದರು.

ಅವರು ಅಸೈಗೋಳಿಯ ಬಂಟರ ಭವನದಲ್ಲಿ ನಡೆದ ಭಾರತೀಯ ಜನತಾ ಪಾರ್ಟಿ ಮಂಗಳೂರು ಮಂಡಲ ಇದರ ಬಿ ಎಲ್. ಎ 2 ಹಾಗೂ ಕಾರ್ಯಕರ್ತರ ವಿಶೇಷ ಸಭೆಯಲ್ಲಿ ಮಾತನಾಡಿದರು.



ಕಾರ್ಯಕ್ರಮದಲ್ಲಿ ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ,ಬಿಜೆಪಿ ರಾಜ್ಯ ಕಾರ್ಯದರ್ಶಿ ಸಂಸದರಾದ ಕ್ಯಾಪ್ಟನ್ ಚೌಟ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳು ವಿಧಾನ ಪರಿಷತ್ ಶಾಸಕರಾದ ಕಿಶೋರ್ ಕುಮಾರ್ ಬೋಟ್ಯಾಡಿ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರೇಮಾನಂದ ಶೆಟ್ಟಿ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷರು ಮಂಗಳೂರು ಮಂಡಲದ ಪ್ರಭಾರಿ ಪೂಜಾ ಪೈ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷರು ರವೀಂದ್ರ ಶೆಟ್ಟಿ ಉಳಿದೊಟ್ಟು, ಜಿಲ್ಲಾ ಕಾರ್ಯದರ್ಶಿ ಧನಲಕ್ಷ್ಮೀ ಗಟ್ಟಿ, ಜಿಲ್ಲಾ ಪ್ರಕೋಷ್ಠಗಳ ಸಂಚಾಲಕರಾದ ಸುಧೀರ್ ಶೆಟ್ಟಿ ಕಣ್ಣೂರು, ಮಂಗಳೂರು ಮಂಡಲದ ಬಿ ಎಲ್ ಎ–1 ಸಂಯೋಜಕರಾದ ಜಯ ಶ್ರೀ ಕರ್ಕೇರ, ಮಾಜಿ ಮಂತ್ರಿಗಳಾದ ನಾಗರಾಜ ಶೆಟ್ಟಿ, ಮಂಗಳೂರು ಮಂಡಲದ ಮಾಜಿ ಅಧ್ಯಕ್ಷ ಚಂದ್ರಶೇಖರ್ ಉಚ್ಚಿಲ, ರಾಜ್ಯ ಮೀನುಗಾರ ಪ್ರಕೋಷ್ಠ ಸಹಸಂಚಾಲಕರು ಯಶವಂತ ಅಮೀನ್, ಜಿಲ್ಲಾ ವಕ್ತಾರ ಜೀವನ್ ತೊಕ್ಕೊಟ್ಟು, ಜಿಲ್ಲಾ ಮಾಧ್ಯಮ ಸಹ ಪ್ರಮುಖ್ ಹೇಮಂತ್ ಶೆಟ್ಟಿ, ಹಿರಿಯ ಮುಖಂಡರುಗಳಾದ ಸೀತಾರಾಮ ಬಂಗೇರ ಟಿ. ಜಿ. ರಾಜಾರಾಮ್ ಭಟ್ ಹಾಗೂ ಜಿಲ್ಲಾ ಮಂಡಲದ ವಿವಿಧ ಮೋರ್ಚಾಗಳ ಅಧ್ಯಕ್ಷರು ಕಾರ್ಯದರ್ಶಿಗಳು ಪದಾಧಿಕಾರಿಗಳು, ಮಹಾಶಕ್ತಿ ಕೇಂದ್ರದ ಅಧ್ಯಕ್ಷರು, ಕಾರ್ಯದರ್ಶಿಗಳು ಪದಾಧಿಕಾರಿಗಳು ಬಿ ಎಲ್ ಎ 2 ಗಳು ಭಾಗವಹಿಸಿದ್ದರು.

ಬಿಜೆಪಿ ಮಂಡಲ ಅಧ್ಯಕ್ಷ ಜಗದೀಶ್ ಆಳ್ವ ಕುವೆತ್ತಬೈಲ್ ಸ್ವಾಗತಿಸಿದರು, ಬಿಜೆಪಿ ಮಂಗಳೂರು ಮಂಡಲದ ಪ್ರಧಾನ ಕಾರ್ಯದರ್ಶಿ ವಕೀಲರಾದ ಮೋಹನ್ ರಾಜ್ ಕೆ. ಆರ್. ಪ್ರಸ್ತಾವಿಕವಾಗಿ ಮಾತನಾಡಿದರು. ಮನೋಜ್ ಆಚಾರ್ಯ ನಿರೂಪಿಸಿದರು. ಬಿಜೆಪಿ ಮಂಗಳೂರು ಮಂಡಲದ ಕಾರ್ಯದರ್ಶಿ ದಯಾನಂದ್ ತೊಕ್ಕೊಟ್ಟು ವಂದಿಸಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಕುಂದಾಪುರ ವಿಧಾನಸಭಾ ಕ್ಷೇತ್ರಕ್ಕೆ ಭೇಟಿ




• ಕುಂದಾಪುರ : ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಭಾನುವಾರ ಕುಂದಾಪುರ ವಿಧಾನಸಭಾ ಕ್ಷೇತ್ರಕ್ಕೆ ಭೇಟಿ ನೀಡಿದರು.

ಕುಂದಾಪುರ ವಿಧಾನಸಭಾ ಕ್ಷೇತ್ರದ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಮತ್ತು ಕುಂದಾಪುರ ಮಂಡಲ ಅಧ್ಯಕ್ಷ ಸುರೇಶ್ ಶೆಟ್ಟಿ ಗೋಪಾಡಿ ಅವರು ವಿಜಯೇಂದ್ರ, ಅವರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಬಳಿಕ ನಗರದ ಖಾಸಗಿ ಹೋಟೆಲ್‌ನಲ್ಲಿ ಉಡುಪಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಕುತ್ಯಾರು ನವೀನ್ ಕುಮಾರ್ ಶೆಟ್ಟಿ ನೇತೃತ್ವದಲ್ಲಿ ಜಿಲ್ಲಾ ಮತ್ತು ಮಂಡಲ ಪದಾಧಿಕಾರಿಗಳ ಸಭೆ ನಡೆಯಿತು.

ಶಾಸಕರಾದ ಗುರುರಾಜ್ ಶೆಟ್ಟಿ ಗಂಟಿಹೊಳೆ, ಗುರ್ಮೆ ಸುರೇಶ್ ಶೆಟ್ಟಿ ಹರೀಶ್ ಪೂಂಜ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಹೆರ್ಗ ದಿನಕರ ಶೆಟ್ಟಿ, ಶ್ರೀಕಾಂತ್ ನಾಯಕ್, ಕುಂದಾಪುರ ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಸತೀಶ್ ಪೂಜಾರಿ ವಕ್ವಾಡಿ, ಸುಧೀರ್ ಕೆ.ಎಸ್., ಬೈಂದೂರು ಮಂಡಲ ಅಧ್ಯಕ್ಷೆ ಅನಿತಾ ಮರವಂತೆ, ಮಂಗಳೂರು ಪ್ರಭಾರಿ ಭಾರತೀಶ್, ಮಾಜಿ ಪ್ರಭಾರಿ ಉದಯಕುಮಾರ್ ಶೆಟ್ಟಿ ಮಟ್ಟಾರು ರತ್ನಾಕರ ಹೆಗ್ಡೆ, ಶಂಕರ ಅಂಕದಕಟ್ಟೆ ಸಂಪತ್ ಕುಮಾರ್ ಶೆಟ್ಟಿ ಶಾನಾಡಿ, ರಾಜೇಶ್ ಕಾವೇರಿ, ಕಾಡೂರು ಸುರೇಶ್ ಶೆಟ್ಟಿ, ಸದಾನಂದ ಬಳ್ಕೂರು, ಪೃಥ್ವಿರಾಜ್ ಶೆಟ್ಟಿ ಬಿಲ್ಲಾಡಿ, ಶಿಲ್ಪಾ ಜಿ. ಸುವರ್ಣ, ಉಡುಪಿ ಜಿಲ್ಲೆ ಮತ್ತು ಕುಂದಾಪುರ ಮಂಡಲದ ವಿವಿಧ ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

ಸರ್ಕಾರ ಗ್ಯಾರಂಟಿ ಫಲಾನುಭವಿಗಳಿಗೆ ವಂಚಿಸುವ ಹುನ್ನಾರ: ಸತೀಶ್ ಕುಂಪಲ

• ಮಂಗಳೂರು: ಸಿದ್ಧರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು ಚುನಾವಣಾ ಸಂಧರ್ಭದಲ್ಲಿ ಉಚಿತ, ಖಚಿತ, ನಿಶ್ಚಿತ ಎಂದು ಘಂಟಾಘೋಷವಾಗಿ ಹೇಳಿ ಜನರಿಗೆ ಭರವಸೆ ಮೂಡಿಸಿ ರಾಜ್ಯದಲ್ಲಿ ಅಧಿಕಾರದ ಗದ್ದುಗೆ ಏರಿದ್ದಾರೆ. ಈಗ ಮುಖ್ಯಮಂತ್ರಿ ಬದಲಾವಣೆ ಆದ ತಕ್ಷಣ ಗೃಹಲಕ್ಷ್ಮೀ ಮತ್ತು ಗೃಹಜ್ಯೋತಿ ಗ್ಯಾರಂಟಿಗಳಿಗೆ ಮರು ಅರ್ಜಿ ಸಲ್ಲಿಸಲು ಹೇಳುತ್ತಿರುವುದು ಗ್ಯಾರಂಟಿ ಫಲಾನುಭವಿಗಳಿಗೆ ಮಾಡುತ್ತಿರುವ ಮೋಸವಾಗಿದೆ ಎಂದು ಭಾರತೀಯ ಜನತಾ ಪಾರ್ಟಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಹೇಳಿದ್ದಾರೆ.



ಗ್ಯಾರಂಟಿ ಯೋಜನೆಯ ಅನುಷ್ಠಾನಕ್ಕೆಂದು ಸರ್ಕಾರ ಸಮಿತಿಯನ್ನು ರಚಿಸಿ ಕಾಂಗ್ರೆಸ್ ಕಾರ್ಯಕರ್ತರನ್ನು ನೇಮಿಸಿದೆ. ಇದೀಗ ಪರಿಶೀಲನೆಗಾಗಿ ಮರು ಅರ್ಜಿ ಸಲ್ಲಿಸುವುದಾದರೆ ಅನುಷ್ಠಾನ ಸಮಿತಿ ರಚಿಸುವ ಔಚಿತ್ಯವೇನಿತ್ತು? ಸಿದ್ದರಾಮಯ್ಯ ಅವರು ನೇಮಿಸಿರುವ ಸಮಿತಿಯ ಮೇಲೆ ಡಿಕೆಶಿ ಅವರಿಗೆ ವಿಶ್ವಾಸವಿಲ್ಲವೇ? ಅಥವಾ ಇದು ಜನರ ತೆರಿಗೆ ಹಣವನ್ನು ಲೂಟಿ ಮಾಡಲು ಹೂಡಿದ ಹುನ್ನಾರವೇ? ಎಲ್ಲರಿಗೂ ಉಚಿತ ಎಂದವರು ಈಗ ವಿವಿಧ ಕಾರಣ ನೀಡಿ ಫಲಾನುಭವಿಗಳನ್ನು ಕಡಿತಗೊಳಿಸುವುದನ್ನು ಬಿ.ಜೆ.ಪಿ. ವಿರೋಧಿಸುತ್ತದೆ. ಸರ್ಕಾರ ತನ್ನ ನುಡಿಯಂತೆ ನಡೆಯಬೇಕು ಎಂದು ಕುಂಪಲ ಅವರು ಆಗ್ರಹಿಸಿದ್ದಾರೆ.

ನಾಳೆ ಮಡಿಕೇರಿಯಲ್ಲಿ ಯೋಗ ವಿದ್ಯಾರ್ಥಿಗಳಿಂದ ವಿಶೇಷ ಪ್ರದರ್ಶನ

ಯೋಗ ಭಾರತಿಗೆ ರಜತ ಸಂಭ್ರಮ



• ಮಡಿಕೇರಿ: ಯೋಗದ ಮೂಲಕ ಪ್ರತಿನಿತ್ಯ ಆರೋಗ್ಯ ಜಾಗೃತಿ ಮೂಡಿಸುತ್ತಿರುವ ಮಡಿಕೇರಿಯ ಯೋಗ ಭಾರತಿ ಘಟಕ ಜೂ.17 ರಂದು ರಜತ ಮಹೋತ್ಸವ ಆಚರಿಸಿಕೊಳ್ಳಲಿದೆ. ರೆಡ್‌ಬ್ರಿಕ್ಸ್‌ನ ಸತ್ಕಾರ ಸಭಾಂಗಣದಲ್ಲಿ ಅಂದು ಸಂಜೆ 6ಗಂಟೆಗೆ ನಡೆಯುವ ಕಾರ್ಯಕ್ರಮಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ, ಅಪರ ಜಿಲ್ಲಾಧಿಕಾರಿ ಡಾ.ಸಹನಾ ಎಸ್.ಹಾದಿಮನಿ ಸೇರಿದಂತೆ ಹಲವು ಗಣ್ಯರು ಚಾಲನೆ ನೀಡಲಿದ್ದಾರೆ ಎಂದು ಯೋಗ ಭಾರತಿಯ ಮುಖ್ಯಸ್ಥ ಕೆ.ಕೆ.ಮಹೇಶ್ ಕುಮಾರ್ ಅವರು ನಗರದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

2001ನೇ ಇಸವಿಯಿಂದ ಪ್ರತಿ ದಿನ ಬೆಳಗ್ಗೆ 5.30ರ ಪ್ರಾಣಾಯಾಮ ತರಗತಿಗೆ ನೂರಾರು ಮಂದಿ ಸೇರುತ್ತಿದ್ದಾರೆ. ಮಹಿಳೆಯರಿಗಾಗಿ ಯೋಗ ಸಂಧ್ಯಾ, ರಥಸಪ್ತಮಿ ಹಾಗೂ ಪ್ರತಿ ತಿಂಗಳ ಎರಡನೇ ಶನಿವಾರ ರಾಜಾಸೀಟ್‌ನಲ್ಲಿ 108 ಸೂರ್ಯ ನಮಸ್ಕಾರ, ಯೋಗ ನಡಿಗೆ, ಚಾರಣದಂತಹ ವಿಶಿಷ್ಟ ಕಾರ್ಯಕ್ರಮಗಳ ಮೂಲಕ ಯೋಗ ಭಾರತಿ ಗಮನ ಸೆಳೆದಿದೆ. ಶಾಲಾ–ಕಾಲೇಜು, ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳಿಗೂ ಯೋಗ ತರಬೇತಿ ನೀಡಲಾಗುತ್ತಿದೆ ಎಂದು ಅವರು ವಿವರಿಸಿದರು. ರಜತ ಮಹೋತ್ಸವದಲ್ಲಿ ಯೋಗ ವಿದ್ಯಾರ್ಥಿಗಳಿಂದ ವಿಶೇಷ ಪ್ರದರ್ಶನ ನಡೆಯಲಿದ್ದು, ಹಿರಿಯರಾದ ಕೆ.ಎಸ್.ದೇವಯ್ಯ, ಡಾ.ಮನೋಹರ್ ಜಿ.ಪಾಟ್ಕರ್, ಜಿ.ಚಿದ್ವಿಲಾಸ್, ಡಾ.ಜಿ.ಶೈಲಜಾ ಭಾಗವಹಿಸಲಿದ್ದಾರೆ ಎಂದು ನುಡಿದರು. ಸುದ್ದಿಗೋಷ್ಠಿಯಲ್ಲಿ ಯೋಗ ಭಾರತಿಯ ಪ್ರಭಾಕರ್, ಸರೋಜಿನಿ, ಸರಿತಾ, ಸಂಗೀತಾ ಪ್ರಸನ್ನ ಸುಧೀರ್ ಹಾಜರಿದ್ದರು.

ಆರೆಸ್ಸೆಸ್‌ಗೆ ನೋಂದಣಿ ಅಗತ್ಯವಿಲ್ಲ

ಪುಟ ೧➡ ಸಂಘ ಪ್ರಾರಂಭವಾದ 10-15 ವರ್ಷಗಳ ನಂತರವೂ ನಾವು ಈ ಎಲ್ಲಾ ವಿಷಯಗಳನ್ನು ಎದುರಿಸಬೇಕಾಯಿತು. ನಮಗೆ ಇದು ಒಗ್ಗಿಹೋಗಿದೆ. ಒಂದು ವೇಳೆ ಇಂತಹ ಟೀಕೆಗಳು ಬರದಿದ್ದರೆ ಏನೋ ತಪ್ಪಿಹೋಗಿದೆ, ಏನೋ ಕಡಿಮೆಯಾಗಿದೆ ಎಂದು ನಮಗೆ ಅನಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಹಾಗಾಗಿ ನಾನು ಪ್ರತಿಕ್ರಿಯಿಸುವ ಅಗತ್ಯವಿಲ್ಲ. ಸಂಘವು ಬ್ರಿಟಿಷರ ಕಾಲದಲ್ಲೇ ಪ್ರಾರಂಭವಾಯಿತು. ಸಂಘವು ಜನರ ಇಚ್ಛೆಯಾಗಿ ಪ್ರಾರಂಭವಾಯಿತು. ಜನರಲ್ಲಿ ವಿಚಾರ ಮಂಥನ ಹೇಗೆ ನಡೆಯಿತು. ಬಳಿಕ ಎಲ್ಲರೂ ಒಪ್ಪಿಕೊಂಡ ತೀರ್ಮಾನವನ್ನು ಹೇಗೆ ತೆಗೆದುಕೊಳ್ಳಲಾಯಿತು. ಅದರ ಮೇಲೆ ಹೇಗೆ ಕೆಲಸ ಮಾಡಲಾಯಿತು ಎಂದು ನಾನು ಆಗಲೇ ನಿಮಗೆ ವಿವರಿಸಿದ್ದೇನೆ. ಅದೇ ಈ ಸಂಘ. ಹಾಗಾಗಿ ಇದಕ್ಕೆ ಯಾವುದೇ ನಿರ್ಬಂಧಗಳ ಅಗತ್ಯವಿಲ್ಲ ಎಂದರು.

ಹಿಂದಿನ ಸರ್ಕಾರಗಳಿಂದಲೇ ಗುರುತು: ಹಿಂದು ಧರ್ಮ ನೋಂದಣಿಯಾಗಿಲ್ಲ. ಅದೇ ರೀತಿ ಅನೇಕ ವಿಷಯಗಳು ನೋಂದಣಿಯಾಗಿಲ್ಲ. ಆದರೆ ಸಂಘ ಇದೆ ಎಂಬುದು ಸರ್ಕಾರಕ್ಕೂ ತಿಳಿದಿದೆ. ಸರ್ಕಾರವೇ ನಮ್ಮನ್ನು ನಿಷೇಧಿಸಿತ್ತು. ಆ ನಿಷೇಧವನ್ನು ನ್ಯಾಯಾಲಯದ ಆದೇಶದಿಂದ, ಸತ್ಯಾಗ್ರಹದಿಂದ ಹಿಂಪಡೆಯಲಾಯಿತು. ಸರ್ಕಾರ ಆರ್‌ಎಸ್‌ಎಸ್‌ನ್ನು ನಿಷೇಧಿಸಿತ್ತು ಎಂದರೆ, ಅವರಿಗೆ ಆರ್‌ಎಸ್‌ಎಸ್ ಅಸ್ತಿತ್ವದಲ್ಲಿದೆ ಎಂಬುದು ಗೊತ್ತಿತ್ತು ಎಂದರ್ಥ. ಆರ್‌ಎಸ್‌ಎಸ್‌ನ್ನು ಗುರುತಿಸಲಾಗಿದೆ. ಕಳೆದ 100 ವರ್ಷಗಳಲ್ಲಿ ಇದೆಲ್ಲವೂ ನಡೆದಿದೆ. ಆದರೆ ನೀವು ನೋಂದಾಯಿಸಿಕೊಳ್ಳಲೇಬೇಕು ಎಂದು ಯಾರೂ ನಮಗೆ ಹೇಳಿರಲಿಲ್ಲ ಎಂದೂ ಪ್ರತಿಪಾದಿಸಿದರು.

ಹಿಂದೆ ಹೇಳಿರಲಿಲ್ಲ: ನಮ್ಮ ಸಂವಿಧಾನ, ಅಂದರೆ ಲಿಖಿತ ಸಂವಿಧಾನವು ಸರ್ಕಾರದ ಬಳಿಯೇ ಇದೆ. ನಾವು ಅದನ್ನು 1950ರ ದಶಕದಲ್ಲಿಯೇ ಸಲ್ಲಿಸಿದ್ದೇವೆ. ಆಗ ಸರ್ಕಾರವು 'ಸರಿ, ಎಲ್ಲವೂ ಚೆನ್ನಾಗಿದೆ, ಆದರೆ ನೀವು ನೋಂದಾಯಿಸಿಕೊಂಡಿಲ್ಲ. ಮೊದಲು ನೋಂದಾಯಿಸಿ, ನಂತರ ನಾವು ಸ್ವೀಕರಿಸುತ್ತೇವೆ' ಎಂದು ಹೇಳಬಹುದಿತ್ತು. ಆದರೆ ಅವರು ಹಾಗೆ ಹೇಳಲಿಲ್ಲ ಎಂದು ಭಾಗವತ್ ಅವರು ಹೇಳಿದರು.

ಸಂಘದ ಕೆಲಸಗಳಿಗೆ ಅಡ್ಡಿ: ನೋಂದಣಿ ಸೇರಿದಂತೆ ಎಲ್ಲ ವಿಚಾರಗಳು ರಾಜಕೀಯ ವಿಚಾರಗಳಷ್ಟೇ. ಇದರಲ್ಲಿ ಗಂಭೀರವಾದದ್ದೇನೂ ಇಲ್ಲ. ಅವರು ಹೇಗಾದರೂ ಮಾಡಿ ಒಂದು ಕಡೆ ಸಂಘದ ಕೆಲಸಕ್ಕೆ ಅಡ್ಡಿಪಡಿಸಲು ಬಯಸುತ್ತಾರೆ. ಮತ್ತೊಂದು ಕಡೆ ಜನರ ಮನಸ್ಸಿನಲ್ಲಿ ಅನುಮಾನಗಳನ್ನು ಸೃಷ್ಟಿಸಲು ಯತ್ನಿಸುತ್ತಾರೆ. ಆದರೆ ಅದು ಇನ್ನು ಮುಂದೆ ಸಾಧ್ಯವಿಲ್ಲ. ಏಕೆಂದರೆ ಜನರಿಗೆ ನಮ್ಮ ಬಗ್ಗೆ ಚೆನ್ನಾಗಿ ತಿಳಿದಿದೆ. ಅವರು ನಮ್ಮನ್ನು ರಹಸ್ಯ ಸಂಸ್ಥೆ ಎನ್ನುತ್ತಾರೆ. ಆದರೆ ನಮ್ಮ ಕಾರ್ಯಕರ್ತರು ಎಲ್ಲಾ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಜನರು ಅವರನ್ನು ಪ್ರತಿನಿತ್ಯ ನೋಡುತ್ತಿದ್ದಾರೆ. ನಮ್ಮ ಶಾಖೆಗಳು ತೆರೆದ ಮೈದಾನಗಳಲ್ಲಿ ನಡೆಯುತ್ತವೆ. ನಾವು ಸಾರ್ವಜನಿಕ ಕಾರ್ಯಕ್ರಮಗಳನ್ನು ಮಾಡುತ್ತೇವೆ. ನಾವು ಜನರನ್ನು ತಲುಪುವ ಅಂತಹ ಅಗಾಧವಾದ ವ್ಯಾಪ್ತಿ ಹೊಂದಿದ್ದೇವೆ. ಈ ವರ್ಷ ಪ್ರತಿ ವಿಭಾಗದಲ್ಲೂ ನಾವು ಕಾರ್ಯಕ್ರಮಗಳನ್ನು ಮಾಡಿದ್ದೇವೆ. ಒಂದು ವೇಳೆ ನಾವು ರಹಸ್ಯವಾಗಿ ಕಾರ್ಯನಿರ್ವಹಿಸುವವರಾಗಿದ್ದರೆ ಇದೆಲ್ಲವೂ ಸಾಧ್ಯವಾಗುತ್ತಿತ್ತೇ ಎಂದು ಮರು ಪ್ರಶ್ನಿಸಿದರು.

ಯೋಗ ದಿನ ನಿಮಿತ್ತ ಕಾರ್ಯಕ್ರಮ | ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಧ್ಯೇಯವಾಕ್ಯ

ಕೋಲ್ಕತ್ತಾ ಯೋಗ ದಿನದಲ್ಲಿ ಮೋದಿ ಭಾಗಿ

ಹೊಸದಿಲ್ಲಿ: ಜೂನ್ 21ರಂದು ಆಚರಿಸಲಾಗುವ ಅಂತಾರಾಷ್ಟ್ರೀಯ ಯೋಗ ದಿನದ ಮುಖ್ಯ ಕಾರ್ಯಕ್ರಮವು ಪಶ್ಚಿಮ ಬಂಗಾಳದ ರಾಜಧಾನಿ ಕೋಲ್ಕತ್ತಾದ ಐತಿಹಾಸಿಕ ರೆಡ್ ರೋಡ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಡೆಯಲಿದೆ ಎಂದು ಕೇಂದ್ರ ಆಯುಷ್ ಖಾತೆ ರಾಜ್ಯ ಸಚಿವ ಪ್ರತಾಪರಾವ್ ಜಾಧವ್ ತಿಳಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿಯ ಯೋಗ ದಿನದ ಧ್ಯೇಯವಾಕ್ಯ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಆಗಿದ್ದು, ದೈಹಿಕ ಆರೋಗ್ಯ, ಮಾನಸಿಕ ನೆಮ್ಮದಿ ಹಾಗೂ ಆರೋಗ್ಯಯುತ ವೃದ್ಧಾಪ್ಯಕ್ಕೆ ಯೋಗದ ಮಹತ್ವವನ್ನು ಇದು ಪ್ರತಿಪಾದಿಸುತ್ತದೆ ಎಂದು ಹೇಳಿದರು.

ಈ ಬಾರಿ ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ವಿಶ್ವದ ಸುಮಾರು 2,500 ಸ್ಥಳಗಳಲ್ಲಿ ಯೋಗ ಕಾರ್ಯಕ್ರಮಗಳು ನಡೆಯಲಿವೆ. ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿಯ ಸಹಯೋಗದಲ್ಲಿ ವಿದೇಶಗಳಲ್ಲಿರುವ 210ಕ್ಕೂ ಹೆಚ್ಚು ಭಾರತೀಯ ರಾಯಭಾರಿ ಕಚೇರಿಗಳು ಮತ್ತು ಮಿಷನ್‌ಗಳು ಯೋಗ ಕಾರ್ಯಕ್ರಮಗಳನ್ನು ಆಯೋಜಿಸಲಿವೆ ಎಂದು ಅವರು ತಿಳಿಸಿದರು.ಯೋಗ ದಿನದ ಪೂರ್ವಭಾವಿಯಾಗಿ ಜೂನ್ 14ರಂದು ದೇಶವ್ಯಾಪಿ ನೇರ ಯೋಗಾಭ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ನಾಲ್ಕು ಲಕ್ಷಕ್ಕೂ ಹೆಚ್ಚು ಜನರು ಏಕಕಾಲದಲ್ಲಿ ಭಾಗವಹಿಸುವ ಮೂಲಕ ಹೊಸ ವಿಶ್ವದಾಖಲೆ ನಿರ್ಮಿಸಲಾಗಿದೆ ಎಂದು ಅವರು ತಿಳಿಸಿದರು.

ಇದಲ್ಲದೆ, ಕೇಂದ್ರ ಸಂಸ್ಕೃತಿ ಸಚಿವಾಲಯವು ದೇಶದ 100 ಸ್ಥಳಗಳಲ್ಲಿ ವಿಶೇಷ ಯೋಗ ದಿನ ಕಾರ್ಯಕ್ರಮಗಳನ್ನು ಆಯೋಜಿಸಲಿದ್ದು, ಭಾರತದ ಸಾಂಸ್ಕೃತಿಕ ಪರಂಪರೆ ಮತ್ತು ಯೋಗ ಸಂಪ್ರದಾಯಗಳ ಸಮನ್ವಯವನ್ನು ಪ್ರದರ್ಶಿಸಲಿದೆ ಎಂದರು.

ಕಳೆದ ಕೆಲವು ತಿಂಗಳುಗಳಲ್ಲಿ ದೆಹಲಿಯಲ್ಲಿ 100 ದಿನಗಳ ಕೌಂಟ್‌ಡೌನ್ ಕಾರ್ಯಕ್ರಮ, ಮಹಾರಾಷ್ಟ್ರದ ಲೋನಾರ್‌ನಲ್ಲಿ 75 ದಿನಗಳ ಕಾರ್ಯಕ್ರಮ, ಹೈದರಾಬಾದ್‌ನ ಕನ್ಹಾ ಶಾಂತಿ ವನಂನಲ್ಲಿ 50 ದಿನಗಳ ಕಾರ್ಯಕ್ರಮ ಹಾಗೂ ಮಧ್ಯಪ್ರದೇಶದ ಖಜುರಾಹೋದಲ್ಲಿ 25 ದಿನಗಳ ಕೌಂಟ್‌ಡೌನ್ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿರುವುದನ್ನೂ ಅವರು ಉಲ್ಲೇಖಿಸಿದರು.

ಜೂ.13ರಿಂದ 20ರವರೆಗೆ ನಡೆಯುತ್ತಿರುವ ಗಂಗೋತ್ರಿಯಿಂದ ಗಂಗಾಸಾಗರದವರೆಗೆ: ಗಂಗಾ ತಟ ಯೋಗ ಯಾತ್ರೆ ಕಾರ್ಯಕ್ರಮದ ಕುರಿತು ಮಾಹಿತಿ ನೀಡಿದ ಜಾಧವ್, ಗಂಗೋತ್ರಿ, ಹರಿದ್ವಾರ, ವಾರಾಣಸಿ, ಪಾಟ್ನಾ, ಹೂಗ್ಲಿ ಹಾಗೂ ಗಂಗಾಸಾಗರ ಸೇರಿದಂತೆ ಹಲವು ಪ್ರದೇಶಗಳನ್ನು ಒಳಗೊಂಡಿರುವ ಈ ಯಾತ್ರೆಯು ಯೋಗ, ಪರಿಸರ ಸಂರಕ್ಷಣೆ, ನದಿ ಸಂಸ್ಕೃತಿ ಹಾಗೂ ಜನಸಹಭಾಗಿತ್ವವನ್ನು ಉತ್ತೇಜಿಸುವ ಉದ್ದೇಶ ಹೊಂದಿದೆ ಎಂದು ಹೇಳಿದರು.

ಮುಖ್ಯ ಕಾರ್ಯಕ್ರಮಕ್ಕೂ ಮುನ್ನ ಕೋಲ್ಕತಾದಲ್ಲಿ ವಿಶೇಷ ಕಾರ್ಯಕ್ರಮಗಳ ಸರಣಿ ನಡೆಯಲಿದೆ. ಜೂ.19ರಂದು ಓಟದಿಂದ ಧ್ಯಾನದತ್ತ ಕಾರ್ಯಕ್ರಮದ ಮೂಲಕ ದೈಹಿಕ ಸಾಮರ್ಥ್ಯ ಮತ್ತು ಮಾನಸಿಕ ಆರೋಗ್ಯದ ನಡುವಿನ ಸಂಬಂಧವನ್ನು ಬಿಂಬಿಸಲಾಗುವುದು. ಜೂನ್ 20ರಂದು ವಂದೇ ಯೋಗಂ ಹಾಗೂ ಪಶ್ಚಿಮ ಬಂಗಾಳ ದಿನಾಚರಣೆ ಕಾರ್ಯಕ್ರಮಗಳ ಮೂಲಕ ಯೋಗ, ದೇಶಭಕ್ತಿ ಮತ್ತು ಸಾಂಸ್ಕೃತಿಕ ಪರಂಪರೆಯ ಸಮನ್ವಯವನ್ನು ಪ್ರದರ್ಶಿಸಲಾಗುವುದು ಎಂದು ಅವರು ತಿಳಿಸಿದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ನಾನೊಬ್ಬ ಹಿಂದೂ, ಹಿಂದುವಾಗಿಯೇ ಸಾಯುತ್ತೇನೆ, ಆದರೆ ನನ್ನದು ಎಲ್ಲರನ್ನೂ ಒಳಗೊಂಡ ಹಿಂದುತ್ವ

– ಡಿಕೆಶಿ

-ಅಂದರೆ ನಿಮ್ಮ ಹಿಂದುತ್ವದಲ್ಲಿ ದೇಶವನ್ನು ವಿರೋಧಿಸುವವರೂ ಸೇರುತ್ತಾರಾ? ನಮ್ಮ ಹಿಂದುತ್ವದಲ್ಲಿ ದೇಶ ಪ್ರೇಮಿಗಳು ಮಾತ್ರ ಇರುತ್ತಾರೆ, ಅವರು ಯಾವುದೇ ಜಾತಿ , ಮತ, ಧರ್ಮಕ್ಕೆ ಸೇರಿದವರಾಗಿದ್ದರೂ!

ದಿನ ಭವಿಷ್ಯ

ಮೇಷ
ಕಚೇರಿ ಕೆಲಸದಲ್ಲಿ ಹೆಚ್ಚು ಎಚ್ಚರ ವಹಿಸಿ. ಲೋಪ ಆಗದಿರಲಿ. ಸಂಜೆ ವೇಳೆಗೆ ತೃಪ್ತಿಯ ಭಾವ. ತಾಳ್ಮೆಯ ನಡೆ ನಿಮ್ಮನ್ನು ಮುನ್ನಡೆಸುವುದು.

ವೃಷಭ
ನಿಮ್ಮ ನಿರ್ವಹಣೆ ಇತರರಿಗೆ ಅಸೂಯೆ ತರಬಹುದು. ವೃತ್ತಿ ಸಂಬಂಧ ಪ್ರಯಾಣ. ಬೆನ್ನು ನೋವಿದ್ದವರಿಗೆ ಉಪಶಮನ ಸಿಗಲಿದೆ.

ಮಿಥುನ
ನಿಮ್ಮ ಯೋಜನೆ ಸಫಲ. ಆರ್ಥಿಕ ಲಾಭ. ಪ್ರಮುಖ ವ್ಯಕ್ತಿಯನ್ನು ಭೇಟಿಯಾಗುವ ಅವಕಾಶ. ಭಾವನಾತ್ಮಕ ಏರುಪೇರು. ದೃಢ ಮನಸ್ಸಿರಲಿ.

ಕಟಕ
ವೃತ್ತಿಯಲ್ಲಿ ಮತ್ತು ಪ್ರೀತಿಯ ವಿಷಯದಲ್ಲಿ ಮಹತ್ವದ ಬೆಳವಣಿಗೆ. ಹಳೆಯ ಮಿತ್ರರ ಭೇಟಿ. ಅತಿಯಾದ ಕೆಲಸ ಬಳಲಿಕೆ ತರಲಿದೆ. ಖರ್ಚು ಅಧಿಕ.

ಸಿಂಹ
ಆಶಾವಾದದಿಂದ ದಿನ ಆರಂಭಿಸಿ. ಸಣ್ಣ ಹಿನ್ನಡೆಗಳಿಗೆ ಅಂಜದಿರಿ. ಕ್ರೀಡಾಳುಗಳಿಗೆ ಶುಭದಿನ. ಕೌಟುಂಬಿಕ ವ್ಯಾಜ್ಯ ಪರಿಹಾರದ ಸಂಕೇತ.

ಕನ್ಯಾ
ಜನರ ಜತೆ ಸಂವಹನ ಸಾಧಿಸಲು ಹಿಂಜರಿಕೆ ಬೇಡ. ನಿಮ್ಮ ವೃತ್ತಿ ಉನ್ನತಿಗೆ ಅದು ಅಗತ್ಯ. ಆತ್ಮೀಯರು ಮನಸ್ಸಿಗೆ ಬೇಸರ ತರುವರು.

ತುಲಾ
ವೃತ್ತಿ ಕಾರ್ಯದಲ್ಲೇ ಇಂದು ದಿನ ಕಳೆಯಲಿದೆ. ಉಳಿದ ವಿಚಾರಗಳಿಗೆ ವೇಳೆ ಸಾಲದು. ಶಾಪಿಂಗ್ ಹೊರಟರೆ ಜೇಬು ಖಾಲಿಯಾದೀತು.

ವೃಶ್ಚಿಕ
ಸ್ನೇಹವೊಂದು ಪ್ರೀತಿಗೆ ತಿರುಗಬಹುದು. ವೃತ್ತಿಪರರು ಹೊಸ ವ್ಯವಹಾರ ಆರಂಭಿಸಲು ಸಕಾಲ. ಕೌಟುಂಬಿಕ ಭಿನ್ನಮತ ನಿವಾರಣೆ.

ಧನು
ಕೆಲಸದಲ್ಲಿ ನಿರಾಸಕ್ತಿ. ವಿರಾಮ ಬಯಸುವಿರಿ. ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಸಾಂಸಾರಿಕ ಸಮಸ್ಯೆಗೆ ಪರಿಹಾರ ತುಸು ಕಷ್ಟ , ತಾಳ್ಮೆ ವಹಿಸಿ.

ಮಕರ
ನಿಮ್ಮ ಸುತ್ತ ಒಂದು ಬಗೆಯ ಅಸಹನೆ, ಉದ್ವಿಗ್ನತೆ ಆವರಿಸುವುದು. ಅನ್ಯರ ಜತೆ ವಿನಯದಿಂದ ವ್ಯವಹರಿಸಿ. ನಿಮ್ಮ ಕೋಪ ನಿಯಂತ್ರಿಸಬೇಕು.

ಕುಂಭ
ಪ್ರತಿಯೊಂದು ವಿಷಯವನ್ನು ಗುಣಾತ್ಮಕ ದೃಷ್ಟಿಯಿಂದ ನೋಡಿ. ನೆಗೆಟಿವ್ ಚಿಂತನೆ ಬಿಡಿ. ಹಳೆಯ ಹೂಡಿಕೆ ಲಾಭ ತರಲಿದೆ.

ಮೀನ
ಖಾಸಗಿ ಸಮಸ್ಯೆ ಕಿರಿಕಿರಿ ತರುವುದು. ಸಣ್ಣ ವಿಷಯದಲ್ಲೂ ತಪ್ಪು ಹುಡುಕುವಿರಿ. ಅತಿಥಿ ಆಗಮನದಿಂದ ಮನೆಯ ವಾತಾವರಣ ಬದಲು.

ರಾಹುಕಾಲ: 3.00- 4.30
ಗುಳಿಕಕಾಲ: 12.00-1.30

ಅದೃಷ್ಟ ಸಂಖ್ಯೆ: 5,9,2,7

ಚಂದ್ರಶೇಖರ ಶ್ರೀಗಳು ಕಲಿತ ಶಾಲೆ ಅಭಿವೃದ್ಧಿಗೆ ಮುಂದಾದ ಮಠ

ಮಠದಿಂದ ಶಾಲೆ ದತ್ತು

ರಮೇಶ್, ಕರುವಾನೆ

ಶೃಂಗೇರಿ: ಶ್ರೀ ಶಾರದಾ ಪೀಠದ 34ನೇ ಜಗದ್ಗುರು ಶ್ರೀ ಚಂದ್ರಶೇಖರ ಭಾರತಿ ಸ್ವಾಮೀಜಿಗಳು ಕಲಿತ ಶಾಲೆಯನ್ನು ಉಳಿಸಿಕೊಳ್ಳಲು ಪಟ್ಟಣದ ಮಲ್ಲಿಕಾರ್ಜುನ ಬೀದಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಶ್ರೀಮಠ ದತ್ತು ಪಡೆದುಕೊಂಡು ಅಭಿವೃದ್ಧಿಗೆ ಮುಂದಾಗಿದೆ.

ತಾಲೂಕಿನ ಪ್ರಥಮ ಸರ್ಕಾರಿ ಪ್ರಾಥಮಿಕ ಶಾಲೆ ಎಂಬ ಹೆಗ್ಗಳಿಕೆಗೆ ಪಾತ್ರವಾದ ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆಗೆ 173 ವರ್ಷಗಳ ಇತಿಹಾಸವಿದೆ. ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ಎದುರು ಇರುವ ಈ ಶಾಲೆ ಬ್ರಿಟಿಷರ ಆಳ್ವಿಕೆಯಲ್ಲಿ 1853ರಲ್ಲಿ ಆರಂಭಗೊಂಡಿತು ಎಂಬುದು ದಾಖಲೆಯಿಂದ ತಿಳಿದುಬಂದಿದೆ.

ಶಾಲೆಯಲ್ಲಿ ಸಹಸ್ರಾರು ವಿದ್ಯಾರ್ಥಿಗಳು ಈವರೆಗೆ ವ್ಯಾಸಂಗ ಮಾಡಿದ್ದು 1980-90 ರ ದಶಕದಲ್ಲಿ 800ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ತಾಲೂಕಿನಲ್ಲಿ ಖಾಸಗಿ ಶಾಲೆಗಳು ಪ್ರಾರಂಭಗೊಂಡ ಕಾರಣ ಮಕ್ಕಳ ಸಂಖ್ಯೆ ಗಣನೀಯವಾಗಿ ಕುಸಿದಿದೆ. ಕಳೆದ ವರ್ಷ 10 ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡಿದ್ದರು. ಈ ಹಿಂದೆ ಶ್ರೀ ಶಾರದಾ ಪೀಠದ 34ನೇ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಸ್ವಾಮೀಜಿಗಳು ಈ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿದ್ದು ಅಪೂರ್ವ ದಾಖಲೆಯಾಗಿದೆ. ಜಗದ್ಗುರುಗಳು ಕಲಿತ ಶಾಲೆ ಎಂಬ ಕಾಳಜಿಯಿಂದ ಶಾಲೆ ಉಳಿಸಲು ಶ್ರೀ ಮಠವು ಇದೀಗ ದತ್ತು ಪಡೆದಿದೆ.

ವಿಶೇಷವೆಂದರೆ ಸರ್ಕಾರಿ ಶಾಲೆಯಲ್ಲಿ ಸೌಕರ್ಯವಿದ್ದರೂ ಶಾಲೆಗೆ ಮಾತ್ರ ಮಕ್ಕಳು ಬರುತ್ತಿಲ್ಲ. ವಿದ್ಯಾದಿ ದೇವತೆಯ ನಾಡಿನಲ್ಲಿರುವ ಸರ್ಕಾರಿ ಶಾಲೆಯನ್ನು ಮುಚ್ಚುವ ಸ್ಥಿತಿಗೆ ಬಂದಿರುವುದು ಸೋಜಿಗದ ಸಂಗತಿ. ಆಧುನಿಕ ಕಾಲದ ಶಿಕ್ಷಣ ವ್ಯವಸ್ಥೆಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆಯಲು ನಿರಾಸಕ್ತಿ ತೋರಿಸುತ್ತಿರುವುದರಿಂದ ಮಕ್ಕಳ ಕೊರತೆ ಕಾಡುತ್ತಿದ್ದು ಶಾಲೆಯನ್ನು ಮುಚ್ಚುವ ಪರಿಸ್ಥಿತಿ ಬಂದಿದೆ. ಸ್ಥಳೀಯರು ಹಳೆ ವಿದ್ಯಾರ್ಥಿಗಳು ಹಾಗೂ ಶಿಕ್ಷಣ ಇಲಾಖೆ ಅವಿರತವಾಗಿ ಶ್ರಮಿಸಿದ್ದಾರೆ. ಇದೀಗ ಶ್ರೀಮಠದ ಆಡಳಿತ ಅಧಿಕಾರಿಗಳು ಹಾಗೂ ಸಿಬ್ಬಂದಿ ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ಸರ್ಕಾರದಿಂದ ನೇಮಕವಾಗುವ ಶಿಕ್ಷಕರೊಂದಿಗೆ ಅಗತ್ಯವಿದ್ದಲ್ಲಿ ಅತಿಥಿ ಶಿಕ್ಷಕರ ಸೇವೆಯನ್ನು ಪಡೆಯಲು ಅನುಮತಿ ನೀಡಿದ್ದಾರೆ.



> ತಾಲೂಕಿನ ಮೊದಲ ಶಾಲೆ ಹಾಗೂ ಜಗದ್ಗುರುಗಳು ಶಿಕ್ಷಣ ಪಡೆದ ಶಾಲೆ ಮುಚ್ಚಬಾರದು ಎಂಬ ನಿರ್ಧಾರದಿಂದ ಶಾಲೆಯನ್ನು ಉಳಿಸಿಕೊಳ್ಳಲು ಶ್ರಮಿಸಲಾಗುತ್ತಿದೆ. ಈ ಹಿಂದೆ ರಾಜ್ಯ ಸಚಿವರಾಗಿದ್ದ ಬೇಗಾನೆ ರಾಮಯ್ಯ ಈ ಶಾಲೆಯಲ್ಲಿ ವ್ಯಾಸಂಗ ಮಾಡಿದ್ದವರಾಗಿದ್ದರು.
> ■ ಡಾ. ನಿರಂಜನ್‌ಕುಮಾರ್, ಶಾಲಾ ಅಭಿವೃದ್ಧಿ ಸಮಿತಿ ಸದಸ್ಯ.

> ಶ್ರೀಮಠವು ಶಾಲೆಯನ್ನು ದತ್ತು ಪಡೆಯುವುದರೊಂದಿಗೆ ಮಕ್ಕಳನ್ನು ಕರೆ ತರಲು ಉಚಿತವಾಗಿ ವಾಹನ ವ್ಯವಸ್ಥೆ ಕಲ್ಪಿಸಿದೆ. ಜಗದ್ಗುರುಗಳ ಮಾರ್ಗದರ್ಶನದಂತೆ ಶ್ರೀಮಠದ ಆಡಳಿತ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.
> ■ ವರಲಕ್ಷ್ಮೀ, ಕ್ಷೇತ್ರ ಶಿಕ್ಷಣಾಧಿಕಾರಿ, ಶೃಂಗೇರಿ.

ಆಧುನಿಕರಣಗೊಳಿಸಲು ಸಜ್ಜು: ಶಾಲೆಯನ್ನು ದತ್ತು ಪಡೆದಿರುವ ಶ್ರೀ ಮಠವು ಶಾಲೆಯ ಗೋಡೆ ಕಾಂಪೌಂಡ್ ಸಹಿತ ಎಲ್ಲಾ ಕಡೆ ಸುಣ್ಣಬಣ್ಣ ಮಾಡಿಸಿದೆ. ಕಿಟಕಿ, ಬಾಗಿಲು, ಉಪಕರಣಗಳನ್ನು ಆಧುನಿಕರಿಸಿದೆ. ಶಿಕ್ಷಕರು ಹಾಗೂ ಸಮಿತಿಯ ಸದಸ್ಯರ ಪ್ರಯತ್ನದಿಂದ ಕುಸಿದಿದ್ದ ಮಕ್ಕಳ ಸಂಖ್ಯೆ ಗಣನೀಯವಾಗಿ ಏರಿಕೆ ಕಂಡಿದೆ. ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ 40 ದಾಟಿದ್ದು, ಇನ್ನಷ್ಟು ಮಕ್ಕಳು ಸೇರ್ಪಡೆಯಾಗಲಿದ್ದಾರೆ. ಆಂಗ್ಲ ಮಾಧ್ಯಮ ಎಲ್‌ಕೆಜಿ, ಯುಕೆಜಿ ಸಹಿತ ಆಧುನಿಕ ಶಿಕ್ಷಣ ಪದ್ಧತಿ ಆರಂಭಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿದೆ.

ಬಸ್ ವ್ಯವಸ್ಥೆ: ಶ್ರೀ ಮಠವು ಶಾಲೆಗೆ ಮೂಲ ಸೌಕರ್ಯ ಒದಗಿಸಲು ಆದ್ಯತೆ ನೀಡಿದೆ. ಮಕ್ಕಳನ್ನು ಕರೆತರಲು ವಾಹನ ವ್ಯವಸ್ಥೆ ಮಾಡಿದ್ದು ಪೋಷಕರಿಗೆ ಹೊರೆಯಾಗದಂತೆ ಸಂಪೂರ್ಣ ಉಚಿತ ಸಾರಿಗೆಯ ಅನುಕೂಲ ಕಲ್ಪಿಸಿದೆ.

ಅಭಿವೃದ್ಧಿ ಸಮಿತಿ ರಚನೆ: ಶಾಲೆಯ ಹಳೆ ವಿದ್ಯಾರ್ಥಿಗಳನ್ನು ಒಳಗೊಂಡ ಸಮಿತಿ ರಚಿಸಲಾಗಿದ್ದು ಶ್ರೀಮಠದ ಆಡಳಿತಾಧಿಕಾರಿ ಪಿ.ಎ. ಮುರಳಿ ಅಧ್ಯಕ್ಷರಾಗಿದ್ದಾರೆ. ಟಿ. ನಾಗೇಶ ಕಾರ್ಯದರ್ಶಿಯಾಗಿದ್ದು, ನಿರಂಜನ್ ಕುಮಾರ್, ಲಕ್ಷ್ಮಿ ವೆಂಕಟರಮಣ, ವೇಣು, ಮಾಧವ ನಾಯಕ್, ಮಂಜುನಾಥ್, ಸುವರ್ಣ, ವಿಜಯಕುಮಾರ್, ಬೇಗಾನೆ ಮಂಜುನಾಥ್ ಸಮಿತಿಯ ಸದಸ್ಯರಾಗಿದ್ದಾರೆ.

ಗೃಹ ಸಚಿವ ಖರ್ಗೆಯಿಂದ ಆರೆಸ್ಸೆಸ್‌ಗೆ ಸುದೀರ್ಘ ಪತ್ರ

ಪುಟ ೧➡ ಈ ಪ್ರಮಾಣ, ಪ್ರಭಾವ ಮತ್ತು ವ್ಯಾಪ್ತಿಯ ಕಾರಣದಿಂದಾಗಿ ಆರ್‌ಎಸ್‌ಎಸ್‌ನ್ನು ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಸಾಂವಿಧಾನಿಕ ಅನುಸರಣೆಯ ಅತ್ಯುನ್ನತ ಮಾನದಂಡಗಳಿಗೆ ಬದ್ಧಗೊಳಿಸಬೇಕು ಎಂದು ಪ್ರಿಯಾಂಕ್ ಖರ್ಗೆ ಪತ್ರದಲ್ಲಿ ಮನವಿ ಮಾಡಿಕೊಂಡಿದ್ದಾರೆ.

8 ಅಂಶಗಳ ಬಗ್ಗೆ ಮಾಹಿತಿ ಕೇಳಿದ ಸಚಿವ ಖರ್ಗೆ:

1. ಆರ್‌ಎಸ್‌ಎಸ್‌ನ ಕಾನೂನಾತ್ಮಕ ಸ್ಥಾನಮಾನ ಮತ್ತು ಸಂಘಟಿತ ರಚನೆ ವಿವರ
2. ಪದಾಧಿಕಾರಿಗಳು ಮತ್ತು ಅಧಿಕೃತ ಪ್ರತಿನಿಧಿಗಳ ವಿವರಗಳು
3. ದೇಣಿಗೆ, ಕೊಡುಗೆ ಮತ್ತು ಆದಾಯದ ಮೂಲಗಳು
4. ವೆಚ್ಚ ಮತ್ತು ಆಸ್ತಿಪಾಸ್ತಿಗಳ ವಿವರಗಳು
5. ಕಾನೂನಿನ ಪ್ರಕಾರ ಅನ್ವಯವಾಗುವ ತೆರಿಗೆಗಳನ್ನು ಸಕ್ರಮವಾಗಿ ಪಾವತಿಸಲಾಗುತ್ತಿದೆಯೇ ಎಂಬ ವಿಷಯ
6. ಔಪಚಾರಿಕ ನೋಂದಣಿಯಿಲ್ಲದೆ ತನ್ನ ಚಟುವಟಿಕೆಗಳನ್ನು ನಡೆಸಲು ಯಾವ ಕಾನೂನಾತ್ಮಕ ಆಧಾರವನ್ನು ಅವಲಂಬಿಸಲಾಗಿದೆ ಎನ್ನುವ ಕುರಿತು
7. ಯಾವುದೇ ಸಾರ್ವಜನಿಕ ಜವಾಬ್ದಾರಿಯಿಲ್ಲದೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಕಾರ್ಯನಿರ್ವಹಿಸುವ ಹಕ್ಕನ್ನು ಯಾವ ಸಾಂವಿಧಾನಿಕ ಮತ್ತು ಶಾಸನಾತ್ಮಕ ಚೌಕಟ್ಟಿನ ಅಡಿಯಲ್ಲಿ ಪಡೆದುಕೊಳ್ಳಲಾಗಿದೆ?
8. ಸಾರ್ವಜನಿಕ ಕಾರ್ಯಕ್ರಮಗಳು, ಮಾರ್ಗ ಮೆರವಣಿಗೆಗಳು, ಸಾಮೂಹಿಕ ಸಭೆಗಳು ಮತ್ತು ಇತರ ಸಂಘಟಿತ ಚಟುವಟಿಕೆಗಳಿಗೆ ಅನುಮತಿಗಳು, ಅಧಿಕಾರಗಳು ಮತ್ತು ಅನುಸರಣಾ ಕಾರ್ಯವಿಧಾನಗಳ ವಿವರ

ಈ ಸಂಬಂಧ ಅಧಿಕೃತ ಚರ್ಚೆಗೆ ಸಿದ್ಧರಿದ್ದೇವೆ. ನಿಮ್ಮ ಅಧಿಕೃತ ಪ್ರತಿನಿಧಿಗಳನ್ನು ಕಳುಹಿಸುವ ಬಗ್ಗೆ ಪ್ರತಿಕ್ರಿಯೆ ನಿರೀಕ್ಷಿಸುತ್ತೇವೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಪತ್ರದಲ್ಲಿ ಬರೆದಿದ್ದಾರೆ.

ಬರ ಎದುರಿಸಲು ಸಜ್ಜಾಗಿ



ಪುಟ ೧➡ ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕು. ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಗಳು ಎಷ್ಟರಮಟ್ಟಿಗೆ ಜಾರಿ ಆಗುತ್ತಿದೆ ಎನ್ನುವ ಬಗ್ಗೆ ವರದಿ ನೀಡಬೇಕಿದ್ದು, ಇದರ ಆಧಾರದ ಮೇಲೆ ಕೇಂದ್ರದ ಸಹಕಾರ, ಅನುದಾನಕ್ಕೆ ಬರುವಂತೆ ಒತ್ತಡ ಹೇರೋಣ ಎಂದರು.

ಎಪಿಎಂಸಿ ಜಾಗಗಳ ಸಂರಕ್ಷಣೆ

ರಾಜ್ಯದಲ್ಲಿರುವ ಶೀತಲಗೃಹ ಮತ್ತು ಗೋದಾಮುಗಳ ಬಗ್ಗೆ ಪಟ್ಟಿ ನೀಡಬೇಕು. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಸೇರಿದ ಜಾಗಗಳು ಸುರಕ್ಷಿತವಾಗಿರಬೇಕು. ಕಾಂಪೌಂಡ್ ಹಾಕಿಸಿ ಈ ಬಗ್ಗೆ ಕ್ರಮ ಕೈಗೊಳ್ಳಬೇಕು. ಎಪಿಎಂಸಿಗಳು ಸರಿಯಾಗಿ ರೈತರಿಗೆ ಬಳಕೆ ಆಗುತ್ತಿವೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು. ಎಪಿಎಂಸಿ ಆವರ್ತ ನಿಧಿ ಸದ್ಬಳಕೆ ಆಗುವಂತೆ ನೋಡಿಕೊಳ್ಳಿ ಎಂದು ಸೂಚಿಸಿದರು.

ಯಾವ ಗ್ಯಾರಂಟಿಯೂ ನಿಲ್ಲೋದಿಲ್ಲ: ಸಿಎಂ ಡಿಕೆಶಿ

ಪುಟ ೧➡ ಸರ್ಕಾರವು ಕರ್ನಾಟಕದವರಿಗೆ ಈ ಯೋಜನೆ ನೀಡುತ್ತಿದ್ದು, ಅನ್ಯ ರಾಜ್ಯದವರಿಗೆ ಈ ಯೋಜನೆ ನೀಡುವುದಿಲ್ಲ. ಉಚಿತ ವಿದ್ಯುತ್‌ನ್ನು ನಮ್ಮ ರಾಜ್ಯದ ಮತದಾರರಿಗೆ ನೀಡಬೇಕೇ ಹೊರತು, ಬೇರೆ ರಾಜ್ಯದವರಿಗೆ ಯಾಕೆ ಕೊಡಬೇಕು? ಹೀಗಾಗಿ ಫಲಾನುಭವಿಗಳಿಗೆ ಗುರುತಿನ ಚೀಟಿ ನೀಡಲು ಸಚಿವ ಸಂಪುಟದಲ್ಲಿ ತೀರ್ಮಾನಿಸಿದ್ದೇವೆ. ಆ ಪ್ರಕ್ರಿಯೆ ನಡೆಯುತ್ತಿದೆ. ಯೋಜನೆ ನಿಲ್ಲಿಸುವುದು ನಮ್ಮ ಉದ್ದೇಶವಲ್ಲ. ನಮ್ಮ ಗ್ಯಾರಂಟಿ ದೇಶಕ್ಕೆ ಮಾದರಿ. ಮಹಾರಾಷ್ಟ್ರ, ಮಧ್ಯಪ್ರದೇಶ, ಆಂಧ್ರಪ್ರದೇಶ ಸೇರಿದಂತೆ ಬೇರೆ ರಾಜ್ಯಗಳು ನಮ್ಮ ಮಾದರಿ ಅನುಸರಿಸಿವೆ ಎಂದು ತಿಳಿಸಿದರು. ಕೆಲವರು ಗೃಹಲಕ್ಷ್ಮಿ ಹಣವನ್ನು ನಕಲಿ ಫೈನಾನ್ಸ್ ವ್ಯವಹಾರಕ್ಕೆ ಬಳಸುತ್ತಿದ್ದಾರೆ. ಬೆಳಗಾವಿಯ ಪ್ರಕರಣವನ್ನು ನೋಡಿದ್ದೇವಲ್ಲ. ಇದಕ್ಕಾಗಿ ಗ್ರಾಮ ಪಂಚಾಯ್ತಿಯಿಂದ ತಾಲ್ಲೂಕು ಪಂಚಾಯ್ತಿವರೆಗೆ ಎಲ್ಲೆಲ್ಲಿ ಇಂತಹ ಸ್ಕೀಂಗಳಿವೆ. ಅವುಗಳಿಗೆ ಕಡಿವಾಣ ಹಾಕಲು ನಾವು ನಿರ್ದೇಶನ ನೀಡಿದ್ದೇವೆ. ನಮ್ಮ ಹೃದಯದಿಂದ ಕೊಟ್ಟ ಯೋಜನೆಗಳಿವು. ಹೆಣ್ಣು ಕುಟುಂಬದ ಕಣ್ಣು, ಅವರ ಮನೆಗಳು ಬೆಳಗಬೇಕು ಎಂದು ನೀಡಲಾಗಿದೆ. ವಿರೋಧ ಪಕ್ಷಗಳು ಹೀಗೆ ಮಾತನಾಡುತ್ತಿರಲಿ ಎಂದು ಕಿಡಿಕಾರಿದರು.

ಸಿಬಿಐನಿಂದ ತನಿಖೆ ನಡೆಸಲು ಒತ್ತಾಯ

ಪುಟ ೧➡ ಇದರ ಜತೆಗೆ, ಧರ್ಮಸ್ಥಳ ಹಾಗೂ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ಸುಮಾರು 200 ಕೋಟಿ ರೂ. ವೆಚ್ಚದಲ್ಲಿ ಸಂಘಟಿತ ಮತ್ತು ವ್ಯವಸ್ಥಿತ ಷಡ್ಯಂತ್ರ ರೂಪಿಸಲಾಗಿತ್ತು ಎಂಬ ಅತ್ಯಂತ ಗಂಭೀರ ಆರೋಪವೂ ನ್ಯಾಯಾಲಯದ ಮುಂದೆ ಬಂದಿದೆ ಎಂದಿದ್ದಾರೆ.

ಈ ಆರೋಪಗಳು ಸತ್ಯವೋ ಸುಳ್ಳೋ ಎಂಬುದನ್ನು ತನಿಖೆಯೇ ನಿರ್ಧರಿಸಬೇಕು. ಧರ್ಮಸ್ಥಳದಂತಹ ಪ್ರತಿಷ್ಠಿತ ಸಂಸ್ಥೆಯ ವಿರುದ್ಧ ಇಷ್ಟೊಂದು ದೊಡ್ಡ ಮಟ್ಟದ ಅಭಿಯಾನ ನಡೆಸಲು ಹಣ ಎಲ್ಲಿಂದ ಬಂತು? ಇದರ ಹಿಂದೆ ಯಾರು ಇದ್ದರು? ಇದು ಕೆಲವರ ವೈಯಕ್ತಿಕ ಕೃತ್ಯವೋ ಅಥವಾ ಇದರ ಹಿಂದೆ ದೊಡ್ಡ ಜಾಲವೇ ಕಾರ್ಯನಿರ್ವಹಿಸುತ್ತಿದೆಯೋ ಎಂಬ ಸತ್ಯ ಹೊರಬರಬೇಕಾಗಿದೆ. ಧರ್ಮಸ್ಥಳದ ವಿರುದ್ಧದ ಆರೋಪಗಳ ತನಿಖೆ ನಡೆದಂತೆಯೇ, ಧರ್ಮಸ್ಥಳದ ವಿರುದ್ಧವೇ ಯಾವುದೇ ಸಂಚು ನಡೆದಿದೆಯೇ ಎಂಬುದರ ಬಗ್ಗೆಯೂ ತನಿಖೆ ನಡೆಯಬೇಕು ಎಂದು ಒತ್ತಾಯಿಸಿದ್ದಾರೆ.

ಪ್ರಸ್ತುತ ಪ್ರಕರಣದಲ್ಲಿ, ಕರ್ನಾಟಕ ಮಾತ್ರವಲ್ಲದೆ ವಿವಿಧ ರಾಜ್ಯಗಳ ಜನರೂ ಸಂಚಿನ ಭಾಗವಾಗಿದ್ದಾರೆನ್ನುವ ಆರೋಪ ಕೇಳಿಬಂದಿದೆ. ಕೋಟ್ಯಂತರ ಭಕ್ತರ ಶ್ರದ್ಧಾಕೇಂದ್ರವಾದ ಧರ್ಮಸ್ಥಳದ ವಿರುದ್ಧ ನಡೆದಿರುವ ಹುನ್ನಾರವನ್ನು ಲಘುವಾಗಿ ಪರಿಗಣಿಸಲು ಸಾಧ್ಯವಿಲ್ಲ. ಪ್ರಕರಣವನ್ನು ರಾಜ್ಯ ಪೊಲೀಸ್ ಇಲಾಖೆಯಿಂದ ತನಿಖೆ ನಡೆಸಿದರೆ ಸಾಕಾಗುವುದಿಲ್ಲ. ಆದ್ದರಿಂದ, ಕೇಂದ್ರ ಮಟ್ಟದ ತನಿಖಾ ಸಂಸ್ಥೆಗಳಿಂದ ತನಿಖೆ ನಡೆಸಿದರೆ ಮಾತ್ರವೇ ವಿಸ್ತೃತ ವಿಚಾರಣೆ ನಡೆದು, ಷಡ್ಯಂತ್ರದ ಹಿಂದಿರುವವರು ಯಾರು, ಅವರ ಉದ್ದೇಶವೇನು ಎನ್ನುವುದು ಬೆಳಕಿಗೆ ಬರಲು ಸಾಧ್ಯ.

ಹೀಗಾಗಿ, ಈ ಪ್ರಕರಣವನ್ನು ಕೇಂದ್ರ ತನಿಖಾ ದಳ (ಸಿಬಿಐ)ಕ್ಕೆ ವಹಿಸಿ ಸಮಗ್ರ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ನಾನು ಆಗ್ರಹಿಸುತ್ತೇನೆ. ಸತ್ಯ ಏನೇ ಇರಲಿ ಅದು ಹೊರಬರಬೇಕು. ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ನಡೆದಿದ್ದರೆ ಅದರ ಹಿಂದಿರುವವರು ಬಯಲಾಗಬೇಕು. ಆರೋಪಗಳಲ್ಲಿ ಸತ್ಯವಿದ್ದರೆ ಅದೂ ಕಾನೂನಿನ ಮುಂದೆ ಸಾಬೀತಾಗಬೇಕು. ಸರ್ಕಾರ ಈ ವಿಚಾರವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ತಕ್ಷಣವೇ ಸಿಬಿಐ ತನಿಖೆಗೆ ಶಿಫಾರಸು ಮಾಡಬೇಕೆಂದು ಸಿ.ಟಿ. ರವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಹಿಂದು ಶ್ರದ್ಧಾ ಕೇಂದ್ರಗಳ ವಿರುದ್ಧ ಷಡ್ಯಂತ್ರವೇ?

ಪುಟ ೧➡ ಹಣದ ಮೂಲ, ಹಣದ ಹರಿವು, ಈ ಪ್ರಕರಣದಲ್ಲಿ ಹೆಸರು ಕೇಳಿಬರುತ್ತಿರುವ ವ್ಯಕ್ತಿಗಳ ಪಾತ್ರ, ಡಿಜಿಟಲ್ ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ನಡೆದಿರುವ ಪ್ರಚಾರ ಹಾಗೂ ಇದರ ಹಿಂದಿರುವ ಸಂಪೂರ್ಣ ಜಾಲ ಪತ್ತೆ ಹಚ್ಚಬೇಕಾಗಿದೆ ಎಂದು ಸಿ.ಟಿ. ರವಿ ಆಗ್ರಹಿಸಿದ್ದಾರೆ.

ಇಕ್ಬಾಲ್ ಹುಸೇನ್‌ಗೆ ಅನಾರೋಗ್ಯ

ಬೆಂಗಳೂರು: ಹೃದಯ ಸಂಬಂಧಿತ ಅನಾರೋಗ್ಯದಿಂದ ರಾಮನಗರ ಕ್ಷೇತ್ರದ ಶಾಸಕ ಇಕ್ಬಾಲ್ ಹುಸೇನ್ ಅವರನ್ನು ಬೆಂಗಳೂರಿನ ವೈದೇಹಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯ ಸ್ಥಿರವಾಗಿದೆ. ಎಂದು ಇಕ್ಬಾಲ್ ಹುಸೇನ್ ಅವರಿಗೆ ಚಿಕಿತ್ಸೆ ನೀಡಿರುವ ವೈದೇಹಿ ಆಸ್ಪತ್ರೆಯ ಹೃದ್ರೋಗ ತಜ್ಞ ಡಾ.ವಿ.ಕೆ. ಶ್ರೀನಿವಾಸ್ ಹೇಳಿದರು.



ಆಸ್ಪತ್ರೆಯಲ್ಲಿ ಇಕ್ಬಾಲ್ ಹುಸೇನ್ ಅವರ ಆರೋಗ್ಯ ವಿಚಾರಿಸಿ ಮಾತನಾಡಿದ ಸಿಎಂ ಡಿ.ಕೆ. ಶಿವಕುಮಾರ್, ಶನಿವಾರ ಎದೆ ನೋವು ಕಾಣಿಸಿಕೊಂಡಿದೆ. ಎಡಗೈ ನೋವು ಬಂದಿದ್ದರಿಂದ ಮುನ್ನೆಚ್ಚರಿಕಾ ಕ್ರಮವಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದರು.

ಕೊಲೆ ಕೇಸ್: ಎಫ್‌ಎಸ್ಸೆಲ್ ಅಧಿಕಾರಿಗಳೂ ಶಾಮೀಲು

ಪುಟ ೧➡ ಪೊಲೀಸ್ ತನಿಖೆಯ ಪ್ರಕಾರ, ಬೆಳಗಾವಿಯ ಎಫ್‌ಎಸ್‌ಎಲ್ ಕಚೇರಿಯ ಸೀನಿಯರ್ ಸೈಂಟಿಫಿಕ್ ಆಫಿಸರ್ ಪಿ.ಎನ್ .ನಾಗರಾಜ್, ಲ್ಯಾಬ್ ಅಸಿಸ್ಟೆಂಟ್ ಚನ್ನಯ್ಯ, ಗುಮಾಸ್ತ ಅಪ್ಪಾಸಾಬ್ ನಾಯಿಕ್, ಆರ್ ಎಂಪಿ ವೈದ್ಯ ಬಸವರಾಜ್ ಭಸ್ಮೆ ಹಾಗೂ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಫ್‌ಡಿಎ ಅಶೋಕ ಗುಜಾನಾಳ ಅವರನ್ನು ಬಂಧಿಸಲಾಗಿದೆ.

ಪ್ರಕರಣದಲ್ಲಿ ಪ್ರಮುಖ ಆರೋಪಿ ಸುಮಾ ಅವರಿಂದ ಹಣದ ಹಂಚಿಕೆ ನಡೆದಿರುವ ಮಾಹಿತಿ ತನಿಖೆಯಲ್ಲಿ ಬಹಿರಂಗವಾಗಿದ್ದು, ಎಫ್‌ಡಿಎ ಅಶೋಕ ಗುಜಾನಾಳ ಮೂಲಕ ಎಫ್‌ಎಸ್‌ಎಲ್ ಅಧಿಕಾರಿಗಳ ಸಂಪರ್ಕ ಸಾಧಿಸಲಾಗಿತ್ತು ಎನ್ನಲಾಗಿದೆ. ಈ ಮೂಲಕ ಪ್ರಕರಣವನ್ನು ಅಪಘಾತ ಎಂದು ತೋರಿಸುವ ಪ್ರಯತ್ನ ನಡೆದಿರಬಹುದೆಂಬ ಅನುಮಾನ ವ್ಯಕ್ತವಾಗಿದೆ.ಇದುವರೆಗೆ ಪ್ರಕರಣದಲ್ಲಿ ಮೃತ ಸಂದೀಪ್ ಮಂಜರಗಿ ಅವರ ಪತ್ನಿ ಸುಮಾ, ಆಕೆಯ ಪ್ರಿಯಕರ ಮಂಡಲೀಕ, ಸ್ನೇಹಿತ ಸಚಿನ್ ಸೇರಿದಂತೆ ಒಟ್ಟು ಒಂಬತ್ತು ಮಂದಿಯನ್ನು ಪೊಲೀಸರು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ಬಂಧಿತರಿಂದ ಮಹತ್ವದ ಮಾಹಿತಿಗಳು ಲಭ್ಯವಾಗುತ್ತಿದ್ದು, ಪ್ರಕರಣದಲ್ಲಿ ಇನ್ನೂ ಕೆಲವರ ಪಾತ್ರ ಇರುವ ಸಾಧ್ಯತೆಗಳಿವೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಈ ಪ್ರಕರಣವು ರಾಜ್ಯದ ತನಿಖಾ ವ್ಯವಸ್ಥೆಯ ವಿಶ್ವಾಸಾರ್ಹತೆಯ ಕುರಿತು ಪ್ರಶ್ನೆಗಳನ್ನು ಹುಟ್ಟುಹಾಕಿದ್ದು, ಫೊರೆನ್ಸಿಕ್ ವರದಿಗಳ ದುರುಪಯೋಗ ಮತ್ತು ಅಧಿಕಾರ ದುರ್ಬಳಕೆಯ ಆರೋಪಗಳು ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿವೆ. ತನಿಖೆ ಮುಂದುವರಿದಿದ್ದು, ಇನ್ನಷ್ಟು ಆರೋಪಿಗಳ ಬಂಧನ ಸಾಧ್ಯತೆ ಇದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಪ್ರಕರಣದ ಸಂಪೂರ್ಣ ಸತ್ಯಾಂಶ ಅರಿಯಲು ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ಮುಂದುವರಿಸಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಮಹತ್ವದ ಮಾಹಿತಿಗಳು ಬಹಿರಂಗವಾಗುವ ನಿರೀಕ್ಷೆಯಿದೆ.

ಇಂದು ರೆಸಾರ್ಟ್‌ನಲ್ಲೇ ಕೈ ಶಾಸಕಾಂಗ ಪಕ್ಷದ ಸಭೆ

ಪುಟ ೧➡ ವಿಧಾನಪರಿಷತ್ತಿನ 7 ಸ್ಥಾನಗಳಿಗೆ 8 ಅಭ್ಯರ್ಥಿಗಳು ಕಣದಲ್ಲಿರುವುದರಿಂದ ಕಾಂಗ್ರೆಸ್ ಪಕ್ಷ ತನ್ನ ಐವರು ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ರಣತಂತ್ರ ರೂಪಿಸಿದ್ದು, ಅದರಂತೆ ಕಾಂಗ್ರೆಸ್ ಶಾಸಕರ ಮತಗಳು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮಾತ್ರ ಚಲಾಯಿಸಲು ಏನೆಲ್ಲಾ ತಂತ್ರ ಮಾಡಬೇಕು ಎನ್ನುವ ಬಗ್ಗೆ ಚರ್ಚೆ ನಡೆಯಲಿದೆ.

ಡಿಕೆಶಿ ಸಿಎಂ ಆದ ಬಳಿಕ ಮೊದಲ ಶಾಸಕಾಂಗ ಸಭೆ

ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾದ ನಂತರ ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಮೊದಲ ಶಾಸಕಾಂಗ ಸಭೆ ನಡೆಯುತ್ತಿದ್ದು, ಈ ಸಭೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರುಗಳು ಹಾಗೂ ಪಕ್ಷದ ಎಲ್ಲಾ ಕಾರ್ಯಾಧ್ಯಕ್ಷರು ಪಾಲ್ಗೊಳ್ಳಲಿದ್ದು, ಈ ಸಭೆಗೆ ಕಡ್ಡಾಯವಾಗಿ ಹಾಜರಿರುವಂತೆ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಎಲ್ಲ ಸದಸ್ಯರುಗಳಿಗೆ ಸೂಚನೆ ನೀಡಲಾಗಿದೆ.

ಚುನಾವಣೆಯಲ್ಲಿ ಮತ ಚಲಾಯಿಸುವ ವಿಧಾನ ಬಗ್ಗೆ ಮಾಹಿತಿ: ಸಭೆಯಲ್ಲಿ ವಿಧಾನಪರಿಷತ್ತಿನ ಚುನಾವಣೆಯಲ್ಲಿ ಯಾವ ರೀತಿ ಮತ ಚಲಾಯಿಸಬೇಕು, ಯಾವ ಶಾಸಕರು ಕಾಂಗ್ರೆಸ್‌ನ ಯಾವ ಅಭ್ಯರ್ಥಿಗೆ ಮತ ಹಾಕಬೇಕು ಎನ್ನುವ ಬಗ್ಗೆ ಶಾಸಕರುಗಳಿಗೆ ಸೂಚನೆ ನೀಡಲಾಗುತ್ತದೆ. ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಮೊದಲ ಮತ್ತು ದ್ವಿತೀಯ ಪ್ರಾಶಸ್ತ್ಯದ ಮತ ಚಲಾಯಿಸಲು ಅವಕಾಶವಿದ್ದು, ಮೊದಲ ಪ್ರಾಶಸ್ತ್ಯ ಮತವನ್ನು ಪಕ್ಷ ಸೂಚಿಸಿದ ಅಭ್ಯರ್ಥಿಗಳಿಗೆ ಹಾಕುವ ಶಾಸಕರುಗಳು ಎರಡನೇ ಪ್ರಾಶಸ್ತ್ಯ ಮತವನ್ನು ಯಾವ ಕಾಂಗ್ರೆಸ್ ಅಭ್ಯರ್ಥಿಗೆ ಹಾಕಬೇಕು ಎಂಬುದನ್ನು ಎಲ್ಲಾ ಶಾಸಕರಿಗೂ ತಿಳಿಸಲಾಗುತ್ತದೆ.

ಅಡ್ಡ ಮತದಾನವಾಗದಂತೆ ಎಚ್ಚರ

ಈ ಚುನಾವಣೆಯಲ್ಲಿ ಜೆಡಿಎಸ್ ಪಕ್ಷ 8ನೇ ಅಭ್ಯರ್ಥಿಯನ್ನಾಗಿ ಗೋವಿಂದರಾಜು ಅವರನ್ನು ಕಣಕ್ಕಿಳಿಸಿರುವುದರಿಂದ ಕಾಂಗ್ರೆಸ್ ಪಕ್ಷದಿಂದ ಯಾರೂ ಅಡ್ಡ ಮತದಾನ ಮಾಡದಂತೆ ಕಟ್ಟೆಚ್ಚರ ವಹಿಸಲಾಗಿದ್ದು, ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಸೂಚನೆಯನ್ನು ಎಐಸಿಸಿ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಶಾಸಕರುಗಳಿಗೆ ನೀಡಲಿದ್ದಾರೆ. ವಿಧಾನ ಪರಿಷತ್ತಿನ ಚುನಾವಣೆ ಗೌಪ್ಯ ಮತದಾನವಾಗಿರುವುದರಿಂದ ಯಾರಾದರೂ ಅಡ್ಡಮತದಾನ ಮಾಡಬಹುದು ಎಂಬ ಭೀತಿಯೂ ಇದ್ದು, ಅದಕ್ಕೆ ಅವಕಾಶ ಕೊಡದಂತೆ ಕಾಂಗ್ರೆಸ್ ಶಾಸಕರನ್ನು ಮತದಾನದವರೆಗೂ ರೆಸಾರ್ಟ್‌ನಲ್ಲಿ ಇರಿಸುವ ತಂತ್ರಗಾರಿಕೆಯನ್ನು ಮಾಡಲಾಗಿದೆ. ವಿಧಾನಪರಿಷತ್ತಿನ 7 ಸ್ಥಾನಗಳ ಪೈಕಿ 5 ಸ್ಥಾನಗಳಿಗೆ ಕಾಂಗ್ರೆಸ್ ಪಕ್ಷ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಎಐಸಿಸಿ ಕಾರ್ಯದರ್ಶಿ ಪಿ.ವಿ. ಮೋಹನ್, ಶಿವಣ್ಣ ಕಮಕನೂರು, ಮಳವಳ್ಳಿ ಶಿವಣ್ಣ ಹಾಗೂ ವಿನಯ್ ಕಾರ್ತಿಕ್ ಇವರುಗಳನ್ನು ಅಭ್ಯರ್ಥಿಯಾಗಿ ಕಣಕ್ಕಿಳಿಸಿದೆ. ವಿಧಾನ ಪರಿಷತ್ತಿಗೆ ಮತದಾನ ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೂ ನಡೆಯಲಿದ್ದು, 5 ಗಂಟೆಯ ನಂತರ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟಿಸಲಾಗುತ್ತದೆ.

ಸ್ಲೊವಾಕಿಯಾ ಸಂಬಂಧ ಸುಮಧುರ

ಪುಟ ೧➡ ಭಾರತದ ಪ್ರಧಾನಿಯೊಬ್ಬರು ಈ ಯುರೋಪಿಯನ್ ರಾಷ್ಟ್ರಕ್ಕೆ ಭೇಟಿ ನೀಡುತ್ತಿರುವುದು ಇದೇ ಮೊದಲು.

ಆರ್ಥಿಕ ಮತ್ತು ಇಂಧನ ಸಹಕಾರ: ಭಾರತ-ಯುರೋಪಿಯನ್ ಯೂನಿಯನ್ ಮುಕ್ತ ವ್ಯಾಪಾರ ಒಪ್ಪಂದವನ್ನು ಆದಷ್ಟು ಬೇಗ ಅನುಷ್ಠಾನಗೊಳಿಸಲು ಇಬ್ಬರೂ ನಾಯಕರು ಒಪ್ಪಿಕೊಂಡಿದ್ದಾರೆ. ಉಭಯ ದೇಶಗಳ ನಡುವೆ ಸಂಚಾರವನ್ನು ಸುಲಭಗೊಳಿಸಲು ಕಾರ್ಮಿಕ ವಲಸೆ ಕ್ಷೇತ್ರದಲ್ಲಿ ಸಹಕಾರದ ಕುರಿತು ತಿಳುವಳಿಕಾ ಪತ್ರಕ್ಕೆ ಸಹಿ ಹಾಕಲಾಗಿದ್ದು, ಸಾಮಾಜಿಕ ಭದ್ರತಾ ಒಪ್ಪಂದವನ್ನು ಶೀಘ್ರದಲ್ಲೇ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ. ಇದರೊಂದಿಗೆ, ಪರಮಾಣು ಶಕ್ತಿ ಮತ್ತು ಜಿಯೋಥರ್ಮಲ್ ವಿದ್ಯುತ್ ಸೇರಿದಂತೆ ಇಂಧನ ವಲಯದಲ್ಲಿ ಸಹಕಾರವನ್ನು ಹೆಚ್ಚಿಸಲು ಮತ್ತು ಆಟೋಮೊಬೈಲ್, ರೈಲ್ವೆ, ಸುಧಾರಿತ ಉತ್ಪಾದನೆ ಹಾಗೂ ಹಸಿರು ತಂತ್ರಜ್ಞಾನಗಳತ್ತ ಗಮನ ಹರಿಸಲು ಉಭಯ ದೇಶಗಳು ಸಮ್ಮತಿಸಿವೆ.

ರಕ್ಷಣೆ ಮತ್ತು ಜಾಗತಿಕ ಸಮನ್ವಯ: ರಕ್ಷಣಾ ಉದ್ಯಮಗಳ ನಡುವೆ ಸಹಕಾರ ಹೆಚ್ಚಿಸಲು ಉಭಯ ನಾಯಕರ ಮಾತುಕತೆಯ ನಂತರ ರಕ್ಷಣಾ ಸಹಕಾರದ ಕುರಿತು ಆಶಯ ಪತ್ರವನ್ನು ಅಂತಿಮಗೊಳಿಸಲಾಯಿತು. ಜಾಗತಿಕ ಮಟ್ಟದಲ್ಲಿ ಎಲ್ಲಾ ವಿವಾದಗಳು ಮತ್ತು ಉದ್ವಿಗ್ನತೆಗಳನ್ನು ಶಾಂತಿಯುತವಾಗಿ ಬಗೆಹರಿಸಬೇಕು ಮತ್ತು ಜಾಗತಿಕ ಸಂಸ್ಥೆಗಳು 21ನೇ ಶತಮಾನದ ವಾಸ್ತವಗಳನ್ನು ಎದುರಿಸಲು ಮರು ವ್ಯಾಖ್ಯಾನಿಸಿಕೊಳ್ಳಬೇಕು ಎಂದು ಎರಡೂ ದೇಶಗಳು ಒಮ್ಮತ ಸೂಚಿಸಿವೆ.ಬೆಳೆಯುತ್ತಿರುವ ಇಂಡೋ-ಪೆಸಿಫಿಕ್ ಪ್ರದೇಶದ ಪ್ರಾಮುಖ್ಯತೆಯಿಂದ, ಪ್ರಾದೇಶಿಕ ಸಂಪರ್ಕ, ಮುಕ್ತ ಅಂತರರಾಷ್ಟ್ರೀಯ ವ್ಯಾಪಾರ ಮತ್ತು ನೌಕಾಯಾನದ ಸ್ವಾತಂತ್ರ್ಯ ಬೆಂಬಲಿಸಲು ಪ್ರಬಲ ಪಾಲುದಾರಿಕೆಯ ಅಗತ್ಯವಿದೆ ಎಂದು ನಾಯಕರು ಒಪ್ಪಿಕೊಂಡಿದ್ದಾರೆ.

ಭಯೋತ್ಪಾದಕರು ಬ್ರದರ್ಸ್ ಹೇಗಾದರು: ಸಿ.ಟಿ.ರವಿ ಪ್ರಶ್ನೆ

• **ಬಳ್ಳಾರಿ:** ಭಯೋತ್ಪಾದಕರನ್ನು, ಕುಕ್ಕರ್ ಬಾಂಬ್ ಇಟ್ಟವರನ್ನು ಕಾಂಗ್ರೆಸ್‌ನವರು ಅವರೆಲ್ಲರೂ ನಮ್ಮ ಬ್ರದರ್ಸ್ ಎಂದು ಕರೆದಿದ್ದರು. ಇದು ಕಾಂಗ್ರೆಸ್ ಇತಿಹಾಸ. ಆದರೆ, ನಮ್ಮ ಬಿಜೆಪಿ ಸಂಸ್ಕೃತಿ ಬೇರೆ ಎಂದು ಮಾಜಿ ಸಚಿವ ಸಿ.ಟಿ.ರವಿ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ದೇಶದಲ್ಲಿ ಆತಂಕ ಸೃಷ್ಟಿಸುವವರ, ಭಯೋತ್ಪಾದಕರನ್ನು ಸಹೋದರ



ಮಾತುತ್ತೇವೆ ಹೊರತೂ, ಅವರಿಗೆ ರಾಜ ಮರ್ಯಾದೆ ನೀಡಿ ಬಿರಿಯಾನಿ ಕೊಡುವ ಸರ್ಕಾರ ನಮ್ಮದಲ್ಲ. ಮಂಗಳೂರಿನಲ್ಲಿ ಆಟೋದಲ್ಲಿ ಕುಕ್ಕರ್ ಬಾಂಬ್ ಬ್ಲಾಸ್ಟ್ ಮಾಡಿದವರನ್ನು ಕಾಂಗ್ರೆಸ್‌ನವರು ಅವರು ನಮ್ಮ ಬ್ರದರ್ಸ್ ಅಂತಾರೆ ಅಂದ್ರೆ, ನಾಚಿಕೆಯಾಗಬೇಕು ಎಂದರು.

ನಕ್ಸಲ್ ಮುಕ್ತ ಭಾರತ ಮಾಡುವ ಸಂಕಲ್ಪ ನಮ್ಮ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ಮಾಡಿದೆ. ನಗರ ನಕ್ಸಲರು ಬಿಜೆಪಿಯೇತರ ಸರ್ಕಾರ ಇರುವ ರಾಜ್ಯಗಳಲ್ಲಿದ್ದು, ಅವರನ್ನು ತೊಲಗಿಸಬೇಕು ಎಂದು ಕೈ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು. ರಾಜ್ಯದ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರಾಜ್ಯದ ಜನರಿಗೆ ಅನೇಕ ಭರವಸೆಗಳನ್ನು ನೀಡಿದ್ದು ಸ್ವಾಗತಾರ್ಹ. ಯಾರಾದರೂ ಲಂಚ ಕೇಳಿದರೆ, ಲಂಚ ಪಡೆದರೆ ನಮ್ಮ ಕಚೇರಿಗೆ ದೂರು ನೀಡಿ, ಗಮನಕ್ಕೆ ತನ್ನಿ ಎಂದು ಸಿಎಂ ಡಿ.ಕೆ.ಶಿವಕುಮಾರ ಅವರ ಹೇಳಿಕೆ ಸ್ವಾಗತಾರ್ಹ. ಆದರೆ, ಸಿಎಂ ಕಚೇರಿಯೇ ಭ್ರಷ್ಟಾಚಾರ ಕೇಂದ್ರವಾದರೆ ಯಾರಿಗೆ ದೂರು ನೀಡಬೇಕು ಎನ್ನುವ ಪ್ರಶ್ನೆ ಎಲ್ಲರಲ್ಲೂ ಕಾಡುತ್ತಿದೆ. ಒಳ್ಳೆಯ ಆಡಳಿತ ನೀಡಲಿ ಎಂದು ಹಾರೈಸೋಣ. ಆದರೆ, ಅದು ಆಗದ ಕನಸು ಕಾಂಗ್ರೆಸ್ ಭ್ರಷ್ಟಾಚಾರದ ಪಿತಾಮಹ, ಎಲ್ಲಿವರೆಗೂ ಕಾದು ನೋಡುತ್ತೇವೆ ಎಂದು ವ್ಯಂಗ್ಯವಾಡಿದರು.



ವಿಕಸಿತ ಭಾರತದ ನಿರ್ಮಾಣಕ್ಕೆ ಶ್ರಮಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ಸಾರ್ಥಕ ಸಾಧನೆಗಳ 12 ವರ್ಷಗಳನ್ನು ಪೂರೈಸಿರುವ ಅಂಗವಾಗಿ ಶ್ರೀಕ್ಷೇತ್ರ ಕೊಲ್ಲೂರು ಮೂಕಾಂಬಿಕೆ ದೇವಾಲಯಕ್ಕೆ ಸೋಮವಾರ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಪಕ್ಷದ ಶಾಸಕರಾದ ಸುನೀಲ್ ಕುಮಾರ್, ಭೈರತಿ ಬಸವರಾಜ್, ಹರೀಶ್ ಪೂಂಜಾ ಜತೆಗಿದ್ದರು.

ದೇಶದಲ್ಲಿ ಮೋದಿ ಸಾಧನೆ ಕ್ರಾಂತಿ: ಸಚಿವ ಸೋಮಣ್ಣ

• **ತುಮಕೂರು:** ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ 12 ವರ್ಷಗಳ ಆಡಳಿತವು ದೇಶದಲ್ಲಿ ಅತಿ ದೊಡ್ಡ ಸಾಮಾಜಿಕ ಹಾಗೂ ಆರ್ಥಿಕ ಪರಿವರ್ತನೆಗೆ ಕಾರಣವಾಗಿದೆ ಎಂದು ಕೇಂದ್ರ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಅವರು, ದೇಶದ 25 ಕೋಟಿ ಜನರು ಬಡತನದಿಂದ ಮುಕ್ತರಾಗಿದ್ದಾರೆ. ಪಿಎಂ ಗರೀಬ್ ಕಲ್ಯಾಣ್ ಯೋಜನೆಯಲ್ಲಿ 81 ಕೋಟಿ ಜನರಿಗೆ ಉಚಿತ ರೇಷನ್, ಆವಾಸ್ ಯೋಜನೆಯಲ್ಲಿ 4 ಕೋಟಿ ಮನೆ ಹಾಗೂ ಜನ ಧನ್ ಮೂಲಕ 58 ಕೋಟಿ ಬ್ಯಾಂಕ್ ಖಾತೆ ತೆರೆಯಲಾಗಿದೆ ಎಂದರು.



ಜಲ ಜೀವನ್ ಮಿಷನ್‌ನಿಂದ 16 ಕೋಟಿ ಮನೆಗಳಿಗೆ ನಲ್ಲಿ ನೀರು ಹಾಗೂ 11 ಕೋಟಿ ಎಲ್‌ಪಿಜಿ ಸಂಪರ್ಕ ನೀಡಲಾಗಿದೆ. ಪಿಎಂ ಕಿಸಾನ್ ಮೂಲಕ ರೈತರ ಖಾತೆಗೆ 4.3 ಲಕ್ಷ ಕೋಟಿ ಜಮಾ ಮಾಡಲಾಗಿದ್ದು, ಯೂರಿಯಾಕ್ಕೆ ಶೇ.90 ರಷ್ಟು ಸಬ್ಸಿಡಿ ನೀಡಲಾಗುತ್ತಿದೆ. ಮುದ್ರಾ ಯೋಜನೆಯಲ್ಲಿ 57 ಕೋಟಿ ಜನರಿಗೆ ಸಾಲ ಸೌಲಭ್ಯ ನೀಡಲಾಗಿದೆ. ದೇಶದಲ್ಲಿ 164 ವಂದೇ ಭಾರತ್ ರೈಲುಗಳು ಕಾರ್ಯನಿರ್ವಹಿಸುತ್ತಿದ್ದು, ಹಾಗೂ 26 ನಗರಗಳಲ್ಲಿ ಮೆಟ್ರೋ ಸಂಪರ್ಕ ಕಲ್ಪಿಸಲಾಗಿದೆ. ಆಯುಷ್ಮಾನ್ ಭಾರತ್ ಅಡಿ 60 ಕೋಟಿ ಜನರಿಗೆ 5 ಲಕ್ಷದವರೆಗೆ ಉಚಿತ ಚಿಕಿತ್ಸೆ ಸಿಗುತ್ತಿದೆ.

ಭಾರತದ ಯುಪಿಐ ಬಳಕೆ ಜಗತ್ತಿನಲ್ಲೇ ನಂ.1 ಆಗಿದೆ ಎಂದರು. ಇಂದು ಭಾರತೀಯ ಮಧ್ಯಮ ವರ್ಗವೇ ದೇಶದ ಅತಿದೊಡ್ಡ ಗ್ರಾಹಕ ಶಕ್ತಿಯಾಗಿದೆ. ಪ್ರತಿಯೊಬ್ಬ ನಾಗರಿಕನು ಮೊದಲ ಕಾರು, ಸ್ವಂತ ಮನೆ ಹಾಗೂ ಮಕ್ಕಳ ಉನ್ನತ ಶಿಕ್ಷಣದ ಕನಸನ್ನು ನನಸು ಮಾಡುವ ಮೂಲಕ ವಿಕಸಿತ ಭಾರತ 2047 ನಿರ್ಮಿಸುವುದೇ ಪ್ರಧಾನ ಮೋದಿಯವರ ಸಂಕಲ್ಪವಾಗಿದೆ ಎಂದು ಕೇಂದ್ರ ಸಚಿವ ವಿ. ಸೋಮಣ್ಣ ತಿಳಿಸಿದರು.

ಕಿರುಸುದ್ದಿ

ಕಾಂಗ್ರೆಸ್‌ನಿಂದ ಎಸ್‌ಐಆರ್ ಕುರಿತು ಜಾಗೃತಿ ಸಮಾವೇಶ

• **ಬೆಂಗಳೂರು:** ರಾಜ್ಯದಲ್ಲಿ ಮತದಾರರ ಪಟ್ಟಿ ತೀವ್ರ ಪರಿಷ್ಕರಣೆ (ಎಸ್‌ಐಆರ್) ಹಿನ್ನೆಲೆಯಲ್ಲಿ ಕಾಂಗ್ರೆಸ್‌ನಿಂದ ಜೂ. 23 ರಿಂದ ಕಾಂಗ್ರೆಸ್‌ನಿಂದ ವಿಭಾಗವಾರು ಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಜೂ. 23ಕ್ಕೆ ಮಂಗಳೂರು, ಜೂ.25ಕ್ಕೆ ಹುಬ್ಬಳ್ಳಿ, ಜೂ.27ಕ್ಕೆ ಮೈಸೂರು ಮತ್ತು ಜೂ.29ಕ್ಕೆ ಕಲಬುರಗಿಯಲ್ಲಿ ಹಾಗೂ ಜೂ.30 ಬೆಂಗಳೂರಿನಲ್ಲಿ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಯುವತಿ ಆತ್ಮಹತ್ಯೆಗೆ ಯತ್ನ: ಕಾಂಗ್ರೆಸ್ ನಾಯಕಿ ಕೈವಾಡ

• **ಬೆಳಗಾವಿ:** ಮದುವೆಯಾಗುವುದಾಗಿ ನಂಬಿಸಿ ಯುವತಿಯೊಂದಿಗೆ ದೈಹಿಕ ಸಂಬಂಧ ಬೆಳೆಸಿದ ಯುವಕನನ್ನು ಮದುವೆಯಾಗದಂತೆ ಒತ್ತಡ ಹೇರಲಾಗುತ್ತಿದ್ದು, ಖಾಸಗಿ ಕ್ಷಣಗಳ ಫೋಟೋಗಳನ್ನು ಬಹಿರಂಗಪಡಿಸುವುದಾಗಿ ಬೆದರಿಕೆ ಹಾಕಲಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಮನನೊಂದ ಯುವತಿಯೊಬ್ಬಳು ಆತ್ಮಹತ್ಯೆಗೆ ಯತ್ನಿಸಿದ ಘಟನೆ ಬೆಳಗಾವಿಯಲ್ಲಿ ಬೆಳಕಿಗೆ ಬಂದಿದೆ. ಯುವತಿ ಗಂಭೀರ ಸ್ಥಿತಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಸಾವು-ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾಳೆ ಎಂದು ತಿಳಿದುಬಂದಿದೆ. ಈ ಪ್ರಕರಣದಲ್ಲಿ ಬೆಳಗಾವಿ ಕಾಂಗ್ರೆಸ್ ನಾಯಕಿ ಆಯೇಶಾ ಸನದಿ ವಿರುದ್ಧ ಯುವತಿಯ ಪೋಷಕರು ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಸಲೀಂ ಕಿಲ್ಲೇದಾರ್ ಎಂಬ ಯುವಕ ಮದುವೆಯಾಗುವುದಾಗಿ ನಂಬಿಸಿ ಯುವತಿಯೊಂದಿಗೆ ದೈಹಿಕ ಸಂಬಂಧ ಬೆಳೆಸಿದ್ದಲ್ಲದೆ, ಆಕೆಯ ಖಾಸಗಿ ಕ್ಷಣಗಳ ಫೋಟೋಗಳನ್ನು ತನ್ನ ಬಳಿ ಇಟ್ಟುಕೊಂಡಿದ್ದಾನೆ ಎಂದು ದೂರಲಾಗಿದೆ.

ವಿಚ್ಛೇದನ ಪತ್ರ ಹರಿದು ಪತಿಯ ಅಪ್ಪಿಕೊಂಡ ಪತ್ನಿ !

ಪುಟ 1 ➡ ಇದು ಕೇವಲ ದಾಂಪತ್ಯ ಕಲಹವಾಗಿರದೆ, ಎರಡೂ ಕುಟುಂಬಗಳು ಪ್ರತಿಷ್ಠೆಯಲ್ಲಿ ಸಿಲುಕಿಕೊಂಡು ಒದ್ದಾಡುತ್ತಿದ್ದವು. ಈ ನಡುವೆ ಶಿಖಾ ಅವರ ತಂದೆಗೆ ಹೃದಯಾಘಾತ ಸಂಭವಿಸಿದೆ.ಆರ್ಥಿಕ ಸಂಕಷ್ಟದಿಂದ ಅವರನ್ನು ಮೊದಲಿಗೆ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮಾವನ ಆರೋಗ್ಯ ಸ್ಥಿತಿ ಗಂಭೀರವಾಗಿದೆ ಎಂಬ ಸುದ್ದಿ ತಿಳಿದ ತಕ್ಷಣ, ಅಳಿಯ ಸೌರಭ್ ಮಾವನನ್ನು ಗುರುಗ್ರಾಮದ ಉತ್ತಮ ಖಾಸಗಿ ಆಸ್ಪತ್ರೆಗೆ ಸ್ಥಳಾಂತರಿಸಲು ನೆರವಾಗುತ್ತಾರೆ. ಚಿಕಿತ್ಸೆಗಾಗಿ ಅಗತ್ಯ ವ್ಯವಸ್ಥೆ ಕಲ್ಪಿಸಿ, ಮಾವನ ಪ್ರಾಣ ಉಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ. ವಿಚ್ಛೇದನದ ಅಂಚಿನಲ್ಲಿದ್ದ ಅಳಿಯನ ಈ ನಡೆ ಪತ್ನಿಯ ತವರು ಮನೆ ಕುಟುಂಬದ ಹೃನ್ಮನಗಳನ್ನು ಗೆದ್ದಿತ್ತು. ಈ ನಡುವೆ,ಮಾವ ಚೇತರಿಸಿಕೊಂಡ ಬಳಿಕ ವಿಚ್ಛೇದನ ಪ್ರಕರಣದ ವಿಚಾರಣೆಯ ದಿನ ಬಂದಿದೆ. ಎಂದಿನಂತೆ ವಕೀಲರು ತಮ್ಮ ವಾದ ಮಂಡಿಸುತ್ತಿದ್ದರು. ಈ ಸಂದರ್ಭ ನ್ಯಾಯಾಧೀಶರು ಸೌರಭ್ ಅವರನ್ನು ನೋಡಿ, "ನಿಮಗೆ ಇನ್ನೂ ವಿಚ್ಛೇದನ ಬೇಕೇ?" ಎಂದು ಕೇಳಿದ್ದಾರೆ.ಸೌರಭ್ ಉತ್ತರಿಸುವ ಮುನ್ನ ಶಿಖಾ ಅವರತ್ತ ನೋಡುತ್ತಾ ಸಣ್ಣ ನಗು ಬೀರಿದರು.ಐದು ವರ್ಷಗಳ ಕೋಪ, ಅಹಂ, ಒಣ ಪ್ರತಿಷ್ಠೆಗಳೆಲ್ಲ ಕರಗಿ ಶಿಖಾ ಅವರು ಕೈಯಲ್ಲಿದ್ದ ವಿಚ್ಛೇದನ ಪತ್ರಗಳನ್ನು ಹರಿದುಹಾಕಿದರು. ಬಳಿಕ ಕೋರ್ಟ್‌ನಲ್ಲೇ ಪತಿಯತ್ತ ಓಡಿ ಹೋಗಿ ಅಪ್ಪಿಕೊಂಡರು. ಇಬ್ಬರೂ ಕಣ್ಣೀರಿಡುತ್ತಿದ್ದ ದೃಶ್ಯವನ್ನು ಕಂಡು ನ್ಯಾಯಾಲಯದಲ್ಲಿದ್ದವರು ಸ್ತಂಭೀಭೂತರಾದರು. ಎಲ್ಲರ ಕಣ್ಣುಗಳು ತೇವವಾಗಿದ್ದವಷ್ಟೇ ಅಲ್ಲದೆ ಎಲ್ಲರಲ್ಲೂ ಸಂತಸವರಳಿತ್ತು.

ಮೊಬೈಲ್ ಆ್ಯಪ್ ಮೂಲಕ ಜಿಪಿಎಸ್ ಆಧಾರಿತ ಹಾಜರಾತಿ ವ್ಯವಸ್ಥೆ

ಶೇ.25 ನೋಂದಣಿ ಪ್ರಗತಿ

• **ಬೆಂಗಳೂರು:** ಮೊಬೈಲ್ ಆ್ಯಪ್ ಮೂಲಕ ಜಿಪಿಎಸ್ ಆಧಾರಿತ ಹಾಜರಾತಿ ವ್ಯವಸ್ಥೆಗೆ 42 ಇಲಾಖೆಗಳ 4,78,522 ಸರ್ಕಾರಿ ನೌಕರರು ಒಳಪಟ್ಟಿದ್ದು, ಈ ಪೈಕಿ 3.01 ಲಕ್ಷಕ್ಕೂ ಹೆಚ್ಚು ನೌಕರರು ಈಗಾಗಲೇ ನೋಂದಾಯಿಸಿಕೊಂಡಿದ್ದಾರೆ. ಒಂದೇ ವಾರದಲ್ಲಿ ನೋಂದಣಿ ಪ್ರಕ್ರಿಯೆಯಲ್ಲಿ ಶೇ.25 ರಷ್ಟು ಪ್ರಗತಿ ಕಂಡುಬಂದಿದೆ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಹೇಳಿದರು.

ಕಳೆದ ವಾರ ಅಂದಾಜು 2,46,000 ರಷ್ಟಿದ್ದ ಒಟ್ಟು ನೋಂದಾಯಿತ ಉದ್ಯೋಗಿಗಳ ಸಂಖ್ಯೆ ಪ್ರಸ್ತುತ ವಾರದಲ್ಲಿ 3,01,034ಕ್ಕೆ ಏರಿಕೆಯಾಗಿದೆ. ಇದು ಕೇವಲ ಒಂದೇ ವಾರದಲ್ಲಿ ಶೇ.25 ಕ್ಕಿಂತಲೂ ಹೆಚ್ಚು (55,000ಕ್ಕೂ ಅಧಿಕ ಹೊಸ ಸೇರ್ಪಡೆ) ಬೆಳವಣಿಗೆಯಾಗಿದೆ. ಇದೇ ಅವಧಿಯಲ್ಲಿ, ಆ್ಯಪ್ ಮೂಲಕ ಪ್ರತಿದಿನ ದಾಖಲಾಗುವ ದೈನಂದಿನ ಹಾಜರಾತಿ ಸಂಖ್ಯೆಯು ಸಹ 1,85,308 ರಿಂದ 2,32,612 ಕ್ಕೆ ಜಿಗಿದಿದ್ದು, ಸಕ್ರಿಯ ಬಳಕೆಯಲ್ಲಿ ಶೇ.25 ರಷ್ಟು ಭಾರಿ ಏರಿಕೆ ದಾಖಲಾಗಿದೆ ಎಂದರು.

ಈ ಹಿಂದೆ ಜಾರಿಯಲ್ಲಿದ್ದ ಬಯೋಮೆಟ್ರಿಕ್ ವ್ಯವಸ್ಥೆಯಲ್ಲಿ ಉದ್ಯೋಗಿಗಳು ಕೇವಲ ಡಿಜಿಟಲ್ ಸಹಿ ಮಾಡಿ ಕಚೇರಿಯಿಂದ ಗೈರಾಗುವ ಸಾಧ್ಯತೆಗಳಿದ್ದವು. ಈ ದೋಷವನ್ನು ನಿವಾರಿಸಲು, ಉದ್ಯೋಗಿಗಳ ಭೌತಿಕ ಉಪಸ್ಥಿತಿ ಮತ್ತು ಕಚೇರಿಯ ಭೌಗೋಳಿಕ ಸ್ಥಳವನ್ನು ನಿಖರವಾಗಿ ಪತ್ತೆಹಚ್ಚುವ ಈ ಹೊಸ ವ್ಯವಸ್ಥೆಯನ್ನು ರೂಪಿಸಲಾಗಿದೆ. ರಾಜ್ಯ ಸರ್ಕಾರ ಜಾರಿಗೆ ತಂದಿರುವ ಕರ್ತವ್ಯ ಆ್ಯಪ್ ತಂತ್ರಜ್ಞಾನವನ್ನು ಕರ್ನಾಟಕದಲ್ಲೇ ಅಭಿವೃದ್ಧಿಪಡಿಸಲಾಗಿದೆ.

ತಂತ್ರಜ್ಞಾನದ ವೈಶಿಷ್ಟ್ಯಗಳು: ಕೃತಕ ಬುದ್ಧಿಮತ್ತೆ (ಎಐ)ಆಧಾರಿತ ಮುಖ ಗುರುತಿಸುವಿಕೆ ತಂತ್ರಾಂಶವು ವಂಚನೆಯ ಹಾಜರಾತಿ ತಡೆಯಲಿದ್ದು, ಜಿಪಿಎಸ್



ತಂತ್ರಜ್ಞಾನದ ಮೂಲಕ ಉದ್ಯೋಗಿ ತನ್ನ ಕಚೇರಿಯ ನಿಗದಿತ ವಲಯದೊಳಗೆ ಇದ್ದಾಗ ಮಾತ್ರ ಹಾಜರಾತಿ ದಾಖಲಿಸಲು ಸಾಧ್ಯವಾಗುತ್ತದೆ. ಆಂಡ್ರಾಯ್ಡ್ ಮತ್ತು ಐಒಎಸ್ ಆ್ಯಪ್ ಮೂಲಕ ಹಾಜರಾತಿ, ರಜೆ ಮತ್ತು ಅಧಿಕೃತ ಹೊರಗಿನ ಕೆಲಸದ ವಿವರಗಳನ್ನು ದಾಖಲಿಸುವ ಸೌಲಭ್ಯವಿದೆ ಎಂದರು.

ಮೊದಲ ಸ್ಥಾನದಲ್ಲಿ ಶಿಕ್ಷಣ ಇಲಾಖೆ: ಶಾಲಾ ಶಿಕ್ಷಣ ಇಲಾಖೆಯು ಒಟ್ಟು 1,76,055 ಉದ್ಯೋಗಿಗಳಲ್ಲಿ ಈಗಾಗಲೇ 1,68,252 ನೌಕರರು ನೋಂದಾಯಿಸಿಕೊಂಡಿದ್ದು, 1,41,800ಕ್ಕೂ ಹೆಚ್ಚು ದೈನಂದಿನ ಚೆಕ್-ಇನ್‌ಗಳೊಂದಿಗೆ ಮೊದಲ ಸ್ಥಾನದಲ್ಲಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು 66,969 ನೋಂದಣಿ ಹಾಗೂ 54,400ಕ್ಕೂ ಹೆಚ್ಚು ದೈನಂದಿನ ಹಾಜರಾತಿಯೊಂದಿಗೆ ಎರಡನೇ ಸ್ಥಾನದಲ್ಲಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಶಾಲಾ ಶಿಕ್ಷಣ ಇಲಾಖೆಗಳಲ್ಲಿ ಪ್ರಾಯೋಗಿಕವಾಗಿ ಯಶಸ್ವಿಯಾದ ನಂತರ, ಶಾಲಾ ಶಿಕ್ಷಣ ಇಲಾಖೆಯ ಸಿಬ್ಬಂದಿ ಇದನ್ನು ಸಕ್ರಿಯವಾಗಿ ಬಳಸುತ್ತಿದ್ದಾರೆ. ಇನ್ನುಳಿದ ಹಲವು ಇಲಾಖೆಗಳು ಈಗಾಗಲೇ ಶೇ.90 ಕ್ಕಿಂತ ಹೆಚ್ಚು ನೋಂದಣಿ ಮೈಲಿಗಲ್ಲು ದಾಟಿವೆ ಎಂದು ತಿಳಿಸಿದರು.

> ಕಚೇರಿಗಳಲ್ಲಿ ಅಧಿಕಾರಿಗಳ ಭೌತಿಕ ಲಭ್ಯತೆ ಮತ್ತು ವಿಶ್ವಾಸಾರ್ಹತೆಯನ್ನು ಖಾತರಿಪಡಿಸುವ ಮೂಲಕ ಸಾರ್ವಜನಿಕರಿಗೆ ಸಿಗುವ ಸೇವೆಗಳು ಇನ್ನು ಮುಂದೆ ಹೆಚ್ಚು ಸುಲಭ ಹಾಗೂ ತಡೆರಹಿತವಾಗಲಿವೆ. ಈ ಮೂಲಕ ಕರ್ನಾಟಕವು ಡಿಜಿಟಲ್ ಆಡಳಿತ ಮತ್ತು ನಾಗರಿಕ ಕೇಂದ್ರಿತ ಸುಧಾರಣೆಯಲ್ಲಿ ದೇಶದಲ್ಲೇ ಮುಂಚೂಣಿ ರಾಜ್ಯವಾಗಿ ಹೊರಹೊಮ್ಮಿದೆ.
>
> ■ **ಡಾ. ಶಾಲಿನಿ ರಜನೀಶ್, ಸರ್ಕಾರದ ಮುಖ್ಯಕಾರ್ಯದರ್ಶಿ**

ಮೇಡ್ ಇನ್ ಕರ್ನಾಟಕ: ಯಾವುದೇ ಬಾಹ್ಯ ಖಾಸಗಿ ತಂತ್ರಜ್ಞಾನ ಸಂಸ್ಥೆಗಳ ನೆರವಿಲ್ಲದೆ, ಸಂಪೂರ್ಣವಾಗಿ ಸರ್ಕಾರದ ಪರಿಸರ ವ್ಯವಸ್ಥೆಯಲ್ಲೇ ಕರ್ತವ್ಯ ಸಾಫ್ಟ್‌ವೇರ್ ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಲಾಗಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ) ಉಸ್ತುವಾರಿಯಲ್ಲಿ, ಸೆಂಟರ್ ಫಾರ್ ಇ-ಗವರ್ನೆನ್ಸ್ (ಸಿಇಜಿ) ಮತ್ತು ಕರ್ನಾಟಕ ಎಐ ಸೆಲ್ ಜಂಟಿಯಾಗಿ ಇದನ್ನು ಸಿದ್ಧಪಡಿಸಿವೆ. ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ಸಿಬ್ಬಂದಿ ವೆಚ್ಚ ಉಳಿತಾಯವಾಗಿದ್ದು, ದತ್ತಾಂಶ ಸುರಕ್ಷತೆ ಮತ್ತು ಸ್ವಾಯತ್ತತೆ ಹೆಚ್ಚಾಗಿದೆ. ಕರ್ನಾಟಕದ ಈ ಯಶಸ್ವಿ ಮಾದರಿಯನ್ನು ದೇಶದ ಇತರೆ ರಾಜ್ಯಗಳೂ ಅಳವಡಿಸಿಕೊಳ್ಳಬಹುದಾಗಿದೆ ಎಂದರು.

ಅಭಿವೃದ್ಧಿ ಶೂನ್ಯ ಸರ್ಕಾರ: ಬಿವೈವಿ

• **ಶಿವಮೊಗ್ಗ:** ಸಿಎಂ ಡಿ.ಕೆ.ಶಿವ ಕುಮಾರ್ ಅವರು ಭ್ರಷ್ಟಾಚಾರ ಸಹಿಸಿಕೊಳ್ಳುವುದಿಲ್ಲ ಎಂದಿದ್ದಾರೆ. ಆದರೆ ಇದು ಹಾಸ್ಯಾಸ್ಪದವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಲೇವಡಿ ಮಾಡಿದ್ದಾರೆ.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ಭ್ರಷ್ಟಾಚಾರಕ್ಕೂ ಕಾಂಗ್ರೆಸ್‌ಗೂ ಅವಿನಾಭಾವ ಸಂಬಂಧವಿದೆ. ನಾನು ಈಗಲೇ ಸಿಎಂ ಬಗ್ಗೆ ಮಾತನಾಡುವುದಿಲ್ಲ. ಆದರೆ ರಾಜ್ಯದ ಜನತೆಯ ಹೇಳಿಕೆಗಳ ಪ್ರಕಾರ ಈ ಸರ್ಕಾರ ಅಭಿವೃದ್ಧಿ ಶೂನ್ಯ ಸರ್ಕಾರವಾಗಿದೆ.



ಆಡಳಿತದಲ್ಲಿ ವೈಫಲ್ಯ ಕಂಡಿದೆ. ಡಿ.ಕೆ. ಶಿವಕುಮಾರ್ ಸಿಎಂ ಆಗಿರುವಷ್ಟು ದಿನ ವಾದರೂ ಒಳ್ಳೆಯ ಆಡಳಿತ ನೀಡಲಿ ಎಂದರು.

ಗ್ಯಾರಂಟಿ ಯೋಜನೆಯ ಲಕ್ಷಾಂತರ ಫಲಾನುಭವಿಗಳಿಗೆ ರಾಜ್ಯ ಸರ್ಕಾರ ಅನ್ಯಾಯ ಮಾಡಿದೆ. ಹೊಸದಾಗಿ ದಾಖಲೆ ನೀಡಬೇಕು ಎಂಬ ನೆಪ ಹೇಳಿ ಯೋಜನೆಯನ್ನು ರದ್ದು ಮಾಡಿದೆ. ಇದು ಚುನಾವಣಾ ಪೂರ್ವದಲ್ಲಿ ನೀಡಿದ ಭರವಸೆಗಳಿಗೆ ತದ್ವಿರುದ್ಧವಾಗಿದೆ. ಆಗ ಯಾರ್‍ಯಾರಿಗೆ ಗ್ಯಾರಂಟಿ ಕೊಡುತ್ತೇವೆಂದು ಹೇಳಿದ್ದರೋ ಅವರೆಲ್ಲರಿಗೂ ಈ ಯೋಜನೆಯ ಲಾಭ ನೀಡಲೇಬೇಕು.

> **ಶೇ.90ರಷ್ಟು ರೈತರ ವಿರೋಧ**
>
> ಬಡ ರೈತರನ್ನು ಒಕ್ಕಲೆಬ್ಬಿಸುತ್ತಿರುವುದು ಅಕ್ಷಮ್ಯ ಅಪರಾಧ. ಕನಿಷ್ಠ ಶೇ. 70 ರಷ್ಟು ರೈತರು ಯೋಜನೆಗೆ ಒಪ್ಪಿಗೆ ಸೂಚಿಸಬೇಕು. ಇಲ್ಲಿ ಶೇ.90ರಷ್ಟು ರೈತರು ವಿರೋಧಿಸುತ್ತಿದ್ದಾರೆ. ಒತ್ತಾಯಪೂರ್ವಕವಾಗಿ ಜಮೀನು ಖರೀದಿ ಮಾಡುತ್ತಿರುವುದು ಸರಿಯಲ್ಲ. ರಾಹುಲ್‌ಗಾಂಧಿ ಅವರಿಗೆ ಕೂಡ ನಾನು ಪತ್ರ ಬರೆದು ರೈತರ ಭೂಸ್ವಾಧೀನ ಪ್ರಕ್ರಿಯೆ ಕೈಬಿಡುವಂತೆ ತಾಕೀತು ಮಾಡುವ ಸರ್ಕಾರಕ್ಕೆ ಸೂಚನೆ ನೀಡುವಂತೆ ಹೇಳಿದ್ದೇನೆ ಎಂದರು.

ಕುಂಟುನೆಪ ಹೇಳಿ ಕತ್ತರಿ ಹಾಕುವ ಕೆಲಸಬೇಡ. ಆದರೆ ಬದಲು ರಾಜ್ಯದ ಆರ್ಥಿಕ ಸ್ಥಿತಿಗತಿಯ ಶ್ವೇತಪತ್ರ ಹೊರಡಿಸಿ ಎಂದು ಒತ್ತಾಯಿಸಿದರು. ಈಗಾಗಲೇ ಗ್ಯಾರಂಟಿ ಯೋಜನೆಯ ಭರವಸೆ ನೀಡಿದ ಹಿಮಾಚಲ ಪ್ರದೇಶ, ತೆಲಂಗಾಣದಲ್ಲಿ ಸರ್ಕಾರಿ ನೌಕರರಿಗೂ ಸಂಬಳ ಸಿಗುತ್ತಿಲ್ಲ. ಇಲ್ಲಿಯೂ ಅದೇ ಪರಿಸ್ಥಿತಿ ಬರಲಿದೆ. ಮತಕ್ಕಾಗಿ ಗ್ಯಾರಂಟಿಗಳನ್ನು ಘೋಷಿಸಿ ಅದಕ್ಕೆ ಕತ್ತರಿ ಹಾಕಿ ಕುಂಟುನೆಪ ಹೇಳುವುದು ಸರ್ಕಾರಕ್ಕೆ ಶೋಭೆಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆರ್‌ಟಿಇ ವಿಸ್ತರಿಸುವ ಕುರಿತ ಸುತ್ತೋಲೆ ಜಾರಿಗೆ ಹೈ ತಡೆ

• **ಬೆಂಗಳೂರು:** 2026-27ನೇ ಶೈಕ್ಷಣಿಕ ವರ್ಷದಿಂದ 9ನೇ ತರಗತಿಗೂ ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ) ಸೌಲಭ್ಯ ವಿಸ್ತರಿಸುವ ಕುರಿತು ಸಾರ್ವಜನಿಕ ಶಿಕ್ಷಣ ಇಲಾಖೆ ಹೊರಡಿಸಿದ್ದ ಸುತ್ತೋಲೆ ಜಾರಿಗೆ ಕರ್ನಾಟಕ ಹೈಕೋರ್ಟ್ ಜು.3ರವರೆಗೆ ತಡೆ ನೀಡಿದೆ. ಈ ಹಿನ್ನೆಲೆಯಲ್ಲಿ, ರಾಜ್ಯದ ಎಲ್ಲ ಕ್ಷೇತ್ರಾಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡುವಂತೆ ಕರ್ನಾಟಕ ಅಸೋಸಿಯೇಟೆಡ್ ಮ್ಯಾನೇಜ್‌ಮೆಂಟ್ಸ್ ಆಫ್ ಸ್ಕೂಲ್ಸ್ (ಕ್ಯಾಮ್ಸ್) ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಕ್ಯಾಮ್ಸ್ ಪ್ರಧಾನ ಕಾರ್ಯದರ್ಶಿ ಶಶಿಕುಮಾರ್ ಡಿ. ಈ ಸಂಬಂಧ ಪತ್ರ ಬರೆದಿದ್ದಾರೆ. ರಾಜ್ಯದ ಎಲ್ಲಾ ಉಪನಿರ್ದೇಶಕರು (ಡಿಡಿಪಿಐ), ಕ್ಷೇತ್ರ ಶಿಕ್ಷಣಾಧಿಕಾರಿಗಳು (ಬಿಇಒ) ಹಾಗೂ ಅಧೀನ ಅಧಿಕಾರಿಗಳಿಗೆ ತಕ್ಷಣವೇ ಸ್ಪಷ್ಟ ನಿರ್ದೇಶನ ನೀಡುವಂತೆ ಕ್ಯಾಮ್ಸ್ ಮನವಿ ಮಾಡಿದೆ.

ಈ ಸುತ್ತೋಲೆಯ ಆಧಾರದ ಮೇಲೆ ಯಾವುದೇ ಶಾಲೆಯನ್ನು 9ನೇ ತರಗತಿಗೆ ಆರ್‌ಟಿಇ ಅಡಿಯಲ್ಲಿ ವಿದ್ಯಾರ್ಥಿಗಳನ್ನು ಸೇರಿಸಲು ಒತ್ತಾಯಿಸಬಾರದು. ಆದೇಶ ಪಾಲಿಸದ ಶಾಲೆಗಳ ವಿರುದ್ಧ ಯಾವುದೇ ರೀತಿಯ ಬಲವಂತದ ಅಥವಾ ದಂಡಾತ್ಮಕ ಕ್ರಮ ಕೈಗೊಳ್ಳಬಾರದು. ಸುತ್ತೋಲೆಯ ಅಡಿ ಸೇರಿರುವ ವಿದ್ಯಾರ್ಥಿಗಳಿಂದ ಈಗಾಗಲೇ ಸಂಗ್ರಹಿಸಿರುವ ಶುಲ್ಕವನ್ನು ಹಿಂತಿರುಗಿಸುವಂತೆ ಶಾಲೆಗಳಿಗೆ ನಿರ್ದೇಶನ ನೀಡಬಾರದು ಎಂದು ಮನವಿ ಮಾಡಿದೆ.

ಪ್ರಸ್ತುತ 2026-27ನೇ ಸಾಲಿನ ಪ್ರವೇಶ ಪ್ರಕ್ರಿಯೆಗಳು ಪೂರ್ಣಗೊಂಡಿರುವುದರಿಂದ, ಶಾಲೆಗಳು, ಪೋಷಕರು ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳಲ್ಲಿ ಗೊಂದಲ ಉಂಟಾಗದಂತೆ ಸರ್ಕಾರ ತಕ್ಷಣವೇ ಸ್ಪಷ್ಟನೆ ನೀಡಬೇಕು ಎಂದು ಕ್ಯಾಮ್ಸ್ ಒತ್ತಾಯಿಸಿದೆ.

ಪ್ರಿಯಾಂಕ್ ಆರೆಸ್ಸೆಸ್ ಫೋಬಿಯಾದಿಂದ ಹೊರಬರಲ್ಲ: ವಿ.ಸುನೀಲ್ ಕುಮಾರ್

• **ಬೆಂಗಳೂರು:** ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ವನ್ನು ನೋಂದಣಿ ಮಾಡಿಸಿ ಎಂದು ಸರಸಂಘಚಾಲಕರಿಗೆ ಪತ್ರ ಬರೆದಿರುವ ಗೃಹಸಚಿವ ಪ್ರಿಯಾಂಕ್ ಖರ್ಗೆ ಆರ್‌ಎಸ್‌ಎಸ್ ಫೋಬಿಯಾದಿಂದ ಹೊರಬರುವುದಿಲ್ಲ ಎನ್ನುವ ಮೂಲಕ ಶಾಸಕ ವಿ.ಸುನೀಲ್‌ಕುಮಾರ್ ತಿರುಗೇಟು ನೀಡಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಅವರು ಪೋಸ್ಟ್ ಮಾಡಿದ್ದಾರೆ.



ಕೊಟ್ಟ ಕುದುರೆಯ ಏರಲರಿಯದ ವೀರ ಪ್ರಿಯಾಂಕ್ ಖರ್ಗೆ ಅವರೇ, ನಿಮ್ಮನ್ನು ಆವರಿಸಿದ ಆರ್‌ಎಸ್‌ಎಸ್ ಫೋಬಿಯಾ ಬಿಡುಗಡೆಯಾಗುವ ಯಾವುದೇ ಲಕ್ಷಣಗಳು ಕಾಣುತ್ತಿಲ್ಲ. ಪರಿಸ್ಥಿತಿ ಬದಲಾದಾಗ ಮನಃಸ್ಥಿತಿ ಬದಲಾಗುತ್ತದೆ ಎಂದು ನಾವೆಲ್ಲ ಭಾವಿಸಿದ್ದೆವು. ಆದರೆ, ನಿಮ್ಮ ವಿಚಾರದಲ್ಲಿ ಆ ನಿರೀಕ್ಷೆ ಹುಸಿಯಾಗಿದೆ ಎಂದು ಟೀಕಿಸಿದ್ದಾರೆ. ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಾಗಿ ಮೂರು ವರ್ಷಗಳ ಕಾಲ ನಿಮ್ಮಿಂದ ಏನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಮೂರು ವರ್ಷದಲ್ಲಿ ಎಷ್ಟು ಕಿ.ಮೀ. ಗ್ರಾಮೀಣ ರಸ್ತೆ ನಿರ್ಮಾಣ ಮಾಡಿದಿರಿ ಎಂಬ ಪ್ರಶ್ನೆ ರಾಜ್ಯದ ಜನರಿಗೆ ಇನ್ನೂ ನಿಗೂಢವಾಗಿಯೇ ಉಳಿದಿದೆ.

ಗ್ಯಾರಂಟಿ ಯೋಜನೆಗಳಿಗೆ ಪರಿಶಿಷ್ಟ ಜಾತಿ ಹಾಗೂ ಪಂಗಡದ ವಿಶೇಷ ಉಪಯೋಜನೆ ಎಸ್‌ಸಿಎಸ್‌ಪಿ - ಟಿಎಸ್‌ಪಿ ಹಣವನ್ನು ರಾಜ್ಯ ಸರ್ಕಾರ ದುರ್ಬಳಕೆ ಮಾಡಿಕೊಂಡಾಗ ಉಸಿರೆತ್ತದ ನೀವು ನಿಮ್ಮ ವೈಫಲ್ಯವನ್ನು ಮುಚ್ಚಿಕೊಳ್ಳುವುದಕ್ಕೆ ಆರ್‌ಎಸ್‌ಎಸ್ ವಿರುದ್ಧ ನಾಲಗೆ ಹರಿಬಿಡುತ್ತಲೇ ಬಂದಿರಿ ಎಂದು ಕುಟುಕಿದ್ದಾರೆ.

ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿರುವ ಪೊಲೀಸ್ ಇಲಾಖೆಯನ್ನು ತಹಬದಿಗೆ ತರುವ ಆದ್ಯ ಕರ್ತವ್ಯ ನಿಮ್ಮ ಮೇಲಿದೆ. ಅನ್ಯರಾಜ್ಯಗಳಲ್ಲಿ ಕರ್ನಾಟಕ ಪೊಲೀಸ್ ಮಾನ ಹರಾಜಾಗುತ್ತಿದೆ. ಕಾನೂನು ಸುವ್ಯವಸ್ಥೆ ಕುಸಿದು ಬಿದ್ದು ಖಾಕಿ ಕರ್ತವ್ಯ ಮರೆತಿದೆ. ಇದೆಲ್ಲದರ ಬಗ್ಗೆ ಉತ್ತರಿಸಬೇಕಾದ ನೀವು ಆರ್‌ಎಸ್‌ಎಸ್ ಬಗ್ಗೆ ಕಂಠ ಶೋಷಣೆ ಮಾಡಿಕೊಳ್ಳುವ ಪ್ರಯತ್ನವನ್ನು ಇನ್ನಾದರೂ ನಿಲ್ಲಿಸಿ ಎಂದು ಸುನೀಲ್ ಕುಮಾರ್ ಸಲಹೆ ನೀಡಿದ್ದಾರೆ.

ಬೆಂಕಿ ಅವಘಡ: ಇಬ್ಬರ ಸಾವು, ಹಲವರು ಗಂಭೀರ

• **ಮೈಸೂರು:** ಮೈಸೂರಿನ ದಟ್ಟಗಳ್ಳಿ ಸಮೀಪದ ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲಿ ನಡೆದ ಬೆಂಕಿ ಅವಘಡ ಸಂಭವಿಸಿ, ಇಬ್ಬರು ಮೃತಪಟ್ಟಿದ್ದು ಹಲವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ.

ರೆಸ್ಟೋರೆಂಟ್ ನೌಕರರು ಎಂದು ಹೇಳಲಾಗುತ್ತಿರುವ ಪ್ರಕಾಶ್ ಹಾಗೂ ಸುಹೆಲ್ ಎಂಬವರು ಮೃತಪಟ್ಟಿದ್ದು, ಸುಮಾರು 7 ಮಂದಿಗೆ ಸುಟ್ಟ ಗಾಯಗಳಾಗಿದ್ದು, ಗಾಯಾಳುಗಳನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಲಾಗಿದೆ.ಕಟ್ಟಡದ ಮೇಲಂತಸ್ತು ಮರ ಮತ್ತು ಹುಲ್ಲಿನಿಂದ ಅಲಂಕರಿಸಲಾಗಿತ್ತು.ಹಾಗಾಗಿ ಬೆಂಕಿ ಬೇಗ ಆವರಿಸಿದೆ,ಮೇಲಿಂದ ಕೆಳಗೆ ಬರಲು ಚಿಕ್ಕ ಸ್ಟೆಪ್ ಮಾತ್ರ ಇದೆ. ಜತೆಗೆ ಹೊರಗೆ ಬರಲು ಕೂಡಾ ಒಂದೇ ಬಾಗಿಲು ಇದ್ದುದರಿಂದ ಬಹಳ ಮಂದಿ ಬೆಂಕಿಯಿಂದ

ಸ್ಫೋಟದ ಬಳಿಕ ಕಟ್ಟಡದಲ್ಲಿ ದಟ್ಟ ಹೊಗೆ ಆವರಿಸಿದ್ದರಿಂದ ರೆಸ್ಟೋರೆಂಟ್‌ನಲ್ಲಿದ್ದವರು ಆತಂಕಗೊಂಡು ಮೇಲಂತಸ್ತಿನಿಂದ ಜಿಗಿದು ಪಾರಾಗಲು ಯತ್ನಿಸಿದ್ದಾರೆ. ಇದರಿಂದಾಗಿ ಗಾಯಗೊಂಡಿದ್ದಾರೆ. ಸ್ಫೋಟದ ತೀವ್ರತೆಗೆ ಇಡೀ ಆವರಣ ಸುಟ್ಟು ಕರಕಲಾಗಿದೆ. ಈ ಘಟನೆಯಿಂದಾಗಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ವಿಷಯ ತಿಳಿದು ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಹರ ಸಾಹಸ ನಡೆಸಿ ಬೆಂಕಿಯನ್ನು ನಂದಿಸಿದರು. ಘಟನೆಗೆ ಸಿಲಿಂಡರ್ ಸ್ಫೋಟವಾಗಿದ್ದೆ ಕಾರಣ ಎಂದು ಹೇಳಲಾಗುತ್ತಿದೆ. ಆದರೆ ಘಟನೆ ನೋಡಿದವರು ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಇದು ಆಗಿದೆ ಎಂದು ಹೇಳುತ್ತಿದ್ದಾರೆ.

ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಅವಘಡಕ್ಕೆ ಕಾರಣ ಏನು ಎಂಬ ಬಗ್ಗೆ ತನಿಖೆ ಕೈಗೊಂಡಿದ್ದಾರೆ.

ಕೃತಕ ಬುದ್ಧಿಮತ್ತೆ, ಯಂತ್ರ ಕಲಿಕೆ ಶಿಕ್ಷಣಕ್ಕೆ ಮಹತ್ವದ ಹೆಜ್ಜೆ ಇಟ್ಟ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ

ಕೃಷಿ ಕ್ಷೇತ್ರದ ಪದವಿ ವಿದ್ಯಾರ್ಥಿಗಳಿಗೆ ಎಐ ಕೋರ್ಸ್ ಆರಂಭ

▶ **ದೇವಿತಾ ಸಿ.ಸುಬ್ಬಯ್ಯ**

• **ಬೆಂಗಳೂರು:** ಕೃಷಿ ಕ್ಷೇತ್ರದಲ್ಲಿ ತಂತ್ರಜ್ಞಾನದ ಬಳಕೆ ದಿನದಿಂದ ದಿನಕ್ಕೆ ವಿಸ್ತರಿಸುತ್ತಿರುವ ಸಂದರ್ಭದಲ್ಲಿ, ಕೃಷಿ ವಿಶ್ವವಿದ್ಯಾಲಯದಲ್ಲಿ ಕೃತಕ ಬುದ್ಧಿಮತ್ತೆ (AI) ಮತ್ತು ಯಂತ್ರ ಕಲಿಕೆ (Machine Learning) ಶಿಕ್ಷಣಕ್ಕೆ ಹೊಸ ದಿಕ್ಕು ನೀಡುವ ಮಹತ್ವದ ಹೆಜ್ಜೆಯಿಟ್ಟಿದೆ. ಬೆಂಗಳೂರು ಕೃಷಿ ವಿವಿಯು ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಕೃಷಿ ಬಿಎಸ್‌ಸಿ ಪದವಿ ಮತ್ತು ನಾನಾ ವಿಭಾಗಗಳಲ್ಲಿ ಸ್ನಾತಕೋತ್ತರ ಪದವಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ (ಎಐ) ನಾನ್ ಗ್ರೇಡಿಯಲ್ ಕಂಪಲ್ಸರಿ ಕೋರ್ಸ್ ಆರಂಭಿಸಿದೆ.

ಕೃಷಿ ವಿವಿಯಲ್ಲಿ ಮೊದಲ ಬಾರಿಗೆ ಪ್ರಾರಂಭಿಸುತ್ತಿರುವ ಆರ್ಟಿಫಿಷಿಯಲ್ ಇಂಟೆಲಿಜೆನ್ಸಿ ಮಷಿನ್ ಲರ್ನಿಂಗ್ ಮತ್ತು ಬಿಗ್ ಡೇಟಾ ಅನಾಲಿಸಿಸ್ ಅನ್ನು ಒಂದು ಭಾಗವಾಗಿ ತೆಗೆದುಕೊಂಡು, ಆರು ತಿಂಗಳ ಕಾಲ ಅಧ್ಯಯನ ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು ಪ್ರತ್ಯೇಕ ಆರ್ಟಿಫಿಷಿಯಲ್ ಇಂಟೆಲಿಜೆನ್ಸಿ, ಮಷಿನ್ ವಿಭಾಗ ಪ್ರಾರಂಭಿಸಿದ್ದು, ನುರಿತ ಪ್ರಾಧ್ಯಾಪಕರನ್ನು ನಿಯೋಜಿಸುತ್ತಿದೆ. ಜತೆಗೆ,



ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜುಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ವರ್ಚುಯಲ್ ತರಗತಿಗಳನ್ನು ನಡೆಸಲು ಈ ಕಾಲೇಜುಗಳ ಪ್ರಾಧ್ಯಾಪಕರನ್ನು ಬಳಸಿಕೊಳ್ಳಲಾಗುತ್ತದೆ. ವಾರಾಂತ್ಯದಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ, ಚರ್ಚಾ ಕಾರ್ಯಕ್ರಮಗಳಿಗಾಗಿ ಭೌತಿಕ ತರಗತಿ ನಡೆಸಲಾಗುವುದು. ಈ ಕೋರ್ಸ್‌ಗೆ ಅಂಕಗಳು ಇರುವುದಿಲ್ಲ. ಆದರೆ ಇದಕ್ಕೆ ಗ್ರೇಡಿಂಗ್ ಇರಲಿದ್ದು, ಕಡ್ಡಾಯವಾಗಿ ಕಲಿಯಬೇಕಾಗಿರುತ್ತೆ.

> **ಏಕವಿಕೆಯಲ್ಲಿ ಕೈಗೊಂಡಿರುವ ಈ ಉಪಕ್ರಮಗಳು ಕೇವಲ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸೀಮಿತವಾಗದೇ, ಭವಿಷ್ಯದ ಸ್ಮಾರ್ಟ್ ಕೃಷಿ ವ್ಯವಸ್ಥೆಗೆ ಬಲವಾದ ಅಡಿಪಾಯ ಹಾಕುವ ಪ್ರಯತ್ನವಾಗಿ ಪರಿಣಮಿಸಿವೆ. ಕೃಷಿ ಮತ್ತು ತಂತ್ರಜ್ಞಾನ ಒಂದಾಗುವ ಹೊಸ ಯುಗಕ್ಕೆ ಇದು ನಾಂದಿಯಾಗುವ ಸಾಧ್ಯತೆಗಳಿವೆ.**
>
> ■ **ಡಾ.ಮಂಜುನಾಥ್, ಸಹಾಯಕ ಪ್ರಾಧ್ಯಾಪಕ**

ವಿದ್ಯಾರ್ಥಿಗಳಿಗೆ ಎಐ ಪಾಠ: ಪ್ರಸ್ತುತ ವಿಶ್ವವಿದ್ಯಾಲಯವು ಅಂತಿಮ ವರ್ಷದ ಬಿಎಸ್‌ಸಿ (ಕೃಷಿ) ಹಾಗೂ ಕೃಷಿ ವ್ಯವಹಾರ ನಿರ್ವಹಣೆ (ಅಆಖ) ವಿದ್ಯಾರ್ಥಿಗಳಿಗಾಗಿ EAI& 421: ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆಯ ಅನ್ವಯಿಕೆಗಳು ಎಂಬ ವಿಶೇಷ ಕೋರ್ಸ್‌ಯಶಸ್ವಿಯಾಗಿ ನಡೆಸಿದೆ. ಈ ಕೋರ್ಸ್‌ಗಳನ್ನು ರೇವಾ ವಿಶ್ವವಿದ್ಯಾಲಯದ ತಜ್ಞ ಅಧ್ಯಾಪಕರ ಸಹಯೋಗದಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸಲಾಗಿದೆ.

> **ಅತ್ಯಾಧುನಿಕ ಎಐ ಪ್ರಯೋಗಾಲಯ**
>
> ಕೃಷಿ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ತಂತ್ರಜ್ಞಾನ ಅಭಿವೃದ್ಧಿಗೆ ಉತ್ತೇಜನ ನೀಡುವ ಉದ್ದೇಶದಿಂದ ಜಿಕೆವಿಕೆ ವಿಶೇಷ ಎಐ ಪ್ರಯೋಗಾಲಯ ಸ್ಥಾಪಿಸಲಾಗಿದ್ದು, ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಇಖ್ಖ) ನಿಧಿ ಹಾಗೂ ವಿಶ್ವವಿದ್ಯಾಲಯದ ಅಭಿವೃದ್ಧಿ ಅನುದಾನಗಳ ನೆರವಿನಿಂದ ಈ ಯೋಜನೆ ರೂಪುಗೊಂಡಿದೆ. ಈ ಪ್ರಯೋಗಾಲಯದಲ್ಲಿ ವಿದ್ಯಾರ್ಥಿಗಳು ಕೃತಕ ಬುದ್ಧಿಮತ್ತೆ, ಡೇಟಾ ವಿಶ್ಲೇಷಣೆ, ಕೃಷಿ ಮುನ್ಸೂಚನಾ ಮಾದರಿಗಳು, ಸ್ಮಾರ್ಟ್ ಕೃಷಿ ತಂತ್ರಜ್ಞಾನ ಮತ್ತು ಸ್ವಯಂಚಾಲಿತ ವ್ಯವಸ್ಥೆಗಳ ಕುರಿತು ಪ್ರಾಯೋಗಿಕ ತರಬೇತಿ ಪಡೆಯಬಹುದಾಗಿದೆ.

> **ವಿಶೇಷ ಎಐ ಇಂಜಿನಿಯರಿಂಗ್ ಪದವಿ**
>
> **ವಿಶ್ವವಿದ್ಯಾಲಯವು ಮುಂದಿನ 2027-28ನೇ ಶೈಕ್ಷಣಿಕ ವರ್ಷದಿಂದ ಬಿ.ಟೆಕ್ (ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ) ಎಂಬ ಪದವಿ ಕೋರ್ಸ್ ಆರಂಭಿಸಲು ಯೋಜನೆ ರೂಪಿಸಿದೆ. ಅದೇ ರೀತಿ ಡಿಸೆಂಬರ್ ಮಾಹೆಯೊಳಗೆ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ CMC- 511: ಕೃಷಿಯಲ್ಲಿ ಕೃತಕ ಬುದ್ಧಿಮತ್ತೆಯ ಅನ್ವಯಿಕೆಗಳು ಎಂಬ ಕೋರ್ಸ್ ಪರಿಚಯಿಸಲಾಗುತ್ತಿದ್ದು, ಕೃಷಿ ಅಂಕಿ ಅಂಶ ಶಾಸ್ತ್ರ, ಅನ್ವಯಿಕ ಗಣಿತ ಮತ್ತು ಕಂಪ್ಯೂಟರ್ ವಿಜ್ಞಾನ ವಿಭಾಗಗಳ ಅಧ್ಯಾಪಕರು ಈ ಪಠ್ಯಕ್ರಮವನ್ನು ಬೋಧಿಸಲಿದ್ದಾರೆ.**

ಗ್ಯಾರಂಟಿಗಳ ಹೆಸರಿನಲ್ಲಿ ಜನರಿಗೆ ಮೋಸ: ಸಂಸದ

• **ಶಿವಮೊಗ್ಗ:** ಕಾಂಗ್ರೆಸ್ ಸರ್ಕಾರ ಮೂರು ವರ್ಷಗಳಲ್ಲೇ ದಿವಾಳಿಯಾಗಿದೆ. ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಜನರಿಗೆ ಮೋಸ ಮಾಡುತ್ತಿದೆ ಎಂದು ಸಂಸದ ಗೋವಿಂದ ಕಾರಜೋಳ ಆರೋಪಿಸಿದರು.

ನಗರದಲ್ಲಿ ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿ, ವಿಧಾನಸಭಾ ಚುನಾವಣೆ ವೇಳೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ



ಇಬ್ಬರೂ ಮಹಿಳೆಯರು ಮತ್ತು ಯುವಕರಿಗೆ ಆರ್ಥಿಕ ನೆರವು, ಉಚಿತ ಬಸ್ ಪ್ರಯಾಣ, ಉಚಿತ ವಿದ್ಯುತ್ ಹಾಗೂ 10 ಕೆ.ಜಿ ಅಕ್ಕಿ ನೀಡುವುದಾಗಿ ಭರವಸೆ ನೀಡಿ ಅಧಿಕಾರಕ್ಕೆ ಬಂದರು. ಇದೀಗ ಬಡವರು, ದಲಿತರು ಹಾಗೂ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ದೂರಿದರು.

ದಲಿತ ಸಮುದಾಯದ ಅಭಿವೃದ್ಧಿ, ಶಿಕ್ಷಣ, ಉದ್ಯೋಗ, ಮನೆ ನಿರ್ಮಾಣ ಹಾಗೂ ಭೂಮಿಗಾಗಿ ಬಳಸಬೇಕಾದ ಹಣವನ್ನು ಸರ್ಕಾರ ಬೇರೆ ಉದ್ದೇಶಗಳಿಗೆ ದುರುಪಯೋಗ ಪಡಿಸಿಕೊಂಡಿದೆ. ಇದರಿಂದ ದಲಿತರಿಗೆ ದೊಡ್ಡ ಮಟ್ಟದ ಅನ್ಯಾಯವಾಗಿದೆ ಎಂದು ಆರೋಪಿಸಿದರು. ರಾಜ್ಯದಲ್ಲಿ ರೈತರ ಆತ್ಮಹತ್ಯೆ ಹೆಚ್ಚಾಗುತ್ತಿದ್ದರೂ ಸರ್ಕಾರ ಯಾವುದೇ ಕಾಳಜಿ ತೋರಿಸುತ್ತಿಲ್ಲ. ಈಗ ಗೃಹಲಕ್ಷ್ಮಿ ಯೋಜನೆಗೂ ಕುತ್ತು ತರುವ ಕೆಲಸ ನಡೆಯುತ್ತಿದೆ. ಜನರು ಸರ್ಕಾರದ ನಿಜ ಸ್ವರೂಪವನ್ನು ಅರಿತು ಎಚ್ಚೆತ್ತುಕೊಳ್ಳಬೇಕು ಎಂದರು. ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸುವ ಪ್ರಯತ್ನ ಖಂಡನೀಯ. ಆದ್ದರಿಂದ ವಿದ್ಯುತ್ ನಿರ್ವಹಣೆಯನ್ನು ಖಾಸಗಿ ಕಂಪನಿಗಳಿಗೆ ನೀಡಬಾರದು ಎಂದು ಒತ್ತಾಯಿಸಿದರು.

ಸಂಪಾದಕೀಯ

ಶಾಶ್ವತ ಶಾಂತಿ ನೆಲೆಸಲಿ...

ಅಮೆರಿಕ ಮತ್ತು ಇರಾನ್‌ಗಳು ಯುದ್ಧ ನಿಲ್ಲಿಸುವ ಒಪ್ಪಂದಕ್ಕೆ ಬಂದಿರುವುದು ಹಾಗೂ ಹೊರ್ಮುಜ್ ಜಲಸಂಧಿಯನ್ನು ನಿರ್ಬಂಧಮುಕ್ತ ಮಾಡಲು ನಿರ್ಧರಿಸಿರುವುದು ಜಾಗತಿಕವಾಗಿ ನಿರಾಳತೆ ತರುವ ಬೆಳವಣಿಗೆ. ಉಭಯದೇಶಗಳ ಮಧ್ಯೆ ಹಲವಾರು ವಿಷಯಗಳಿಗೆ ಸಂಬಂಧಿಸಿ ಒಪ್ಪಂದಕ್ಕೆ ಬರಲಾಗಿದ್ದು, ಅಂತಿಮ ಶಾಂತಿ ಒಪ್ಪಂದಕ್ಕೆ ಜೂನ್ 19ರಂದು ಸಹಿ ಹಾಕಲಾಗುವುದು ಎಂದು ಹೇಳಲಾಗಿದೆ. ಇರಾನಿನ ಪರಮಾಣು ಕಾರ್ಯಕ್ರಮ ಹಾಗೂ ಇನ್ನಿತರ ಕೆಲವು ಗಂಭೀರ



ವಿಷಯಗಳಿಗೆ ಸಂಬಂಧಿಸಿ 60 ದಿನಗಳೊಳಗೆ ಸಹಮತದ ಒಪ್ಪಂದ ರೂಪಿಸುವ ಕುರಿತಂತೆಯೂ ಪ್ರಸ್ತಾಪಿಸಲಾಗಿದೆ. ಮೊನ್ನೆ ಮೊನ್ನೆ ತನಕ ಶಾಂತಿ ಒಪ್ಪಂದದ ಕುರಿತಂತೆ ಹಲವಾರು ಬಗೆಯ ಗೊಂದಲದ ವರದಿಗಳು ಬರುತ್ತಿದ್ದ ಮಧ್ಯೆ ಇದೀಗ ಅಮೆರಿಕ ಮತ್ತು ಇರಾನ್‌ಗಳೆರಡೂ 'ಒಪ್ಪಂದ ರೂಪಿಸಲ್ಪಟ್ಟಿದೆ' ಎಂದು ಹೇಳಿಕೊಂಡಿರುವುದು ಸಮಾಧಾನ ತರುವ ವಿಚಾರ. ಜಗತ್ತು ತೈಲ ಬಿಕ್ಕಟ್ಟಿನಿಂದ ಪಾರಾಗುವ ಆಶಾವಾದವನ್ನು ಇದು ಹುಟ್ಟಿಸಿದೆ.

ಆದರೆ ಕಳೆದ ಮೂರು ತಿಂಗಳಲ್ಲಿ ಕೊಲ್ಲಿ ಸಮರವು ಸಾಗಿ ಬಂದ ರೀತಿಯನ್ನು ಮತ್ತು ಶಾಂತಿ ಒಪ್ಪಂದ ರೂಪುಗೊಳ್ಳುವಲ್ಲಿ ಕಂಡುಬಂದ ವಿಳಂಬಗಳನ್ನು ಕಂಡವರಿಗೆ ಈಗಿನ ಒಪ್ಪಂದ ಶಾಶ್ವತವಾಗಿ ಉಳಿಯಬಲ್ಲುದೇ ಎಂಬ ಅನುಮಾನ ಮೂಡಿದ್ದರೆ ಅದು ಸಹಜವೇ ಆಗಿದೆ.

ಕ್ಷಣಕ್ಕೊಂದು ಹೇಳಿಕೆ ನೀಡುವ ಟ್ರಂಪ್‌ರ ವರ್ತನೆ ಗಮನಿಸಿದವರಿಗೆ ಮತ್ತೊಮ್ಮೆ ಯುದ್ಧ ಸಾರುವ ಹೇಳಿಕೆಯು ಟ್ರಂಪ್‌ರಿಂದ ಯಾವಾಗ ಹೊರಬಿದ್ದೀತು ಎಂಬ ಆತಂಕ ಇದ್ದೇ ಇರುತ್ತದೆ. ಅದೂ ಸಾಲದೆಂಬಂತೆ ಲೆಬನಾನ್‌ಗೆ ಸಂಬಂಧಿಸಿ ಈ ಶಾಂತಿ ಒಪ್ಪಂದವನ್ನು ವಿಸ್ತರಿಸಲು ಒಪ್ಪದ ಇಸ್ರೇಲ್, ಕೊಲ್ಲಿಯಲ್ಲಿ ದಾಳಿ ಮುಂದುವರಿಸುವ ಸಾಧ್ಯತೆಗಳು ಇನ್ನೂ ಇವೆ. ತಾನು ಈ ಒಪ್ಪಂದದ ಪಾಲುದಾರನಲ್ಲ ಎಂಬುದಾಗಿ ಇಸ್ರೇಲ್ ಈಗಾಗಲೇ ಘೋಷಿಸಿದೆ.

ಇದೇವೇಳೆ, ಇರಾನಿನ ಪರಮಾಣು ಕಾರ್ಯಕ್ರಮ ಮತ್ತು ಅದರ ಬಳಿಯಿರುವ ಸಂಸ್ಕರಿತ ಯುರೇನಿಯಂ ಕುರಿತಾದ ಬಿಕ್ಕಟ್ಟು ಯಾವ ಕ್ಷಣದಲ್ಲಿಯೂ ಶಾಂತಿ ಒಪ್ಪಂದವನ್ನು ಮುರಿದು ಬೀಳಿಸುವ ಸಂಭವನೀಯತೆ ಹೊಂದಿವೆ. ಇರಾನಿನ ಸಂಸ್ಕರಿತ ಯುರೇನಿಯಂ ಕುರಿತಂತೆ 60 ದಿನಗಳೊಳಗೆ ಅಂತಿಮ ಒಪ್ಪಂದ ರೂಪಿಸುವ ನಿರ್ಧಾರಕ್ಕೆ ಬರಲಾಗಿದ್ದರೂ, ಈ ಸಂಕೀರ್ಣ ವಿಷಯವು ಯಾವ ಬಗೆಯ ತಿರುವು ಪಡೆಯಬಹುದೆಂದು ಹೇಳಲಾಗದು.

ಸದ್ಯಕ್ಕಂತೂ ಅಮೆರಿಕ ಮತ್ತು ಇರಾನ್‌ಗಳು ಯುದ್ಧ ನಿಲ್ಲಿಸುವ ಒಪ್ಪಂದಕ್ಕೆ ಬಂದಿರುವುದು ಗುಣಾತ್ಮಕ ಬೆಳವಣಿಗೆ. ಇದರಿಂದ ಜಗತ್ತು ಎದುರಿಸುತ್ತಿರುವ ಕೆಲವಾರು ಬಿಕ್ಕಟ್ಟುಗಳು ಪರಿಹಾರ ಕಾಣಬಹುದು. ಈ ಒಪ್ಪಂದವು ಶಾಶ್ವತ ಶಾಂತಿಗೂ ದಾರಿ ಕಲ್ಪಿಸುವುದೆಂದು ಆಶಿಸಬೇಕಾಗಿದೆ.

ಕಂಪನಿ ದೊಡ್ಡದಾಗಲಿಕ್ಕೆ, ದೊಡ್ಡ ಸದ್ದು ಮಾಡಲೇಬೇಕಿಲ್ಲ

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com



ಸ್ಪೇಸ್ ಎಕ್ಸ್ ಷೇರು ಮಾರುಕಟ್ಟೆಗೆ ಬಂದಿದ್ದು ಕಳೆದ ವಾರದ ಮಹತ್ವದ ಸುದ್ದಿಗಳಲ್ಲೊಂದು. ಈ ಐಪಿಒ ಮೂಲಕ ಸ್ಪೇಸ್-ಎಕ್ಸ್ ಎರಡು ಟ್ರಿಲಿಯನ್ ಡಾಲರ್ ಮೌಲ್ಯದ ಕಂಪನಿಯಾಗಿದ್ದು ಮಾತ್ರವಲ್ಲದೇ, ತನ್ನ ಸ್ಥಾಪಕ ಎಲಾನ್ ಮಸ್ಕ್‌ರನ್ನು ಕೂಡಾ ಜಗತ್ತಿನ ಮೊದಲ ಟ್ರಿಲಿಯನೇರ್ ಆಗಿಸಿತು. ಐಪಿಒ ಬರುವ ಮೊದಲೂ ಸ್ಪೇಸ್ ಎಕ್ಸ್ ಜಗತ್ತಿನ ದೊಡ್ಡಕಂಪನಿಗಳಲ್ಲೊಂದು ಆಗಿತ್ತು. ಬಾಹ್ಯಾಕಾಶ ಪರಿಶೋಧನೆಯಲ್ಲಂತೂ ಸ್ಪೇಸ್ ಎಕ್ಸ್ ಮುಂಚೂಣಿಯ ಕಂಪನಿಯೇ ಆಗಿದೆ.

ಪ್ರಬಲ ಕಂಪನಿಗಳ ಬಗ್ಗೆ ಹೇಳಿ ಎಂದಾಗ ಹೆಚ್ಚಿನ ಜನರಿಗೆ ಆಪಲ್, ಗೂಗಲ್, ಮೈಕ್ರೋಸಾಫ್ಟ್, ಅಮೆಜಾನ್, ಅಥವಾ ಸ್ಪೇಸ್-ಎಕ್ಸ್‌ನಂತಹ ಹೆಸರುಗಳು ಸಾಮಾನ್ಯವಾಗಿ ನೆನಪಿಗೆ ಬರುತ್ತವೆ. ಆದರೆ ಭೂಮಿಯ ಮೇಲಿನ ಎಷ್ಟೋ ವ್ಯವಹಾರಗಳು ತೆರೆಮರೆಯಲ್ಲಿ ಸದ್ದಿಲ್ಲದೆ ಕಾರ್ಯನಿರ್ವಹಿಸುತ್ತವೆ. ಬಿಲಿಯನ್ನುಗಟ್ಟಲೇ ವ್ಯವಹಾರ ನಡೆಸುವ ಈ ಕಂಪನಿಗಳ ಹೆಸರನ್ನಾಗಲೀ, ಅವುಗಳ ಬಗೆಗಿನ ಹೆಚ್ಚಿನ ಮಾಹಿತಿಯನ್ನಾಗಲೀ ಹೆಚ್ಚಿನ ಗ್ರಾಹಕರು ಎಂದಿಗೂ ಕೇಳಿರುವುದೇ ಇಲ್ಲ ಎಂದರೆ ನಂಬುತ್ತೀರಾ? ಈ ಕಂಪನಿಗಳು ತಮ್ಮ ವ್ಯವಹಾರವನ್ನು ಮಾತ್ರವಲ್ಲ, ತಾವು ವ್ಯವಹರಿಸುವ ಆ ಇಡೀ ಉದ್ಯಮವನ್ನೇ ಅಡಿಯಿಂದ ಬುಡದವರೆಗೆ ಸಂಪೂರ್ಣವಾಗಿ ನಿಯಂತ್ರಿಸುತ್ತವೆ. ಆ ಇಡೀ ಕ್ಷೇತ್ರದಲ್ಲಿ ಇವು ಒಂದೋ ಇವರದ್ದೇ ಏಕಸ್ವಾಮ್ಯವಿರುತ್ತದೆ, ಅಥವಾ ತೊಂಬತ್ತಕ್ಕೂ ಹೆಚ್ಚು ಶೇಕಡಾ ಹಿಡಿತವಿರುತ್ತದೆ. ಈ ಉದ್ಯಮದಲ್ಲಿ ಎರಡನೇ ಕಂಪನಿ ಇದ್ದರೂ ಇಲ್ಲದಿರುವಂತಹ ಪರಿಸ್ಥಿತಿ.

ಉದಾಹರಣೆಗೆ, ನಿಮ್ಮ ಪ್ಯಾಂಟುಗಳಲ್ಲಿರುವ ಜಿಪ್ಪರ್ ಇದೆಯಲ್ಲಾ, ಜಗತ್ತಿನ ಅಷ್ಟೂ ಪ್ಯಾಂಟುಗಳಲ್ಲಿರುವ ಜಿಪ್ಪರ್‌ಗಳಲ್ಲಿ ಅರವತ್ತೈದಕ್ಕೂ ಹೆಚ್ಚು ಶೇಕಡಾ ಜಿಪ್ಪುಗಳು ಒಂದೇ ಕಂಪನಿಯಿಂದ ಬರುತ್ತವೆ ಎಂದರೆ ನಂಬುತ್ತೀರಾ? ಪ್ಯಾಂಟಿನದ್ದು ಮಾತ್ರವಲ್ಲ, ನಿಮ್ಮ ಹೆಗಲ ಬ್ಯಾಗ್ ಇರಬಹುದು, ಲ್ಯಾಪ್-ಟಾಪ್ ಬ್ಯಾಗಿರಬಹುದು, ಮಗಳ ಸ್ಕೂಲ್ ಬ್ಯಾಗ್, ಹೆಂಡತಿಯ ಡಿಸೈನರ್ ಬ್ಯಾಗಿರಬಹುದು, ಎಲ್ಲರ ಜಿಪ್‌ಗಳದ್ದೂ ಪೂರೈಕೆ YKK ಎಂಬ ಒಂದೇ ಜಪಾನೀ ಕಂಪನಿಯ ಹಿಡಿತದಲ್ಲಿದೆ. ಜಗತ್ತಿನ ಅತ್ಯಾಧುನಿಕ ಕಂಪ್ಯೂಟರ್ ಚಿಪ್ ತಯಾರಿಕಾ ಕಂಪನಿಗಳು ಒಂದೇ ಒಂದು ಪೂರೈಕೆದಾರ ಕಂಪನಿಯನ್ನು ಅವಲಂಬಿಸಿವೆ. ಜಗತ್ತಿನ ಎಲ್ಲಾ ತಂಪುಕನ್ನಡಕಗಳು ಎರಡು ಅಥವಾ ಮೂರು ಸಂಸ್ಥೆಗಳಿಂದಲೇ ಬರುತ್ತವೆ. ಈ ಕಂಪನಿಗಳು ಯಾವಾಗಲೂ ಗೂಗಲ್, ಸ್ಯಾಮ್ಸಂಗ್, ಸೋನಿಯಷ್ಟು ಮನೆಮಾತಾಗಿಲ್ಲ. ಆದರೂ ಅವು ನಾವು ಏನನ್ನು ಧರಿಸುತ್ತೇವೆ, ನಾವು ಏನನ್ನು ಕುಡಿಯುತ್ತೇವೆ, ನಮ್ಮ ಮನರಂಜನೆ ಹೇಗಿರಬೇಕು ಮತ್ತು ಆಧುನಿಕ ನಾಗರಿಕತೆಗೆ ಶಕ್ತಿ ತುಂಬುವ ತಂತ್ರಜ್ಞಾನದ ಹೇಗಿರಬೇಕು ಎಂಬುದರ ಮೇಲೂ ಪ್ರಭಾವ ಬೀರುತ್ತವೆ.

ಇಂತಹ ಕಂಪನಿಗಳ ಅತ್ಯಂತ ಗಮನಾರ್ಹ ಉದಾಹರಣೆಗಳಲ್ಲೊಂದು ಡಚ್ ತಂತ್ರಜ್ಞಾನ ಕಂಪನಿಯಾದ ASML. ಇದು ವಿಶ್ವದ ಅತ್ಯಂತ ಮುಂದುವರಿದ ಅರೆವಾಹಕ ಅಂದರೆ ಸೆಮಿಕಂಡಕ್ಟರುಗಳನ್ನು ತಯಾರಿಸಲು ಬಳಸುವ ತೀವ್ರ ನೇರಳಾತೀತ (EUV) ಲಿಥೋಗ್ರಫಿ ಯಂತ್ರಗಳನ್ನು ಉತ್ಪಾದಿಸುತ್ತದೆ. ಈ ಯಂತ್ರಗಳು ಅದೆಷ್ಟು ಸಂಕೀರ್ಣ ಹಾಗೂ ಅತ್ಯುತ್ತಮವಾಗಿವೆಯೆಂದರೆ, ಸದ್ಯಕ್ಕೆ ಬೇರೆ ಯಾವುದೇ ಕಂಪನಿಯು ಇವರ ಯಂತ್ರಗಳಿಗೆ ಪ್ರಸ್ತುತ ಪ್ರಮಾಣದಲ್ಲಿ ಹೋಲಿಸಬಹುದಾದ ಪರ್ಯಾಯವನ್ನು ನೀಡುವುದಿಲ್ಲ. ಇಡೀ ಜಗತ್ತು ಚಿಪ್ ಮತ್ತು ಸೆಮಿಕಂಡಕ್ಟರುಗಳಿಗೆ ಥವಾನ್ ಮೇಲೆ ಅವಲಂಬಿತವಾಗಿದ್ದರೆ, ಇಡೀ ತೈವಾನ್ ಈ ಡಚ್ ಕಂಪನಿಯ ಮೇಲೆ ಅವಲಂಬಿತವಾಗಿದೆ. TSMC, Samsung ಮತ್ತು Intel ನಂತಹ ದೈತ್ಯರು ಅತ್ಯಾಧುನಿಕ ಚಿಪ್‌ಗಳನ್ನು ಉತ್ಪಾದಿಸಲು ASMLನ ಉಪಕರಣಗಳನ್ನೇ ಅವಲಂಬಿಸಿವೆ. ASML ಇಲ್ಲದಿದ್ದರೆ, ಇಂದಿನ ಸ್ಮಾರ್ಟ್‌ಫೋನ್, ಕೃತಕ ಬುದ್ಧಿಮತ್ತೆ ಮತ್ತು ಕಂಪ್ಯೂಟಿಂಗ್ ಕ್ರಾಂತಿಯ ಬಹುಪಾಲು ಸ್ಥಗಿತಗೊಳ್ಳುತ್ತದೆ. ನಾಳೆ ಚೀನಾ, ತೈವಾನ್ ಅನ್ನು ಆಕ್ರಮಿಸಿದರೆ, ಅದು ಎಲೆಕ್ಟ್ರಾನಿಕ್ಸ್ ಚಿಪ್ ಪೂರೈಕೆ ವಿಷಯದಲ್ಲಿ ಮತ್ತೊಂದು ಹಾರ್ಮುಜ್ ಜಲಸಂಧಿಯಂತದ್ದೇ ಕಥೆಯಾಗಲಿದೆ. ಇದೇ ಕಾರಣಕ್ಕೆ, ಮೊನ್ನೆ ಮೋದಿಯವರು ತಮ್ಮ ನೆದರ್ಲ್ಯಾಂಡ್ ಭೇಟಿಯಲ್ಲಿ ಇದೇ ASML ಕಂಪನಿಯನ್ನು ಭಾರತಕ್ಕೆ ಆಹ್ವಾನಿಸಿ, ಟಾಟಾ ಎಲೆಕ್ಟ್ರಾನಿಕ್ಸ್ ಜೊತೆ ಕೈಗೂಡಿಸಲು ಒಪ್ಪಂದ ಮಾಡಿಕೊಂಡಿದ್ದಾರೆ. ಈ ಒಪ್ಪಂದ ಭಾರತದಲ್ಲಿ ಸೆಮಿಕಂಡಕ್ಟರ್ ಉದ್ಯಮದ ಹೊಸ ಶಕೆಗೆ ನಾಂದಿ ಹಾಡಲಿದೆ.

ಇಂತಹುದೇ ಮತ್ತೊಂದು ಅನಾಮಿಕ ದೈತ್ಯ ಕಂಪನಿಯೆಂದರೆ YKK ಎಂಬ ಜಪಾನಿನ ಜಿಪ್ಪರ್ ತಯಾರಿಕಾ ಕಂಪನಿ. ಜಿಪ್ಪರ್‌ಗಳು ಸರಳವಾಗಿ ಕಂಡುಬಂದರೂ, YKK ಪ್ರಪಂಚದ ಜಿಪ್ಪರ್ ಪೂರೈಕೆಯ ಸರಿಸುಮಾರು 65% ಭಾಗವನ್ನು ತಯಾರಿಸುತ್ತದೆ. ಉತ್ಪಾದನೆಯ ಬಹುತೇಕ ಪ್ರತಿಯೊಂದು ಹಂತವನ್ನು ನಿಯಂತ್ರಿಸುವ ಮೂಲಕ, ಅಸಾಧಾರಣ ಗುಣಮಟ್ಟ ಮತ್ತು ಬೆಲೆಯ ಸ್ಥಿರತೆಯನ್ನು ಉಳಿಸಿಕೊಳ್ಳುವ ಮೂಲಕ 1934ರಿಂದ ಇಂದಿನವರೆಗೆ ತನ್ನ ಯಶಸ್ಸನ್ನು ಉಳಿಸಿಕೊಂಡು ಬಂದಿದೆ.

ಇನ್ನು ಕನ್ನಡಕದ ಉದ್ಯಮಕ್ಕೆ ಬಂದರೆ, ಲಕ್ಸೋಟಿಕಾ ಎಂಬ ಒಂದೇ ಒಂದು ಕಂಪನಿ ತನ್ನ ಉತ್ಪಾದನೆ, ಚಿಲ್ಲರೆ ವ್ಯಾಪಾರ ಮತ್ತು ಪರವಾನಗಿ ಮೂರನ್ನೂ ಕಬಳಿಸಿಕೊಂಡು ಏಕಮೇವಾ ದ್ವಿತೀಯನಾಗಿ ತನ್ನ ಸಾಮ್ರಾಜ್ಯವನ್ನೇ ಸೃಷ್ಟಿಸಿಕೊಂಡಿದೆ. ತನ್ನದೇ ಆದ ರೇ-ಬ್ಯಾನ್ ಮತ್ತು ಓಕ್ಲಿಯಂತಹ ಪ್ರಸಿದ್ಧ ಬ್ರ್ಯಾಂಡ್‌ಗಳನ್ನು ಮಾತ್ರವಲ್ಲದೇ, ಅರ್ಮಾನಿ, ಫೆರಾರಿ, ಡೀಸೆಲ್, ಡಿಯೋರ್, ಪ್ರಾಡಾ ಮುಂತಾದ ಹಲವಾರು ಐಷಾರಾಮಿ ಫ್ಯಾಷನ್ ಲೇಬಲ್‌ಗಳಿಗೆ ಕನ್ನಡಕಗಳನ್ನು ಉತ್ಪಾದಿಸುತ್ತದೆ. ಇಷ್ಟೇ ಅಲ್ಲದೇ, ಪ್ರಪಂಚದಾದ್ಯಂತ ಪ್ರಮುಖ ಚಿಲ್ಲರೆ ಮಾರಾಟದ ಅಂಗಡಿಗಳನ್ನೂ ಮತ್ತು ಆಪ್ಟಿಕಲ್ ಅಂಗಡಿಗಳನ್ನು ನಿರ್ವಹಿಸುತ್ತದೆ. ಫ್ಯಾಷನ್ ಜಗತ್ತಿನ ತಂಪುಕನ್ನಡಕಗಳನ್ನು ಇನ್ಯಾರೂ ತಯಾರಿಸುವ ಅಥವಾ ಮಾರಾಟ ಮಾಡುವ ಮೂಲಕ ಸೆಡ್ಡುಹೊಡೆಯಲು ಸಾಧ್ಯವೇ ಇಲ್ಲ ಎಂಬ ಹೆಗ್ಗಳಿಕೆಯ ಈ ಲಕ್ಸೋಟಿಕಾ, 2018ರಲ್ಲಿ ಆಪ್ಟಿಕಲ್ ಕನ್ನಡಕದ ಉದ್ಯಮದ ದೈತ್ಯನಾಗಿದ್ದ ಎಸ್ಸಿಲೋರ್ ಕಂಪನಿಯನ್ನೂ ತನ್ನದಾಗಿಸಿಕೊಂಡು Essi-lorLuxottica ಎಂಬ ಹದಿನೈದು ಬಿಲಿಯನ್ ಡಾಲರ್ ಮೌಲ್ಯದ ದೈತ್ಯ ಕಂಪನಿಯಾಗಿದೆ. ಫ್ಯಾಷನ್ ಮತ್ತು ಆಪ್ಟಿಕಲ್ ಎರಡೂ ಉದ್ಯಮಗಳನ್ನು ನಿಯಂತ್ರಿಸುತ್ತಾ, ಜಾಗತಿಕ ಕನ್ನಡಕ ಮಾರುಕಟ್ಟೆಯ ಮೇಲೆ ಅಸಾಧಾರಣ ಪ್ರಭಾವವನ್ನು ತನ್ನದಾಗಿಸಿಕೊಂಡು, ಕನ್ನಡಕ ಉದ್ಯಮದ ಏಷ್ಯನ್ ಪೇಂಟ್ಸ್ ಆಗಿ ನಿಂತಿದೆ.

ಪಾನೀಯ ವಲಯಕ್ಕೆ ಬಂದರೆ AB InBev ಮೂಲಕ ಮತ್ತೊಂದು ಗಮನಾರ್ಹ ಉದಾಹರಣೆಯನ್ನು ನೀವು ನೋಡಬಹುದು. ಹಲವಾರು ದೈತ್ಯ, ದೊಡ್ಡ ಮತ್ತು ಸಣ್ಣ ಕಂಪನಿಗಳ ವಿಲೀನಗಳ ಸರಣಿಯ ಮೂಲಕ ರೂಪುಗೊಂಡ ಈ ಕಂಪನಿ ಇವತ್ತು ಬಡ್‌ವೈಸರ್, ಕರೋನಾ, ಸ್ಟೆಲ್ಲಾ ಆರ್ಟೋಯ್ ಮತ್ತು ಅನೇಕ ಪ್ರಾದೇಶಿಕ ಬಿಯರ್ ಬ್ರ್ಯಾಂಡ್‌ಗಳನ್ನು ತನ್ನಾಗಿಸಿಕೊಂಡು, ಜಗತ್ತಿನ ಅತೀದೊಡ್ಡ ಬ್ರೂವರ್ ಎಂದು ಗುರುತಿಸಿಕೊಂಡಿದೆ. 61 ಬಿಲಿಯನ್ ಡಾಲರ್ ವ್ಯಾಪಾರದ ಮೂಲಕ ಜಗತ್ತಿನ ಜಾಗತಿಕ ಬಿಯರ್ ಮಾರಾಟದಲ್ಲಿ 32% ಪಾಲು ಇದೊಂದೇ ಕಂಪನಿಯದ್ದು. 34 ಬಿಲಿಯನ್ ಡಾಲರ್ ವ್ಯಾಪಾರ ಮಾಡುವ ಎರಡನೇ ಅತೀದೊಡ್ಡ ಬ್ರೂವರ್ ಹೈನಿಕೆನ್"ನ ಮಾರುಕಟ್ಟೆಯ ಪಾಲು 12% ಎಂದರೆ ಲೆಕ್ಕ ಹಾಕಿ!

ಇಪ್ಪತ್ತನೇ ಶತಮಾನದ ಬಹುಪಾಲು ಕಾಲ, ವಜ್ರಗಳಿಗೆ ಸಮಾನಾರ್ಥಕ ಪದವೆಂದರೆ ಡಿ ಬೀರ್ಸ್ ಎಂದಾಗಿತ್ತು. ಈ ಕಂಪನಿ ಕೇವಲ ವಜ್ರಗಳನ್ನು ಜಗಮಗಿಸುವ ಅಂಗಡಿಗಳಲ್ಲಿಟ್ಟು ಮಾರುವುದೊಂದೇ ಅಲ್ಲ, ಸಗಟು ಮಾರಾಟವಲ್ಲ, ವಜ್ರಗಳನ್ನು ಕಟ್ ಮಾಡಿ ಸುಂದರವಾಗಿಸುವುದಲ್ಲ, ಈ ಇಡೀ ವ್ಯಾಪಾರದ ಸರಪಳಿಯಲ್ಲಿ ಎಲ್ಲಕ್ಕಿಂತ ಮೊದಲ ಕೆಲಸವಾದ ಗಣಿಗಾರಿಕೆಯನ್ನೂ ತಾನೇ ನಡೆಸಿ, ವಿತರಣಾ ಮಾರ್ಗಗಳನ್ನೂ ತಾನೇ ನಿಯಂತ್ರಿಸಿ, ವಿಶ್ವದ ಬಹುಪಾಲು ವಜ್ರ ಪೂರೈಕೆಯನ್ನು ತಾನೇ ನಿರ್ವಹಿಸುತ್ತದೆ.

ಜಗತ್ತಿನ ಅತೀ ದೊಡ್ಡ ಲೈವ್-ಈವೆಂಟ್‌ಗಳ ಉದ್ಯಮ ಹೆಚ್ಚೂ ಕಮ್ಮಿ ಲೈವ್ ನೇಷನ್ ಎಂಟರ್‌ಟೈನ್‌ಮೆಂಟ್ ಎಂಬ ಒಂದೇ ಕಂಪನಿಯಿಂದ ನಡೆಸಲ್ಪಡುತ್ತದೆ. ಸಂಗೀತ ಕಚೇರಿ ನಡೆಸುವ ಸ್ಥಳಗಳು, ಕಾರ್ಯಕ್ರಮಗಳ ಪ್ರಚಾರ ಸೇವೆಗಳು ಮತ್ತು ಟಿಕೆಟ್ ದೈತ್ಯ ಟಿಕೆಟ್‌ಮಾಸ್ಟರ್.ಕಾಂ ಮಾಲೀಕತ್ವದ ಮೂಲಕ, ಕಂಪನಿಯು ವಿಶ್ವಾದ್ಯಂತ ಪ್ರಮುಖ ಸಂಗೀತ ಕಚೇರಿಗಳಿಗೆ ಟಿಕೆಟ್‌ಗಳನ್ನು ಆಯೋಜಿಸುವ ಮತ್ತು ಮಾರಾಟ ಮಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಜಾಗತಿಕ ಆರ್ಥಿಕತೆಯಲ್ಲಿ ಅತ್ಯಂತ ಶಕ್ತಿಶಾಲಿ ವ್ಯವಹಾರಗಳು ಯಾವಾಗಲೂ ದೊಡ್ಡದಾಗಿ ಕಾಣಲೇ ಬೇಕಿಲ್ಲ, ದೊಡ್ಡ ಭಾಷಣಗಳನ್ನೇ ಮಾಡಬೇಕಿಲ್ಲ ಎಂಬುದನ್ನು ಈ ಅನಾಮಿಕ ದೈತ್ಯ ಕಂಪನಿಗಳ ಕಥೆಗಳು ನಿರೂಪಿಸುತ್ತವೆ. ತೀರಾ ಸಾಮಾನ್ಯ ಜಿಪ್ಪರ್"ನಿಂದ ಹಿಡಿದು ಸಂಕೀರ್ಣ ಸೆಮಿಕಂಡಕ್ಟರ್‌ಗಳವರೆಗೆ, ನೂರು ರೂಪಾಯಿಯ ಬಿಯರ್"ನಿಂದ ಹಿಡಿದು ಲಕ್ಷ ರೂಪಾಯಿಯ ವಜ್ರದವರೆಗೆ ಈ ಸಂಸ್ಥೆಗಳು ಇಡೀ ಕೈಗಾರಿಕೆಗಳನ್ನೇ ತಮ್ಮ ಮೇಲೆ ಅವಲಂಬಿತವಾಗಿರುವಷ್ಟು ಬಲವಾದ ಸ್ಥಾನಗಳನ್ನು ನಿರ್ಮಿಸಿವೆ. ಹಾಗೂ ಈ ಕಥೆಗಳು ಆಧುನಿಕ ಜಗತ್ತನ್ನು ರೂಪಿಸುವ ಕಂಪನಿಗಳ ಪಟ್ಟಿಯಲ್ಲಿ, ಸದ್ದಿಲ್ಲದೇ ಕೆಲಸ ಮಾಡುವ ಕಂಪನಿಗಳ ಒಂದು ಸಣ್ಣ ಗುಂಪೇ ಇದೆ ಎಂಬುದನ್ನೂ ನಮಗೆ ನೆನಪಿಸುತ್ತವೆ.

ಅತ್ಯಂತ ಬುದ್ಧಿಶಾಲಿಗಳ ಸಮಸ್ಯೆ



ಅತ್ಯಂತಮತಿಮೇಧಾವೀ ತ್ರಯಾಣಾಮೇಕಮಶ್ನುತೇ ।
ಅಲ್ಪಾಯುರ್ವಾ ದರಿದ್ರೋ ವಾ ಹ್ಯನಪತ್ಯೋ ನ ಸಂಶಯಃ ॥

–ಸಮಯೋಚಿತ ಪದ್ಯಮಾಲಿಕಾ

ಅತ್ಯಂತ ಬುದ್ಧಿಶಾಲಿಯಾದವನು ಅಲ್ಪಾಯುಸ್ಸಿಗೋ, ಬಡತನಕ್ಕೋ ಅಥವಾ ಮಕ್ಕಳಿಲ್ಲದಿರುವುದಕ್ಕೋ – ಇವುಗಳಲ್ಲಿ ಯಾವುದಕ್ಕಾದರೂ ಒಂದಕ್ಕೆ ತುತ್ತಾಗುತ್ತಾನೆ. ಇದಕ್ಕೆ ಸಂಶಯವಿಲ್ಲ – ಎಂಬುದು ಶ್ಲೋಕಾರ್ಥ.

'ಪಾಪಿ ಚಿರಾಯು' ಎಂಬ ಲೋಕೋಕ್ತಿಯಿದೆ. ದಿನನಿತ್ಯವೂ ಪಾಪದ ಕೆಲಸವನ್ನೇ ಮಾಡುವವನು ಸುಖವಾಗಿರುತ್ತಾನೆ. ಚಟಗಳ ದಾಸನಾದವನು ಆರೋಗ್ಯದಿಂದಿರುತ್ತಾನೆ. ದುಷ್ಟನು ದೀರ್ಘಾಯುಷಿಯಾಗಿರುತ್ತಾನೆ. ನೆಮ್ಮದಿಯಿಂದಿರುತ್ತಾನೆ. ಗೌರವಾದಾರಗಳಿಗೂ ಪಾತ್ರನಾಗುತ್ತಾನೆ.

ಇದನ್ನು ನಿತ್ಯವೂ ಸಮಾಜದಲ್ಲಿ ಕಾಣುತ್ತೇವೆ. ನಮ್ಮೆಲ್ಲರ ಅನುಭವಕ್ಕೂ ಬಂದಿರುತ್ತದೆ. ಇದನ್ನೇ ತದ್ವಿರುದ್ಧವಾಗಿ ಮೇಧಾವಿ, ಸಜ್ಜನ, ಪರೋಪಕಾರಿ – ಇವರೆಲ್ಲ ಒಂದಲ್ಲ ಒಂದು ಬಗೆಯ ತೊಂದರೆಯನ್ನು ಅನುಭವಿಸುತ್ತಾರೆ, ನೆಮ್ಮದಿ ಎಂಬುದೇ ಇರುವುದಿಲ್ಲ ಎಂದು ಹೇಳಲಾಗುತ್ತದೆ. ಲೋಕಮುಖೀ ಕೆಲಸಗಳಲ್ಲಿ ತೊಡಗಿಕೊಂಡವರಿಗೆ ತೊಂದರೆ ತಪ್ಪಿದ್ದಲ್ಲ. ಸಮಾಜಕಾರ್ಯದಲ್ಲಿ ಸಂಪೂರ್ಣವಾಗಿ ಜೋಡಿಸಿಕೊಂಡವರಿಗೆ ಸಮಾಜದಲ್ಲಿರುವವರೆಲ್ಲ ಸಹಕಾರ ನೀಡುವುದಿಲ್ಲ. ಕೆಲವರು ಕೈಜೋಡಿಸುತ್ತಾರೆ. ಇನ್ನು ಕೆಲವರು ಸಂಶಯಿಸುತ್ತಾರೆ. ಮತ್ತೆ ಕೆಲವರು ಆಕ್ಷೇಪಿಸುತ್ತಾರೆ. ಕೆಲವು ಮಂದಿ ವಿರೋಧಿಸುತ್ತಾರೆ. ಅವರವರು ಪಡೆದ ಸಂಸ್ಕಾರಕ್ಕನುಗುಣವಾಗಿ ನಡೆ ಮತ್ತು ನುಡಿಯಿರುತ್ತದೆ. ಇದನ್ನು ಎಲ್ಲೆಡೆ ನೋಡುತ್ತೇವೆ. ಇಂತಹ ನಡತೆ ಇಂದು ಮಾತ್ರವಲ್ಲ. ಹಿಂದಿನಿಂದಲೂ ಕೃತಯುಗದಿಂದಲೂ ಇದೆ. ರಾಮಾದಿಗಳಿರುವಾಗ ಮಂಥರೆ ಮೊದಲಾದವರಿದ್ದರು. ಕೃಷ್ಣ ಧರ್ಮರಾಜಾದಿಗಳಿರುವಾಗ ಶಕುನಿ ಮೊದಲಾದವರಿದ್ದರು. ಇಂದು ಇಂಥವರ ಸಂಖ್ಯೆ ಅಧಿಕವಾಗಿದೆ.

ಪ್ರಕೃತ ಶ್ಲೋಕದಲ್ಲಿ ಕವಿಯು ಹೇಳುವ ವಿಚಾರವೆಂದರೆ ಸತ್ಯವಂತರು, ಸಜ್ಜನರು, ಸಂತರು ಒಂದಲ್ಲ ಒಂದು ಬಗೆಯ ತೊಂದರೆಗೆ ಸಿಲುಕುತ್ತಾರೆ ಎನ್ನುತ್ತಾ ಪ್ರಧಾನವಾಗಿ ಮೂರು ವಿಷಯವನ್ನು ಪ್ರಸ್ತಾಪಿಸುತ್ತಾನೆ. ಅತ್ಯಂತ ಮೇಧಾವಿಗಳು ಎನಿಸಿಕೊಂಡವರು ಕವಿಯು ಹೇಳಿದ ಮೂರು ಸಂಕಷ್ಟಗಳಲ್ಲಿ ಒಂದರಲ್ಲಾದರೂ ಸಿಲುಕಿಕೊಳ್ಳುತ್ತಾರಂತೆ. ಆ ಮೂರು ಸಂಕಷ್ಟಗಳೆಂದರೆ ಅಲ್ಪಾಯುಷ್ಯ, ಬಡತನ ಅಥವಾ ಮಕ್ಕಳಿಲ್ಲದಿರುವಿಕೆ. ಈ ತನ್ನ ಹೇಳಿಕೆಯಲ್ಲಿ ಸಂಶಯವಿಲ್ಲ ಎಂಬುದಾಗಿ ಸಮರ್ಥಿಸುತ್ತಾನೆ.

ಈ ಮಾತು ಕವಿಯ ಅನುಭವದ ಹಿನ್ನೆಲೆಯಲ್ಲಿ ಸತ್ಯವಾಗಿರಬಹುದು. ಬಹುತೇಕರು ಹೀಗಿರಬಹುದು. ಆದರೆ ಇದನ್ನು ಸಾರ್ವತ್ರಿಕಗೊಳಿಸಬಹುದೆ? ಎಂಬ ಜಿಜ್ಞಾಸೆಯಿದೆ. 'ಸರ್ವೇ ನಿಯಮಾಃ ಸಾಪವಾದಾಃ' ಎಂಬ ನ್ಯಾಯವಿದೆ. ಎಲ್ಲ ನಿಯಮಕ್ಕೂ ಒಂದೆರಡಾದರೂ ಅಪವಾದವಿದ್ದೇ ಇರುತ್ತದೆ. ಹೀಗಿದ್ದರೂ ಕವಿಯ ಹೇಳಿಕೆಯಲ್ಲಿ ಸ್ವಲ್ಪ ಮಟ್ಟಿನ ಸತ್ಯಾಂಶವಿರುವುದು ಲೋಕದಲ್ಲಿ ಸಂಚರಿಸುವವರಿಗೆ ಗೊತ್ತು.

ಲೋಕವ್ಯವಹಾರ ನಡೆಯುವುದು ಬುದ್ಧಿವಂತಿಕೆಯ ಹಿನ್ನೆಲೆಯಿಂದ. ಬುದ್ಧಿವಂತರ ಯೋಗದಾನದಿಂದ. ಸ್ಪರ್ಧಾತ್ಮಕ ಯುಗದಲ್ಲಿ ಬುದ್ಧಿವಂತರಿರಬೇಕು. ಅವರು ಕೌಟುಂಬಿಕವಾಗಿ ನೆಮ್ಮದಿಯನ್ನು ಹೊಂದಿರಬೇಕು. ನ್ಯೂನತೆಯಿಂದ ಹೊರಬರಬೇಕು. ಈ ಕಾರಣಕ್ಕಾಗಿ ಕವಿಯ ಅನುಭವದ ಮಾತು ಮುಂದಿನ ದಿನಗಳಲ್ಲಿ ಸುಳ್ಳಾಗಲಿ ಎಂದು ಆಶಿಸೋಣ.

ಬಂಗಾಳದ ಹಿಂದೂಗಳಿಗೆ ಗೋವು ಭಾರವಾಗಿದೆಯಾ?

ಧರಣಿ ಮಂಡಲ
• ಕೆ.ಎಸ್. ಶೈಲೇಶ್ ಹೊಳ್ಳ
shyleshholla@gmail.com



ಪ್ರತಿವರ್ಷ ದೇಶಾದ್ಯಂತ ಬಕ್ರೀದ್‌ನಲ್ಲಿನ ಕುರ್ಬಾನಿಗಾಗಿ ಲಕ್ಷಾಂತರ ಗೋವುಗಳು ಹತ್ಯೆಯಾಗುತ್ತವೆ. ವಿಶೇಷವಾಗಿ ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಈ ಹತ್ಯೆಯ ಪ್ರಮಾಣ ಹೆಚ್ಚಿರುತ್ತದೆ. ಆದರೆ ಈ ವರ್ಷ ಪಶ್ಚಿಮ ಬಂಗಾಳದಲ್ಲಿ ಪರಿಸ್ಥಿತಿ ಬೇರೇಯೇ ಇತ್ತು. ಹೊಸ ಸರ್ಕಾರ ಬಕ್ರೀದ್‌ನಲ್ಲಾಗುವ ಗೋಹತ್ಯೆಯನ್ನು ತಡೆಯಲು ಕಟ್ಟುನಿಟ್ಟಿನ ನಿಯಮಗಳನ್ನು ರೂಪಿಸಿದ್ದಷ್ಟೇ ಅಲ್ಲದೆ ಅಕ್ರಮ ಗೋಹತ್ಯೆ ಹಾಗೂ ಮಾರಾಟದಲ್ಲಿ ಸಿಕ್ಕಿಬಿದ್ದವರನ್ನು ಜೈಲಿಗೆ ಕಳುಹಿಸುವುದಾಗಿ ಎಚ್ಚರಿಸಿತ್ತು. ಹೀಗಾಗಿ ಈ ವರ್ಷ ಪಶ್ಚಿಮ ಬಂಗಾಳದಲ್ಲಿ ಬಕ್ರೀದ್‌ನಂದು ಗೋವುಗಳ ಹತ್ಯೆ ಅಷ್ಟಾಗಿ ಕಂಡುಬಂದಿಲ್ಲ.

ಪಶ್ಚಿಮ ಬಂಗಾಳದಲ್ಲಿ ಬೀಫ್ ಎಂಬುದು ಬಹು ಮುಖ್ಯ ಆಹಾರವಾಗಿದೆ. ಇಲ್ಲಿ ಕೇರಳ ಹೊರತುಪಡಿಸಿ ದೇಶದಲ್ಲೇ ಬಹುದೊಡ್ಡ ಗೋಮಾಂಸದ ವ್ಯವಹಾರ ನಡೆಯುತ್ತದೆ. ಪ್ರತಿವರ್ಷ ಪಶ್ಚಿಮ ಬಂಗಾಳ ಒಂದರಲ್ಲೇ ಬಕ್ರೀದ್‌ನಂದು 1500 ರಿಂದ 2000 ಕೋಟಿವರೆಗೂ ಅಕ್ರಮ ಗೋವುಗಳ ಹತ್ಯೆ, ಸಾಗಾಟ ಮತ್ತು ಮಾಂಸದ ವ್ಯವಹಾರ ನಡೆಯುತ್ತದೆ. ಇಲ್ಲಿಯ ನಾಡಿಯಾ, ಮುರ್ಷಿದಾಬಾದ್ ಮತ್ತು ಬಿರ್‌ಭೂಮ್ ಜಿಲ್ಲೆಗಳಲ್ಲಿ ಬಕ್ರೀದ್ ಸಮಯದಲ್ಲಿ ಗೋವಿನ ವಹಿವಾಟು ಹೆಚ್ಚಾಗಿ ನಡೆಯುತ್ತದೆ. ಹತ್ತರಿಂದ ಇಪ್ಪತ್ತೈದು ಸಾವಿರಕ್ಕೆ ಬೇರೆ ಸಮಯದಲ್ಲಿ ಮಾರಾಟವಾಗುವ ಒಂದೊಂದು ಗೋವುಗಳು ಬಕ್ರೀದ್‌ನಂದು ಒಂದು ಲಕ್ಷದಿಂದ ಐದು ಲಕ್ಷದವರೆಗೆ ಮಾರಾಟವಾಗುತ್ತವೆ. ಈ ಸಮಯದಲ್ಲಿ ಬೇಡಿಕೆ ಹೆಚ್ಚಿರುವುದರಿಂದ ಹೆಚ್ಚಿನ ರೈತರು ಈ ಸಮಯಕ್ಕಾಗಿಯೇ ಕಾದು ಮುಸ್ಲಿಮರಿಗೆ ಕುರ್ಬಾನಿಗೆಂದೇ ಗೋವು ಮಾರಾಟ ಮಾಡುತ್ತಾರೆ. ಇಂತಹ ರೈತರು ತಮ್ಮ ಮನೆಯಲ್ಲಿರುವ ವಯಸ್ಸಾದವರನ್ನು ಸಹ ಒಂದು ದಿನ ಹೀಗೆ ಮಾರುವುದಿಲ್ಲ ಎಂಬ ಗ್ಯಾರಂಟಿ ಖಂಡಿತಾ ಇಲ್ಲ.

ಈ ಬಾರಿ ಬಿಜೆಪಿ ಸರ್ಕಾರದ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಸುವೇಂದು ಅಧಿಕಾರಿ ಒಂದಷ್ಟು ತುರ್ತಾಗಿ ಆಗಬೇಕಾದ ಕಾರ್ಯಸೂಚಿಗಳನ್ನು ಸಿದ್ಧಪಡಿಸಿಟ್ಟುಕೊಂಡು ಅದನ್ನೆಲ್ಲಾ ಜಾರಿಗೆ ತರುತ್ತಿದ್ದಾರೆ. ಅದರಲ್ಲಿ ಗೋವುಗಳ ರಕ್ಷಣೆಯೂ ಒಂದು. ಹೀಗಾಗಿ ಈ ವರ್ಷ ಪರಿಸ್ಥಿತಿ ಹಿಂದಿನಂತಿಲ್ಲ ಎಂಬುದು ಬಹುತೇಕ ಇಂತಹ ವ್ಯವಹಾರದಲ್ಲಿರುವವರಿಗೆ ಮನವರಿಕೆಯಾಗಿತ್ತು. ಹೀಗಾಗಿ ಇವರುಗಳು ಬಕ್ರೀದ್‌ಗಿಂತ ಮುಂಚಿತವಾಗಿ ಹೊಸದೊಂದು ನಾಟಕ ಪ್ರಾರಂಭಿಸಿದ್ದರು. ಅದು ಇಲ್ಲಿಂದ ದೇಶವ್ಯಾಪಿ ಹರಡುವಂತಾಯಿತು. ಅದೇನೆಂದರೆ ಈ ಬಾರಿ ಮುಸ್ಲಿಮರು ಕುರ್ಬಾನಿಯಲ್ಲಿ ಗೋವನ್ನು ಬಲಿ ಕೊಡುವುದಿಲ್ಲ, ಈ ಪ್ರಾಣಿ ನಿಮಗೆ ಪೂಜ್ಯ ತಾಯಿಯ ಸಮಾನವಾಗಿದ್ದರೆ, ಅದನ್ನು ನಿಮ್ಮ ಮನೆಗಳಲ್ಲಿ ಇಟ್ಟು ಸೇವೆ ಮಾಡಿ, ಪೂಜೆ ಮಾಡಿ, ವ್ಯಾಪಾರಕ್ಕಾಗಿ ಮಾರುಕಟ್ಟೆಗಳಿಗೆ ತರಬೇಡಿ. ಏಕೆಂದರೆ ಇಲ್ಲಿ ಅದನ್ನು ಕೇವಲ ಕುರ್ಬಾನಿಯ ಉದ್ದೇಶದಿಂದಲೇ ಖರೀದಿಸಲಾಗುತ್ತದೆ. ಆದ್ದರಿಂದ ಈ ಪ್ರಾಣಿಗಳನ್ನು ಗೌರವಪೂರ್ವಕವಾಗಿ ಹಿಂದಕ್ಕೆ ತೆಗೆದುಕೊಂಡು ಹೋಗಿ ಎಂಬುದಾಗಿ ಇಲ್ಲಿಯ ಮುಸ್ಲಿಮರು ಹೇಳುತ್ತಿದ್ದುದು ದೊಡ್ಡ ಸುದ್ದಿಯಾಗಿತ್ತು. ಇನ್ನು ಇಲ್ಲಿಯ ಮುಸ್ಲಿಮ್ ಮುಖಂಡರು ಪರಿಸ್ಥಿತಿಯನ್ನು ಅರಿತು ಬಕ್ರೀದ್‌ನಂದು ಗೋವುಗಳ ಹತ್ಯೆ ಮಾಡಬೇಡಿ. ಕುರ್ಬಾನಿಗೆ ಕುರಿ ಇಲ್ಲವೇ ಆಡು ಮೇಕೆಗಳನ್ನು ಬಲಿ ಕೊಡಿ. ಗೋಮಾಂಸವನ್ನು ತ್ಯಜಿಸಿ ಎಂಬುದಾಗಿ ಹೇಳುತ್ತಿದ್ದುದು ವರದಿಯಾಗಿತ್ತು.

ಒಂದರ್ಥದಲ್ಲಿ ಸ್ವತಃ ಹೊಸದಾಗಿ ಚುನಾಯಿತ ಬಿಜೆಪಿ ಶಾಸಕಿ ರೇಖಾ ಪಾತ್ರ ಹಿಂಗಲ್‌ಗಂಜ್‌ನಲ್ಲಿ ಜಾನುವಾರು ತುಂಬಿದ ವಾಹನವನ್ನು ತಡೆದು ನಿಲ್ಲಿಸಿದ್ದು ಗೋರಕ್ಷಕರನ್ನು ಉತ್ತೇಜಿಸಿತ್ತು. ಹೀಗಾಗಿ ಮುಂದಾಗಬಹುದಾದ ಪರಿಸ್ಥಿತಿಯನ್ನು ಮನಗಂಡು ಯಾವೊಬ್ಬ ಮುಸಲ್ಮಾನನು ಗೋವುಗಳನ್ನು ಖರೀದಿಸಲು ಮುಂದೆ ಬರದಂತಾಗಿತ್ತು. ಏಕೆಂದರೆ ಒಂದೊಮ್ಮೆ ಖರೀದಿಸಿ ಸಾಗಾಟ ಮಾಡುವಾಗ ಪೊಲೀಸರು ಕೇಸ್ ದಾಖಲಿಸಬಹುದು ಎಂಬ ಭಯ ಒಂದು ಕಡೆಯಾದರೆ, ಗೋರಕ್ಷಕರು ನಮ್ಮ ಮೇಲೆ ಹಲ್ಲೆ ಮಾಡಬಹುದೆಂಬ ಭಯ ಮತ್ತೊಂದೆಡೆ ಇವರನ್ನು ಕಾಡಿತ್ತು.

ಇಲ್ಲಿಯ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) ಮತ್ತು ಇತರೆ ವಿರೋಧ ಪಕ್ಷಗಳು ಬಿಜೆಪಿ ಸರ್ಕಾರವು ಬಕ್ರೀದ್‌ಗೆ ಮುಂಚಿತವಾಗಿ ಬೇಕಂತಲೆ ಗೋಹತ್ಯಾ ನಿಷೇಧದ ನಿಯಮಗಳನ್ನು ಜಾರಿಗೊಳಿಸಿ ಭಯದ ವಾತಾವರಣವನ್ನು ಸೃಷ್ಟಿಸುತ್ತಿದೆ ಎಂಬುದಾಗಿ ಹೇಳಿದ್ದವು. ಸಿಪಿಎಂನ ರಾಜ್ಯ ಕಾರ್ಯದರ್ಶಿ ಎಂ.ಡಿ.ಸಲೀಂ, ಈ ಕಾಯ್ದೆಯು ಸಣ್ಣದನದ ಮಾರಾಟಗಾರರು, ದನ ಸಾಕುವವರು ಮತ್ತು ಅಲ್ಪಸಂಖ್ಯಾತರಲ್ಲಿ ಭಯದ ವಾತಾವರಣವನ್ನು ಹುಟ್ಟು ಹಾಕುವುದರೊಂದಿಗೆ ಸಾಮಾಜಿಕ ಸಾಮರಸ್ಯವನ್ನು ಹಾಳುಮಾಡುತ್ತಿದೆ ಎಂಬುದಾಗಿ ತಿಳಿಸಿದ್ದರು. ಮತ್ತೊಬ್ಬ ಕಾಂಗ್ರೆಸ್‌ನ ನಾಯಕ ಅಧೀರ್ ರಂಜನ್ ಚೌಧರಿ ಮುಖ್ಯಮಂತ್ರಿ ಸುವೇಂದು ಅಧಿಕಾರಿಗೆ ಪತ್ರವೊಂದನ್ನು ಬರೆದು, ಮುರ್ಷಿದಾಬಾದ್‌ನಂತಹ ಅಲ್ಪಸಂಖ್ಯಾತ ಪ್ರಾಬಲ್ಯದ ಜಿಲ್ಲೆಗಳಲ್ಲಿ ಗೋಹತ್ಯೆಗೆ ಸಂಬಂಧಿಸಿದಂತೆ ಸರ್ಕಾರ ಹೊರಡಿಸಿರುವ ಅಧಿಸೂಚನೆಯು ಗೊಂದಲ, ಅಸಮಾಧಾನ ಮತ್ತು ಆತಂಕವನ್ನು ಸೃಷ್ಟಿಸಿದೆ ಎಂದಿದ್ದರು. ಇನ್ನು ನಮ್ಮ ರಾಜ್ಯ ಕಾಂಗ್ರೆಸ್ ಸರ್ಕಾರ ಈ ಕ್ರಮವು ಅಲ್ಪಸಂಖ್ಯಾತರ ಧಾರ್ಮಿಕ ಆಚರಣೆಗಳಲ್ಲಿ ಸರ್ಕಾರದ ಹಸ್ತಕ್ಷೇಪ ಎಂಬುದಾಗಿ ಕೂಗಾಡಿತ್ತು. ಎಸ್‌ಯುಸಿಐ (ಕಮ್ಯುನಿಸ್ಟ್)ನ ಪ್ರಧಾನ ಕಾರ್ಯದರ್ಶಿ ಪ್ರಭಾಸ್ ಘೋಷ್ ಸರ್ಕಾರ ಹೊರಡಿಸಿರುವ ಈ ಅಧಿಸೂಚನೆಯು ಕೋಮು ಸೌಹಾರ್ದತೆಗೆ ಭಂಗವನ್ನುಂಟು ಮಾಡುತ್ತದೆ ಎಂಬುದಾಗಿ ಮೈಪರಚಿಕೊಂಡಿದ್ದರು. ಒಂದು ಹೆಜ್ಜೆ ಮುಂದೆ ಹೋದ ಇಂಡಿಯನ್ ಸೆಕ್ಯುಲರ್ ಫ್ರಂಟ್‌ನ ಶಾಸಕ ನೌಸಾದ್ ಸಿದ್ದಿಕ್, ಬಿಜೆಪಿ ಸರ್ಕಾರವು ಮುಸ್ಲಿಮರನ್ನು ಗುರಿಯಾಗಿಸಲು ಬಯಸುತ್ತದೆ. ಆದರೆ ದನ ಸಾಕಣೆಯಲ್ಲಿ ತೊಡಗಿರುವ ಶೇಕಡಾ 80ರಷ್ಟು ಜನರು ಮುಸ್ಲಿಮೇತರರು ಎಂಬುದಾಗಿ ತಿಳಿಸಿದ್ದ.

ಒಂದು ಕಡೆ ಇಷ್ಟೆಲ್ಲಾ ಹೋರಾಟ ಹಾರಾಟಗಳು ನಡೆಯುತ್ತಿದ್ದರೆ, ಮತ್ತೊಂದೆಡೆ ಜಮೀಯತ್ ಉಲಮಾ ಎ ಹಿಂದ್ ಸಂಘಟನೆಯ ಅಧ್ಯಕ್ಷರಾದ ಅರ್ಷದ್ ಮದನಿ ಹೇಳಿದ ಹೇಳಿಕೆಯೊಂದು ಭಾರಿ ವೈರಲ್ ಆಗಿತ್ತು. ಹಸುವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಬೇಕು, ಅದನ್ನು ಸಂಪೂರ್ಣವಾಗಿ ಸಂರಕ್ಷಿತ ಪ್ರಾಣಿ ಎಂದು ಪರಿಗಣಿಸಬೇಕು ಮತ್ತು ಹಸುವನ್ನು ಕೊಲ್ಲುವವರನ್ನು ಮಾತ್ರವಲ್ಲದೆ ಅದನ್ನು ಮಾರಾಟ ಮಾಡುವವರನ್ನು ಹಾಗೂ ಖರೀದಿಸುವವರನ್ನು ಕಾನೂನಿನ ಪ್ರಕಾರ ಅಪರಾಧಿಗಳನ್ನಾಗಿ ಮಾಡಬೇಕು ಎಂಬುದಾಗಿ ಈತ ಹೇಳಿದ್ದ. ಇವನಂತೆ ಮತ್ತೊಬ್ಬ ಕೋಲ್ಕತ್ತಾದ ಜಾಮಾ ಮಸೀದಿಯ ಇಮಾಮ್ ಸರ್ಕಾರದ ಗೋಹತ್ಯಾ ವಿರೋಧಿ ಕ್ರಮವನ್ನು ಕಂಡು ತಮ್ಮ ಸಮುದಾಯಕ್ಕೆ ಅತ್ಯಂತ ಜಾಣ್ಮೆಯ ಮತ್ತು ಶಾಂತಿಯುತವಾದ ಮನವಿಯೊಂದನ್ನು ಮಾಡಿದ್ದ. ಹಬ್ಬದ ಹೆಸರಿನಲ್ಲಿ ಯಾವುದೇ ರೀತಿಯ ಕಾನೂನು ಸಂಘರ್ಷ, ಗಲಭೆ ಅಥವಾ ಹಿಂಸಾಚಾರದಂತಹ ಘಟನೆಗಳಿಗೆ ಆಸ್ಪದ ಕೊಡಬೇಡಿ. ಈ ಬಾರಿ ಹಸುಗಳನ್ನು ಖರೀದಿಸಬೇಡಿ ಮತ್ತು ಹಸುಗಳ ಬಲಿಯನ್ನು ಕೊಡಬೇಡಿ ಎಂಬುದಾಗಿ ಕರೆ ನೀಡಿದ್ದ. ಇದರ ಹಿಂದೆ ತಮ್ಮ ಕೋಮಿನ ಯುವಕರು ಅನಗತ್ಯವಾಗಿ ಜೈಲು ಪಾಲಾಗುವುದನ್ನು ತಪ್ಪಿಸುವ ಉದ್ದೇಶ ಇವನದ್ದಾಗಿತ್ತು.

ಇವರುಗಳಂತೆ ಸಾಕಷ್ಟು ಮುಸ್ಲಿಮ್ ಮುಖಂಡರು ತಮ್ಮದೇ ವಾದವನ್ನು ಮಂಡಿಸುತ್ತಾ, ಭಾರತದಲ್ಲಿ ಹಸುವಿನ ಮಾಂಸ ತಿನ್ನುವ ವಿಷಯವನ್ನು ಕೇವಲ ಮುಸ್ಲಿಂ ಸಮುದಾಯಕ್ಕೆ ಜೋಡಿಸಿ ದೊಡ್ಡ ರಾಜಕೀಯ ಮಾಡಲಾಗುತ್ತಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಶೇಕಡಾ ತೊಂಬತ್ತಕ್ಕಿಂತ ಹೆಚ್ಚು ಮುಸ್ಲಿಮರಿದ್ದರೂ ಅಲ್ಲಿನ ಕಾಶ್ಮೀರಿ ಪಂಡಿತರ ಭಾವನೆಗಳಿಗೆ ಗೌರವ ನೀಡಿ ಮುಸ್ಲಿಮರು ಗೋಮಾಂಸ ತಿನ್ನುತ್ತಿರಲಿಲ್ಲ. ದೇಶದ ಜನಸಂಖ್ಯೆಯ ಶೇಕಡಾ ಎಪ್ಪತ್ತಕ್ಕಿಂತ ಹೆಚ್ಚು ಜನರು ಮಾಂಸಾಹಾರಿಗಳಾಗಿದ್ದಾರೆ. ಆದರೆ ದೇಶದಲ್ಲಿ ಮುಸ್ಲಿಮರ ಜನಸಂಖ್ಯೆ ಕೇವಲ ಶೇಕಡಾ ಹದಿನಾಲ್ಕರಷ್ಟಿದೆ. ಕೇವಲ ಮುಸ್ಲಿಮರು ಮಾತ್ರ ಮಾಂಸ ತಿನ್ನುತ್ತಿದ್ದರೆ ಮಾರುಕಟ್ಟೆಯಲ್ಲಿ ಮಾಂಸದ ಬೆಲೆ ಇಷ್ಟು ಹೆಚ್ಚಾಗುತ್ತಿರಲಿಲ್ಲ. ದೇಶದಲ್ಲಿ ಹಿಂದೂಗಳು, ಮುಸ್ಲಿಮರು, ಸಿಖ್ಖರು ಮತ್ತು ಕ್ರಿಶ್ಚಿಯನ್ನರು ಸೇರಿದಂತೆ ಎಲ್ಲಾ ಸಮುದಾಯದವರು ಮಾಂಸಾಹಾರ ಸೇವಿಸುತ್ತಾರೆ. ಆದರೆ ರಾಜಕೀಯ ಕಾರಣಗಳಿಗಾಗಿ ಕೇವಲ ಮುಸ್ಲಿಂ ಸಮುದಾಯವನ್ನು ಮಾತ್ರ ಗುರಿ ಮಾಡಲಾಗುತ್ತಿದೆ ಎಂಬುದಾಗೆಲ್ಲಾ ಬೊಬ್ಬೆ ಹೊಡೆದಿದ್ದರು.

ಇನ್ನು ಕೆಲವರು ವೀರ ಸಾವರ್ಕರ್ ಯಾವುದೋ ಪರಿಸ್ಥಿತಿಯಲ್ಲಿ ಎಂದೋ ಹೇಳಿದ್ದರು ಎನ್ನಲಾದ ಮಾತೊಂದನ್ನು ಎಳೆದು ತಂದು ನಾವು ಭಾರೀ ಸಭ್ಯರು ಎಂಬುದನ್ನು ಬಿಂಬಿಸುವ ಪ್ರಯತ್ನವನ್ನು ಮಾಡಿದ್ದರು. ಸಾವರ್ಕರ್ ತಮ್ಮ ಪುಸ್ತಕವೊಂದರಲ್ಲಿ ಹಸುವನ್ನು ಗೋಮಾತೆ ಎಂದು ಕರೆಯುವುದನ್ನು ಒಪ್ಪಿರಲಿಲ್ಲ. ಅವರು ಹಸುವಿಗಿಂತ ಕತ್ತೆ ಹೆಚ್ಚು ಉಪಯುಕ್ತ ಪ್ರಾಣಿ ಎಂದು ಬರೆದಿದ್ದರು. ಹಸುವಿನ ಹಾಲನ್ನು ಕುಡಿಯಿರಿ, ಆದರೆ ಅದನ್ನೇ ದೇವರೆಂದು ಪೂಜಿಸುವುದರಲ್ಲಿ ಅರ್ಥವಿಲ್ಲ ಎಂಬುದಾಗಿ ಹೇಳಿದ್ದರು ಎಂಬುದನ್ನು ಒತ್ತಿ ಹೇಳುವ ಪ್ರಯತ್ನವನ್ನು ಮಾಡಿದ್ದರು. ಇವರಂತೆ ಕೆಲ ಗಣ್ಯ ವ್ಯಕ್ತಿಗಳು, ಭಾರತೀಯ ಸಮಾಜದಲ್ಲಿ ಹಸು ಹಾಲು ಕೊಡುವವರೆಗೆ ಮಾತ್ರ ಅದನ್ನು ತಾಯಿ ಎಂದು ಪೂಜಿಸಲಾಗುತ್ತದೆ. ಆದರೆ ಅದು ಹಾಲು ಕೊಡುವುದನ್ನು ನಿಲ್ಲಿಸಿದ ತಕ್ಷಣ ಮತ್ತು ವಯಸ್ಸಾದ ತಕ್ಷಣ ಅದೇ ಜನರು ಆ ಹಸುವನ್ನು ಮಾರುಕಟ್ಟೆಗೆ ತಂದು ಮಾರಿಬಿಡುತ್ತಾರೆ. ಆ ಹಸುವನ್ನು ಕೊಳ್ಳುವವರು ಅದಕ್ಕೆ ಏನು ಮಾಡುತ್ತಾರೆ ಎಂಬುದು ಮಾರುವವರಿಗೂ ಗೊತ್ತಿರುತ್ತದೆ. ಆದರೂ ಹಣದಾಸೆಗಾಗಿ ಅದನ್ನು ಮಾರಿಬಿಡುತ್ತಾರೆ ಎಂಬುದಾಗಿ ಪುನರುಚ್ಚರಿಸಿದ್ದರು

ಇದೇನಿದು 'ಖಾತಾ' ಪರಿವರ್ತನೆ ಗೊಂದಲ?

▸ ರಮಾನಂದ ಶರ್ಮಾ

ರಾಜ್ಯ ಸರ್ಕಾರದ 6ನೇ ಗ್ಯಾರಂಟಿ ಎಂದು ಕರೆಯಲಾಗುವ ಭೂ ಗ್ಯಾರಂಟಿ ಯೋಜನೆಗೆ ತಾರ್ಕಿಕ ಅಂತ್ಯ ಕಾಣಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಪ್ರಾರಂಭಿಸಿರುವ 'ನನ್ನ ಇ ಖಾತಾ ನನ್ನ ಹಕ್ಕು' ಅಭಿಯಾನ ಬೆಂಗಳೂರಿನಲ್ಲಿ ನಡೆಯುತ್ತಿದೆ. ನಗರದ 5 ಪಾಲಿಕೆಗಳ 52 ಸ್ಥಳಗಳಲ್ಲಿ ಪ್ರತಿ ಶನಿವಾರ ನಡೆಯುತ್ತಿರುವ ಈ ಅಭಿಯಾನದ ಮೂಲಕ 'ಇ ಖಾತಾ' ಸೇವೆಯನ್ನು ಜನತೆಯ ಮನೆಬಾಗಿಲಿಗೆ ತಲುಪಿಸುವ ಪ್ರಯತ್ನ ನಡೆದಿದ್ದು, ಇ ಖಾತಾ, ಮ್ಯುಟೇಷನ್, ಖಾತಾ ತಿದ್ದುಪಡಿ, ಹೊಸ ಇ ಖಾತಾ, ಬಿ ಟು ಎ ಖಾತಾ ಸೇರಿದಂತೆ ವಿವಿಧ ಸೇವೆಗಳಿಗಾಗಿ ದಾಖಲೆಗಳನ್ನು ಹಿಡಿದು ಜನರು ಭೇಟಿ ನೀಡುತ್ತಿದ್ದಾರೆ.

ಲಭ್ಯ ಮಾಹಿತಿ ಪ್ರಕಾರ ಬೆಂಗಳೂರು ನಗರದಲ್ಲಿ 23 ಲಕ್ಷ ಆಸ್ತಿಗಳಿದ್ದು, ಅವುಗಳಲ್ಲಿ 'ಎ' ಖಾತಾ ಹೊಂದಿದ ಆಸ್ತಿಗಳು 16 ಲಕ್ಷ ಇದ್ದರೆ, 'ಬಿ' ಖಾತೆ ಹೊಂದಿದ ಆಸ್ತಿಗಳು 7 ಲಕ್ಷಗಳು. ಸುಮಾರು 7000 ಪುಸ್ತಕಗಳಲ್ಲಿದ್ದ ಆಸ್ತಿಗಳ ಎಲ್ಲಾ ವಿವರಗಳನ್ನು ಡಿಜಿಟಲೈಸ್ ಮಾಡಲಾಗಿದೆಯಂತೆ. ನಿರೀಕ್ಷೆಯಂತೆ 'ನನ್ನ ಇ ಖಾತಾ, ನನ್ನ ಹಕ್ಕು' ಅಭಿಯಾನ ಸಂಪೂರ್ಣವಾಗಿ ಯಶಸ್ವಿಯಾದರೆ, ಜಿಬಿಎ ಸುಮಾರು 10000 ಕೋಟಿ ರೂ. ಆದಾಯವನ್ನು ನಿರೀಕ್ಷಿಸಬಹುದಂತೆ.

'ಖಾತಾ' ಎಂದರೆ, ಒಂದು ಆಸ್ತಿಯ ಮಾಲಿಕತ್ವವು ರೆವೆನ್ಯೂ ರೆಕಾರ್ಡ್‌ನಲ್ಲಿ ಸಂಬಂಧಪಟ್ಟ ಮಾಲಿಕನ ಹೆಸರಿನಲ್ಲಿ ದಾಖಲಾಗಿದೆ ಎಂದು ಸರಕಾರ ನೀಡುವ ಒಂದು ಪ್ರಮಾಣ ಪತ್ರ. ಇದು ಒಂದು ಆಸ್ತಿಯ ಮಾಲಿಕತ್ವದ ಬಗೆಗೆ ದೃಢವಾದ ಮತ್ತು ಅಂತಿಮ ದಾಖಲೆ. ಇದು ಆಸ್ತಿಯ ಕ್ರಯಪತ್ರ (ಸೇಲ್ ಡೀಡ್)ಕ್ಕಿಂತಲೂ ಹೆಚ್ಚು ನಿಖರವಾದ ಮತ್ತು ದೃಢವಾದ ದಾಖಲೆ ಎನ್ನಲಾಗುತ್ತದೆ. ಆಸ್ತಿ ವ್ಯವಹಾರಕ್ಕೆ ಸಂಬಂಧಪಟ್ಟ ಯಾವುದೇ ವ್ಯವಹಾರದಲ್ಲಿ ಇದು ಅತ್ಯಗತ್ಯ ದಾಖಲೆ ಎಂದು ಪರಿಗಣಿಸಲಾಗುತ್ತದೆ. ಈ ದಾಖಲೆ ಇಲ್ಲದ ವ್ಯವಹಾರವನ್ನು ಅಸಿಂಧು ಎನ್ನಲಾಗುತ್ತದೆ. ವಾಸ್ತವದಲ್ಲಿ ಒಂದು ಆಸ್ತಿಯ ಖರೀದಿ ಅಥವಾ ಮಾರಾಟವಾದ ತಕ್ಷಣ ಅದರ ನೋಂದಣಿ ಆಗುತ್ತಿರುವಂತೆ ಈ ಪ್ರಕ್ರಿಯೆ ಆಗಬೇಕು. ಆದರೆ, ಸದ್ಯದ ವ್ಯವಸ್ಥೆಯಲ್ಲಿ ಅದು ಸ್ವಯಂಪ್ರೇರಿತವಾಗಿ ಆಗದೆ, ಆಸ್ತಿಯ ಖರೀದಿದಾರ ಖಾತಾ ದಾಖಲೆಗೆ ಪುನಃ ಒಂದು ನಿರ್ದಿಷ್ಟ ಶುಲ್ಕವನ್ನು ನೀಡಿ ಸಂಬಂಧಪಟ್ಟ ಕಚೇರಿಗೆ ಹತ್ತಾರು ಬಾರಿ ಓಡಾಡಿ ಹಣ ವ್ಯಯಿಸಿ ಪಡೆಯಬೇಕಾಗುತ್ತದೆ. ಆಸ್ತಿ ಖರೀದಿದಾರನು ಆಸ್ತಿಯನ್ನು ಖರೀದಿಸಿದ ಬಳಿಕ ನಿಗದಿತ 7% ಸ್ಟ್ಯಾಂಪ್ ಡ್ಯೂಟಿ ನೀಡಿ ನೋಂದಣಿ ಮಾಡಿಸಿದ ಮೇಲೆ, ರೆವೆನ್ಯೂ ದಾಖಲೆಯಲ್ಲಿ ಹೆಸರು ನಮೂದಿಸಲು ಮತ್ತೇಕೆ ಶುಲ್ಕ ನೀಡಬೇಕು ಎಂದು ಜನಸಾಮಾನ್ಯರು ಪ್ರಶ್ನಿಸುತ್ತಾರೆ. ಅನುಭವಿಗಳ ಪ್ರಕಾರ ಈ 'ಬಿ' ಖಾತಾ ಪರಿಕಲ್ಪನೆ ದೇಶದಲ್ಲಿ ಬೇರಾವ ರಾಜ್ಯದಲ್ಲೂ ಇಲ್ಲ. 'ಬಿ' ಖಾತಾ ಪಡೆಯುವಾಗ ಆಸ್ತಿ ನೋಂದಣಿ ಸಮಯದಲ್ಲಿ ನೀಡಿದ ಸ್ಟ್ಯಾಂಪ್ ಡ್ಯೂಟಿಯ ಮೇಲೆ 2% ಶುಲ್ಕ ಪಡೆಯಲಾಗಿತ್ತು.

ಈಗ 'ಎ' ಖಾತಾ ಪಡೆಯಲು ಆಸ್ತಿಯ ಮಾರ್ಗದರ್ಶಿ ಮೌಲ್ಯದ 2% ಶುಲ್ಕ (ಆಸ್ತಿ ಮಾಲಿಕರ ಆಕ್ಷೇಪಣೆ, ಆಕ್ರೋಶ ಮತ್ತು ಪ್ರತಿರೋಧಕ್ಕೆ ಸ್ಪಂದಿಸಿ ಹಿಂದಿನ ಆದೇಶವನ್ನು ಮಾರ್ಪಡಿಸಿ 5% ನಿಂದ 2% ಗೆ ಇತ್ತೀಚೆಗೆ ಇಳಿಸಲಾಗಿದೆ) ವಿಧಿಸಲಾಗುತ್ತಿದ್ದು ಅದರ ಸಂಗಡ ಅಭಿವೃದ್ಧಿ ಶುಲ್ಕ ಬೇರೆ. ಆರಂಭಿಕ ವರದಿ ಪ್ರಕಾರ 'ಎ' ಖಾತಾ ಪಡೆಯಲು ಮಾರ್ಗದರ್ಶಿ ಬೆಲೆಯು ನೋಂದಣಿ ಮೌಲ್ಯವಾಗಿರದೇ, ಇಂದಿನ ಪರಿಷ್ಕೃತ ಮೌಲ್ಯವಾಗಿರುತ್ತದೆ. ಇತ್ತೀಚಿನ ವರದಿಗಳಲ್ಲಿ ಈ ಬಗೆಗೆ ಸ್ಪಷ್ಟೀಕರಣ ಕಾಣುತ್ತಿಲ್ಲ. 2016ರಲ್ಲಿ 50 ಲಕ್ಷ ಇದ್ದ ಮಾರ್ಗದರ್ಶಿ ಬೆಲೆ ಇಂದು ಸುಮಾರು 75 ಲಕ್ಷ ಇರಬಹುದು. ಸ್ಥಿರಾಸ್ತಿ ಮೌಲ್ಯವು ಸದಾ ಏರುತ್ತಲೇ ಇರುತ್ತದೆ ಮತ್ತು ಬೆಂಗಳೂರಿನಲ್ಲಿ ಇದು ಇನ್ನೂ ಹೆಚ್ಚು ಎನ್ನುವುದು ತಿಳಿದ ವಿಷಯ. ಈ ಎರಡೂ ಉದಾಹರಣೆಗಳಲ್ಲಿ ಆಸ್ತಿ ಮಾಲಿಕ 'ಎ' ಖಾತಾ ಪಡೆಯಲು ಕ್ರಮವಾಗಿ 1 ಮತ್ತು 1.50 ಲಕ್ಷ ಶುಲ್ಕ ನೀಡಬೇಕಾಗುತ್ತದೆ. ಇಂದಿನ ಪರಿಷ್ಕೃತ ಮಾರ್ಗದರ್ಶಿ ಬೆಲೆಯನುಸಾರ ಸುಮಾರು 50000 ರೂ.ನ್ನು ಹೆಚ್ಚಿಗೆ ನೀಡಬೇಕಾಗುತ್ತದೆ. ಇದರ ಮೇಲೆ ಅಭಿವೃದ್ಧಿ ಶುಲ್ಕ ಬೇರೆ. ಇಂದು ಬೆಂಗಳೂರಿನಲ್ಲಿ ಎಲ್ಲಿಯೇ ಆಗಿರಲಿ ಆಸ್ತಿಯ (ನಿವೇಶನದ ಬೆಲೆ) ಸಾಮಾನ್ಯ ನಿವೇಶನಕ್ಕೆ ಕಡಿಮೆ ಎಂದರೂ 40–50 ಲಕ್ಷ ಇರುತ್ತಿದ್ದು ಅದೆಷ್ಟು ಆಸ್ತಿ ಮಾಲಿಕರು ಇದನ್ನು ಭರಿಸಬಹುದು?

ಆಸ್ತಿಗಳು 'ಎ' ಖಾತಾಗೆ ಪರಿವರ್ತನೆಯಾದರೆ ಆಸ್ತಿಯ ಬೆಲೆ ಹೆಚ್ಚಾಗುವುದರಿಂದ ಮಾರಾಟ ಮಾಡಿದರೆ ಸಖತ್ ಲಾಭವಾಗುತ್ತದೆ ಎನ್ನುವ ಸಮರ್ಥನೆ ಕೇಳಿಬರುತ್ತದೆ. ಅದು ಸರಿ. ಆದರೆ, ಎಷ್ಟು ಜನ ಆಸ್ತಿಯನ್ನು ಮಾರಾಟ ಮಾಡುತ್ತಾರೆ? ಬಹುತೇಕರು ಮಾಲಿಕತ್ವದ ದೃಢೀಕರಣಕ್ಕಾಗಿ 'ಎ' ಖಾತೆಗೆ ಪರಿವರ್ತನೆ ಮಾಡಿಕೊಳ್ಳುತ್ತಿದ್ದಾರೆ. ಬಹುಶಃ ಇದೇ ಕಾರಣಕ್ಕೋ ಏನೋ 'ಎ' ಖಾತಾ ಪರಿವರ್ತನೆಗೆ ನಿರೀಕ್ಷೆಯಷ್ಟು ಆತುರತೆ ಕಾಣುತ್ತಿಲ್ಲ. ಹಾಗೆಯೇ ಫ್ಲ್ಯಾಟ್‌ಗಳಿಗೆ 'ಎ' ಖಾತಾ ನೀಡುವ ನಿಟ್ಟಿನಲ್ಲಿ ಸಾಫ್ಟ್‌ವೇರ್ ಇನ್ನೂ ಬಿಡುಗಡೆಯಾಗಿಲ್ಲ ಎನ್ನಲಾಗುತ್ತಿದೆ. ಇದು ಕೂಡಾ ಜನರ ನಿರುತ್ಸಾಹಕ್ಕೆ ಕಾರಣ ಇರಬಹುದು. ಒಂದು ಅಂದಾಜಿನ ಪ್ರಕಾರ ಬೆಂಗಳೂರಲ್ಲಿ ಸುಮಾರು 20000 ಅಪಾರ್ಟ್‌ಮೆಂಟ್‌ಗಳು ಮತ್ತು 2.50 ಲಕ್ಷ ಫ್ಲ್ಯಾಟ್‌ಗಳು ಇವೆ. ಬೆಂಗಳೂರು ಲಂಬಾಂತರವಾಗಿ ಬೆಳೆಯುತ್ತಿದ್ದು, ಫ್ಲ್ಯಾಟ್‌ಗಳ ಸಂಖ್ಯೆ ಗಮನಾರ್ಹವಾಗಿದೆ. ನಗರದಲ್ಲಿ 7 ಲಕ್ಷ 'ಬಿ' ಖಾತಾದಾರರು ಇದ್ದು, ಕೇವಲ 7000 ಅರ್ಜಿಗಳು ಪರಿವರ್ತನೆಗೆ ಬಂದಿವೆಯಂತೆ.

'ಬಿ' ಖಾತಾ ಪರಿಕಲ್ಪನೆ ಜನಸಾಮಾನ್ಯರಲ್ಲಿ ಗೊಂದಲವನ್ನು ಹುಟ್ಟುಹಾಕಿದೆ. ಈ ಪರಿಕಲ್ಪನೆ ಆರಂಭವಾಗಿದ್ದು ಹೇಗೆ ಮತ್ತು ಯಾಕೆ ಎನ್ನುವುದರ ಬಗೆಗೆ ಸರಿಯಾದ ಮಾಹಿತಿ ದೊರಕುತ್ತಿಲ್ಲ. ಕೆಲವು ಮೂಲಗಳ ಪ್ರಕಾರ ನಿಯಮಾವಳಿಯನ್ನು ಉಲ್ಲಂಘಿಸಿದ ಆಸ್ತಿಗೆ ತಾತ್ಕಾಲಿಕವಾಗಿ ನೀಡಿದ ಖಾತೆಯಿದು. ಇದರ ಮಾಲಿಕತ್ವವನ್ನು ಅಧಿಕೃತವೆಂದು ಹೇಳುವಂತಿಲ್ಲ. ಇದು ಒಂದು ರೀತಿಯಲ್ಲಿ "ಅಂತಿಮ ಪರಿಶೀಲನೆ ಮತ್ತು ಒಪ್ಪಿಗೆ ಆಧಾರದ ಮೇಲೆ" ಎಂದು ಕೆಲವರು ಅರ್ಥೈಸುತ್ತಾರೆ. ಈ 'ಬಿ' ಖಾತೆಯ ಮೇಲೆ ಬ್ಯಾಂಕ್ ಸಾಲ ಮತ್ತಿತರ ಸೌಲಭ್ಯಗಳು ದೊರಕುವುದಿಲ್ಲ ಮತ್ತು ಆಸ್ತಿಯನ್ನು ಮಾರಾಟ ಮಾಡಲಾಗುವುದಿಲ್ಲ. ಇದನ್ನು ಹಣಕಾಸು ವ್ಯವಹಾರದಲ್ಲಿ ಭದ್ರತೆಯಾಗಿ ನೀಡಲಾಗುವುದಿಲ್ಲ.

'ಬಿ' ಖಾತಾದಿಂದ 'ಎ' ಖಾತಾಗೆ ಪರಿವರ್ತಿಸುವ ಸರ್ಕಾರದ ಉದ್ದೇಶ ಶ್ಲಾಘನೀಯ. ಆಸ್ತಿಯ ಮಾಲಿಕತ್ವದ ಬಗೆಗೆ ಜನರಿಗೆ ಖಾತರಿ ದೊರಕುತ್ತಿದೆ. 'ಜಿಬಿಎ' ಆದಾಯವನ್ನು ಹೆಚ್ಚಿಸುವ ಅಜೆಂಡಾ ಕೂಡಾ ಇದರ ಹಿಂದಿದೆ ಎನ್ನುವ ಆರೋಪವೂ ಇದೆ. ಅದು ಬೇರೆ ವಿಚಾರ. ಆದರೆ, ಈ ಪ್ರಕ್ರಿಯೆಗೆ ಜನತೆಯಿಂದ ವಸೂಲು ಮಾಡುವ ಶುಲ್ಕದ ಬಗೆಗೆ ಭಾರೀ ಆಕ್ರೋಶ ಇದೆ. ಈಗಾಗಲೇ ಆಸ್ತಿ ಖರೀದಿಯ ನೊಂದಣಿಗೆ ಮತ್ತು 'ಬಿ' ಖಾತಾಗೆ ಮತ್ತು ಅಭಿವೃದ್ಧಿ ಶುಲ್ಕಕ್ಕೆ ಲಕ್ಷಾಂತರ ವ್ಯಯಿಸಿದ್ದು, ಈಗ 'ಎ' ಖಾತಾಗೆ ಪರಿವರ್ತಿಸಲು ಮತ್ತೆ ಲಕ್ಷಾಂತರ ರೂ. ನೀಡುವುದು ಯಾವ ಮಾನದಂಡದಲ್ಲೂ ಸರಿಯೆನಿಸದು ಎನ್ನುವುದು ಜನರ ಭಾವನೆ. ಇದನ್ನು ಉಚಿತವಾಗಿ ಮಾಡಿ ಎಂದು ಅವರು ಕೇಳುವುದಿಲ್ಲ. ಒಂದು ನಾಮಿನಲ್ ಮೊತ್ತಕ್ಕೆ ಅಥವಾ 'ಬಿ' ಖಾತಾ ಮಾಡು ವಾಗ ಶುಲ್ಕ ವಿಧಿಸಿದಂತೆ ನೋಂದಣಿ ಸಮಯದಲ್ಲಿ ನೀಡಿದ ಸ್ಟಾಂಪ್ ಡ್ಯೂಟಿಯ ಮೇಲೆ 1–2% ಶುಲ್ಕ ವಿಧಿಸಲಿ ಎನ್ನುತ್ತಾರೆ. ಈ ಅಭಿಯಾನ 100 ದಿನಗಳ ಕಾಲ ನಡೆಯುತ್ತಿದ್ದು ಆಗಸ್ಟ್ 23ಕ್ಕೆ ಅಂತ್ಯವಾಗುತ್ತದೆ. ಆಸ್ತಿಯ ಮಾರ್ಗದರ್ಶಿ ಬೆಲೆಯನ್ನು 5% ರಿಂದ 2% ಇಳಿಸಿದ್ದು ಕೇವಲ 100 ದಿನಗಳಿಗೆ ಮಾತ್ರವಾಗಿದೆ. ಜನತೆಯ ಸ್ಪಂದನೆಯನ್ನು ನೋಡಿ ಈ ಗಡುವನ್ನು ವಿಸ್ತರಿಸುವ ಸಾಧ್ಯತೆಯನ್ನು ತಳ್ಳಿಹಾಕಲಾಗದು.

ಕಿರುಸುದ್ದಿ

ಪೆರ್ಡೂರು ಸ್ತ್ರೀ ಶಕ್ತಿ ಒಕ್ಕೂಟದಲ್ಲಿ 23 ಲಕ್ಷ ರೂ. ದುರುಪಯೋಗ: 2 ವಂಚನೆ ಪ್ರಕರಣ ದಾಖಲು

ಉಡುಪಿ: ಪೆರ್ಡೂರು ಪದ್ಮ ಕಮಲ ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟದ ಶ್ರೀ ಶಕ್ತಿ ಸಂಘದಲ್ಲಿ ನಕಲಿ ದಾಖಲೆ ಹಾಗೂ ಸಹಿ ಸೃಷ್ಟಿಸಿ ಒಟ್ಟು 23 ಲಕ್ಷ ರೂಪಾಯಿ ಹಣ ದುರುಪಯೋಗಪಡಿಸಿಕೊಂಡ ಆರೋಪದ ಮೇಲೆ ಮುಖ್ಯ ಬರಹಗಾರ್ತಿ ವಿರುದ್ಧ ಹಿರಿಯಡ್ಕ ಪೊಲೀಸ್ ಠಾಣೆಯಲ್ಲಿ ವಂಚನೆ ಪ್ರಕರಣ ದಾಖಲಾಗಿದೆ. ಸಂಘದ ಮುಖ್ಯ ಬರಹಗಾರ್ತಿ ಸುಗಂಧಿ ಎಂಬಾಕೆಯ ವಿರುದ್ಧ ದೂರು ದಾಖಲಾದ ಆರೋಪಿಯಾಗಿದ್ದಾಳೆ.

ಒಕ್ಕೂಟದ ಅಧ್ಯಕ್ಷೆ ಶ್ಯಾಮಲಾ ಎಸ್.ಪಿ ಈ ಕುರಿತು ದೂರು ನೀಡಿದ್ದಾರೆ. ಒಕ್ಕೂಟದಲ್ಲಿ ಒಟ್ಟು 68 ಸ್ವಸಹಾಯ ಗುಂಪುಗಳಿದ್ದು, ವಿವಿಧ ಯೋಜನೆಗಳಿಗಾಗಿ ಸರ್ಕಾರದಿಂದ ಇದುವರೆಗೆ 42,00,000 ರೂ. ಬಿಡುಗಡೆಯಾಗಿತ್ತು. ಈ ಹಣವನ್ನು ನಿಯಮಾನುಸಾರ ಶೇಕಡಾ 9ರ ಬಡ್ಡಿದರದಲ್ಲಿ ಸದಸ್ಯರಿಗೆ ಸಾಲವಾಗಿ ನೀಡಬೇಕಿತ್ತು. ಆದರೆ, ಆರೋಪಿ ಸುಗಂಧಿ 2023ರಿಂದ 2025ರ ಡಿಸೆಂಬರ್ ಅವಧಿಯಲ್ಲಿ ಸದಸ್ಯರು ಮರುಪಾವತಿಸಿದ ಸಾಲದ ಹಣವನ್ನು ಸಂಘದ ಖಾತೆಗೆ ಜಮಾ ಮಾಡದೆ ಸ್ವಂತಕ್ಕೆ ಬಳಸಿಕೊಂಡಿದ್ದಾಳೆ. ಅಲ್ಲದೆ, ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ನಕಲಿ ಸಹಿ ಮಾಡಿ, ನಕಲಿ ದಾಖಲೆಗಳನ್ನು ಸೃಷ್ಟಿಸಿ ಬ್ಯಾಂಕಿನಿಂದ ಹೆಚ್ಚಿನ ಸಾಲ ಮಂಜೂರು ಮಾಡಿಸಿಕೊಂಡು ಹಣ ಲಪಟಾಯಿಸಿದ್ದಾಳೆ. ಈ ವ್ಯವಹಾರವನ್ನು ಮುಚ್ಚಿಡಲು ಆಕೆ ಪ್ರತ್ಯೇಕ ನಕಲಿ ಪುಸ್ತಕಗಳನ್ನು ನಿರ್ವಹಿಸಿ ಒಕ್ಕೂಟಕ್ಕೆ ನಂಬಿಕೆ ದ್ರೋಹ ಬಗೆದಿದ್ದಾಳೆ. ಈ ದೂರಿನನ್ವಯ ಹಿರಿಯಡ್ಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ಮದುವೆಗೆ ಬಂದ ವ್ಯಕ್ತಿ ಹೃದಯಾಘಾತದಿಂದ ಸಾವು

ಮಡಿಕೇರಿ: ಸಂಬಂಧಿಕರ ಮದುವೆಗೆಂದು ತೆರಳಿದ್ದ ವ್ಯಕ್ತಿಯೊಬ್ಬರು ಹೃದಯಾಘಾತದಿಂದ ನಿಧನರಾದ ಘಟನೆ ವೀರಾಜಪೇಟೆ ಹೊರವಲಯದ ಕಲ್ಯಾಣ ಮಂಟಪದಲ್ಲಿ ನಡೆದಿದೆ. ವೀರಾಜಪೇಟೆಯ ತೆಲುಗರ ಬೀದಿ ನಿವಾಸಿ ಮೋಹನ್ ಕುಮಾರ್ (59) ಎಂಬವರೇ ಸಾವಿಗೀಡಾದವರು. ವೀರಾಜಪೇಟೆ ಹೊರವಲಯದ ಬಿಟ್ಟಂಗಾಲದ ಕಲ್ಯಾಣ ಮಂಟಪವೊಂದರಲ್ಲಿ ಶನಿವಾರ ಹಾಗೂ ಭಾನುವಾರ ನಡೆಯಲಿದ್ದ ಸಂಬಂಧಿಕರ ಮದುವೆ ಸಮಾರಂಭಕ್ಕೆ ಶನಿವಾರ ಮೋಹನ್ ಕುಮಾರ್ ಮತ್ತು ಕುಟುಂಬದವರು ತೆರಳಿದ್ದರು. ರಾತ್ರಿ ಮದುವೆ ಸಮಾರಂಭದಲ್ಲಿ ಊಟದ ನಂತರ ಕುಟುಂಬ ವರ್ಗ ಮನೆಗೆ ತೆರಳಿದ್ದರೆ, ಮೋಹನ್ ಕುಮಾರ್ ಅಲ್ಲಿಯೇ ಉಳಿದಿದ್ದರು. ಆದರೆ ಬೆಳಗಾದರೂ ಅವರು ಮನೆಗೆ ಬಾರದಿದ್ದಾಗ ಕುಟುಂಬದವರು ಮತ್ತೆ ಮದುವೆ ಮಂಟಪಕ್ಕೆ ತೆರಳಿದ್ದು, ಅಲ್ಲಿ ಮಲಗಿರುವ ಭಂಗಿಯಲ್ಲಿ ಮೋಹನ್ ಪತ್ತೆಯಾದರು. ತಕ್ಷಣವೇ ಅವರನ್ನು ವೀರಾಜಪೇಟೆ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಯಿತು. ವೈದ್ಯರು ಪರೀಕ್ಷಿಸಿ, ಮೋಹನ್ ಅವರು ಬೆಳಗಿನ ಜಾವವೇ ಅಸುನೀಗಿರುವುದಾಗಿ ದೃಢೀಕರಿಸಿದ್ದಾರೆ. ಮೃತರ ಪತ್ನಿ ಮಮತಾ ನೀಡಿರುವ ದೂರಿನ ಮೇರೆಗೆ ವೀರಾಜಪೇಟೆ ಗ್ರಾಮಾಂತರ ಠಾಣೆಯಲ್ಲಿ ಸ್ವಾಭಾವಿಕ ಮರಣ ಪ್ರಕರಣ ದಾಖಲಾಗಿದೆ.

ಸ್ಕೂಟರ್ ಕಳವು : ದೂರು

ಮಂಗಳೂರು: ಪಾರ್ಕ್ ಮಾಡಲಾಗಿದ್ದ ಸ್ಕೂಟರ್ ಒಂದು ಕಳವಾದ ಕುರಿತು ಪಾಂಡೇಶ್ವರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಸ್ಟೇಟ್ ಬ್ಯಾಂಕ್ ಬಳಿಯ ನೆಲ್ಲಿಕಾಯಿ ರಸ್ತೆಯ ಪಾವೂರು ಕಾಂಪ್ಲೆಕ್ಸ್ ಕಟ್ಟಡದ ಎದುರು ನಿಲ್ಲಿಸಿದ್ದ ಸ್ಕೂಟರ್ ಕಳವಾಗಿದ್ದು, ಈ ಕುರಿತಂತೆ ಅಬ್ದುಲ್ ರಜಾಕ್ ಕೆ. ಎಂಬವರು ದೂರು ನೀಡಿದ್ದಾರೆ.

ಪುತ್ತೂರು ಮಾರುಕಟ್ಟೆ ಧಾರಣೆ

15-06-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	420	-	470
ಚೋಲ್ ಅಡಿಕೆ	:	525	-	550
ಡಬಲ್ ಚೋಲ್	:	525	-	550
ಹೊಸ ಪಠೋರ	:	335	-	385
ಹಳೆ ಪಠೋರ	:	335	-	385
ಹೊಸ ಉಳ್ಳಿ	:	140	-	285
ಹಳೆ ಉಳ್ಳಿ	:	130	-	285
ಹೊಸ ಕೋಕಾ	:	315	-	335
ಹಳೆ ಕೋಕಾ	:	315	-	335
ಹೊಸ ಕರಿಗೋಟು	:	245	-	275
ಹಳೆ ಕರಿಗೋಟು	:	245	-	275
ಹಸಿ ಕೊಕ್ಕೋ	:	70	-	100
ಒಣ ಕೊಕ್ಕೋ	:	270	-	320

ಕಾಳುಮೆಣಸು ಧಾರಣೆ

ಕಾಳುಮೆಣಸು	:	450 - 675

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	-	267.00
ಆರ್‌ಎಸ್‌ಎಸ್ 2	-	224.00
ಸ್ಕ್ರಾಪ್ 1	-	154.00
ಸ್ಕ್ರಾಪ್ 2	-	145.00



ದ.ಕ. ಜಿಲ್ಲಾ ಅತ್ಯುತ್ತಮ ಯುವ ಮಂಡಲ ಪ್ರಶಸ್ತಿ ಪುರಸ್ಕೃತ ಮಂಗಳೂರು ಅಶೋಕನಗರ ಯುವಕ ಸಂಘದ ವತಿಯಿಂದ ಅಶೋಕನಗರ ಹಿರಿಯ ಪ್ರಾಥಮಿಕ ಶಾಲೆಯ ಬಾಲವಾಡಿಯ 14 ಮಕ್ಕಳಿಗೆ ಪುಸ್ತಕ ನೀಡಿದರು. ಪ್ರಧಾನ ಕಾರ್ಯದರ್ಶಿ ಬಿ. ಶ್ರೀನಿವಾಸ, ಉಪಾಧ್ಯಕ್ಷ ಪ್ರಭಾಕರ ಶೆಟ್ಟಿಗಾರ್, ಕೋಶಾಧಿಕಾರಿ ಆರ್. ಪ್ರವೀಣ್ ಕುಮಾರ್, ಶಾಲಾ ಮುಖೋಪಾಧ್ಯಾಯಿನಿ ಜೋಯ್ಸ್ ಹೆನ್ರಿಟಾ ಉಪಸ್ಥಿತರಿದ್ದರು.

ಛಾಯಾಗ್ರಹಣ ಕುರಿತ ಒಂದು ಗರಿಯ ಕಥೆ ವಿಶೇಷ ಪುಸ್ತಕ ಬಿಡುಗಡೆ, ಫೋಟೋ ಪ್ರದರ್ಶನ

ವಿಟ್ಲ: ಸಮಯವನ್ನು ವ್ಯರ್ಥಮಾಡದೆ ಹವ್ಯಾಸಗಳಿಗೆ ಬಳಸಿಕೊಳ್ಳುವ ಕಾರ್ಯವಾಗಬೇಕು. ನಿಸರ್ಗ ಫೋಟೋಗಳ ಪ್ರದರ್ಶನ ಎಲ್ಲಾ ಕಡೆ ನಡೆಸುವ ಜತೆಗೆ ಯುವ ಪೀಳಿಗೆಗೆ ಮಾರ್ಗದರ್ಶಕವಾಗಿರಬೇಕು ಎಂದು ಬೆಂಗಳೂರಿನ ಯು.ಕೆ. ಆಂಡ್ ಕೋ ಫೌಂಡರ್ ಕೆ. ಉಲ್ಲಾಸ್ ಕಾಮತ್ ಹೇಳಿದರು.



ವಿಟ್ಲ ಹನುಮಗಿರಿಯಲ್ಲಿ ನಡೆದ ಛಾಯಾಗ್ರಹಣ ಕುರಿತ ಒಂದು ಗರಿಯ ಕಥೆ ವಿಶೇಷ ಪುಸ್ತಕದ ಬಿಡುಗಡೆ ಹಾಗೂ ನಿಸರ್ಗದ ಫೋಟೋ ಪ್ರದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಇ ಪುಸ್ತಕ ಆವತರಣಿಕೆಗಳನ್ನು ಪುತ್ತೂರು ನರಸಿಂಹ ನಾಯಕ್ ಹಾಗೂ ಕೆ. ಜಿ. ಶೆಣೈ ಬಿಡುಗಡೆಗೊಳಿಸಿದರು. ನಿಸರ್ಗದ ಫೋಟೋ ಪ್ರದರ್ಶನವನ್ನು ಸುರೇಶ್ ಪಡ್ನವೀಸ್ ಉದ್ಘಾಟಿಸಿದರು. ವೆಬ್‌ಸೈಟ್ ಲೋಕಾರ್ಪಣೆಯನ್ನು ಎಕ್ಸ್‌ಪರ್ಟ್ ಸಂಸ್ಥೆಯ ನರೇಂದ್ರ ನಾಯಕ್, ಉಷಪ್ರಭಾ ನಾಯಕ್ ಮಾಡಿದರು.

ಅಳಿಕೆ ಸತ್ಯಸಾಯಿ ವಿದ್ಯಾಸಂಸ್ಥೆ, ವಿಟ್ಲ ಜೆಸಿಐ ವಿದ್ಯಾಸಂಸ್ಥೆ, ವಿಠಲ ಪದವಿಪೂರ್ವ ಕಾಲೇಜು, ಸರ್ಕಾರಿ ಮಾದರಿ ಶಾಲೆ, ಸಿರಿ ವಿದ್ಯಾಸಂಸ್ಥೆ ಸಾಲೆತ್ತೂರು, ಸರಸ್ವತಿ ವಿದ್ಯಾಲಯ ಕನ್ಯಾನ ಸೇರಿ ಗಣ್ಯರಿಗೆ ಪುಸ್ತಕದ ಪ್ರತಿಯನ್ನು ನೀಡಲಾಯಿತು.

ನಿವೃತ್ತ ಪ್ರಾಂಶುಪಾಲ ಆನಂತಕೃಷ್ಣ ಹೆಬ್ಬಾರ್, ಸಕಲೇಶಪುರ ಸೀನಿಯರ್ ಸಿವಿಲ್ ಜಡ್ಜ್ ಆಂಡ್ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ಜಯಪ್ರಕಾಶ್ ವಿ., ಜೈಸಿಐ ಇಂಡಿಯಾ ಹಿರಿಯ ತರಬೇತುದಾರ ಶ್ರೀಧರ್ ಕೊಡಕ್ಕಲ್, ಡಾ. ಆರುಂಧತಿ ಧಾರೇಶ್ವರ್ ಮತ್ತಿತರರಿದ್ದರು. ಉದ್ಯಮಿ ಪಿ. ರಾಧಾಕೃಷ್ಣ ಪೈ ಸ್ವಾಗತಿಸಿದರು. ಉದ್ಯಮಿ ಸುಬ್ರಾಯ ಪೈ ವಂದಿಸಿದರು. ಶಿಕ್ಷಕ ಆರವಿಂದ ಕುಡ್ಲ ಕಾರ್ಯಕ್ರಮ ನಿರೂಪಿಸಿದರು.

ಕೊಡಗಿನ ಸಿ ಆ್ಯಂಡ್ ಡಿ ಭೂಮಿ ಹೋರಾಟಕ್ಕೆ ಪಕ್ಷಾತೀತ ಬೆಂಬಲ: ಗಣ್ಯರ ಭರವಸೆ | ಬಿಜೆಪಿ ರಾಜ್ಯಾಧ್ಯಕ್ಷ, ಸಂಸದ ಉಪಸ್ಥಿತಿ

ವೀರಶೈವ ಸಮುದಾಯದ ಸಾಮಾಜಿಕ ಕೊಡುಗೆ ಅಪಾರ

ಮಡಿಕೇರಿ/ ಶನಿವಾರಸಂತೆ: ಕೊಡಗಿನಲ್ಲಿ ಸಿ ಮತ್ತು ಡಿ ವರ್ಗದ ಜಮೀನಿಗೆ ಸಂಬಂಧಿಸಿದಂತೆ ರೈತರು ನಡೆಸಲಿರುವ ಹೋರಾಟಕ್ಕೆ ಪಕ್ಷಾತೀತವಾಗಿ ಬೆಂಬಲ ನೀಡುವುದಾಗಿ ಶನಿವಾರಸಂತೆಯಲ್ಲಿ ಶನಿವಾರ ನಡೆದ ಬಸವ ಜಯಂತಿ, ಸಿದ್ದಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿ, ರೇಣುಕಾಚಾರ್ಯ ಜಯಂತಿ, ಕೊಡಗನ್ನು ಆಳಿದ ಹಾಲೇರಿ ಅರಸರ ಮತ್ತು ಸ್ವಾತಂತ್ರ್ಯ ಹೋರಾಟಗಾರ ಹೆಮ್ಮನೆ ಪುಟ್ಟಬಸಪ್ಪನವರ ಸಂಸ್ಮರಣೋತ್ಸವ ಸಮಾರಂಭದಲ್ಲಿ ಭಾಗವಹಿಸಿದ್ದ ಗಣ್ಯರು ಘೋಷಿಸಿದರು.

ಶನಿವಾರಸಂತೆಯ ಗುಡುಗಳಲೆ ಜಯದೇವ ಜಾನುವಾರುಗಳ ಜಾತ್ರಾ ಮೈದಾನದಲ್ಲಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಕೊಡಗು ಜಿಲ್ಲಾ ಘಟಕ ಹಾಗೂ ಯುವ ಘಟಕದ ಸಂಯುಕ್ತ ಆಶ್ರಯದಲ್ಲಿ ಶನಿವಾರ ಆಯೋಜಿಸಲಾಗಿದ್ದ ಬಸವ ಜಯಂತಿ, ಸಿದ್ದಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿ, ರೇಣುಕಾಚಾರ್ಯ ಜಯಂತಿ, ಕೊಡಗನ್ನು ಆಳಿದ ಹಾಲೇರಿ ಅರಸರ ಮತ್ತು ಸ್ವಾತಂತ್ರ್ಯ ಹೋರಾಟಗಾರ ಹೆಮ್ಮನೆ ಪುಟ್ಟಬಸಪ್ಪನವರ ಸಂಸ್ಮರಣೋತ್ಸವ ಸಮಾರಂಭವನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಉದ್ಘಾಟಿಸಿದರು.

ಈ ಸಂದರ್ಭ ಮಾತನಾಡಿದ ಅವರು, ಕೊಡಗಿನ ಪುಣ್ಯಭೂಮಿಯಲ್ಲಿ ಶರಣರ ಜಯಂತಿ, ಕೊಡಗನ್ನು ಆಳಿದ ಅರಸರ ಮತ್ತು ಸ್ವಾತಂತ್ರ್ಯ ಹೋರಾಟಗಾರ ಸಂಸ್ಮರಣೋತ್ಸವವನ್ನು ಆಚರಿಸುವ ಮೂಲಕ ವೀರಶೈವ ಸಮುದಾಯವು ಆಧ್ಯಾತ್ಮಿಕ, ಸಾಮಾಜಿಕ ಮತ್ತು ರಾಷ್ಟ್ರ ಭಕ್ತಿಯ ಸಂಗಮಕ್ಕೆ ಅವಕಾಶ ಕಲ್ಪಿಸಿರುವುದು ಶ್ಲಾಘನೀಯ ಎಂದರು.



ಬಸವಣ್ಣನವರು 12ನೇ ಶತಮಾನದಲ್ಲಿ ಸಾಮಾಜಿಕ ಚಿಂತನೆ, ಸಮಾನತೆಯಡಿ ಸಾಮಾಜಿಕ ಹೋರಾಟ ಮಾಡಿದ್ದರು. ಇವರಿಗೆ ಪೂರಕವಾಗಿ 21ನೇ ಶತಮಾನದಲ್ಲಿ ಸಿದ್ದಗಂಗಾ ಶ್ರೀಗಳಾದ ಶಿವಕುಮಾರ ಸ್ವಾಮೀಜಿಯವರು ಶಿಕ್ಷಣ, ದಾಸೋಹ ಮುಂತಾದ ಸಮಾಜ ಸೇವೆ ಮಾಡುವ ಮೂಲಕ ಮುಂದಿನ ಪೀಳಿಗೆಗೂ ದಾರಿದೀಪವಾಗಿದ್ದರು ಎಂದು ವಿಜಯೇಂದ್ರ ವಿಶ್ಲೇಷಿಸಿದರು.

ರಾಜ್ಯಕ್ಕೆ ವೀರಶೈವ ಸಮುದಾಯದವರ ಆಧ್ಯಾತ್ಮಿಕ ಸಂಸ್ಕೃತಿ, ಪರಂಪರೆ, ಸಾಮಾಜಿಕ ಕೊಡುಗೆ ಅಪಾರವಾದುದು. ಈ ನಿಟ್ಟಿನಲ್ಲಿ ವೀರಶೈವ ಸಮುದಾಯ ಒಟ್ಟಾಗಿ ನಿಂತು ಸಮುದಾಯದ ಸಂಘಟನೆಯ ಬಲವರ್ಧನೆ ಸಹಕರಿಸಬೇಕೆಂದು ಅವರು ಕರೆ ನೀಡಿದರು.

ಸಂಘಟನೆಯ ಬಲವರ್ಧನೆ

ಮೈಸೂರು–ಕೊಡಗು ಕ್ಷೇತ್ರದ ಸಂಸದ ಯದುವೀರ್ ಒಡೆಯರ್ ಮಾತನಾಡಿ, ಸಮುದಾಯದ ಸಂಘಟನೆಯ ಬಲವರ್ಧನೆಗೆ ಇಂತಹ ಜಯಂತ್ಯುತ್ಸವ, ಸಂಸ್ಮರಣೋತ್ಸವ ಕಾರ್ಯಕ್ರಮಗಳ ಅಗತ್ಯವಿದೆ. ಕೊಡಗಿನಲ್ಲಿ ವೀರಶೈವ ಮಹಾಸಭಾ ವತಿಯಿಂದ ಇಂತಹ ಯಶಸ್ವಿ ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನಿಯ. ಬಸವಣ್ಣನವರ ತತ್ವ, ಆದರ್ಶ, ಸಾಮಾಜಿಕ ಮಾರ್ಗದರ್ಶನವನ್ನು ಮೈಸೂರು ರಾಜವಂಶ ಪಾಲಿಸಿದ್ದರು ಎಂದು ಹೇಳಿದರು.

ಮಡಿಕೇರಿ ಶಾಸಕ ಡಾ.ಮಂಥರ್ ಗೌಡ ಮಾತನಾಡಿ, ಸಮಾಜದಲ್ಲಿ ಜಾತಿ, ಸಮುದಾಯ ಎಂಬ ಬೇಧಭಾವ ಇಲ್ಲದೆ ಎಲ್ಲರನ್ನೂ ಒಂದೆಡೆಗೆ ಕೊಂಡೊಯ್ಯಬೇಕು. ಕೊಡಗಿನ ಸಿ ಆ್ಯಂಡ್ ಡಿ ಲ್ಯಾಂಡ್ ಹೋರಾಟಕ್ಕೆ ನಾವೆಲ್ಲರೂ ಹೋರಾಟಗಾರ ಬೆಂಬಲಕ್ಕೆ ನಿಂತಿರುವುದಾಗಿ ಹೇಳಿದರು.

ಸ್ವಾತಂತ್ರ ಹೋರಾಟಗಾರ ಹೆಮ್ಮನೆ ಪುಟ್ಟಬಸಪ್ಪ ಅವರ ಸ್ಮಾರಕ ನಿರ್ಮಾಣಕ್ಕೆ ಗ್ರಾಮದಲ್ಲಿ ಜಾಗ ನೀಡಿದಲ್ಲಿ ಸರಕಾರದಿಂದ ಅಗತ್ಯ ಅನುದಾನ ಒದಗಿಸಿಕೊಡುವುದಾಗಿಯೂ ಅವರು ಭರವಸೆ ನೀಡಿದರು.

ಸಮಾರಂಭದಲ್ಲಿ ಸಿದ್ದಗಂಗಾ ಮಠದ ಶಿವ ಸಿದ್ದೇಶ್ವರ ಸ್ವಾಮೀಜಿ ಆಶೀರ್ವಚನ ನೀಡಿದರು. ಹೈಕೋರ್ಟಿನ ಹಿರಿಯ ವಕೀಲ ಚಂದ್ರಮೌಳಿ, ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್, ಮಾಹಿತಿ ಹಕ್ಕು ಆಯೋಗದ ನಿವೃತ್ತ ಆಯುಕ್ತ ವಿರೂಪಾಕ್ಷಯ್ಯ, ವೀರಶೈವ ಯುವ ಘಟಕದ ಅಧ್ಯಕ್ಷ ಮೋಕ್ಷಿಕ್ ರಾಜ್, ಮುಖಂಡ ಕಾಂತರಾಜ್ ಮುಂತಾದವರಿದ್ದರು.

ಮನೆಹಳ್ಳಿ ಮಠದ ಮಹಾಂತ ಶಿವಲಿಂಗ ಸ್ವಾಮೀಜಿ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಜಿಲ್ಲೆಯ ವಿವಿಧ ಮಠಗಳ ಮಠಾಧೀಶರುಗಳು ದಿವ್ಯ ಸಾನಿಧ್ಯವಹಿಸಿದ್ದರು.

ಹೋರಾಟಕ್ಕೆ ಬೆಂಬಲ

ಕೊಡಗಿನಲ್ಲಿ ಸಿ ಆ್ಯಂಡ್ ಡಿ ಭೂಮಿ ವಿಚಾರದಲ್ಲಿ ರೈತರ ಬೆಂಬಲಕ್ಕೆ ಹೋರಾಟಗಾರರೊಂದಿಗೆ ಜನಪ್ರತಿನಿಧಿಗಳೆಲ್ಲರೂ ಒಗ್ಗಟ್ಟಿನಿಂದ ಪಕ್ಷಾತೀತವಾಗಿ ಬೆಂಬಲಕ್ಕೆ ಬರುವುದಾಗಿ ಅವರು ಹೇಳಿದರು. ವೀರಶೈವ ಮಹಾಸಭಾದ ರಾಜ್ಯಾಧ್ಯಕ್ಷ ಶಂಕರ್ ಬಿದರಿ ಮಾತನಾಡಿ, ವೀರಶೈವ ಸಮುದಾಯದಲ್ಲಿ ಯಾವುದೇ ಬಿನ್ನಾಭಿಪ್ರಾಯಗಳಿದ್ದರೂ ಅದನ್ನು ಬಗೆಹರಿಸಿಕೊಂಡು ಸಂಘಟನೆಯ ಬೆಳವಣಿಗಾಗಿ ಎಲ್ಲರೂ ಒಗ್ಗಟ್ಟಾಗಿರಬೇಕು. ಕೊಡಗು ಜಿಲ್ಲೆಯಲ್ಲಿ ಪ್ರತಿಯೊಂದು ತಾಲೂಕು, ಹೋಬಳಿ ಘಟಕಗಳು ಸಕ್ರಿಯವಾಗಬೇಕು. ಬಸವಣ್ಣನವರ ನಂತರದಲ್ಲಿ ಶಿವಕುಮಾರ ಸ್ವಾಮೀಜಿಗಳು 88 ವರ್ಷಗಳ ಕಾಲ ಶಿಕ್ಷಣ, ದಾಸೋಹ, ಸಾಮಾಜಿಕ ಕಳಕಳಿಯಲ್ಲಿ ಮಠವನ್ನು ಮುನ್ನಡೆಸಿದ್ದಾರೆ. ಈ ಹಾದಿ ಮುಂದೆ ಸೂರ್ಯಚಂದ್ರ ಇರುವರೆಗೂ ಮುಂದುವರೆಯುತ್ತದೆ ಎಂದರು.

ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮ: ಶಾಸಕಿ ಭಾಗೀರಥಿ ಮುರುಳ್ಯ



ಸುಳ್ಯ: ಸುಳ್ಯ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮವಹಿಸಿ ಕೆಲಸ ಮಾಡಲಾಗುವುದು ಎಂದು 24 ಲಕ್ಷರೂಪಾಯಿಗಳಲ್ಲಿ ಕಾಯರ್ತೋಡಿ ದೇಗುಲಕ್ಕೆ ತೆರಳುವ ಕಾಂಕ್ರೀಟ್ ರಸ್ತೆ ಉದ್ಘಾಟಿಸಿ ಶಾಸಕಿ ಭಾಗೀರಥಿ ಮುರುಳ್ಯ ತಿಳಿಸಿದರು.

ಅವರು ಕಾಯರ್ತೋಡಿ ದೇಗುಲಕ್ಕೆ ತೆರಳುವ ರಸ್ತೆ ಕಾಂಕ್ರೀಟೀಕರಣ ಉದ್ಘಾಟಿಸಿ ಮಾತನಾಡಿ ಶಾಸಕರ ಅನುದಾನ 20 ಲಕ್ಷ ಮತ್ತು ಸ್ಥಳೀಯ ಪಟ್ಟಣ ಪಂಚಾಯತ್ ಮಾಜಿ ಸದಸ್ಯ ಪ್ರವಿತಾ ಪ್ರಶಾಂತ್ ನೀಡಿದ 4 ಲಕ್ಷ ರೂ ಅನುದಾನದಲ್ಲಿ ನಡೆದ ಕಾಯರ್ತೋಡಿ ದೇವಸ್ಥಾನದ ರಸ್ತೆಯ ಕಾಂಕ್ರೀಟೀಕರಣವನ್ನು ಮಾಡಲಾಗಿದ್ದು ಅಲ್ಲದೇ ಈ ಬಾರಿ ಸುಳ್ಯ ಪಟ್ಟಣದ 4 ರಸ್ತೆಗಳಿಗೆ ತಲಾ 20 ಲಕ್ಷ ರೂರಂತೆ ನೀಡಿದ್ದು ಒಟ್ಟು 80 ಲಕ್ಷ ರೂವನ್ನು ಸೇರಿಸಿ ಈಗಾಗಲೇ ಪಟ್ಟಣಕ್ಕೆ ಅನುದಾನವನ್ನು ನೀಡಿದ್ದು ಮುಂದಿನ ದಿನಗಳಲ್ಲಿ ಇನ್ನಷ್ಟು ಅನುದಾನವನ್ನು ತರಲು ಪ್ರಯತ್ನಿಸುವುದಾಗಿ ಅವರು ಹೇಳಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ವೆಂಕಟ್ ವಲಲಂಬೆ, ಪ್ರಧಾನ ಕಾರ್ಯದರ್ಶಿ ವಿನಯಕುಮಾರ್ ಕಂದಡ್ಕ, ಪಟ್ಟಣ ಪಂಚಾಯತ್ ಮಾಜಿ ಸದಸ್ಯೆ ಪ್ರವಿತಾ ಪ್ರಶಾಂತ್, ಮಾಜಿ ಅಧ್ಯಕ್ಷ ಎನ್. ಎ. ರಾಮಚಂದ್ರ, ಕಾಯರ್ತೋಡಿ ದೇವಸ್ಥಾನದ ಮಾಜಿ ಆಡಳಿತ ಸಮಿತಿ ಅಧ್ಯಕ್ಷ ಪಿಕೆ ಉಮೇಶ್, ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಕೃಷ್ಣ ಕಾಮತ್, ರಸ್ತೆಗೆ ಈ ಹಿಂದೆ ಸ್ಥಳ ದಾನ ಮಾಡಿದ ದೆಂಗೋಡಿ ಕುಟುಂಬಸ್ಥರು ಮತ್ತು ಅಳಿಕೆ ಮಜಲು ಕುಟುಂಬಸ್ಥರು, ಕಾಯರ್ತೋಡಿ ದೇವಸ್ಥಾನ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಎಂ. ವೆಂಕಪ್ಪ ಗೌಡ ಹಾಗೂ ಸಮಿತಿ ಸದಸ್ಯರು, ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ನವೀನ್ ಕುದ್ಪಾಜೆ ಸ್ವಾಗತಿಸಿ ದೇವಿ ಪ್ರಸಾದ್ ವಂದಿಸಿದರು. ಕುಸುಮಾದರ ಎ. ಟಿ. ಕಾರ್ಯಕ್ರಮ ನಿರೂಪಿಸಿದರು.

ಹರಿಹರ: ನಿವೃತ್ತ ಯೋಧರಿಗೆ, ಶೈಕ್ಷಣಿಕ ಸಾಧಕಿಗೆ ಗೌರವಾರ್ಪಣೆ



ಸುಬ್ರಹ್ಮಣ್ಯ: ಸುಳ್ಯ ತಾಲೂಕಿನ ಹರಿಹರ ಪಲ್ಲತ್ತಡ್ಕದ ಸಚಿನ್ ಕ್ರೀಡಾ ಸಂಘದ ಆಶ್ರಯದಲ್ಲಿ ಹರಿಹರ ಪಳ್ಳತ್ತಡ್ಕದ ಶ್ರೀ ಹರಿಹರೇಶ್ವರ ದೇವಸ್ಥಾನದ ಕಲಾಮಂದಿರದಲ್ಲಿ ನಿವೃತ್ತ ಯೋಧ ಭಾಸ್ಕರ ಕೇಮಟಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.99 ಅಂಕ ಗಳಿಸಿ ರಾಜ್ಯಕ್ಕೆ 5ನೇ ಸ್ಥಾನ ಪಡೆದ ಆಶಿಕಾ ಮುಂಡಾಜೆ ಅವರಿಗೆ ಅಭಿನಂದನಾ ಸಮಾರಂಭ ಭಾನುವಾರ ನಡೆಯಿತು.

ಭವ್ಯ ಮೆರವಣಿಗೆ

ಬೆಳಿಗ್ಗೆ ಹರಿಹರ ಪಳ್ಳತ್ತಡ್ಕ ಮುಖ್ಯ ಪೇಟೆಯಿಂದ ಶ್ರೀ ಹರಿಹರೇಶ್ವರ ದೇವಸ್ಥಾನದ ವರೆಗೆ ನಿವೃತ್ತ ಯೋಧ ಭಾಸ್ಕರ ಕೇಮಟಿ ಅವರನ್ನು ತೆರೆದ ವಾಹನದಲ್ಲಿ ಭವ್ಯ ಮೆರವಣಿಗೆಯ ಮೂಲಕ ಕರೆತರ ಲಾಯಿತು. ಪ್ರಮುಖರಾದ ನಿತ್ಯಾನಂದ ಎಲ್ಲಪ್ಪಡ್ಕ ಮೆರವಣಿಗೆಗೆ ಚಾಲನೆ ನೀಡಿದರು.

ಅಭಿನಂದನಾ ಹಾಗೂ ಸನ್ಮಾನ ಸಮಾರಂಭವನ್ನು ಲೋಕಸಭಾ ಕನ್ಸಲ್ಟೆಂಟ್ ಇಂಟರ್‌ಪ್ರೆಟರ್ ಡಾ. ಗೋವಿಂದ.ಎನ್.ಎಸ್ ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಮನೀಷ್ ಗುಂಡಿಹಿತ್ಲು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಉಪನ್ಯಾಸಕರಾದ ರಾಮಚಂದ್ರ ಪಳಂಗಾಯ, ಶ್ರೀ ಹರಿಹರೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಜಗದೀಶ್ ಪಡ್ಪು, ಹಿರಿಯ ಸಾಹಿತಿ ಲಲಿತಾಜ ಮಲ್ಲಾರ, ಸುಳ್ಯ ಯುವಜನ ಸಂಯುಕ್ತ ಮಂಡಳಿಯ ನಿರ್ದೇಶಕರಾದ ದಿನೇಶ್ ಹಾಲೆಮಜಲು ಮುಖ್ಯ ಅತಿಥಿಗಳಾಗಿದ್ದರು. ಭಾಸ್ಕರ ಕೇಮಟಿ ಅವರ ಪತ್ನಿ ಭಾರತಿ, ತಂದೆ ಚೆನ್ನಪ್ಪ ಕೇಮಟಿ, ತಾಯಿ ಪದ್ಮಾವತಿ, ಆಶಿಕಾ ಮುಂಡಾಜೆ ಅವರ ಅಜ್ಜಿ ಭಾಗೀರಥಿ ಮುಂಡಾಜೆ, ತಾಯಿ ಲತಾ ದಿವಾಕರ ಮುಂಡಾಜೆ ಉಪಸ್ಥಿತರಿದ್ದರು.

ಹರ್ಷಿತಾ ಬಾಲಸುಬ್ರಹ್ಮಣ್ಯ ಹಾಗೂ ಶ್ರೀದೇವಿ ಪ್ರಾರ್ಥನೆ ಹಾಡಿದರು. ಪ್ರಿಯ ಕಲ್ಲೇಮಠ ಸ್ವಾಗತಿಸಿ, ಅರುಣ್ ಮಿತ್ತಮಜಲು ವಂದಿಸಿದರು. ಋತು ಎಲ್ಲಪಡ್ಕ ನಿರೂಪಿಸಿದರು.

ಮಕ್ಕಳ ಆರೋಗ್ಯ ವಿಷಯದಲ್ಲಿ ನಿರ್ಲಕ್ಷ ಬೇಡ: ಡಾ.ರಾಜೇಶ್



ಮಂಗಳೂರು: ಮಕ್ಕಳಲ್ಲಿ ಮಾತು, ಭಾಷೆ, ಸಂವಹನ, ಚಲನೆ, ಗಮನ ಹಾಗೂ ದೈನಂದಿನ ಚಟುವಟಿಕೆಗಳ ವಿಷಯದಲ್ಲಿ ಬದಲಾವಣೆ ಕಂಡುಬಂದರೆ ನಿರ್ಲಕ್ಷ್ಯ ಸಲ್ಲದು ಎಂದು ದಕ್ಷಿಣ ಕನ್ನಡ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಲ್ಯಾಣಾಧಿಕಾರಿ ಡಾ.ರಾಜೇಶ್ ಬಿ.ವಿ. ಅಭಿಪ್ರಾಯಪಟ್ಟರು.

ಮಂಗಳೂರಿನ ಸ್ಪರ್ಕಾಲ್ಸ್ ಸ್ಪೀಚ್ ಮತ್ತು ಆಕ್ಯುಪೇಷನಲ್ ಥೆರಪಿ ಕೇಂದ್ರದ ವತಿಯಿಂದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆ ಯಲ್ಲಿ ಅತ್ಯಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ನಡೆದ ಅಭಿನಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮುಡಾ ಅಧ್ಯಕ್ಷ ಸದಾಶಿವ ಉಳ್ಳಾಲ ಉದ್ಘಾಟಿಸಿ, ಮಕ್ಕಳ ಯಾವುದೇ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲೇ ಗುರುತಿಸಿ ಸೂಕ್ತ ಚಿಕಿತ್ಸೆ ನೀಡಿದರೆ ಅವರ ಬೆಳವಣಿಗೆಯಲ್ಲಿ ಗಮನಾರ್ಹ ಬದಲಾವಣೆ ತರಬಹುದು ಎಂದರು.

ಸಾಹಿತಿ ಡಾ.ಶಿವಾನಂದ ಬೇಕಲ್, ಡಾ.ಕಿಶನ್ ಆಳ್ವ, ಸುಧೀರ್ ಕುಮಾರ್ ಬೇಕಲ್, ನರೇಶ್ ಬಬ್ಬುಕಟ್ಟೆ, ಕೃಷ್ಣಪ್ಪ, ಡಾ. ಶ್ವೇತ ಮುಂತಾದವರಿದ್ದರು. ಅಭಿಷೇಕ್ ಬೇಕಲ್ ಸ್ವಾಗತಿಸಿದರು. ಸಂಸ್ಥೆಯ ಮುಖ್ಯಸ್ಥೆ ಅಂಜನಾ ಅಭಿಷೇಕ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಹರೀಶ್ ಕುಮಾರ್ ವಂದಿಸಿದರು. ದೈಹಿಕ ಶಿಕ್ಷಣ ಶಿಕ್ಷಕ ತ್ಯಾಗಮ್ ಹರೇಕಳ ಮತ್ತು ರೋಷಲ್ ಪ್ರಕಾಶ್ ನಿರೂಪಿಸಿದರು.

ಕ್ರಿಕೆಟ್ ಲೋಕದ ಹೊಸ ಪ್ರತಿಭೆಗಳನ್ನು ಪರಿಚಯಿಸುವ ಐಪಿಎಲ್ ಟೂರ್ನಿ

ಭಾರತೀಯ ಕ್ರಿಕೆಟ್‌ಗೆ ಹೊಸ ಪ್ರತಿಭೆಗಳನ್ನು ಪರಿಚಯಿಸುವ ವೇದಿಕೆ ಎಂದರೆ ಅದು ಎಲ್ಲರ ಅಚ್ಚುಮೆಚ್ಚಿನ ಐಪಿಎಲ್. ಏಕೆಂದರೆ ಈ ಟೂರ್ನಿಯ ಮುಖ್ಯ ಉದ್ದೇಶವೇ ಹೊಸ ಪ್ರತಿಭೆಗಳಿಗೆ ಸೂಕ್ತ ಅವಕಾಶಗಳನ್ನು ಒದಗಿಸುವುದಾಗಿದೆ. 'ಯಾತ್ರ ಪ್ರತಿಭಾ ಅವಸರ ಪ್ರಾಪ್ನೋತಿಹಿ' ಅಂದರೆ 'ಪ್ರತಿಭೆ ಅವಕಾಶವನ್ನು ಸಂಧಿಸುವ ಸ್ಥಳ' ಎಂದು ಟ್ರೋಫಿಯಲ್ಲಿ ಸಂಸ್ಕೃತದಲ್ಲಿ ಕೆತ್ತಲಾಗಿದೆ. ಇಲ್ಲಿ ಮಿಂಚಿ ಭಾರತ ತಂಡದ ಭಾಗವಾದ ಅದೆಷ್ಟೋ ಮಂದಿ ಇದ್ದಾರೆ. ಸೂರ್ಯಕುಮಾರ್ ಯಾದವ್, ಅಭಿಷೇಕ್ ಶರ್ಮ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಒಮ್ಮೆ ಆರ್ಭಟಿಸಿ ಮರೆಯಾದವರೂ ಇದ್ದಾರೆ.

ಮೊದಲ ಮಳೆಗೆ ಗಿಡಗಳಿಗೆ ಹೊಸ ಚಿಗುರು ಬರುವಂತೆ ಅನೇಕ ಯುವ, ಪ್ರತಿ ಭಾನ್ವಿತ ಭಾರತೀಯ ಕ್ರಿಕೆಟಿಗರು ತಮ್ಮ ಮೊದಲ ಸೀಸನ್‌ನಲ್ಲೇ ವಿವಿಧ ತಂಡಗಳಲ್ಲಿ ಮಿಂಚಿ ತಮ್ಮ ಛಾಪನ್ನು ಮೂಡಿಸಿದ್ದಾರೆ. ಅವರ ಕಿರುಪರಿಚಯ ಇಲ್ಲಿದೆ... (ವೈಭವ್ ಸೂರ್ಯವಂಶಿ ಈಗಾಗಲೇ ಸಿಡಿಲಂತೆ ಅಬ್ಬರಿಸಿ ಹೆಸರುವಾಸಿಯಾಗಿರುವ ಕಾರಣ ಇಲ್ಲಿ ಉಲ್ಲೇಖಿಸಿಲ್ಲ)

ಪ್ರಫುಲ್ ಹಿಂಗೆ

ದೇಶೀಯ ಕ್ರಿಕೆಟ್‌ನಲ್ಲಿ ವಿಧರ್ಭ ಪರ ಆಡುವ ಇವರು ತನ್ನ ಚೊಚ್ಚಲ ಪಂದ್ಯದಲ್ಲೇ 4 ವಿಕೆಟ್ ಕಿತ್ತು ಗಮನಸೆಳೆದರು. ಪಾದಾರ್ಪಣೆಯ ಪಂದ್ಯದ ಮೊದಲ ಓವರ್‌ನಲ್ಲೇ 3 ವಿಕೆಟ್ ಕಿತ್ತ ದಾಖಲೆ ಇವರ ಹೆಸರಿನಲ್ಲಿದೆ. ಬಲಗೈ ವೇಗದ ಬೌಲರ್ ಆಗಿ ತಂಡಕ್ಕೆ ಅಗತ್ಯವಾದಾಗ ವಿಕೆಟ್ ಕಬಳಿಸಿದ್ದಾರೆ. ಆಡಿದ 7 ಪಂದ್ಯಗಳಲ್ಲಿ 14 ವಿಕೆಟ್ ಉಡಾಯಿಸಿದ್ದಾರೆ.

ಸಾಕಿಬ್ ಹುಸೇನ್

ಬಡತನದಿಂದ ಬೆಳಕಿಗೆ ಬಂದು ಮಿಂಚಿದ ಬಿಹಾರದ 21 ವರ್ಷ ವಯಸ್ಸಿನ ಈ ಪ್ರತಿಭೆ ಹೈದರಾಬಾದ್ ತಂಡದ ಪ್ರಮುಖ ವಿಕೆಟ್ ಟೇಕರ್ ಆಗಿದ್ದಾರೆ. ಇವರೂ ಕೂಡ ಪಾದಾರ್ಪಣೆಯ ಪಂದ್ಯದಲ್ಲೇ 4 ವಿಕೆಟ್ ಕಿತ್ತ ಕೀರ್ತಿ ಇವರದು. ಬಲಗೈ ವೇಗಿಯಾದ ಇವರು ಉತ್ತಮ ಸ್ಲೋ ಓವರ್ ಬಾಲ್‌ಗಳನ್ನು ಎಸೆಯುವುದರಲ್ಲಿ ನಿಸ್ಸೀಮರು. ಆಡಿದ 11 ಪಂದ್ಯಗಳಲ್ಲಿ 15 ವಿಕೆಟ್ ಬೇಟೆಯಾಡಿದ್ದಾರೆ.



ಶಿವಾಂಗ್ ಕುಮಾರ್

ಎಡಗೈ ರಿಸ್ಟ್ ಸ್ಪಿನ್ನರ್ ಆದ ಇವರು ಮಧ್ಯಪ್ರದೇಶದ ಪ್ರತಿಭೆ. 23 ವರ್ಷ ವಯಸ್ಸಿನ ಇವರು ಆಡಿದ 13 ಪಂದ್ಯಗಳಲ್ಲಿ 9 ವಿಕೆಟ್ ಗಳಿಸಿದ್ದಾರೆ. ಹೈದರಾಬಾದ್ ತಂಡದ ಪರ ಉತ್ತಮ ಪ್ರದರ್ಶನ ನೀಡಿದ್ದಾರೆ. ಈ ಮೂವರು ಬೌಲರ್‌ಗಳನ್ನು ಗುರುತಿಸುವಲ್ಲಿ ತಂಡದ ಬೌಲಿಂಗ್ ಕೋಚ್ ವರುಣ್ ಆರೋನ್ ಅವರ ಪಾತ್ರವನ್ನು ಮರೆಯುವಂತಿಲ್ಲ.

ಕಾರ್ತಿಕ್ ಶರ್ಮ

ಹರಾಜಿನಲ್ಲಿ 14.20 ಕೋಟಿ ರೂಪಾಯಿಗಳಿಗೆ ಸೇಲ್ ಆಗುವ ಮೂಲಕ ಭಾರೀ ಸದ್ದು ಮಾಡಿದ್ದರು. ಆರಂಭದಲ್ಲಿ ತುಸು ವೈಫಲ್ಯವನ್ನು ಕಂಡರೂ ನಂತರ ಆಡಿದ 11 ಪಂದ್ಯಗಳಲ್ಲಿ 295 ರನ್ ಸಿಡಿಸಿದ್ದಾರೆ. ಚೆನ್ನೈ ತಂಡದ ಮಧ್ಯಮ ಕ್ರಮಾಂಕಕ್ಕೆ ಬಲ ತುಂಬಿದರು. 20 ವರ್ಷ ವಯಸ್ಸಿನ ಬಲಗೈ ಬ್ಯಾಟರ್ ಹಾಗೂ ವಿಕೆಟ್ ಕೀಪರ್ ಆಗಿರುವ ಇವರು ರಾಜಸ್ಥಾನದವರು.

ಪ್ರಿನ್ಸ್ ಯಾದವ್

ದೆಹಲಿಯವರಾದ ಇವರು ಲಕ್ನೋ ತಂಡದ ವಿಕೆಟ್ ಟೇಕಿಂಗ್ ಬೌಲರ್ ಆಗಿದ್ದಾರೆ. ಬಲಗೈ ವೇಗದ ಬೌಲರ್ ಆದ ಇವರು ತಮ್ಮ ನಿಖರ ಯಾರ್ಕರ್ ಎಸೆತಗಳಿಗೆ ಹೆಸರುವಾಸಿ. ಆಡಿದ 14 ಪಂದ್ಯಗಳಲ್ಲಿ 16 ವಿಕೆಟ್ ಉರುಳಿಸಿದ್ದಾರೆ. ಕಳೆದ ಆವೃತ್ತಿಯಲ್ಲೂ ತಂಡದ ಭಾಗವಾಗಿದ್ದರು. ಅಫ್ಘಾನಿಸ್ತಾನದ ವಿರುದ್ಧದ ಏಕದಿನ ಸರಣಿಗೆ ಭಾರತ ತಂಡಕ್ಕೆ ಇವರು ಆಯ್ಕೆಯಾಗಿದ್ದಾರೆ.

ಬ್ರಿಜೇಶ್ ಶರ್ಮ

ಜಮ್ಮು ಕಾಶ್ಮೀರದ 27 ವರ್ಷ ವಯಸ್ಸಿನ ಬಲಗೈ ವೇಗಿಯಾದ ಇವರು ರಾಜಸ್ಥಾನ ತಂಡದ ಪ್ರಮುಖ ಬೌಲರ್ ಆಗಿದ್ದಾರೆ. ಉತ್ತಮ ಪ್ರದರ್ಶನ ನೀಡಿದ್ದಾರೆ. ಆಡಿದ 13 ಪಂದ್ಯಗಳಲ್ಲಿ 14 ವಿಕೆಟ್ ಗಳಿಸಿದ್ದಾರೆ.

ಯಶ್ ರಾಜ್ ಪೂಂಜ

ಮೂಲತಃ ಮಂಗಳೂರಿನವರಾದ ಇವರು ರಾಜಸ್ಥಾನ ತಂಡದ ಪರ ಶಿಸ್ತು ಬದ್ಧ ಬೌಲಿಂಗ್ ದಾಳಿ ನಡೆಸಿ ಹೆಸರುವಾಸಿಯಾಗಿದ್ದಾರೆ. 6 ಅಡಿ ಎತ್ತರದ ಬಲಗೈ ಸ್ಪಿನ್ನರ್ ಆದ ಇವರು ಆಡಿದ 8 ಪಂದ್ಯಗಳಲ್ಲಿ 9 ವಿಕೆಟ್ ಉಡಾಯಿಸಿದ್ದಾರೆ. ಇವರ ವಯಸ್ಸು 20. ಈ ಮೊದಲು ರಾಜಸ್ಥಾನ ತಂಡದ ನೆಟ್ ಬೌಲರ್ ಕೂಡ ಆಗಿದ್ದರು.

ಅಂಗ್ ಕ್ರಿಶ್ ರಘುವಂಶಿ

ಮುಂಬೈಯವರಾದ ಇವರು ಕೆಕೆಆರ್ ತಂಡದ ಮಧ್ಯಮ ಕ್ರಮಾಂಕದ ಶಕ್ತಿಯಾಗಿದ್ದಾರೆ. ಬಲಗೈ ಬ್ಯಾಟರ್ ಹಾಗೂ ವಿಕೆಟ್ ಕೀಪರ್ ಆಗಿರುವ ಇವರು ಆಡಿದ 12 ಪಂದ್ಯಗಳಲ್ಲಿ 422 ರನ್ ಸಿಡಿಸಿ ಗಮನ ಸೆಳೆದಿದ್ದಾರೆ. ಕಳೆದ ಎರಡು ವರ್ಷಗಳಿಂದ ತಂಡದಲ್ಲಿದ್ದರೂ ಈ ವರ್ಷ ಅತ್ಯುತ್ತಮ ಪ್ರದರ್ಶನವನ್ನು ನೀಡಿದ್ದಾರೆ. ಗಾಯದ ಸಮಸ್ಯೆಯಿಂದಾಗಿ ಕೊನೆಯಲ್ಲಿ ಕೆಲವು ಪಂದ್ಯಗಳಿಂದ ಹೊರಗೆ ಉಳಿಯಬೇಕಾಯಿತು.

ರಸಿಕ್ ಸಲಾಂ ದಾರ್

ಈ ಹಿಂದೆ ಐಪಿಎಲ್‌ನಲ್ಲಿ ಮುಂಬೈ ಮತ್ತು ಡೆಲ್ಲಿ ತಂಡದ ಪರ ಆಡಿದ್ದ ಇವರು ಈ ಬಾರಿ ಆರ್‌ಸಿಬಿ ತಂಡದ ಪರ ಅತ್ಯುನ್ನತ ಪ್ರದರ್ಶನವನ್ನು ನೀಡಿದ್ದಾರೆ. ಮಧ್ಯಮ ಹಾಗೂ ಡೆತ್ ಓವರ್‌ಗಳಲ್ಲಿ ವಿಕೆಟ್ ಟೇಕರ್ ಆಗಿದ್ದಾರೆ. ಬಲಗೈ ವೇಗದ ಬೌಲರ್ ಆದ ಇವರು ಆಡಿದ 12 ಪಂದ್ಯಗಳಲ್ಲಿ 19 ವಿಕೆಟ್ ಬೇಟೆಯಾಡಿದ್ದಾರೆ.

ಸೂರ್ಯಾಂಶ್ ಶೆಡ್ಗೆ

ಮುಂಬೈಯ ಆಲ್‌ರೌಂಡರ್ ಆದ ಇವರು ಪಂಜಾಬ್ ತಂಡದ ಪರ ಉಪಯುಕ್ತ ಇನ್ನಿಂಗ್ಸ್‌ಗಳನ್ನು ಆಡಿದ್ದಾರೆ. ಬಲಗೈ ಮಧ್ಯಮ ಕ್ರಮಾಂಕದ ಬ್ಯಾಟರ್ ಆದ ಇವರು ಆಡಿದ 7 ಪಂದ್ಯಗಳಲ್ಲಿ 175ರ ಸ್ಟ್ರೈಕ್ ರೇಟ್ ನಲ್ಲಿ 158 ರನ್ ಗಳನ್ನು ಚಚ್ಚಿದ್ದಾರೆ. ಇವರ ವಯಸ್ಸು 23. ಆಕ್ರಮಣಕಾರಿ ಬ್ಯಾಟಿಂಗ್ ಮಾಡಬಲ್ಲರು. ಕಳೆದ ಆವೃತ್ತಿಯಲ್ಲೂ ತಂಡದ ಭಾಗವಾಗಿದ್ದರು.

ಇವರಲ್ಲದೆ ಡೆಲ್ಲಿ ತಂಡದ ಬ್ಯಾಟರ್ ಸಮೀರ್ ರಿಜ್ವಿ, ಕೊಲ್ಕತ್ತಾದ ವೇಗದ ಬೌಲರ್ ಕಾರ್ತಿಕ್ ತ್ಯಾಗಿ, ಗುಜರಾತಿನ ವೇಗದ ಬೌಲರ್ ಅಶೋಕ್ ಶರ್ಮ ಹಾಗೂ ಲಕ್ನೋ ತಂಡದ ಫಿನಿಷರ್ ಮುಕುಲ್ ಚೌಧರಿ ಅವರ ಕೂಡ ಭರವಸೆಯ ಪ್ರದರ್ಶನವನ್ನು ನೀಡಿ ಎಲ್ಲರ ಚಿತ್ತವನ್ನು ತಮ್ಮತ್ತ ಸೆಳೆದಿದ್ದಾರೆ. ಈ ಆಟಗಾರರಿಗೆ ಸತತ ಅವಕಾಶಗಳು ಸಿಕ್ಕಿ ನಿರಂತರವಾಗಿ ಇದೇ ಉತ್ತಮ ಪ್ರದರ್ಶನವನ್ನು ಮುಂದುವರಿಸಿದಲ್ಲಿ ಮುಂದೆ ಭಾರತ ತಂಡದ ಪ್ರಮುಖ ಭಾಗವಾಗುವುದರಲ್ಲಿ ಸಂಶಯವಿಲ್ಲ.

ವರುಣ ಕೃಷ್ಣ ಬಿ. ಪತ್ರಿಕೋದ್ಯಮ ವಿದ್ಯಾರ್ಥಿ

ಕರ್ನಾಟಕ ಸರ್ಕಾರ

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ (ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)

ನೊಂದಣಿ ಸಂಖ್ಯೆ:KOL-S243-2012-13 ದಿನಾಂಕ:15-03-2013

Website: https://kimskoppal.karnataka.gov.in email :directorkimskoppal@gmail.com

Office : 08539 225522 Office : 08539-225523

ಸಂಖ್ಯೆ: ಕಿಮ್ಸ್/ಕೊಪ್ಪಳ/ನೇಮಕಾತಿ/2026-27/146 ದಿನಾಂಕ: 15 /06/2026

ನೇರ ಸಂದರ್ಶನ ಅಧಿಸೂಚನೆ

ವಿಷಯ: ಕೊಪ್ಪಳ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಗುತ್ತಿಗೆ ಆಧಾರದ ಮೇಲೆ ವಿವಿಧ ಬೋಧಕ ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆ.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಕೊಪ್ಪಳ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಈ ಕೆಳಗಿನ ಬೋಧಕ ಹುದ್ದೆಗಳಿಗೆ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳು ಕಾಲೇಜಿನ ವೆಬ್‌ಸೈಟ್ **https://kimskoppal.karnataka.gov.in** ನಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ತಮ್ಮ ಅರ್ಜಿಯನ್ನು ಎಲ್ಲಾ ಸ್ವಯಂ ದೃಢೀಕರಿಸಿದ ದಾಖಲೆಗಳೊಂದಿಗೆ ದಿನಾಂಕ: 22.06.2026 ರಂದು ಅಥವಾ ಅದಕ್ಕೂ ಮೊದಲು ನಿರ್ದೇಶಕರು, ಕೊಪ್ಪಳ ವೈದ್ಯಕೀಯ ವಿಜ್ಞಾನ ಸಂಸ್ಥೆ, ಗಂಗಾವತಿ ರಸ್ತೆ ಕಿಮ್ಸ್ ಕೊಪ್ಪಳ ಇವರಿಗೆ ಮುದ್ದಾಂ ಅಥವಾ ಅಂಚೆ ಮೂಲಕ ಸಲ್ಲಿಸಬೇಕು. ಅರ್ಹ ಅಭ್ಯರ್ಥಿಗಳಿಗೆ ನೇರ-ಸಂದರ್ಶನ ದಿನಾಂಕವನ್ನು ನಂತರ ತಿಳಿಸಲಾಗುವುದು.

ಕ್ರ. ಸಂ	ವಿಭಾಗ	ಪ್ರೊಫೆಸರ್	ಅಸೋಸಿಯೇಟ್ ಪ್ರೊಫೆಸರ್	ಅಸಿಸ್ಟಂಟ್ ಪ್ರೊಫೆಸರ್	ಸಿನಿಯರ್ ರೆಸಿಡೆಂಟ್	ಟ್ಯೂಟರ್	ಒಟ್ಟು
		Qaualification : As Per NMC's latest TEQ				MBBS/MSc,Phd	
1	Anatomy	-	-	3	3	4	10
2	Physiology	-	1	-	3	1	5
3	Biochemistry	-	-	1	3	1	5
4	Pathology	-	-	2	2	5	9
5	Microbiology	-	-	2	3	2	7
6	Forensic Medicine	-	-	1	3	1	5
6	Community Medicine	1	-	1	2		4
7	Pharmacology	-	-	3	3	3	9
8	General Medicine				3		3
10	Dermatology		1	1	1		3
11	General Surgery			2	2		4
12	Ophthalmology	1			1		2
13	ENT		1				1
14	Psychiatry		1				1
15	Radiology		1		3		4
16	Anaesthesia			2	2		4
17	Clinical Psychologist						1
	Total	2	5	18	34	17	76

ಆಸಕ್ತ ಅಭ್ಯರ್ಥಿಗಳು ಅರ್ಹತಾ ಮಾನದಂಡಗಳು, ವೇತನ ಮತ್ತು ಇತರ ನಿಯಮಗಳು ಮತ್ತು ಷರತ್ತುಗಳ ಕುರಿತು ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್ https://kimskoppal.karnataka.gov.in ನಲ್ಲಿ ವೀಕ್ಷಿಸಬಹುದು.

ಸೂಚನೆ: 1. ಸರ್ಕಾರಿ ಆದೇಶದ ಪ್ರಕಾರ ರೋಸ್ಟರ್ ಅನ್ನು ನಿರ್ವಹಿಸಲಾಗುತ್ತದೆ ದಿನಾಂಕ:13/05/2026
2. ಮೀಸಲಾತಿಯು ಕಕ(ಎಚ್‌ಕೆ)/ಕಕ ಹೊರತುಪಡಿಸಿದ (ಎನ್‌ಎಚ್‌ಕೆ) ಆಧಾರದ ಮೇಲೆ ಇರುತ್ತದೆ.

ಸಹಿ/- ನಿರ್ದೇಶಕರು,
ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಕೊಪ್ಪಳ.

DIPR/Koppal/163/KSMCA/2026-27

ಕರ್ನಾಟಕ ಸರ್ಕಾರ

ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.

ಸಂಖ್ಯೆ: ಸಅಸಂ/ಟೆಂಡರ್/ಸಿಆರ್-01/26-27 ದಿನಾಂಕ: 15.06.2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ (ಕಾಲ್-3) (ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2026-27 ನೇ ಸಾಲಿಗೆ ಅನುದಾನ ನಿರೀಕ್ಷೆ ಮೇರೆಗೆ ವಿವಿಧ ಲೆಕ್ಕಶೀರ್ಷಿಕೆಯಡಿ ಮತ್ತು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಕಾಮಗಾರಿ ನಿರ್ವಹಿಸುವ ಸ್ಥಳಗಳ ಬದಲಾವಣೆ, ಮಾದರಿಗಳ ಬದಲಾವಣೆ ಒಳಗೊಂಡಂತೆ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ "ಮಾನ್ಸೂನ್ ನೆಡುತೋಪು ರಚನೆ ಹಾಗೂ ಮುಂಗಡ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2026-27 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರ ಹಾಗೂ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಕಾಲ್-3 ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:23.06.2026 ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ಹೆಚ್ಚಿನ ವಿವರಗಳನ್ನು ಅಧಿಕೃತ ವೆಬ್ ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಆಯನೂರು ಉಪ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/65/06/373

ಕರ್ನಾಟಕ ಸರ್ಕಾರ

ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಹೊಸಪೇಟೆ

ಸಂಖ್ಯೆ:ಸಾಆಹೊ/ಹೊ.ಗು.ಟೆಂಡರು/834/2025-26 ದಿನಾಂಕ:11.06.2026

ಇ-ಟೆಂಡರ್ ಪ್ರಕಟಣೆ

2026-27 ನೇ ಸಾಲಿಗಾಗಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಹೊಸಪೇಟೆಯಲ್ಲಿ ಖಾಲಿ ಇರುವ 26 ಗ್ರೂಪ್ ಡಿ ಹುದ್ದೆಗಳಿಗೆ ಶೇ 40% ಗ್ರೂಪ್-ಡಿ ಮತ್ತು ಶೇ 40% 10 ನಾನ್‌ಕ್ಲಿನಿಕ್ ಒಟ್ಟು 20 ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಇ-ಪ್ರೋಕ್ಯೂರ್ಮೆಂಟ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಹಾಗೂ ಅರ್ಹವುಳ್ಳ ಟೆಂಡರುದಾರರು ನಿಗದಿತ ಸಮಯದೊಳಗೆ ಇ-ಪ್ರೋಕ್ಯೂರ್ಮೆಂಟ್ ವೇದಿಕೆ ಮೂಲಕ ಟೆಂಡರುಗಳನ್ನು ಸಲ್ಲಿಸಲು ಕೋರಿದೆ.

e-Tender No.: **GHH/TENDER/834 /2025-26.** E-Procurement Tender No: **DHFWS/2025-26/SE2085 CALL-3.** Commencement of downloading of e-Tender forms from website **: http:// kppp.karnataka.gov.in ದಿನಾಂಕ:-11-06-2026 ರಿಂದ 30-06-2026 ರಂದು ಸಂಜೆ 4.30 ಗಂಟೆಯವರೆಗೆ.** Last Date for seeking clarification if any: **ದಿನಾಂಕ: 30-06-2026 ರಂದು ಬೆಳಗ್ಗೆ 11.00 ಗಂಟೆಯವರೆಗೆ** Last date for uploading of Tender in e-procurement platform: **ದಿನಾಂಕ:01-07-2026 ರಂದು ಸಂಜೆ 4.30 ಗಂಟೆಯವರೆಗೆ.** Date, Time & Venue of Opening of Tenders: **ದಿನಾಂಕ:02-07-2026 ರಂದು ಸಂಜೆ 04.30 ಗಂಟೆಗೆ, ಶಸ್ತ್ರಚಿಕಿತ್ಸಕರು, ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಹೊಸಪೇಟೆ ಇವರ ಕಛೇರಿಯಲ್ಲಿ ಇ-ಪ್ರೋಕ್ಯೂರ್ಮೆಂಟ್ ವೇದಿಕೆ ಮೂಲಕ ತೆರೆಯಲಾಗುವುದು.** EMD : **Rs.1,20,000/-**. ವಾರ್ಷಿಕ ಟೆಂಡರ್ ಮೊತ್ತ: **60,00,000/-**

ಇ-ಪ್ರೋಕ್ಯೂರ್ಮೆಂಟ್‌ನಲ್ಲಿ ನೋಂದಾಯಿಸಿದ ಟೆಂಡರ್‌ದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಇ.ಎಂ.ಡಿ, ಟೆಂಡರು ಫಾರಂ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೋಕ್ಯೂರ್ಮೆಂಟ್ ಪೋರ್ಟಲ್ ವೆಬ್‌ಸೈಟ್ **http:// kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಕಛೇರಿಯ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಶಸ್ತ್ರಚಿಕಿತ್ಸಕರು, ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಹೊಸಪೇಟೆ.

ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/140

ಪಟ್ಟಣ ಪಂಚಾಯತ್ ಕಾರ್ಯಾಲಯ, ಸುಳ್ಯ

ಸುಳ್ಯ ತಾಲೂಕು-574239 ದ.ಕ, ದೂ: 08257-230354/230414
ಫ್ಯಾಕ್ಸ್: 08257-230071 ವೆಬ್‌ಸೈಟ್: www.sulliatown.mrc.gov.in
ಇ-ಮೇಲ್: co.sullia@gmail.com, ka.sulya.tp@gmail.com

ಕ್ರಸಂ. ಸು.ಪ.ಪಂ.ಇತರ/ಸಿಆರ್-01/2026-27 ದಿನಾಂಕ: 08/06/2026

ಅರ್ಜಿ ಆಹ್ವಾನ

ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) 2.0 ಯೋಜನೆಯನ್ನು ಸರ್ವರಿಗೂ ಸೂರು ಒದಗಿಸಲು ದಿನಾಂಕ: 01/09/2024 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ. ಈ ಯೋಜನೆಯಡಿ ಮುಂದಿನ 05 ವರ್ಷಗಳಲ್ಲಿ ದೇಶದಾದ್ಯಂತ ನಗರ ಪ್ರದೇಶಗಳಲ್ಲಿ ಬಡವರು, ಕೊಳಚೆ ನಿವಾಸಿಗಳನ್ನು ಒಳಗೊಂಡಂತೆ ಮಧ್ಯಮ ವರ್ಗದವರಿಗೆ ಸೂರು ಒದಗಿಸಲು ರೂ.150000/- ಸಹಾಯಧನ ನೀಡಲಾಗುವುದು.

ಪ್ರಧಾನ ಮಂತ್ರಿ ಆವಾಸ್ ಯೋಜನೆ ವಸತಿ ರಹಿತ ಕಚ್ಚಾ ಮನೆ ಅಥವಾ ಖಾಲಿ ನಿವೇಶನ ಹೊಂದಿರುವ ಮತ್ತು ನಿವೇಶನ ರಹಿತ ಕುಟುಂಬಗಳಿಗೆ ವಸತಿ ಸೌಲಭ್ಯಕ್ಕಾಗಿ ಯೂನಿಫೈಡ್ ವೆಬ್ ಪೋರ್ಟಲ್ ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂನ್ 30 ಕೊನೆಯ ದಿನ. ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯ ನಗರವಾಸಿ ವಸತಿ ರಹಿತ ಹಾಗೂ ನಿವೇಶನ ರಹಿತ ಅರ್ಹ ಫಲಾನುಭವಿಗಳು http://pmay-urbun.gov.in ನಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

ಸಹಿ/-, ಮುಖ್ಯಾಧಿಕಾರಿ
ಪಟ್ಟಣ ಪಂಚಾಯತ್ ಸುಳ್ಯ

DIPR/DK/KSMCA/372/25-26 dt: 15.06.2026

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ ನಂ. 1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ 02/2026-27 ದಿನಾಂಕ:12/06/2026

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು ಹಾಸನ ಜಿಲ್ಲೆ, ಇವರಿಂದ ಕಾವೇರಿ ನೀರಾವರಿ ನಿಗಮದಲ್ಲಿ ನೊಂದಾಯಿತವಾಗಿರುವ ನಿಗಧಿತ ದರ್ಜೆಯ ಗುತ್ತಿಗೆದಾರರಿಂದ ಈ ಅಧಿಸೂಚನೆಯಲ್ಲಿ ತಿಳಿಸಿರುವಂತೆ ಒಟ್ಟು 05 ಕಾಮಗಾರಿಗಳಿಗೆ ಟೆಂಡರ್‌ಅನ್ನು ಕೆ ಪಿ ಪಿ ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ. ಈ ಕಾಮಗಾರಿಗೆ ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ. 4.24 ಲಕ್ಷ ಮತ್ತು ಗರಿಷ್ಠ ಮೊತ್ತ ರೂ.21.10 ಲಕ್ಷಗಳಾಗಿರುತ್ತದೆ. ಅರ್ಜಿ ಬೆಲೆ ಕೆ ಪಿ ಪಿ-portal ನಂತೆ ಇರುತ್ತದೆ. ಕೆ ಪಿ ಪಿ ಪೋರ್ಟಲ್‌ನಲ್ಲಿ ಅರ್ಹ ಗುತ್ತಿಗೆದಾರರು ಅಂತರ್ಜಾಲದಲ್ಲಿ ದಿನಾಂಕ:15/06/2026 ರಂದು ಬೆಳಿಗ್ಗೆ 11.00 ಗಂಟೆಯಿಂದ ದಿನಾಂಕ:22/06/2026 ರ ಮಧ್ಯಾಹ್ನ 4.00 ಗಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು https://kppp.karnataka.gov.in ನಲ್ಲಿ ಡೌನ್ ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ. ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್‌ಅನ್ನು ದಿನಾಂಕ:23/06/2026 ರಂದು ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು ಕಚೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿ ಹಾಗೂ ಇತರೆ ನಿಬಂದನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ನಂ.1
ಹೇಮಾವತಿ ಬಲಮೇಲ್ದಂಡೆ ನಾಲಾವಿಭಾಗ, ಗೊರೂರು

ವಾಸಾಸಂಇ/ಹಿಸನಿ/ಹಾಸನ/238/ಕೆಎಸ್‌ಎಂಸಿಎ/2026-27

ಸಾರ್ವಜನಿಕ ಅವಗಾಹನೆಗೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ನನಗೆ ಮಂಗಳೂರು ತಾಲೂಕು ಪದವು ಗ್ರಾಮದಲ್ಲಿ ವ್ಯವಸ್ಥಪತ್ರದ ಮೂಲಕ ಆಸ್ತಿಯು ದೊರಕಿದ್ದು, ಅದು ಮಂಗಳೂರು ನಗರ ಸಬ್ ರಿಜಿಸ್ಟ್ರೇಶನ್ ಆಫೀಸಿನ ದಾಖಲೆ ಸಂಖ್ಯೆ ಎಮ್.ಜಿ.ಸಿ. 1-03782/2017-18 ಸಿ.ಡಿ. ನಂಬ್ರ ಎಮ್.ಜಿ.ಸಿ. ಡಿ. 607 ದಿನಾಂಕ 26/08/2017ರಂತೆ ನೊಂದಾವಣೆಯಾಗಿರುತ್ತದೆ. ಸದ್ರಿ ವ್ಯವಸ್ಥಾಪತ್ರದ ಮೂಲ ಪ್ರತಿ ಕೆಲವು ಸಮಯದ ಹಿಂದೆ ನನ್ನಿಂದ ಪರಮೋಶಿಯಿಂದ ಕಳೆದು ಹೋಗಿರುತ್ತದೆ. ಆದ್ದರಿಂದ ಸದ್ರಿ ಮೂಲ ಪ್ರತಿಯು ಸಿಕ್ಕಿದವರು ಯಾವುದೇ ರೀತಿಯಲ್ಲಿ ದುರುಪಯೋಗ ಪಡಿಸಿದಲ್ಲಿ ಅವರ ವಿರುದ್ಧ ಸೂಕ್ತ ಕಾನೂನು ಕ್ರಮವನ್ನು ಕೈಗೊಳ್ಳುತ್ತೇನೆ ಎಂದು ಈ ಮೂಲಕ ನಾನು ಸಾರ್ವಜನಿಕರಿಗೆ ತಿಳಿಯಪಡಿಸುತ್ತೇನೆ.

ಪ್ರಶಾಂತ್ ಬಿನ್. ಆನಂದ ಬಂಗೇರ
ಕದ ನಂಬ್ರ # 3-149/2, ಮನೆ ಬಾಳೆಪುಣಿ ಗ್ರಾಮ ಮತ್ತು ಅಂಚೆ ಉಳ್ಳಾಲ ತಾಲೂಕು
ಫೋನ್ ನಂಬ್ರ:

IN THE COURT OF THE PRINCIPAL CIVIL JUDGE & JMFC BANTWAL

P and Sc No. 13/26

Between:
Mr.Vasantha & 4 others ...Petitioners
And
Nil ...Respondent

TO WHOMSOEVER IT MAY CONCERN

Whereas the above named petitioners has filed an application to this court. Seeking an order for grant of the succession Certificate in respect of **Smt.Varija** W/o. Dooma Naik, R/at Gundidottu House, Uli Post and Village, BantwalTaluk.

Take Notice that the above petition has been posted for hearing at **13-07-2026 11 A.M.** on Persons desiring to oppose the same may appear and file objection on the said date and time, failing wherein, the mater will be heard and decided in accordance with law.

Given under my hand and seal of the court on this 11th day of June 2026.

/By order of the Court/
Sd/- Chief Ministerial Officer
Court of Prl. Civil Judge
& JMFC, Bantwal, D.K.
Sd/- (C.M.)
Advocate for Petitioners

IN THE COURT OF THE IV ADDITIONAL DISTRICT JUDGE OF DAKSHINA KANNADA SITTING AT MANGALURU (COMMERCIAL COURT OF DAKSHINA KANNADA)

Com Original Suit 71 of 2026

Between:
Canara Bank, Ichlampady branch ...*Plaintiff*
And
Mrs. Surekha ...*Defendant*

Court Notice to the Defendant
Mrs Surekha, Aged about 32 years Wife of Mr. Sukesh. Business address: M/s Monish Readymade Garments, Door # 2/141/2, Kripa Residency, Kadaba. Residential Address: House #2/349, Kampa house, Noojibalthila Post, Ichlampady-574221, Dakshina Kannada.

The plaintiff has filed instant suit to recover a sum of Rs.18,13,521.49 with current and future interest @ 14.20% per annum with quarterly rests.

Take notice that you are required to appear on **09.07.2026 at 11.00 AM** before this court either personally or through an advocate, failing which the case will be proceeded and determined in accordance with law in your absence.

By Order of the Court
Sd/- Principal District And sessions Judge, Mangaluru D.K
Sd/-Pushpalatha U K
Advocate for plaintiff

ಸಾಲಿಗ್ರಾಮ ಪಟ್ಟಣ ಪಂಚಾಯತ್ ಕಾರ್ಯಾಲಯ

ಬ್ರಹ್ಮಾವರ ತಾಲೂಕು, ಉಡುಪಿ ಜಿಲ್ಲೆ - 576 225, ದೂ. : 0820-256422, 0820-2586561
E-mail:ka.saligrama.tp@gmail.com Website:www.saligramatown.mrc.gov.in

ಪತ್ರ ಸಂ.:ಸಾ.ಪ.ಪಂ./ಕಿ.ಆ.ನಿ./ಸಿ.ಆರ್./777/2026-27 ದಿನಾಂಕ: 15-06-2026

ಕೊಟೇಶನ್ ಪ್ರಕಟಣೆ

ಸಾಲಿಗ್ರಾಮ ಪಟ್ಟಣ ಪಂಚಾಯತ್ - ಸ್ವಚ್ ಭಾರತ್ ಮಿಷನ್ 1.0 ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಕೊಟೇಶನ್ ಆಹ್ವಾನಿಸಲಾಗಿದೆ.

ಕ್ರಸಂ.	ಕೊಟೇಶನ್ ವಿವರ	ಅಂದಾಜು ಮೊತ್ತ
1	ಪಾರಂಪಳ್ಳಿ ಗ್ರಾಮದ ಸರ್ವೆ ನಂ 104/24 ಮತ್ತು 104/25 ರ ಪಟ್ಟಣ ಪಂಚಾಯತ್ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಬ್ಯೂಟೀಫಿಕೇಷನ್ ಕಾಮಗಾರಿ	1.00 ಲಕ್ಷ
2	ಪಾರಂಪಳ್ಳಿ ಗ್ರಾಮದ ಸರ್ವೆ ನಂ 104/24 ಮತ್ತು 104/25 ರ ಪಟ್ಟಣ ಪಂಚಾಯತ್ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ವಾಲ್ ಪೈಂಟಿಂಗ್ ಕಾಮಗಾರಿ	1.00 ಲಕ್ಷ
3	ಪಾರಂಪಳ್ಳಿ ಗ್ರಾಮದ ಸರ್ವೆ ನಂ 104/24 ಮತ್ತು 104/25 ರ ಪಟ್ಟಣ ಪಂಚಾಯತ್ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಗಾರ್ಡನಿಂಗ್ ಕಾಮಗಾರಿ	1.00 ಲಕ್ಷ
4	ಪಾರಂಪಳ್ಳಿ ಗ್ರಾಮದ ಸರ್ವೆ ನಂ 104/24 ಮತ್ತು 104/25 ರ ಪಟ್ಟಣ ಪಂಚಾಯತ್ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಕೆಲಸ ನಿರ್ವಹಣೆಗೆ ಅನುಕೂಲವಾಗುವಂತೆ ಗಣಕ ಯಂತ್ರ ಹಾಗು ಪ್ರಿಂಟರ್ ಸರಬರಾಜು ಮಾಡುವ ಬಗ್ಗೆ	1.00 ಲಕ್ಷ
5	ಪಾರಂಪಳ್ಳಿ ಗ್ರಾಮದ ಸರ್ವೆ ನಂ 104/24 ಮತ್ತು 104/25 ರ ಪಟ್ಟಣ ಪಂಚಾಯತ್ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ತ್ಯಾಜ್ಯ ವಿಂಗಡಣೆಗೆ ಬಕೆಟ್ ಸರಬರಾಜು ಮಾಡುವ ಬಗ್ಗೆ	1.00 ಲಕ್ಷ
6	ಪಾರಂಪಳ್ಳಿ ಗ್ರಾಮದ ಸರ್ವೆ ನಂ 104/24 ಮತ್ತು 104/25 ರ ಪಟ್ಟಣ ಪಂಚಾಯತ್ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಸ್ಯಾನಿಟರಿ ಪ್ಯಾಡ್ ವಿಲೇವಾರಿ ಸಂಬಂಧ INCINERATOR ಸರಬರಾಜು ಮಾಡುವ ಬಗ್ಗೆ	0.50 ಲಕ್ಷ
7	ಪಾರಂಪಳ್ಳಿ ಗ್ರಾಮದ ಸರ್ವೆ ನಂ 104/24 ಮತ್ತು 104/25 ರ ಪಟ್ಟಣ ಪಂಚಾಯತ್ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಕೆಲಸ ನಿರ್ವಹಣೆಗೆ ಅನುಕೂಲವಾಗುವಂತೆ ಪಿಠೋಪಕರಣ ಖರೀದಿ ಹಾಗೂ ಇತರೇ ಕಾಮಗಾರಿ	1.00 ಲಕ್ಷ
8	ಸಾಲಿಗ್ರಾಮ ಪಟ್ಟಣ ಪಂಚಾಯತ್ ವ್ಯಾಪ್ತಿಯ ಪಡುಕೆರೆ ಬೀಚ್ ನಲ್ಲಿ ಟ್ವಿನ್ ಸಿಸ್ಟಮ್ ಡಸ್ಟ್ ಬಿನ್ ಖರೀದಿಸಿ ಅಳವಡಿಸುವ ಕಾಮಗಾರಿ	1.00 ಲಕ್ಷ
9	ಸಾಲಿಗ್ರಾಮ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವ ಮಾಹಿತಿ ಫಲಕ ಅಳವಡಿಕೆ	1.00 ಲಕ್ಷ

ಮೇಲ್ಕಾಣಿಸಿದ 1 ಸಂಖ್ಯೆಯ ಪರಿಕರ / ಯಂತ್ರೋಪಕರಣಗಳಿಗೆ ಎಲ್ಲಾ ಖರ್ಚು. ಸಾಗಾಣಿಕೆ ವೆಚ್ಚ ಮತ್ತು ತೆರಿಗೆಗಳು ಸೇರಿ ದರವನ್ನು ಕೋಟೇಶನ್ ನಲ್ಲಿ ನಮೂದಿಸತಕ್ಕದ್ದು, ಕೊಟೇಶನ್‌ನನ್ನು ಮುಚ್ಚಿದ ಲಕೋಟೆಯಲ್ಲಿ ದಿನಾಂಕ:23-06-2026 ಸಂಜೆ ಗಂಟೆ 4.00ರ ಒಳಗೆ ಪಟ್ಟಣ ಪಂಚಾಯತ್ ಕಛೇರಿಗೆ ಸಲ್ಲಿಸತಕ್ಕದ್ದು, ಕೊಟೇಶನ್ ನ್ನು ಅದೇ ದಿನ ಸಂಜೆ 4.30 ಕ್ಕೆ ತೆರೆಯಲಾಗುವುದು. ತಡವಾಗಿ ಬಂದ ಕೊಟೇಶನ್‌ನನ್ನು ಸ್ವೀಕರಿಸಲಾಗುವುದಿಲ್ಲ, ಕೊಟೇಶನ್ ಮಂಜೂರು ಮಾಡುವ ಯಾ ರದ್ದುಪಡಿಸುವ ಯಾ ಮುಂದುವರಿಸುವ ಅಧಿಕಾರವನ್ನು ಕಾಯ್ದಿರಿಸಿದೆ. ಹಾಗೂ ಮೇಲ್ಕಾಣಿಸಿದ ಯಂತ್ರೋಪಕರಣಗಳಿಗೆ ತಾಂತ್ರಿಕ ವಿವರಗಳು ಹಾಗೂ ಇತರೇ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಾಲಿಗ್ರಾಮ ಪಟ್ಟಣ ಪಂಚಾಯತ್ ನ ಆರೋಗ್ಯ ವಿಭಾಗದಿಂದ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/-ಆಡಳಿತಾಧಿಕಾರಿಯವರು, ಸಾಲಿಗ್ರಾಮ ಪಟ್ಟಣ ಪಂಚಾಯತ್
ಸಹಿ/-ಮುಖ್ಯಾಧಿಕಾರಿ, ಸಾಲಿಗ್ರಾಮ ಪಟ್ಟಣ ಪಂಚಾಯತ್

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಜಿಲ್ಲೆ-591302

ಸಂಖ್ಯೆ. ಕನೀನಿನಿ/ಕಯೋವಿ/ಖಾ/ಪಿಬಿ/ಅ.ಟೆಂ.ಪ್ರ/2026-27/483-485 ದಿನಾಂಕ:12.06.2026.

"ಅಲ್ಪಾವಧಿ ಶೇಕಡಾವಾರು ಟೆಂಡರ ಪ್ರಕಟಣೆ" (ಕೆಪಿಪಿ-ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಕಚೇರಿ ಅಡಿಯಲ್ಲಿ ಬರುವ ಈ ಕೆಳಗಿನ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರಗಳನ್ನು ದ್ವಿ-ಲಕೋಟೆ ಪದ್ದತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಕೆಪಿಪಿ-ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ.

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರ್‌ಗೆ ಇಟ್ಟ ಮೊತ್ತ ಜಿ.ಎಸ್.ಟಿ. ಹೊರತುಪಡಿಸಿ (ರೂ. ಲಕ್ಷಗಳಲ್ಲಿ)	ಅರ್ಹ ಗುತ್ತಿಗೆ
1	Providing Infrastructure facility to KK Koppa, Kangarali KH, Savaganv villages coming under the jurisdiction of Bagewadi TFS in Belagavi Taluka Belagavi District. (W.I. No. KNNL/2026-27/RD/WORK_INDENT4541)	422.52	ದರ್ಜೆ 2 ಮತ್ತು ಮೇಲ್ಪಟ್ಟು
2	Construction/Improvements of connecting roads at Hirabagewadi Village coming under the jurisdiction of Belagavi Rural Constituency under Bagewadi TFS in Belagavi Taluka Belagavi District. (W.I. No. KNNL/2026-27/RD/ WORK_INDENT 4542)	338.80	ದರ್ಜೆ 2 ಮತ್ತು ಮೇಲ್ಪಟ್ಟು
3	Providing Infrastructure facility to Benakanhalli and Hindalaga Gram Panchayat Limits coming under Hangaraga TFS in Belagavi. (for the year 2025-26) (W.I. No. KNNL/2026-27/RD/ WORK_INDENT4339/Call-2)	422.49	ದರ್ಜೆ 2 ಮತ್ತು ಮೇಲ್ಪಟ್ಟು

https://kppp.karnataka.gov.in ನಲ್ಲಿ ಅರ್ಜಿ ಡೌನಲೋಡ ಮಾಡಿಕೊಳ್ಳಬಹುದು/ ಭರ್ತಿಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 24.06.2026ರಂದು ಸಂಜೆ 4.00ಘಂಟೆ ವರೆಗೆ ಸಲ್ಲಿಸಬಹುದು. ಪ್ರಿ-ಬಿಡ್ ಸಭೆಯನ್ನು ದಿನಾಂಕ: 19.06.2026ರಂದು ಮುಂಜಾನೆ 11.00 ಘಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ, ಕನೀನಿನಿ, ಕಳಸಾ ಯೋಜನಾ ವಿಭಾಗ, ಖಾನಾಪೂರ ಕಚೇರಿಯಲ್ಲಿ ಆಯೋಜಿಸಲಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 25.06.2026 ಸಂಜೆ 4.30 ಘಂಟೆಗೆ. ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ ಷರತ್ತುಗಳು ಹಾಗೂ ಇತರೆ ವಿವರಗಳನ್ನು ಕೆಪಿಪಿ-ಪೋರ್ಟಲ್ ಮುಖಾಂತರ https://kppp.karnataka.gov.in ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: 08336-222163 ಸಂಪರ್ಕಿಸುವದು.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ
ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ

DIPR/BGM/RO-NO-428/KSMCA/2026-27

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು - 560 009

ಸಂ: ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ಟಿಎನ್‌ಡಿ/ಕಂಪ್ಯೂಟರ್-ಐಟಂಗಳು/2026-27 ದಿ: 12.06.2026

ಆಸಕ್ತಿ ವ್ಯಕ್ತಪಡಿಸುವಿಕೆ (ಇಓಐ)ಗೆ ತಿದ್ದುಪಡಿ

ಪ್ರಕಟಣೆ ಸಂಖ್ಯೆ: ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ಟಿಎನ್‌ಡಿ/ಕಂಪ್ಯೂಟರ್-ಐಟಂಗಳು/2026-27 ದಿನಾಂಕ: 06.06.2026 ಮತ್ತು ಟೆಂಡರ್ ಸಂಖ್ಯೆ: ಕೆಆರ್‌ಐಡಿಎಲ್/2026-27/ಎಸ್‌ಇ-0095 ಮುಂದುವರೆದಂತೆ ಟೆಂಡರ್‌ಗಳನ್ನು ತಾಂತ್ರಿಕ ಕಾರಣದಿಂದಾಗಿ ರದ್ದುಪಡಿಸಲಾಗಿದೆ. ಈ ಕಾರಣದಿಂದಾಗಿ ಮರು ಟೆಂಡರ್ ಅನ್ನು ಕರೆಯಲಾಗಿದೆ. ಇ-ಆಡಳಿತ ಸಚಿವಾಲಯದ ಹೊಸ ವೆಬ್‌ಸೈಟ್ **www.kppp.karnataka.gov.in** ಮೂಲಕ ಮಾತ್ರ ಸಲ್ಲಿಸುವುದು. ಸಂಪರ್ಕಿಸಿ: +91 9240214000, +91 9240214001. ಇತರೆ ಬಿಡ್ ವಿವರಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

(1) ವಿಚಾರಣೆಗೆ ಕೊನೆಯ ದಿನಾಂಕ ಮತ್ತು ಸಮಯ: **19.06.2026, ಮಧ್ಯಾಹ್ನ 2.00 ಗಂಟೆವರೆಗೆ.** (2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **22.06.2026, ಮಧ್ಯಾಹ್ನ 3.00 ಗಂಟೆವರೆಗೆ.** (3) ಹಣಕಾಸು ಬಿಡ್ ತೆರೆಯುವ ದಿನಾಂಕ: **24.06.2026, ಮಧ್ಯಾಹ್ನ 3.00 ಗಂಟೆಗೆ.**

ಹೆಚ್ಚಿನ ವಿವರಗಳಿಗೆ ದಯವಿಟ್ಟು ಸಂಪರ್ಕಿಸಿ:
ಕಾರ್ಯನಿರ್ವಾಹಕ ಅಭಿಯಂತರರು (ಐಟಿ), ಕೆಆರ್‌ಐಡಿಎಲ್, ಬೆಂಗಳೂರು
ದೂ.ಸಂಖ್ಯೆ: 080-28015639 ಇ-ಮೇಲ್: computer@kridl.net / tenderworks@kridl.net

ಸಹಿ/- ಮುಖ್ಯ ಅಭಿಯಂತರರು (ಬೆಂಗಳೂರು)

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಮೇಕೆದಾಟು ಯೋಜನಾ ವಿಭಾಗ, ಹಾರೋಬೆಲೆ.
ಬೆಂಗಳೂರು ದಕ್ಷಿಣ ಜಿಲ್ಲೆ. ಇ-ಮೇಲ್ : eemekedatu@gmail.com

ಟೆಂಡರ್ ಪ್ರಕಟಣೆ ಸಂಖ್ಯೆ : 01/2026-27 ದಿನಾಂಕ : 12-06-2026

ಟೆಂಡರ್ ಪ್ರಕಟಣೆ

ಕಾವೇರಿ ನೀರಾವರಿ ನಿಗಮ ನಿಯಮಿತದ ಅಡಿಯಲ್ಲಿ ಅರ್ಹ ಗುತ್ತಿಗೆದಾರರಿಂದ **https://kppp.karnataka.gov.in** ಮುಖಾಂತರ ಕನಕಪುರ ತಾಲ್ಲೂಕು ವ್ಯಾಪ್ತಿಯಲ್ಲಿ **4701** ಲೆಕ್ಕ ಶೀರ್ಷಿಕೆಯಡಿಯಲ್ಲಿ ರಸ್ತೆ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಹಾಗೂ **2701** ಲೆಕ್ಕ ಶೀರ್ಷಿಕೆಯಡಿಯ ಮಾನವ ಸಂಪನ್ಮೂಲ ಒದಗಿಸುವ ಸೇವೆಗಾಗಿ ಟೆಂಡರ್ ಅನ್ನು ಆಹ್ವಾನಿಸಲಾಗಿರುತ್ತದೆ.

ಕಾಮಗಾರಿಗಳ ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ, ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ, ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು **https://kppp.karnataka.gov.in** ಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಮೇಕೆದಾಟು ಯೋಜನಾ ವಿಭಾಗ,
ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಬೆಲೆ.

ಡಿಐಪಿಆರ್/ರಾಮನಗರ/108/ಮಣಿಪಾಲ್/2026-27

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿದ್ಯುತ್ ವಿಭಾಗ, ಕೆ.ಆರ್. ವೃತ್ತ, ಬೆಂಗಳೂರು.
ದೂರವಾಣಿ ಸಂಖ್ಯೆ: 080-22112809

ಸಂ.ಕಾ.ಇಂ(ವಿ)/ಲೋ.ಇ/ವಿದ್ಯುತ್/401/2026-27 ದಿನಾಂಕ: 10.06.2026

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು **KW-1 STD** ಷರತ್ತುಗೊಳಪಟ್ಟಂತೆ ಟೆಂಡರ್‌ನ ಮೊದಲನೇ ಕರೆಯನ್ನು ಕೆ.ಪಿ.ಪಿ ಮೂಲಕ ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಕೆಳಕಂಡಂತಿವೆ.

ಕ್ರಸಂ.	ಕಾಮಗಾರಿಯ ಹೆಸರು	ಕಾಮಗಾರಿಗೆ ಇಟ್ಟಿರುವ ಮೊತ್ತ (ರೂ. ಲಕ್ಷಗಳಲ್ಲಿ)
1	Electrification works to proposed class room secondary school at Doddalahalli, Kanakapura Taluk, Bengaluru South Dist. PWD/2025-26/EL/WORK_INDENT33572	7.46
2	Construction of Government Primary School at Doddalahalli, Kanakapura Taluk, Bengaluru South Dist. (Electrification Work) PWD/2025-26/EL/WORK_INDENT36073	5.23

ಮೇಲಿನ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್ **https://kppp.karnataka.gov.in** ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ: **15.06.2026** ರಿಂದ **23.06.2026 16:00 ಗಂಟೆಯವರೆಗೆ** ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ ದಿನಾಂಕ: **23.06.2026 ರಂದೆ 16:00 ಗಂಟೆಯವರೆಗೆ** ನಿಗದಿಪಡಿಸಲಾಗಿದೆ. ಟೆಂಡರ್ ವಿವರಗಳನ್ನು **Karnataka Public Procurement Portal** ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು(ವಿ).

ವಾಸಾಸಂಇ/ಉನಿ-ಸಿ.ಪಿ/1157/ಕೆಎಸ್‌ಎಂಸಿಎ/2026-27

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಭಾಗ್ಯತಾರ (ನಂ.BT-58) ಡ್ರಾ ಜೂನ್ 15ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
BU 987243 (THAMARASSERY)

Consolation Prize Rs.5,000/-
BN 987243 BO 987243 BP 987243 BR 987243
BS 987243 BT 987243 BV 987243 BW 987243
BX 987243 BY 987243 BZ 987243

2nd Prize Rs.30,00,000/- [30 Lakhs]
BZ 838340 (THIRUVANTHAPURAM)

3rd Prize Rs.5,00,000/- [5 Lakhs]
BY 905214 (CHITTUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0548 0771 1056 1535 3226 4856 4892 5273 5403 6066
6573 6756 6889 7321 7791 8037 8126 9308 9710

5th Prize Rs.2,000/-
0888 4253 4835 5404 8040 8912

6th Prize Rs.1,000/-
0979 1327 1426 1586 1951 3030 3890 4101 4507 5026
5096 5383 5504 5875 5911 6614 6883 7564 7707 8591
8724 9071 9084 9222 9569

7th Prize Rs.500/-
0072 0222 0348 0488 0490 0578 0620 0663 0923 0974
1180 1199 1226 1822 1896 1958 1980 2093 2170 2424
2468 2567 2763 2797 2805 2889 2975 3139 3452 3453
3477 3827 3847 3859 3979 4129 4305 4476 4684 4805
5035 5036 5214 5847 6110 6330 6477 6536 6586 6606
7001 7106 7390 7432 7468 7510 7531 7605 7627 7721
7989 8033 8228 8266 8397 8515 8643 8881 8956 8986
9173 9390 9398 9434 9689 9711

8th Prize Rs.200/-
0073 0273 0361 0452 0809 0848 0862 0889 0908 1480
1606 1839 1985 2029 2042 2060 2180 2332 2452 2470
2506 2546 2581 2662 2714 2957 3292 3368 3507 3590
3664 3716 3867 4038 4049 4248 4275 4280 4339 4397
4551 4624 4637 4682 4756 4965 5052 5149 5153 5232
5500 5526 5548 6130 6183 6208 6267 6327 6336 6360
6374 6528 6561 6706 6824 7050 7062 7066 7098 7148
7259 7294 7344 7392 7407 7641 8277 8447 8482 8550
8586 8790 8809 8821 8828 8920 8925 9050 9235 9236
9405 9503 9506 9743

9th Prize Rs.100/-
0043 0119 0283 0330 0386 0563 0602 0718 0773 0801
0844 0904 0912 0954 1031 1063 1068 1106 1123 1151
1309 1324 1347 1496 1600 1622 1633 1700 1737 1793
1906 1964 2178 2184 2260 2358 2365 2413 2727 2796
2800 2816 2955 3213 3314 3387 3449 3608 3953 3990
4232 4243 4264 4294 4379 4392 4414 4455 4469 4583
4698 4766 4801 4949 4974 5084 5110 5351 5472 5501
5573 5627 5761 5775 5821 5939 6011 6039 6059 6109
6115 6116 6117 6194 6199 6204 6236 6348 6412 6415
6461 6471 6519 6571 6676 6686 6729 6789 6836 6860
6928 7014 7041 7055 7094 7141 7386 7427 7484 7522
7590 7647 7722 7837 8105 8107 8242 8250 8264 8267
8279 8306 8429 8486 8549 8551 8585 8833 8846 8863
8968 8973 8981 8998 9053 9223 9310 9381 9388 9395
9402 9447 9829 9940

ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ ಸಂಸ್ಥೆಯಲ್ಲಿ ಸಹಪಠ್ಯ ಚಟುವಟಿಕೆಗಳ ಉದ್ಘಾಟನೆ

ವಿಜ್ಞಾನ ಮುಂದುವರೆಯುತ್ತಿದ್ದರೂ ಮೌಲ್ಯಗಳು ಇಂದು ಕುಸಿಯುತ್ತಿವೆ: ಶಾಲಿನಿ ಆತ್ಮಭೂಷಣ್



◆ಪುತ್ತೂರು: ದೇಶದಲ್ಲಿಂದು ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯಾಗುತ್ತಿದೆ. ಆದರೆ, ಮೌಲ್ಯಗಳ ಅಧ:ಪತನವಾಗುತ್ತಿದ್ದು, ಇಂತಹ ಸಮಸ್ಯೆಗಳ ನಿವಾರಣೆಗೆ ಸಹ ಪಠ್ಯ ಚಟುವಟಿಕೆಗಳು ದಾರಿಯಾಗಿವೆ. ಅವುಗಳು ಒತ್ತಡವನ್ನು ನಿವಾರಿಸಿ ಏಕಾಗ್ರತೆಯನ್ನು ಹೆಚ್ಚಿಸುತ್ತವೆ. ಅಲ್ಲದೆ ಯಶಸ್ಸು ಸಾಽಸಲು ಅವಕಾಶ ಮಾಡಿ ಕೊಡುತ್ತವೆ. ಶಾಲೆಯಲ್ಲಿ ಸಿಗುವ ಅವಕಾಶ ಸದ್ವಿನಿಯೋಗವಾಗಿ ಭಾರತದ ಸಂಸ್ಕೃತಿ ಜಗತ್ತಿನಾದ್ಯಂತ ಹರಡುವಂತಾಗಬೇಕು ಎಂದು ಪುತ್ತೂರಿನ ನೃತ್ಯೋಪಾಸನ ಕಲಾ ಅಕಾಡೆಮಿಯ ನಿರ್ದೇಶಕಿ ವಿದುಷಿ ಶಾಲಿನಿ ಆತ್ಮಭೂಷಣ್ ಹೇಳಿದರು.

ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಬಪ್ಪಳಿಗೆಯ ಅಂಬಿಕಾ ವಿದ್ಯಾಲಯ ಸಿ.ಬಿ.ಎಸ್.ಇ. ಸಂಸ್ಥೆಯಲ್ಲಿ ಆಯೋಜಿಸಲಾದ ಸಹಪಠ್ಯ ಚಟುವಟಿಕೆ ತರಗತಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಯಾಗಿ ಮಾತನಾಡಿದರು.

ಶಾಲಾ ಪ್ರಾಂಶುಪಾಲೆ ಮಾಲತಿ ಡಿ. ಮಾತನಾಡಿ, ಭಾರತೀಯ ಕಲೆಗಳು ನಿಧಾನಕ್ಕೆ ಅರಳುವ ಹೂವಿನ ಹಾಗೆ. ಪ್ರತಿಯೊಂದು ಕಲೆಗಳೂ ನಮ್ಮ ಜೀವನವನ್ನು ಅರಳಿಸುವಂತಹದ್ದೇ ಆಗಿವೆ. ಇಂತಹ ಕಲೆಗಳನ್ನು ಒಳಗೊಂಡ ಪಠ್ಯೇತರ ಚಟುವಟಿಕೆಗಳು ನಮ್ಮ ದೈಹಿಕ, ಮಾನಸಿಕ ಬೆಳವಣಿಗೆಯನ್ನು ಬೆಳೆಸುವುದರ ಜೊತೆಗೆ ಸಂಸ್ಕೃತಿಯನ್ನು ಉಳಿಸುವ ಕೆಲಸವನ್ನು ಮಾಡುತ್ತವೆ. ಹಾಗಾಗಿ ವಿದ್ಯಾರ್ಥಿಗಳು ತಮ್ಮ ತಮ್ಮ ಪ್ರತಿಭೆಯನ್ನು ಅಭಿವೃದ್ಧಿ ಪಡಿಸುವಂತಹ ಚಟುವಟಿಕೆಗಳನ್ನು ಸೂಕ್ತ ರೀತಿಯಲ್ಲಿ ಆಯ್ಕೆ ಮಾಡಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಬ್ರಹ್ಮಣ್ಯ ನಟ್ಟೋಜ, ಕಲೆಯು ದೇವರು ಮನುಷ್ಯನಿಗೆ ಕೊಟ್ಟ ಒಂದು ವರದಾನ. ಪ್ರತಿಯೊಂದು ಮಗುವಿನಲ್ಲಿ ಸುಪ್ತವಾಗಿ ಅಡಗಿರುವ ಕಲೆಯನ್ನು ಗುರುತಿಸುವ ಕೆಲಸವನ್ನು ಶಾಲೆಗಳು ಮಾಡಬೇಕು. ಜೀವನಕ್ಕೆ ಬೇಕಾದ ಮೂಲಭೂತವಾದ ವಿದ್ಯೆಗಳನ್ನು ಕಲಿಯುವಂಥದ್ದು ಅತಿ ಅಗತ್ಯ. ಜೀವನದಲ್ಲಿ ಬರುವ ಸಂಕಷ್ಟದ ಪರಿಸ್ಥಿತಿಯನ್ನು ಎದುರಿಸುವ ಕ್ಷಾತ್ರ ತೇಜಸ್ಸು ನಮ್ಮಲ್ಲಿರಬೇಕು. ಸಂಗೀತ, ನೃತ್ಯ, ಚದುರಂಗ, ಯಕ್ಷಗಾನ ಮುಂತಾದ ಕಲೆಗಳು ಭಾರತದ ಸಂಸ್ಕೃತಿಯೊಂದಿಗೆ ಮಿಳಿತಗೊಂಡಿವೆ. ಅವುಗಳ ಮೂಲಕ ಭಾರತದ ಸಂಸ್ಕೃತಿಯನ್ನು ಎತ್ತರಿಸುವ ಕಾರ್ಯ ನಮ್ಮದಾಗಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ರಾಜಶ್ರೀ ನಟ್ಟೋಜ, ಯಕ್ಷಗಾನ ಮತ್ತು ಸ್ಕೌಟ್ಸ್ ತರಬೇತುದಾರ ಸತೀಶ್ ಇರ್ದೆ, ಕರಾಟೆ ತರಬೇತುದಾರ ಶಿವಪ್ರಸಾದ್, ಚದುರಂಗ ತರಬೇತುದಾರ ಸುರೇಶ್ ಕಾಮತ್, ಅಬಕಾಸ್ ತರಬೇತುದಾರ ಗುರುರಾಜ್, ಈಜು ಮತ್ತು ಸ್ಕೇಟಿಂಗ್ ತರಬೇತುದಾರ ಸುಶಿತ್ ಕುಮಾರ್, ಭರತನಾಟ್ಯ ತರಬೇತುದಾರೆ ಪ್ರಿಯಾಶ್ರೀ ಕೆ.ಎಸ್., ಸಂಗೀತ ತರಬೇತುದಾರೆ ಸಹನಾ ಎಸ್., ಗೈಡ್ಸ್ ತರಬೇತುದಾರೆ ಚಂದ್ರಕಲಾ ಉಪಸ್ಥಿತರಿದ್ದರು.

ಅಂಬಿಕಾ ವಿದ್ಯಾಲಯದ ವಿದ್ಯಾರ್ಥಿನಿಯರಾದ ಅನುಶ್ರೀ, ನಿನಾದ, ಲಾವಣ್ಯ ಪ್ರಾರ್ಥಿಸಿದರು. ಆದ್ಯ ಶೆಣೈ ಸ್ವಾಗತಿಸಿ, ನಿದಾ ಫಾತಿಮಾ ವಂದಿಸಿದರು. ಸಾಯಿಲಕ್ಷ್ಮಿ ಕಾರ್ಯಕ್ರಮ ನಿರ್ವಹಿಸಿದರು.

ಸುಳ್ಯ: ನೂತನ ನ್ಯಾಯಾಧೀಶರಿಗೆ ಸ್ವಾಗತ



◆ಸುಳ್ಯ: ಸುಳ್ಯ ನ್ಯಾಯಾಲಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾಗಿ ನೂತನವಾಗಿ ಕರ್ತವ್ಯಕ್ಕೆ ಹಾಜರಾದ ತಟ್ಟಂಡ ದಮಯಂತಿ ಸೋಮಯ್ಯ ಹಾಗೂ ಪ್ರಧಾನ ಸಿವಿಲ್ ನ್ಯಾಯಾಲಯಕ್ಕೆ ಆಗಮಿಸಿದ ನ್ಯಾಯಾಧೀಶ ಚಿರಾಗ್ ಸಿ. ಅವರಿಗೆ ಸುಳ್ಯ ವಕೀಲರ ಸಂಘದ ವತಿಯಿಂದ ಭಾನುವಾರ ಸುಳ್ಯ ವಕೀಲದ ಸಭಾಭವನದಲ್ಲಿ ಸ್ವಾಗತ ಕಾರ್ಯಕ್ರಮ ನಡೆಯಿತು.

ಸ್ವಾಗತ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸುಳ್ಯ ತಾಲೂಕು ವಕೀಲರ ಸಂಘದ ಅಧ್ಯಕ್ಷ ಸುಕುಮಾರ್ ಕೋಡ್ತುಗುಳಿ ನೂತನ ನ್ಯಾಯಾಧೀಶರಿಗೆ ಹೂಗುಚ್ಛ ನೀಡಿ ಸ್ವಾಗತಿಸಿ, ಸುಳ್ಯ ನ್ಯಾಯಾಲಯದ ಹಿರಿಯ ಕಿರಿಯ ವಕೀಲರ ಪರಿಚಯವನ್ನು ಮಾಡಿದರು. ಸಂಘದ ವತಿಯಿಂದ ನಡೆಯುವ ಕಾರ್ಯ ಚಟುವಟಿಕೆಗಳ ಕುರಿತು ಮಾಹಿತಿ ನೀಡಿದ ಅವರು ನೂತನ ನ್ಯಾಯಾಧೀಶರಿಗೆ ಶುಭ ಕೋರಿದರು.

ಈ ಸಂದರ್ಭ ಮಾತನಾಡಿದ ಹಿರಿಯ ನ್ಯಾಯಾಧೀಶೆ ತಟ್ಟಂಡ ದಮಯಂತಿ ಸೋಮಯ್ಯ, ನ್ಯಾಯಾಲಯದಲ್ಲಿ ನಡೆಯುವ ಲೋಕ ಅದಾಲತ್ ಕಾರ್ಯಕ್ರಮ ಮತ್ತು ದಿನನಿತ್ಯ ನಡೆಯುವ ಕಾರ್ಯ ಕಲಾಪಗಳಲ್ಲಿ ವಕೀಲರು ಸಹಕರಿಸಬೇಕು ಎಂದು ಕೋರಿದರು.

ವೇದಿಕೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಜಗದೀಶ್ ಡಿಪಿ ಸ್ವಾಗತಿಸಿ, ಕ್ರೀಡಾ ಕಾರ್ಯದರ್ಶಿ ಕುಸುಮಾಧರ ಕುತ್ತಿಮುಂಡ ವಂದಿಸಿದರು. ಹಿರಿಯ ವಕೀಲೆ ಚಂಪಾ ಎಂ. ವೆಂಕಪ್ಪ ಗೌಡ ಕಾರ್ಯಕ್ರಮ ನಿರ್ವಹಿಸಿದರು.

ನಾಳೆ ಬಾರ್ಕೂರಿನ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ಮುಷ್ಟಿ ಕಾಣಿಕೆ ಸಮರ್ಪಣೆ

◆ಬ್ರಹ್ಮಾವರ: ಬಾರ್ಕೂರಿನ ಐತಿಹಾಸಿಕ ಕೋಟೆಕೇರಿ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ಜೂನ್ 17ರಂದು (ಬುಧವಾರ) ಮುಷ್ಟಿ ಕಾಣಿಕೆ ಸಮರ್ಪಣೆ ಹಾಗೂ ಮನವಿಪತ್ರ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ ಎಂದು ದೇವಸ್ಥಾನ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಸುಗ್ಗಿ ಸುಧಾಕರ ಶೆಟ್ಟಿ ತಿಳಿಸಿದ್ದಾರೆ.

ಜೂನ್ 15ರಂದು ದೇವಸ್ಥಾನದ ಜೀರ್ಣೋದ್ಧಾರ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಕಾರ್ಯಕ್ರಮದ ಅಂಗವಾಗಿ ಬೆಳಿಗ್ಗೆ 8.30ಕ್ಕೆ ಗಣಹೋಮ, 9.30ಕ್ಕೆ ರೇವಂತ ಸ್ವಾಮಿ ಪೂಜೆ, 11.30ಕ್ಕೆ ಮಹಾಪೂಜೆ, ಮಧ್ಯಾಹ್ನ 12 ಗಂಟೆಗೆ ಮುಷ್ಟಿ ಕಾಣಿಕೆ ಸಮರ್ಪಣೆ, 12.30ಕ್ಕೆ ಸಭಾ ಕಾರ್ಯಕ್ರಮ ಹಾಗೂ ಮನವಿಪತ್ರ ಬಿಡುಗಡೆ ನಡೆಯಲಿದ್ದು, ಬಳಿಕ ಅನ್ನಸಂತರ್ಪಣೆ ನಡೆಯಲಿದೆ.

ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಜೊತೆಗೆ ಬಾರ್ಕೂರಿನ ಸಮಗ್ರ ಅಭಿವೃದ್ಧಿಯ ಕಲ್ಪನೆಯೊಂದಿಗೆ ಕಾರ್ಯ ಮುಂದುವರಿದಿದೆ. ಈಗಾಗಲೇ ಸರ್ಕಾರದ ಪ್ರವಾಸೋದ್ಯಮ ಹಾಗೂ ಧಾರ್ಮಿಕ ದತ್ತಿ ಇಲಾಖೆಯ ಸಚಿವರನ್ನು ಆಹ್ವಾನಿಸಿ ಬಾರ್ಕೂರಿನ ಇತಿಹಾಸ ಹಾಗೂ ವೈಭವದ ಕುರಿತು ವಿವರಿಸಲಾಗಿದೆ. ಹಿಂದಿನ ವೈಭವವನ್ನು ಮರುಸ್ಥಾಪಿಸಲು ಸ್ಥಳೀಯರ ಸಹಕಾರದೊಂದಿಗೆ ಪ್ರಯತ್ನಿಸಲಾಗುತ್ತಿದೆ ಎಂದು ಅವರು ಹೇಳಿದರು.

ಬಾರ್ಕೂರಿನಲ್ಲಿ ವಿವಿಧ ಸಮುದಾಯಗಳ ದೇವಾಲಯಗಳಿದ್ದು, ಎಲ್ಲರಿಗೂ ಬಾರ್ಕೂರು ಮೂಲಸ್ಥಾನವಾಗಿದೆ. ತುಳುನಾಡಿನ ಪ್ರಮುಖ ದೇವರಾದ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಕಳೆದ ಸುಮಾರು 20 ವರ್ಷಗಳಿಂದ ಪ್ರಯತ್ನಗಳು ನಡೆದರೂ ಅದು ಸಾಧ್ಯವಾಗಿರಲಿಲ್ಲ. ಇತ್ತೀಚೆಗೆ ನಡೆದ ಅಷ್ಟಮಂಗಲ ಪ್ರಶ್ನೆಯಲ್ಲಿ ಊರಿನ ಜನರೆಲ್ಲ ಒಗ್ಗಟ್ಟಾಗಿ ಕಾರ್ಯನಿರ್ವಹಿಸಿದರೆ ಮಾತ್ರ ಜೀರ್ಣೋದ್ಧಾರ ಸಾಧ್ಯ ಎಂಬ ಸಂದೇಶ ದೊರೆತಿದೆ ಎಂದು ಪಂಚಲಿಂಗೇಶ್ವರ ದೇವಸ್ಥಾನದ ಮೊಕ್ತೇಸರ ಮಂಜುನಾಥ ರಾವ್ ತಿಳಿಸಿದರು.

ದೇವಸ್ಥಾನದ ಜೀರ್ಣೋದ್ಧಾರದ ಪೂರ್ವಭಾವಿಯಾಗಿ ಗ್ರಾಮದಲ್ಲಿನ ಪ್ರತೀ ಮನೆಯವರು ಮುಷ್ಟಿ ಕಾಣಿಕೆ ಸಮರ್ಪಣೆಯಲ್ಲಿ ಭಾಗವಹಿಸಬೇಕು ಎಂದು ಸಮಿತಿ ಮನವಿ ಮಾಡಿದೆ. ಎಲ್ಲರೂ ದೇವಸ್ಥಾನಕ್ಕೆ ಬರಲು ಸಾಧ್ಯವಾಗದಿದ್ದರೆ, ಮನೆಯ ದೇವರ ಮುಂದೆ ಹರಿವಾಣ ಇಟ್ಟು ಅದರಲ್ಲಿ ಮುಷ್ಟಿ ಕಾಣಿಕೆ ಹಾಕಿ ಕುಟುಂಬದ ಒಬ್ಬ ಸದಸ್ಯ ದೇವಸ್ಥಾನಕ್ಕೆ ತಂದು ಸಮರ್ಪಿಸಿ ಪ್ರಸಾದ ಸ್ವೀಕರಿಸಬಹುದು ಎಂದು ಪುರೋಹಿತ ದಾಮೋದರ ಶರ್ಮಾ ತಿಳಿಸಿದರು.

ಶ್ರೀ ಪಂಚಲಿಂಗೇಶ್ವರ ದೇವರು ತುಳುನಾಡಿನ ಪ್ರಮುಖ ದೇವರಾಗಿದ್ದು, ಭಟ್ಕಳದಿಂದ ಕಾಸರಗೋಡು ವರೆಗೆ ಆಡಳಿತ ನಡೆಸಿದ ರಾಜಮನೆತನದ ಆರಾಧ್ಯ ದೇವರಾಗಿದ್ದರು. ಆದರೆ ಕೆಲವು ಕಾರಣಗಳಿಂದ ದೇವಸ್ಥಾನ ಇದುವರೆಗೆ ಜೀರ್ಣೋದ್ಧಾರ ಕಾಣಲಿಲ್ಲ. ಸುಮಾರು 42 ಸಮುದಾಯಗಳಿಗೆ ಬಾರ್ಕೂರು ಮೂಲಸ್ಥಾನವಾಗಿದ್ದು, ಆ ಸಮುದಾಯಗಳ ಅನೇಕ ದೇವಾಲಯಗಳ ಮೂಲದೇವರಾಗಿ ಶ್ರೀ ಪಂಚಲಿಂಗೇಶ್ವರರ ಮಹತ್ವವಿದೆ. ಆದ್ದರಿಂದ ದೇವಸ್ಥಾನದ ಅಭಿವೃದ್ಧಿಗೆ ಎಲ್ಲ ಸಮುದಾಯದವರೂ ಕೈಜೋಡಿಸಬೇಕು ಎಂದು ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷ ಆಕಾಶ್ ರಾಜ್ ಜೈನ್ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಜೀರ್ಣೋದ್ಧಾರ ಸಮಿತಿ ಉಪಾಧ್ಯಕ್ಷ ಚಂದ್ರಶೇಖರ ಶೆಟ್ಟಿ, ಏಕನಾಥೇಶ್ವರಿ ದೇವಸ್ಥಾನದ ಟ್ರಸ್ಟಿ ಬಿ. ಜನಾರ್ದನ ದೇವಾಡಿಗ, ಸಂಯೋಜಕ ರಾಮಚಂದ್ರ ಕಾಮತ್, ಕಾರ್ಯದರ್ಶಿ ಶ್ರೀನಿವಾಸ ಶೆಟ್ಟಿ ಹಾಗೂ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಶಾಲೆಯಲ್ಲಿ ಪರಿಸರ ಮಾಹಿತಿ, ಗಿಡ ನಾಟಿ ಕಾರ್ಯಕ್ರಮ



◆ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್‌ನ ಬಿ ಸಿ ರೋಡ್ ವಲಯ ಮೊಡಂಕಾಪು ದೀಪಿಕಾ ಪ್ರೌಢಶಾಲೆ ಇದರ ಸಂಯುಕ್ತಾಶ್ರಯದಲ್ಲಿ ಪರಿಸರ ಮಾಹಿತಿ ಮತ್ತು ಗಿಡ ನಾಟಿ ಕಾರ್ಯಕ್ರಮವು ಮೊಡಂಕಾಪು ದೀಪಿಕಾ ಪ್ರೌಢಶಾಲೆಯ ವಠಾರದಲ್ಲಿ ಸೋಮವಾರ ನಡೆಯಿತು.

ಬಂಟ್ವಾಳ ತಾಲೂಕಿನ ಅರಣ್ಯಾಧಿಕಾರಿ ಕೃಷ್ಣ ಅವರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಕ್ಕಳು ತಮ್ಮ ಹುಟ್ಟುಹಬ್ಬದ ದಿನದಂದು ಒಂದೊಂದು ಗಿಡ ನಾಟಿ ಮಾಡುವ ಮೂಲಕ ಪರಿಸರವನ್ನು ಸಂರಕ್ಷಿಸಬೇಕೆಂದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಂಟ್ವಾಳ ತಾಲೂಕಿನ ಕೃಷಿ ಮೇಲ್ವಿಚಾರಕರಾದ ಭಾಸ್ಕರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೀಪಿಕಾ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಸಾಧು ಅವರು ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಈ ಕಾರ್ಯಕ್ರಮವು ಮಕ್ಕಳಿಗೆ ಸ್ಫೂರ್ತಿದಾಯಕವಾಗಿದೆ ಎಂದು ತಿಳಿಸಿದರು.

ಶಾಲಾ ಮಕ್ಕಳಿಗೆ ಪರಿಸರ, ಚಿತ್ರಕಲೆ, ಪ್ರಬಂಧ, ಪರಿಸರ ಗೀತೆ ಸ್ಪರ್ಧೆ ನಡೆಸಲಾಯಿತು. ಬಳಿಕ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಬಿ.ಮೂಡ ಒಕ್ಕೂಟದ ಉಪಾಧ್ಯಕ್ಷರಾದ ಪದ್ಮಾವತಿ ಮೊಡಂಕಾಪು, ಅರಣ್ಯ ಇಲಾಖೆಯ ರೇಖಾ ಅವರು ಉಪಸ್ಥಿತರಿದ್ದರು. ಶಾಲೆಯ ಎಲ್ಲಾ ಶಿಕ್ಷಕರು, ಒಕ್ಕೂಟದ ಪದಾಧಿಕಾರಿಗಳಾದ ಉಮೇಶ್, ದೇವಕಿ ಹಾಗೂ ಶಾಲಾ ಮಕ್ಕಳು ಉಪಸ್ಥಿತರಿದ್ದರು.

ಬಿ ಮೂಡ ಒಕ್ಕೂಟದ ಸೇವಾಪ್ರತಿನಿಧಿ ಆಶಾಲತಾ ಅವರು ಸ್ವಾಗತಿಸಿದರು. ಮಕ್ಕಳಿಗೆ ಪರಿಸರದ ಘೋಷಣೆಗಳನ್ನು ಘೋಷಿಸಲಾಯಿತು. ಶಿಕ್ಷಕಿ ಶಾಲಿನಿ ವಂದಿಸಿದರು. ಬಿ ಸಿ ರೋಡು ವಲಯದ ಮೇಲ್ವಿಚಾರಕರಾದ ಗಿರೀಶ್ ನಿರ್ವಹಿಸಿದರು.

ಕೊಡವೂರು ದೇವಸ್ಥಾನದ ಮಹಾರುದ್ರ ಯಾಗದ ಉಸ್ತುವಾರಿ ವೆಂಕಟಕೃಷ್ಣ ಕಾಣೆ

◆ಉಡುಪಿ: ಕೊಡವೂರು ಗ್ರಾಮದ ಶ್ರೀ ಮಹಾತೋಭಾರ ಶ್ರೀ ಶಂಕರನಾರಾಯಣ ದೇವಸ್ಥಾನದ ಮಹಾರುದ್ರಯಾಗದ ಸಮಯ ಪೌರೋಹಿತ್ಯದ ಉಸ್ತುವಾರಿ ವಹಿಸಿಕೊಂಡಿದ್ದ ವೆಂಕಟಕೃಷ್ಣ (49) ಎಂಬವರು ನಿಗೂಢವಾಗಿ ಕಾಣೆಯಾಗಿದ್ದಾರೆ.

ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ ಪ್ರಕಾಶ್.ಜಿ (56) ಈ ಕುರಿತು ಮಲ್ಪೆ ಠಾಣೆಗೆ ದೂರು ನೀಡಿದ್ದಾರೆ. ಜೂನ್ 12ರಂದು ಬೆಳಿಗ್ಗೆ 8 ಗಂಟೆಗೆ ಕೊಡವೂರು ಗ್ರಾಮದ ಕೆರೆಕಟ್ಟೆ ಗಣಪತಿ ದೇವಸ್ಥಾನದಿಂದ ಹೊರಟ ವೆಂಕಟಕೃಷ್ಣ ಅವರು ಇದಾದ ಬಳಿಕ ದೇವಸ್ಥಾನಕ್ಕೂ ವಾಪಸ್ ಬರದೆ, ತಮ್ಮ ಮನೆಗೂ ಹೋಗದೆ ನಾಪತ್ತೆಯಾಗಿದ್ದಾರೆ. ಎಲ್ಲೂ ಪತ್ತೆಯಾಗದ ಹಿನ್ನೆಲೆಯಲ್ಲಿ ಮಲ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಲೂರು-ಮಾಂದಲಪಟ್ಟಿ ರಸ್ತೆ ದುರಸ್ತಿ ಕಾರ್ಯ ಆರಂಭ

◆ಮಡಿಕೇರಿ: ತೀವ್ರವಾಗಿ ಹದಗೆಟ್ಟಿದ್ದ ಕಾಲೂರು- ಮಾಂದಲಪಟ್ಟಿ ರಸ್ತೆ ದುರಸ್ತಿ ಕಾರ್ಯವನ್ನು ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂಥರ್ ಗೌಡ ಅವರ ನಿರ್ದೇಶನದ ಮೇರೆಗೆ ಆರಂಭಿಸಲಾಗಿದೆ.



ರಸ್ತೆ ಹಾಳಾಗಿರುವುದರಿಂದ ಬಸ್ ಸಂಚಾರವಿಲ್ಲದೆ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗಿದೆ ಎಂದು ವಾರದ ಹಿಂದೆ ಕಾಲೂರು ಗ್ರಾಮಸ್ಥರು ಡಾ ಮಂಥರ್ ಗೌಡ ಅವರಲ್ಲಿ ಮನವಿ ಮಾಡಿಕೊಂಡಿದ್ದರು.

ಮಳೆ ಆರಂಭಗೊಂಡಿರುವುದರಿಂದ ಪೂರ್ಣ ಪ್ರಮಾಣದಲ್ಲಿ ರಸ್ತೆ ನಿರ್ಮಾಣ ಅಸಾಧ್ಯವಾಗಿದ್ದು, ಸದ್ಯಕ್ಕೆ ತಾತ್ಕಾಲಿಕ ದುರಸ್ತಿ ಮಾಡಿ ಬಸ್ ಸಂಚಾರಕ್ಕೆ ಅನುವು ಮಾಡಿಕೊಡುವುದಾಗಿ ಶಾಸಕರು ಭರವಸೆ ನೀಡಿದ್ದರು.

ಅದರಂತೆ ಕಳೆದ ನಾಲ್ಕು ದಿನಗಳಿಂದ ರಸ್ತೆಯ ತಾತ್ಕಾಲಿಕ ದುರಸ್ತಿ ಕಾರ್ಯ ನಡೆಯುತ್ತಿದೆ. ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಿರೀಶ್ ಅವರು ಸ್ಥಳದಲ್ಲಿಯೇ ಇದ್ದು ಕಾಮಗಾರಿಯ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ.

ತಮ್ಮ ಕೋರಿಕೆಗೆ ತಕ್ಷಣವೇ ಸ್ಪಂದನೆ ನೀಡಿದ ಡಾ. ಮಂಥರ್ ಗೌಡ ಅವರ ನಡೆಯ ಬಗ್ಗೆ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಶಿಕ್ಷಣದಲ್ಲಿ ಪೋಷಕರು, ಶಿಕ್ಷಕರು, ವಿದ್ಯಾರ್ಥಿಗಳ ಪಾತ್ರ ಕುರಿತು ಸಂವಾದ



◆ಮೂಡುಬಿದಿರೆ: ತಾಲೂಕಿನ ಜ್ಞಾನವಿಕಾಸ ಯೋಜನೆಯ ಅಂತರ್ಗತವಾಗಿ ವಾಲ್ಪಾಡಿ ಗ್ರಾಮದ ಪೆರಿಬೆಟ್ಟು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜೂನ್ 15ರಂದು ಶಿಕ್ಷಣದಲ್ಲಿ ಪೋಷಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಪಾತ್ರದ ಕುರಿತು ಸಂವಾದ ಚರ್ಚೆ ನಡೆಯಿತು. ಸಂವಾದ ಚರ್ಚೆ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ರಾಜ್ಯ ಗ್ರಾಹಕ ಸಂಘಟನೆಯ ಸಂಪನ್ಮೂಲ ವ್ಯಕ್ತಿ, ರಾಯಿ ರಾಜ ಕುಮಾರ ಅವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಬಳಿಕ ಮಾತನಾಡಿದ ಅವರು, ಶಿಕ್ಷಕರ ಹಾಗೂ ಪೋಷಕರಿಂದ ನಿರೀಕ್ಷಿಸುವ ವಿವಿಧ ಅಂಶಗಳ ಬಗ್ಗೆ ಮಾಹಿತಿ ನೀಡಿದರು. ಶಿಕ್ಷಣಕ್ಕೆ ಪೂರಕವಾಗಿ ಪೋಷಕರು ಹಾಗೂ ಶಿಕ್ಷಕರು ವಹಿಸಬೇಕಾದ ಜವಾಬ್ದಾರಿಗಳ ಕುರಿತಾಗಿಯೂ ತಿಳಿ ಹೇಳಿದರು. ಅಲ್ಲದೆ ಶಿಕ್ಷಣ ಸಂಸ್ಥೆಯ ರೂಪುರೇಷೆ, ಕಾರ್ಯಗಳು, ಜವಾಬ್ದಾರಿಯನ್ನು ತಿಳಿಸಿಕೊಟ್ಟರು. ವಿದ್ಯಾರ್ಥಿಗಳ ಸುರಕ್ಷತೆಯ ದೃಷ್ಟಿಯಿಂದ ಸರಕಾರಿ ಶಾಲೆಗಳು ಎಷ್ಟು ಪ್ರಯೋಜನಕಾರಿ, ಪರಿಸರ ರಕ್ಷಣೆಯ ವಿಷಯದಲ್ಲಿಯೂ ಎಷ್ಟು ಜವಾಬ್ದಾರಿಗಳನ್ನು ಹೊಂದಿವೆ ಎನ್ನುವುದನ್ನು ಹಲವಾರು ಉದಾಹರಣೆಗಳ ಮೂಲಕ ಮನವರಿಕೆ ಮಾಡಿಕೊಟ್ಟರು.

ಧರ್ಮಸ್ಥಳ ಜ್ಞಾನ ವಿಕಾಸ ಯೋಜನೆಯ ಅಧಿಕಾರಿ ಮಲ್ಲಿಕಾ ಸ್ವಾಗತಿಸಿ, ವಂದಿಸಿದರು. ಯೋಜನೆಯ ಜಿಲ್ಲಾ ಮಟ್ಟದ ಅಧಿಕಾರಿ ಅಮೃತಾ ಶೆಟ್ಟಿ ಪ್ರಾಸ್ತಾವಿಕ ಮಾತುಗಳಲ್ಲಿ ಯೋಜನೆಯ ಮುಖ್ಯ ಕಾರ್ಯಾನುಕೂಲತೆಯ ಅಂಶಗಳನ್ನು ತಿಳಿಸಿದರು. ವೇದಿಕೆಯಲ್ಲಿ ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಪ್ರಕಾಶ್ ಆಚಾರ್ಯ ಉಪಸ್ಥಿತರಿದ್ದರು. ಮುಖ್ಯ ಶಿಕ್ಷಕ ಪ್ರಸನ್ನ ಅಧ್ಯಕ್ಷತೆ ವಹಿಸಿದ್ದರು.

ವಾಹನಗಳ ಡಿಕ್ಕಿ: ಮೂವರಿಗೆ ಗಾಯ

◆ಉಡುಪಿ: ಉಡುಪಿ ತಾಲೂಕಿನ ಶಿವಳ್ಳಿ ಗ್ರಾಮದ ಲಕ್ಷ್ಮೀ ವೆಂಕಟರಮಣ ದೇವಸ್ಥಾನದ ಬಳಿಯ ನಾಗಬನದ ಸಾರ್ವಜನಿಕ ರಸ್ತೆಯಲ್ಲಿ ಜೂನ್ 14ರಂದು ಸಂಜೆ ಎರಡು ದ್ವಿಚಕ್ರ ವಾಹನಗಳ ನಡುವೆ ಸಂಭವಿಸಿದ ಡಿಕ್ಕಿಯಲ್ಲಿ ದಂಪತಿ ಸೇರಿ ಮೂವರು ಗಾಯಗೊಂಡಿದ್ದಾರೆ.

ತೆಂಕನಿಡಿಯೂರು ಗ್ರಾಮದ ಪ್ರಶಾಂತ್ ಆಚಾರ್ಯ (33) ಅವರು ತನ್ನ ಹೆಂಡತಿ ರೇವತಿ ಆಚಾರ್ಯ ಅವರೊಂದಿಗೆ ಸ್ಕೂಟರ್‌ನಲ್ಲಿ ಮೂಡುಬೆಳ್ಳೆ ಕಡೆಗೆ ಹೋಗುತ್ತಿದ್ದಾಗ, ಬೀಡಿನಗುಡ್ಡೆ ಕಡೆಯಿಂದ ಬಂದ ಶಿವಾನಂದ ಎಂಬಾತ ತನ್ನ ಬೈಕನ್ನು ನಿರ್ಲಕ್ಷ್ಯದಿಂದ ಚಲಾಯಿಸಿ ರಸ್ತೆಯ ಬಲಬದಿಗೆ ಬಂದು ಇವರ ಸ್ಕೂಟರ್‌ಗೆ ಡಿಕ್ಕಿ ಹೊಡೆದಿದ್ದಾನೆ. ಅಪಘಾತದ ರಭಸಕ್ಕೆ ಸ್ಕೂಟರ್ ಸವಾರರಿಬ್ಬರೂ ರಸ್ತೆಗೆ ಬಿದ್ದು ಗಾಯಗೊಂಡಿದ್ದು, ಉಡುಪಿಯ ಆದರ್ಶ ಆಸ್ಪತ್ರೆಗೆ ದಾಖಲಾಗಿದ್ದಾರೆ. ಘಟನೆಯಲ್ಲಿ ಗಾಯಗೊಂಡ ಆರೋಪಿ ಬೈಕ್ ಸವಾರ ಶಿವಾನಂದ ಜಿಲ್ಲಾಸ್ಪತ್ರೆ ಹಾಗೂ ಆದರ್ಶ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಹೆಚ್ಚಿನ ಚಿಕಿತ್ಸೆಗಾಗಿ ಸುರತ್ಕಲ್‌ನ ಶ್ರೀನಿವಾಸ ಆಸ್ಪತ್ರೆಗೆ ದಾಖಲಾಗಿದ್ದಾನೆ. ಉಡುಪಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೊಟೇಲ್‌ನಲ್ಲಿ ಕಳವು: ಆರೋಪಿ ಗಂಟೆಯೊಳಗೆ ಪೊಲೀಸ ಬಲೆಗೆ

◆ಕಾಸರಗೋಡು: ಕುಡಂಗುಳಿಯ ಹೊಟೇಲ್‌ನಿಂದ 6500 ರೂ. ಕಳವುಗೈದ ಪ್ರಕರಣದ ಆರೋಪಿಯನ್ನು ಗಂಟೆಯೊಳಗೆ ಬಂಧಿಸಲಾಗಿದೆ. ಮರುದಡ್ಕ ನಿವಾಸಿ, ಕುಂಡಂಗುಳಿಯ ಕ್ವಾರ್ಟರ್ಸ್‌ನಲ್ಲಿ ವಾಸಿಸುವ ಟಿ.ಕೆ.ಹುಸೈನ್ (40) ಎಂಬಾತನನ್ನು ಬೇಡಗಂ ಪೊಲೀಸರು ಬಂಧಿಸಿದ್ದು, ಬಂಧಿತ ಆರೋಪಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿದೆ.

ಕುಂಡಂಗುಳಿಯ ಹೊಟೇಲ್‌ನ ಹಿಂಬಾಗದ ಮೂಲಕ ಒಳಗೆ ನುಗ್ಗಿದ ಕಳ್ಳ ಮೇಜಿನಲ್ಲಿರಿಸಿದ್ದ 6500 ರೂಪಾಯಿ ಕಳವು ನಡೆಸಿದನೆನ್ನಲಾಗಿದೆ. ಭಾನುವಾರ ಬೆಳಗ್ಗೆ ಹೊಟೇಲ್‌ನ ಪಾಲುದಾರ ಗಾಳಿಮುಖ ನಿವಾಸಿ ಮೊಹಮ್ಮದ್ ಹಾರೀಸ್‌ರ ಗಮನಕ್ಕೆ ಬಂದಿದ್ದು, ಅವರು ನೀಡಿದ ದೂರಿನಂತೆ ಬೇಡಗಂ ಪೊಲೀಸರು ಕೇಸು ದಾಖಲಿಸಿ ಕೂಡಲೇ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

◆ಮಡಿಕೇರಿ: ಮೂರ್ನಾಡು ವಿದ್ಯುತ್ ವಿತರಣಾ ಉಪ ಕೇಂದ್ರದ ಕೇಂದ್ರದ ಎಫ್3 ಮೂರ್ನಾಡು ಫೀಡರ್‌ನಲ್ಲಿ ಜೂ.16 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಜಾಲ ಬಲವರ್ಧನೆ ಹಾಗೂ ಮಳೆಗಾಲ ಮುಂಜಾಗ್ರತಾ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಮೂರ್ನಾಡು ಟೌನ್, ಮುತ್ತಾರ್ಮುಡಿ, ಕಿಗ್ಗಾಲು, ಬೇತ್ರಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚಾವಿಸನಿನಿ ಕಾರ್ಯ ಮತ್ತು ಪಾಲನೆ ವಿಭಾಗ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

ಸಾಲಿಗ್ರಾಮದಲ್ಲಿ ತಾಳಮದ್ದಳೆ ಸರಣಿ ಕಾರ್ಯಕ್ರಮಕ್ಕೆ ಚಾಲನೆ

ಅರ್ಥಾಂಕುರ ನಿಜಕ್ಕೂ ಅರ್ಥಪೂರ್ಣ



◆ಕೋಟ: ತಾಳಮದ್ದಳೆ ಕಾರ್ಯಕ್ರಮಗಳು ಬಡಗಿನ ಪ್ರಾಂತ್ಯದಲ್ಲಿ ಅತೀ ವಿರಳವಾಗುತ್ತಿರುವ ಕಾಲಘಟ್ಟದಲ್ಲಿ ಪ್ರತೀ ತಿಂಗಳು ಗುರುನರಸಿಂಹ ದೇಗುಲ ಸಾಲಿಗ್ರಾಮದಲ್ಲಿ ಕಾರ್ಯಕ್ರಮ ಆಯೋಜಿಸಿಕೊಂಡು ಎಷ್ಟೋ ಕಲಾವಿದರಿಗೆ ತಾಳಮದ್ದಳೆಯಲ್ಲಿ ಅರ್ಥ ಹೇಳಿಸುವಲ್ಲಿ ಅಭಿರುಚಿ ಮೂಡಿಸುತ್ತಿರುವ ವಿಚಾರ ಸಂತೋಷದಾಯಕವಾದದ್ದು. ಅರ್ಥಾಂಕುರ ನಿಜಕ್ಕೂ ಅರ್ಥಪೂರ್ಣ. ನಿರಂತರ ಕಾರ್ಯಕ್ರಮದ ಕಾರಣದಿಂದ ಪ್ರೇಕ್ಷಕ ವರ್ಗವೂ ದಿನೇ ದಿನೇ ಬೆಳೆಯುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಅವಕಾಶ ಕಲ್ಪಿಸುತ್ತಿರುವ ದೇಗುಲದ ಆಡಳಿತ ಮಂಡಳಿಯ ಎಲ್ಲಾ ಸದಸ್ಯರಿಗೂ ಅಭಿನಂದನೆ ಸಲ್ಲಿಸಿಕೊಳ್ಳೋಣ ಎಂದು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಪ್ರಸಿದ್ಧ ಅರ್ಥದಾರಿ ಪವನ್ ಕಿರಣ್ ಕೆರೆ ಅಭಿಪ್ರಾಯಪಟ್ಟರು.

ಯಶಸ್ವಿ ಕಲಾವೃಂದ ಕೊಮೆ ತೆಕ್ಕಟ್ಟೆ ಹಾಗೂ ಯಕ್ಷ ನುಡಿಸಿರಿ ಬಳಗ ಸಿದ್ದಾಮರ ಜಂಟಿ ಆಶ್ರಯದಲ್ಲಿ ಶ್ರೀ ಗುರುನರಸಿಂಹ ದೇವಸ್ಥಾನ ಸಾಲಿಗ್ರಾಮ ಸಹಯೋಗದೊಂದಿಗೆ ತಿಂಗಳ ಸರಣಿ ತಾಳಮದ್ದಳೆ ಕಾರ್ಯಕ್ರಮ ಅರ್ಥಾಂಕುರವನ್ನು ಜೂನ್ 13ರಂದು ಸಾಲಿಗ್ರಾಮದಲ್ಲಿ ಚಾಲನೆ ನೀಡಿ ಪ್ರೊ. ಪವನ್ ಕಿರಣ್ ಕೆರೆ ಮಾತನ್ನಾಡಿದರು.

ದೇವಳದ ಸಮಿತಿ ಸದಸ್ಯ ತಾರಾನಾಥ ಹೊಳ್ಳ, ಆ್ಯಂಡ್ರು ಡಿಸಿಲ್ವ, ಲಂಬೋದರ ಹೆಗಡೆ, ಎನ್.ಜಿ. ಹೆಗಡೆ ಉಪಸ್ಥಿತರಿದ್ದರು. ದೇವಳದ ಸಿಬ್ಬಂದಿ ನಾಗಾರಾಜ ಹಂದೆ ಅತಿಥಿಗಳನ್ನು ಅಭಿನಂದಿಸಿದರು. ಉಪನ್ಯಾಸಕ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಬಳಿಕ ತಾಳಮದ್ದಳೆ 'ಶರಸೇತು ಬಂಧ' ರಂಗ ಪ್ರಸ್ತುತಿಗೊಂಡಿತು.

ಬಜಕೆರೆ ಯುವಕರ ಸಾಮಾಜಿಕ ಕಳಕಳಿ

ತಾತ್ಕಾಲಿಕ ಬಸ್ ತಂಗುದಾಣ ನಿರ್ಮಾಣ



◆ಕಡಬ: ಕಡಬ ತಾಲೂಕಿನ 102 ನೆಕ್ಕಿಲಾಡಿ ಗ್ರಾಮದ ಪಂಜೋಡಿ, ಪೊನ್ನೆತ್ತೂರು ಹಾಗೂ ಮಾಯಿಪಾಜೆ ಪರಿಸರದ ಯುವಕರ ತಂಡವೊಂದು ಮರ್ದಾಳ-ರಸ್ತೆಯ ಬಜಕೆರೆ ಸೇತುವೆ ಬಳಿ ತಾತ್ಕಾಲಿಕ ಬಸ್ ಪ್ರಯಾಣಿಕರ ತಂಗುದಾಣವನ್ನು ನಿರ್ಮಿಸಿ ಸ್ಥಳೀಯ ಜನರ ಶ್ಲಾಘನೆಗೆ ಪಾತ್ರವಾಗಿದೆ.

ಈ ಭಾಗದ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಿಗೆ ಮಳೆ ಹಾಗೂ ಬಿಸಿಲಿನಿಂದ ರಕ್ಷಣೆ ಒದಗಿಸುವ ಉದ್ದೇಶದಿಂದ ಗ್ರಾಮಸ್ಥರ ಸಹಕಾರ ಮತ್ತು ಶ್ರಮದಾನದ ಮೂಲಕ ಬಸ್ ಪ್ರಯಾಣಿಕರ ತಂಗುದಾಣವನ್ನು ನಿರ್ಮಿಸಲಾಗಿದೆ. ಪ್ರಮುಖರಾದ ಮನೋಜ್ ಪಂಜೋಡಿ, ಉಲ್ಲಾಸ್ ಪಂಜೋಡಿ, ಪ್ರತೀಶ್ ಮಾಯಿಪಾಜೆ, ಪ್ರಶಾಂತ್ ಪಂಜೋಡಿ, ಹರ್ಷಿತ್ ಡೆಪ್ಪುಣಿ ಮುಂತಾದ ಯುವಕರ ಮುತುವರ್ಜಿಯಲ್ಲಿ ತಂಗುದಾಣ ನಿರ್ಮಾಣವಾಗಿದ್ದು, ಯುವಕರ ಈ ಸಮಾಜಮುಖಿ ಕಾರ್ಯದ ಬಗ್ಗೆ ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ.

ಕಿರುಸುದ್ದಿ

ಕೋಳಿ ಅಂಕಕ್ಕೆ ದಾಳಿ, ಮೂವರು ವಶಕ್ಕೆ

• **ವಿಟ್ಲ:** ಸಾಲೆತ್ತೂರು ಸಮೀಪದ ಸಾರ್ವಜನಿಕ ಗುಡ್ಡದಲ್ಲಿ ಭಾನುವಾರ ಸಂಜೆ ಹಣವನ್ನು ಪಣವಾಗಿಟ್ಟು ಕೋಳಿ ಅಂಕ ನಡೆಸುವ ಮಾಹಿತಿ ಹಿನ್ನಲೆಯಲ್ಲಿ ವಿಟ್ಲ ಪೊಲೀಸರ ತಂಡ ಮೂವರನ್ನು ಹಾಗೂ 3 ಕೋಳಿಯನ್ನು ವಶಕ್ಕೆ ಪಡೆದುಕೊಂಡಿದೆ. ಉಳ್ಳಾಲ ಬೋಳಿಯಾರ್ ನಿವಾಸಿ ಲತೀಶ್ ಕುಮಾರ್(37), ಬಂಟ್ವಾಳ ಮಂಚಿ ನಿವಾಸಿ ಸುರೇಶ್ ನಾಯ್ಕ್ ಕೆ.(63) ಬಂಟ್ವಾಳ ವಿಟ್ಲಪಡ್ನೂರು ನಿವಾಸಿ ದಯಾನಂದ(40) ಎಂಬವರನ್ನು ವಶಕ್ಕೆ ಪಡೆಯಲಾಗಿದೆ. ಸ್ಥಳದಲ್ಲಿ ಪರಿಶೀಲಿಸಿದಾಗ ಹಣವನ್ನು ಪಣವಾಗಿಟ್ಟು ಜೂಜಾಟ ನಡೆಯುತ್ತಿರುವುದು ಕಂಡು ಬಂದಿದ್ದು, ಜೂಜಾಟಕ್ಕೆ ಬಳಸಿದ ರೂ.1550 ನಗದು, 3 ಅಂಕದ ಕೋಳಿ ಹಾಗೂ ಇತರ ಸೊತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಬಗ್ಗೆ ಪ್ರಕರಣ ದಾಖಲಾಗಿದೆ.

ಕಟಕದಲ್ಲೂ ದಾಳಿ: ಪದ್ಮಡ್ಕದಲ್ಲಿ ಸೋಮವಾರ ಮಧ್ಯಾಹ್ನದ ಸಮಯ ಕೋಳಿ ಅಂಕ ನಡೆಯುತ್ತಿದ್ದ ಮಾಹಿತಿ ಹಿನ್ನಲೆಯಲ್ಲಿ ಪೊಲೀಸರು ದಾಳಿ ನಡೆಸಿದ್ದಾರೆ. ಸ್ಥಳಕ್ಕೆ ತೆರಳುತ್ತಿದ್ದಂತೆ ವಾಹನಗಳು ಅಲ್ಲೇ ಬಿಟ್ಟು ಕೋಳಿ ಅಂಕದಲ್ಲಿ ಕೂಡಿದವರು ಪಲಾಯನ ಮಾಡಿದ್ದಾರೆನ್ನಲಾಗಿದೆ. ಬರಿಗೈಯಲ್ಲಿ ಪೊಲೀಸರು ಹಿಂತಿರುಗಿದ್ದು, ಸಂಜೆ 6 ಗಂಟೆ ಸಮಯಕ್ಕೆ ಪಲಾಯನ ಗೈದವರು ವಾಹನಗಳ ಜತೆಗೆ ಹಿಂತಿರುಗಿದ್ದನ್ನು ಸಾರ್ವಜನಿಕರು ಗಮನಿಸಿದ್ದಾರೆ.

ಜೀವಬೆದರಿಕೆ ಇದೆ: ಚೆನ್ನಯ್ಯ ದೂರು

• **ಬೆಳ್ತಂಗಡಿ:** ಧರ್ಮಸ್ಥಳ ಪ್ರಕರಣದಲ್ಲಿ ಸಾಕ್ಷಿ ದೂರುದಾರನಾಗಿ ಬಂದು ಆರೋಪಿಯಾಗಿರುವ ಚನ್ನಯ್ಯ ತನಗೆ ಜೀವಬೆದರಿಕೆ ಇರುವ ಬಗ್ಗೆ ಎಸ್. ಐ.ಟಿ ಗೆ ದೂರು ನೀಡಿದ್ದಾನೆ. ಬೆಳ್ತಂಗಡಿ ಎಸ್‌ಐಟಿ ಕಚೇರಿಗೆ ಜೂ.15 ರಂದು ಚನ್ನಯ್ಯ ಮತ್ತು ಪತ್ನಿ ರಕ್ಷಾ ಜೊತೆಯಲ್ಲಿ ಬಂದು ನನಗೆ ಮತ್ತು ನನ್ನ ಕುಟುಂಬಕ್ಕೆ ಗಿರೀಶ್ ಮಟ್ಟಣ್ಣನವರ್ ಹಾಗೂ ಇತರರಿಂದ ಜೀವ ಬೆದರಿಕೆ ಇರುವ ಬಗ್ಗೆ ದೂರು ನೀಡಿದ್ದಾನೆ. ಹೈಕೋರ್ಟ್‌ಗೆ ರಿಟ್ ಪಿಟಿಷನ್ ಹಾಕಿರುವ ಬಗ್ಗೆ ಆಳಿಯ ಪುರುಷೋತ್ತಮ ಹಾಗೂ ಕೆಲವರಿಗೆ ಗಿರೀಶ್ ಮಟ್ಟಣ್ಣವರ್, ಯುನೈಟೆಡ್ ಮೀಡಿಯಾ ಆಥವರ್ಕ್ ಕರೆ ಮಾಡಿ ಮಾಹಿತಿಗಳನ್ನು ಕೇಳುತ್ತಿದ್ದು ಇದರಿಂದ ಜೀವಬೆದರಿಕೆ ಇದ್ದು ಪೊಲೀಸ್ ರಕ್ಷಣೆ ನೀಡಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಎಸ್‌ಐಟಿ ಕಚೇರಿಗೆ ಬಂದು ದೂರು ನೀಡಿದ್ದಾನೆ.

ಮಾದಕ ವಸ್ತು ಸೇವನೆ: ಆರೋಪಿ ಬಂಧನ

• **ಮಂಗಳೂರು:** ಮಾದಕ ವಸ್ತು ಸೇವನೆ ಪ್ರಕರಣಕ್ಕೆ ಸಂಬಂಧಿಸಿ ಆರೋಪಿಯೊಬ್ಬನನ್ನು ಸುರತ್ಕಲ್‌ಠಾಣಾ ಪೊಲೀಸರು ಬಂಧಿಸಿದ್ದಾರೆ. ಸುರತ್ಕಲ್ ಕೃಷ್ಣಾಪುರ 5ನೇ ಬ್ಲಾಕ್ ನಿವಾಸಿ ಕುನಾಲ್ ಕೊಟ್ಟಾರಿ (22) ಬಂಧಿತ. ಈತ ಸ್ಥಳೀಯ ಬಸ್ಸು ನಿಲ್ದಾಣದ ಬಳಿಕ ಮಾದಕ ವಸ್ತು ಸೇವನೆ ಮಾಡಿದ್ದ ಆರೋಪದಲ್ಲಿ ಬಂಧಿಸಲಾಗಿದೆ. ಭಾನುವಾರ ಗಸ್ತಿನಲ್ಲಿದ್ದ ಪೊಲೀಸರು ಸ್ಥಳಕ್ಕೆ ಬಂದಾಗ ಸಿಗರೇಟು ಸೇದುತ್ತಿದ್ದ ಕುನಾಲ್ ನನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

ನಿಧನ ಸುದ್ದಿ

ಸಾವಿತ್ರಿ ಮುಳಿಯ

• **ಮಂಗಳೂರು:** ಹಿರಿಯ ಸಾಮಾಜಿಕ ಕಾರ್ಯಕರ್ತೆ, ಭಜನಾ ಸಂಚಾಲಕಿ, ಸಂಘಟಕಿ, ಲೇಖಕಿ ಸಾವಿತ್ರಿ ಮಹಾಬಲ ಭಟ್ ಮುಳಿಯ ಅವರು ಭಾನುವಾರ ಸಂಜೆ ನಗರದ ಸ್ವಗೃಹದಲ್ಲಿ ನಿಧನರಾದರು. ಅವರಿಗೆ 82ವರ್ಷ ಪ್ರಾಯವಾಗಿತ್ತು. ಅವರು ಪುತ್ರ, ಮೊಮ್ಮಕ್ಕಳು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಹವ್ಯಕ ಪರಿಷತ್‌ನ ಮಾತೃವಿಭಾಗದ ಪ್ರಥಮ ಅಧ್ಯಕ್ಷೆಯಾಗಿ , ಶ್ರೀ ರಾಮಚಂದ್ರಾಪುರ ಮಠದ ಕಾರ್ಯಕರ್ತೆಯಾಗಿ ಕೊಡುಗೈ ದಾನಿಯಾಗಿದ್ದ ಅವರು ಮಂಗಳೂರು ಹವ್ಯಕ ಸಭಾದ ಅಧ್ಯಕ್ಷೆಯಾಗಿಯೂ ಸೇವೆ ಸಲ್ಲಿಸಿದ್ದರು. ಅವರ ಪತಿ ದಿ.ಮಹಾಬಲ ಭಟ್ ಮುಳಿಯ (ಎಂ.ಬಿ.ಮುಳಿಯ) ಮಂಗಳೂರಿನ ಖ್ಯಾತ ನ್ಯಾಯವಾದಿಯಾಗಿದ್ದರು.



ಜಯಕೀರ್ತಿ ಹೆಚ್. ಬಿ.

• **ಬೆಳ್ತಂಗಡಿ:** ಪ್ರಸ್ತುತ ಬೆಳ್ತಂಗಡಿ ತಾಲೂಕಿನ ಬಾರ್ಯ ಮತ್ತು ತೆಕ್ಕಾರು ಗ್ರಾಮ ಪಂಚಾಯತ್ ನಲ್ಲಿ ಪ್ರಭಾರ ಅಭಿವೃದ್ಧಿ ಅಧಿಕಾರಿಯಾಗಿ ಸೇವೆಯಲ್ಲಿದ್ದ ಚಾರ್ಮಾಡಿ ಗ್ರಾಮ ಪಂಚಾಯತ್ ಗ್ರೇಡ್ -1 ಕಾರ್ಯದರ್ಶಿ ಜಯಕೀರ್ತಿ ಹೆಚ್ ಬಿ. (43) ಅವರು ಅಲ್ಪಕಾಲದ ಅಸೌಖ್ಯದಿಂದ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಜೂ. 15 ರಂದು ನಿಧನರಾದರು.. ಇವರು ಬೆಳ್ತಂಗಡಿ ತಾಲೂಕಿನ ವಿವಿಧ ಪಂಚಾಯತ್ ಗಳಾದ ನೆರಿಯ, ಮಿತ್ತಬಾಗಿಲು, ಕಡಿರುದ್ಯಾವರ, ಮಲವಂತಿಗೆ, ಕಲ್ಮಂಜ ಇಲ್ಲೆಲ್ಲಾ ಪ್ರಭಾರ ನೆಲೆಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ (ಪಿಡಿಒ) ಆಗಿ ಕರ್ತವ್ಯ ಸಲ್ಲಿಸಿದ್ದರು. ಕೆಲ ಕಾಲ ಮಾಜಿ ಶಾಸಕ ದಿಟ ವಸಂತ ಬಂಗೇರ ಅವರ ಆಪ್ತ ಸಹಾಯಕರಾಗಿಯೂ ಸೇವೆ ಸಲ್ಲಿಸಿದ್ದರು. ಕೆಲ ದಿನಗಳ ಹಿಂದೆ ಅನಾರೋಗ್ಯವೆಂದು ಮಂಗಳೂರಿನ ಆಸ್ಪತ್ರೆಗೆ ದಾಖಲಾಗಿದ್ದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಬಂಧುವರ್ಗದವರನ್ನು ಅಗಲಿದ್ದಾರೆ.




ಮಣೂರು ಸುಶೀಲಮ್ಮ

• **ಕೋಟ:** ಇಲ್ಲಿನ ಮಣೂರು ಪರಿಸರದ ಪ್ರಗತಿಪರ ಕೃಷಿಕ ದಿ. ಮಣೂರು ನರಸಿಂಹ ಅಡಿಗ ಅವರ ಪತ್ನಿ ಸುಶೀಲಮ್ಮ (84) ಭಾನುವಾರ ನಿಧನರಾದರು. ಅವರು ಕೃಷಿಕರಾಗಿ ಗುರುತಿಸಿಕೊಂಡಿದ್ದರು. ಮೂವರು ಪುತ್ರರು, ಓರ್ವ ಪುತ್ರಿ, ಅಳಿಯ ಉಡುಪಿ ಜಿಲ್ಲಾ ಕಸಾಪ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗರನ್ನು ಅಗಲಿದ್ದಾರೆ.



ಜುಬೈರ್

• **ವಿಟ್ಲ:** ಕಂಬಳಬೆಟ್ಟು ನೆಕ್ಕರೆ ನಿವಾಸಿ ಅಬ್ಬಾಸ್ ಅವರ ಪುತ್ರ ಜುಬೈರ್ (27) ಅನಾರೋಗ್ಯದಿಂದ ಮಂಗಳೂರು ಖಾಸಗಿ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು. ಜುಬೈರ್ ಕಳೆದ ಮೂರು ವರ್ಷಗಳಿಂದ ದುಬೈಯಲ್ಲಿ ಉದ್ಯೋಗದಲ್ಲಿದ್ದು, ಅಲ್ಲಿ ಅನಾರೋಗ್ಯ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಊರಿಗೆ ಬಂದಿದ್ದರು. ಮಂಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ.





ರಿಲಯನ್ಸ್ ಸಮೂಹ ಸಂಸ್ಥೆಗಳ ಹಾಗೂ ರಿಲಯನ್ಸ್ ಇಂಡಸ್ಟ್ರೀಸ್‌ಮುಖ್ಯಸ್ಥರಾದ ಅನಂತ್ ಅಂಬಾನಿ ಅವರು ಶ್ರೀ ಕೃಷ್ಣ ಮಠಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದು ಪರ್ಯಾಯ ಪೀಠಾಧೀಶರಾದ ಶ್ರೀ ವೇದವರ್ಧನ ತೀರ್ಥ ಶ್ರೀಪಾದರಿಂದ ಫಲ ಮಂತ್ರಾಕ್ಷತೆ ಪಡೆದುಕೊಂಡರು. ಈ ಸಂದರ್ಭ ಶಿರೂರು ಮಠದ ದಿವಾನರಾದ ಉದಯ ಕುಮಾರ್ ಸರಳತ್ತಾಯ ಹಾಗೂ ಪಂಡಿತ್ ಚಂದ್ರಶೇಖರ ಶರ್ಮ, ಕರ್ನಾಟಕದ ರಿಲಯನ್ಸ್ ಜಿಯೋ ವ್ಯವಸ್ಥಾಪಕರು- ಧನಂಜಯ ಆರ್ ಶಿವನಂದನ ಯು ಎಸ್, ಮಾಧವ ಶಾನುಭಾಗ್, ಮುಂಬೈ ಉದ್ಯಮಿಗಳಾದ ಜಯಪ್ರಕಾಶ್ ಶೆಟ್ಟಿ, ಉಮೇಶ್ ಶೆಟ್ಟಿ ಉಪಸ್ಥಿತರಿದ್ದರು.

ಜೂ.28: ಆನೆಗುಡ್ಡೆಯಲ್ಲಿ ಕುಂದಾಪುರ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ

• **ಕುಂದಾಪುರ:** ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕುಂದಾಪುರ ತಾಲೂಕು ಘಟಕದಿಂದ 20ನೇ ಕುಂದಾಪುರ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಕುಂಭಾಸಿ ಗ್ರಾಮದ ಆನೆಗುಡ್ಡೆಯಲ್ಲಿ ಶ್ರೀ ವಿನಾಯಕ ಸಭಾಗೃಹದಲ್ಲಿ ಜೂ.28 ರಂದು ನಡೆಸಲು ನಿರ್ಧರಿಸಲಾಗಿದೆ.

ಕುಂದಾಪುರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಡಾ. ಉಮೇಶ್ ಪುತ್ರನ್ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನದ ಸರ್ವಾಧ್ಯಕ್ಷರ ಆಯ್ಕೆ, ಸಮ್ಮೇಳನದ ಹೆಸರು, ಸಮ್ಮೇಳನದಲ್ಲಿ ನಡೆಸಬಹುದಾದ ವಿವಿಧ ಕಾರ್ಯಕ್ರಮಗಳು, ಅತಿಥಿಗಳ ಆಯ್ಕೆ, ಸಾಧಕರ ಆಯ್ಕೆ, ಆಹ್ವಾನ ಪತ್ರ ಸಿದ್ಧತೆ ಮುಂತಾದ ವಿಚಾರಗಳ ಬಗ್ಗೆ ವಿಚಾರ ವಿನಿಮಯ ನಡೆಯಿತು. ಸ್ವಾಗತ ಸಮಿತಿ ಗೌರವಾಧ್ಯಕ್ಷ ಆನೆಗುಡ್ಡೆ ಶ್ರೀ ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರ ಶ್ರೀರಮಣ ಉಪಾಧ್ಯಾಯರ ಮಾರ್ಗದರ್ಶನದಲ್ಲಿ ವಿವಿಧ ಸಮಿತಿಗಳನ್ನು ರಚಿಸಲಾಯಿತು.

ಉಡುಪಿ ಜಿಲ್ಲಾ ಕಸಾಪ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗ, ಗೌರವ ಕಾರ್ಯದರ್ಶಿಗಳಾದ ಸುಬ್ರಹ್ಮಣ್ಯ ಶೆಟ್ಟಿ ಹಾಗೂ ನರೇಂದ್ರ ಕುಮಾರ್ ಕೋಟ, ತಾಲೂಕು ಸಮ್ಮೇಳನ ಸಿದ್ಧತೆ ಕುರಿತು ಮಾಹಿತಿ ನೀಡಿದರು. ಹಿರಿಯ ವಿದ್ಯುತ್ ಗುತ್ತಿಗೆದಾರರಾದ ಕೆ. ಆರ್. ನಾಯ್ಕ್, ರೈಲ್ವೆ ಪ್ರಯಾಣಿಕರ ಹಿತರಕ್ಷಣಾ ಸಮಿತಿ ಅಧ್ಯಕ್ಷ ಗಣೇಶ ಪುತ್ರನ್, ಹಿರಿಯ ಸಾಮಾಜಿಕ ಧುರೀಣ ಕೊರ್ಗಿ ವಿಠಲ ಶೆಟ್ಟಿ, ಕೆ. ಗೋಪಾಲಕೃಷ್ಣ ಶೆಟ್ಟಿ, ಅಧ್ಯಕ್ಷರು ವ್ಯವಸ್ಥಾಪನಾ ಸಮಿತಿ, ಶ್ರೀ ಕೋಟಿಲಿಂಗೇಶ್ವರ ದೇವಸ್ಥಾನ, ನಿವೃತ್ತ ಎಲ್‌ಐಸಿ ಅಧಿಕಾರಿ ರವಿರಾಜ ಕುಂಭಾಸಿ, ಡಾ. ಚೇತನ ಶೆಟ್ಟಿ ಕೋವಾಡಿ, ರವಿರಾಜ ಉಪಾಧ್ಯಾಯ, ರಾಧಾದಾಸ್ ಕುಂಭಾಸಿ, ಬಾಬಣ್ಣಪೂಜಾರಿ ಬೀಜಾಡಿ, ರಂಜಿತ್ ಕುಮಾರ್ ಶೆಟ್ಟಿ ಪ್ರವೀಣ ಮೊಗವೀರ ಗಂಗೊಳ್ಳಿ, ಸುಪ್ರಿತಾ ಪುರಾಣಿಕ್, ಸುಬ್ಬಣ್ಣ ಪ್ರಭಾಕರ ಕುಂಭಾಸಿ, ಚಂದ್ರಶೇಖರ ಬೀಜಾಡಿ, ಚಂದ್ರಶೇಖರ ಶೆಟ್ಟಿ, ರಮಾನಂದ ಕುಂದಾಪುರ, ಕಲ್ಪನಾ ಭಾಸ್ಕರ್ ಪಾಲ್ಗೊಂಡಿದ್ದರು. ತಾಲೂಕು ಕಸಾಪ ಪ್ರಧಾನ ಕಾರ್ಯದರ್ಶಿ ದಿನಕರ ಆರ್. ಶೆಟ್ಟಿ ಸ್ವಾಗತಿಸಿದರು. ಖಜಾಂಚಿ ಕೆ. ಎಸ್. ಮಂಜುನಾಥ್ ಸಭಾ ನಿರ್ಣಯಗಳನ್ನು ಮಂಡಿಸಿದರು. ಅಕ್ಷತಾ ಗಿರೀಶ್ ವಂದಿಸಿದರು.

ಕಾಸರಗೋಡು ಜಿಲ್ಲೆಯ ವಿವಿಧ ಇಲಾಖೆಗಳ ಅಧಿಕಾರಿಗಳ, ಜನಪ್ರತಿನಿಧಿಗಳ ಅವಲೋಕನಾ ಸಭೆ

ಶೀಘ್ರದಲ್ಲೇ ತುರ್ತು ಸಮಸ್ಯೆ ಪರಿಹಾರಕ್ಕೆ ಕ್ರಮ

• **ಕಾಸರಗೋಡು:** ಜಿಲ್ಲೆಯ ಅತ್ಯಂತ ತುರ್ತು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಅಗತ್ಯದ ಕ್ರಮ ಶೀಘ್ರದಲ್ಲೇ ಕೈಗೊಳ್ಳಲಾಗುವುದು. ಅದಕ್ಕಾಗಿ ಆಯಾ ಇಲಾಖೆಗಳ ವಿಶೇಷ ಸಭೆಯನ್ನು ಕರೆಯಲಾಗುವುದು ಎಂದು ಸ್ಥಳೀಯಾಳಿತ ಖಾತೆ ಸಚಿವ ಕೆ.ಎಂ.ಶಾಜಿ ಹೇಳಿದ್ದಾರೆ. ಸೋಮವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲೆಯ ವಿವಿಧ ಇಲಾಖೆಗಳ ಅಧಿಕಾರಿಗಳ ಹಾಗೂ ಜನಪ್ರತಿನಿಧಿಗಳ ಅವಲೋಕನಾ ಸಭೆಯಲ್ಲಿ ಸಚಿವರು ಈ ವಿಷಯ ತಿಳಿಸಿದರು.

ವೈದ್ಯಕೀಯ ಕಾಲೇಜನ್ನು ಅಭಿವೃದ್ಧಿಗೊಳಿಸುವುದು, ಎಂಡೋಸಲ್ಫಾನ್ ಪ್ರದೇಶದಲ್ಲಿ ಮಧ್ಯಸ್ಥಿಕೆ ವಹಿಸುವುದು, ವಿವಿಧ ಇಲಾಖೆಗಳಲ್ಲಿನ ನೌಕರರ ಕೊರತೆಯನ್ನು ಪರಿಹರಿಸಲಾಗುವುದು. ಕಾಸರಗೋಡಿನ ಮುಖಛಾಯೆಯನ್ನೇ ಬದಲಾಯಿಸಲು ಯೋಜನೆಗಳನ್ನು ಯೋಜಿಸಿ ಕಾರ್ಯಗತಗೊಳಿಸಬೇಕಾಗಿದೆ ಎಂದು ಸಚಿವರು ತಿಳಿಸಿದರು.

ವೈವಳಿಕೆ ಪೊಲೀಸ್ ಠಾಣೆ ಮತ್ತು ಮಂಜೇಶ್ವರ ಮಿನಿ ಸಿವಿಲ್ ಸ್ಟೇಷನ್‌ನ ಅಗತ್ಯಗಳನ್ನು ಪರಿಗಣಿಸಬೇಕು. ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್‌ಗೆ ಹಂಚಿಕೆಯನ್ನು150 ಕೋಟಿರೂ.ಗಳಿಗೆಹೆಚ್ಚಿಸಬೇಕು. ಪಿಎಸ್‌ಸಿ ಪರೀಕ್ಷೆಗಳಲ್ಲಿ ಗ್ರೇಸ್ ಮಾರ್ಕ್ ವ್ಯವಸ್ಥೆಯ ಸಾಧ್ಯತೆಯನ್ನು ಪರಿಶೀಲಿಸಬೇಕು. ಭಾಷಾ ಅಲ್ಪಸಂಖ್ಯಾತರ ಅಗತ್ಯತೆಗಳು ಮತ್ತು ಕಾಸರಗೋಡಿಗೆ ಪ್ರತ್ಯೇಕ ಪಿಎಸ್‌ಸಿ ನೇಮಕಾತಿಯ ಸಾಧ್ಯತೆಯನ್ನು ಪರಿಶೀಲಿಸಬೇಕು ಇತ್ಯಾದಿ ಬೇಡಿಕೆಗಳನ್ನು ಶಾಸಕ ಎ.ಕೆ.ಎಂ. ಅಶ್ರಫ್ ಮಂಡಿಸಿದರು.



ಉಕ್ಕಿನಡ್ಕದಲ್ಲಿರುವ ಕಾಸರಗೋಡು ವೈದ್ಯಕೀಯ ಕಾಲೇಜು ಸಂಪೂರ್ಣವಾಗಿ ಕಾರ್ಯನಿರ್ವಹಿಸುವ ಸಂಸ್ಥೆಯಾಗಬೇಕು. ಕಾಸರಗೋಡು ನಗರಕ್ಕೆ ಮಾಸ್ಟರ್ ಪ್ಲಾನ್‌ನೊಂದಿಗೆ ಅಭಿವೃದ್ಧಿ ಚಟುವಟಿಕೆಗಳು ಬೇಕಾಗುತ್ತವೆ. ಚೆರ್ಕಳ ಮತ್ತು ಬೇವಿಂಜೆ ಪ್ರದೇಶಗಳಲ್ಲಿ ಮತ್ತು ರಾಷ್ಟ್ರೀಯ ಹೆದ್ದಾರಿಯಲ್ಲಿ ಮಳೆಗಾಲಕ್ಕೆ ಸಂಬಂಧಿಸಿದ ಭೂಕುಸಿತ ಮತ್ತು ನೀರಿನ ಅಡಚಣೆಯ ಬೆದರಿಕೆಯನ್ನು ಪರಿಹರಿಸಬೇಕು. ತಳಂಗರೆ ಮತ್ತು ನೆಲ್ಲಿಕುನ್ನುನಲ್ಲಿ ಪ್ರವಾಸೋದ್ಯಮ ಕಾರ್ಯಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಮತ್ತು ಉಕ್ಕಿನಡ್ಕದಲ್ಲಿ ಅಗ್ನಿಶಾಮಕ ಠಾಣೆಯನ್ನು ನಿರ್ಮಿಸಬೇಕು, ಇತರ ಸಲಹೆಗಳನ್ನು ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ಮಂಡಿಸಿದರು.

ಹೆಚ್ಚುತ್ತಿರುವ ಸಮುದ್ರ ಕೊರೆತ ಮತ್ತು ಕರಾವಳಿ ಕೊರೆತದ ಹಿನ್ನೆಲೆಯಲ್ಲಿ ಅಂತಹ ಪ್ರದೇಶದಲ್ಲಿ ಪ್ರಮುಖ ಹಸ್ತಕ್ಷೇಪದ ಅಗತ್ಯವಿದೆ. ಅದೇ ರೀತಿ ಕರಾವಳಿ ಪ್ರದೇಶದ ರಸ್ತೆಗಳ ಕಳಪೆ ಸ್ಥಿತಿಯನ್ನು ಸುಧಾರಿಸಬೇಕು. ಗ್ರಾಮೀಣ ಪ್ರದೇಶದ ಜನರಿಗೆ ಸೇವೆಯನ್ನು ಖಚಿತಪಡಿಸಿಕೊಳ್ಳಲು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ಸಿಬ್ಬಂದಿ ಕೊರತೆಯನ್ನು ಪರಿಹರಿಸಬೇಕು. ರಾಷ್ಟ್ರೀಯ ಹೆದ್ದಾರಿಯಲ್ಲಿ ನೀರು ನಿಲ್ಲುವುದು ವಿದ್ಯಾರ್ಥಿಗಳ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ. ಎಚ್ಚರಿಕೆ ನೀಡದೆ ವಿದ್ಯುತ್ ಕಡಿತಗೊಳ್ಳುವುದರಿಂದ ಜನರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಉದುಮ ಶಾಸಕ ಕೆ.ನೀಲಕಂಠನ್ ಹೇಳಿದರು.

> **ಶಾಶ್ವತ ಪರಿಹಾರ**
> ಶಿಕ್ಷಣ, ಆರೋಗ್ಯ ಮತ್ತು ಸ್ಥಳೀಯಾಡಳಿತ ಇಲಾಖೆಗಳಲ್ಲಿ ಕಾಸರಗೋಡು ಜಿಲ್ಲೆ ಎದುರಿಸುತ್ತಿರುವ ಸಿಬ್ಬಂದಿಗಳ ಕೊರತೆ ಹಾಗೂ ರಾಷ್ಟ್ರೀಯ ಹೆದ್ದಾರಿ ನಿರ್ಮಾಣದಿಂದ ಉಂಟಾಗುವ ನೀರಿನ ಅಡಚಣೆ ಮತ್ತು ಭೂಕುಸಿತದ ಬೆದರಿಕೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲಾಗುವುದು
> ■ ಕೆ.ಎಂ.ಶಾಜಿ, ಸಚಿವ

ರಾಷ್ಟ್ರೀಯ ಹೆದ್ದಾರಿಯಲ್ಲಿ ವೀರಮಲಕ್ಕುನ್ನು, ಬೇವಿಂಜೆ ಮತ್ತು ಚೆರ್ಕಳ ಪ್ರದೇಶಗಳಲ್ಲಿನ ಭೂಕುಸಿತ ಮತ್ತು ರಾಷ್ಟ್ರೀಯ ಹೆದ್ದಾರಿಯಲ್ಲಿನ ನೀರಿನ ಅಡಚಣೆಯನ್ನು ಪರಿಹರಿಸಬೇಕು. ಸೇವಾ ರಸ್ತೆಗಳ ನಿರ್ಮಾಣವನ್ನು ತಕ್ಷಣವೇ ಪೂರ್ಣಗೊಳಿಸಿ ತೆರೆಯಬೇಕು. ಕಾಞಂಗಾಡು ಜಿಲ್ಲಾಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸಕರನ್ನು ನೇಮಿಸಬೇಕು ಮತ್ತು ತಾಯಿ ಮತ್ತು ಮಗು ಆಸ್ಪತ್ರೆಯನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರಬೇಕು. ಜಿಲ್ಲೆಯಲ್ಲಿ ವೈದ್ಯರ ಖಾಲಿ ಹುದ್ದೆಯನ್ನು ದೊಡ್ಡ ಸಮಸ್ಯೆಯಾಗಿ ಪರಿಗಣಿಸಿ ಮಧ್ಯಪ್ರವೇಶಿಸಬೇಕು. ಜಿಲ್ಲೆಯ ಕರಾವಳಿ ಪ್ರದೇಶಗಳ ಜನರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬೇಕು ಎಂದು ಕಾಞಂಗಾಡು ಶಾಸಕ ಗೋವಿಂದನ್ ಪಳ್ಳಿಕಾಪ್ಪಿಲ್ ಶಾಸಕ ಹೇಳಿದರು.

ಚುನಾವಣೆಗಳಿಂದಾಗಿ ಸ್ಥಳೀಯಾಡಳಿತ ಸಂಸ್ಥೆಗಳ ಯೋಜನಾ ಪಾಲನ್ನು ಖರ್ಚು ಮಾಡುವಲ್ಲಿನ ವಿಳಂಬವನ್ನು ಪರಿಹರಿಸಲು ಸ್ಪಿಲ್ ಓವರ್ ಚಟುವಟಿಕೆಗಳಿಗೆ ಅವಕಾಶ ನೀಡಲಾಗುತ್ತಿರುವ ವಿಷಯ ಮತ್ತು ವಿಪತ್ತು ಪರಿಹಾರಕ್ಕಾಗಿ ವಿವಿಧ ಪಂಚಾಯತ್‌ಗಳಿಗೆ ಅಂದಾಜುಗಳನ್ನು ಒದಗಿಸಿದರೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಪಂಚಾಯತ್‌ಗಳಿಗೆ ಹಣವನ್ನು ಹಂಚಿಕೆ ಮಾಡದಿರುವ ವಿಷಯವನ್ನು ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ತಿಳಿಸಿದರು.

ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಸಚಿವರಿಗೆ ಮಾಹಿತಿ ನೀಡಿದರು.

ಹಲವು ಅಂತಾರಾಜ್ಯ ಹೆದ್ದಾರಿಗಳನ್ನು ಹೊಂದಿರುವ ಜಿಲ್ಲೆಯಲ್ಲಿ ಪೊಲೀಸ್ ಚೆಕ್‌ಪೋಸ್ಟ್ ಅಗತ್ಯವಿದೆ ಎಂದು ಜಿಲ್ಲಾ ಪೊಲೀಸ್ ಮುಖ್ಯಸ್ಥರು ತಿಳಿಸಿದರು. ವಿವಿಧ ಇಲಾಖೆಗಳ ಮುಖ್ಯಸ್ಥರು ವಿಚಾರಗಳು ಮತ್ತು ಸಮಸ್ಯೆಗಳನ್ನು ಹಂಚಿಕೊಂಡರು.

ಆಳ್ವಾಸ್‌ನಲ್ಲಿ ಇಂಡಕ್ಷನ್ ಕಾರ್ಯಕ್ರಮ 'ಅಂಕುರ' ಉದ್ಘಾಟನೆ

ಶಿಕ್ಷಣದ ಜೊತೆಗೆ ಉತ್ತಮ ವ್ಯಕ್ತಿತ್ವ ರೂಪಿಸಿ

• **ಮೂಡುಬಿದಿರೆ:** ಜವಾಬ್ದಾರಿಯನ್ನು ಸ್ವೀಕರಿಸಿದಾಗ ಮಾತ್ರ ಬದುಕಿನಲ್ಲಿ ಸ್ಥಾನಮಾನ ಮತ್ತು ಯಶಸ್ಸು ಗಳಿಸಲು ಸಾಧ್ಯವಾಗುತ್ತದೆ. ಶಿಕ್ಷಣದ ಜೊತೆಗೆ ಉತ್ತಮ ವ್ಯಕ್ತಿತ್ವ ಹಾಗೂ ಉತ್ತಮ ಮನಸ್ಸನ್ನು ರೂಪಿಸಿಕೊಳ್ಳುವುದು ವಿದ್ಯಾರ್ಥಿಗಳ ಪ್ರಮುಖ ಗುರಿಯಾಗಬೇಕು ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ ವಿವೇಕ್ ಆಳ್ವ ಹೇಳಿದರು.



ಆಳ್ವಾಸ್ ಸ್ವಾಯತ್ತಾ ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾದ ಇಂಡಕ್ಷನ್ ಕಾರ್ಯಕ್ರಮ 'ಅಂಕುರ' ಸೋಮವಾರ ಕೃಷಿಸಿರಿ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, 1998ರಲ್ಲಿ ಕೇವಲ 25 ವಿದ್ಯಾರ್ಥಿಗಳು, ಎರಡು ವಿಭಾಗ ಹಾಗೂ 11 ಅಧ್ಯಾಪಕರೊಂದಿಗೆ ತನ್ನ ಶೈಕ್ಷಣಿಕ ಪಯಣವನ್ನು ಆರಂಭಿಸಿದ್ದ ಆಳ್ವಾಸ್ ಸಂಸ್ಥೆ, ಇಂದು 54 ಶೈಕ್ಷಣಿಕ ಕಾರ್ಯಕ್ರಮಗಳು, 122 ತರಗತಿ ಕೊಠಡಿಗಳು, 188 ಶಿಕ್ಷಕರು ಹಾಗೂ 3,191 ವಿದ್ಯಾರ್ಥಿಗಳನ್ನು ಒಳಗೊಂಡ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾಗಿ ಬೆಳೆದಿದೆ. ಸಂಸ್ಥೆಯ ಈ ಸಾಧನೆಯ ಹಿಂದಿನ ನಿಜವಾದ ಶಕ್ತಿ ಮತ್ತು ಬ್ರ್ಯಾಂಡ್ ಇಲ್ಲಿನ ವಿದ್ಯಾರ್ಥಿಗಳು. ಮಕ್ಕಳು ತಮ್ಮ ಪಾಲಕರ ತ್ಯಾಗ ಮತ್ತು ನಿರೀಕ್ಷೆಗಳನ್ನು ಅರ್ಥಮಾಡಿಕೊಂಡು ಶಿಕ್ಷಣದ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ವಿದ್ಯಾರ್ಥಿಗಳು ಕನಸುಗಳ ಜೊತೆಗೆ ಜವಾಬ್ದಾರಿಗಳನ್ನೂ ಹೊತ್ತು ಸಾಗಬೇಕು. ತರಗತಿ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆ ವ್ಯಕ್ತಿತ್ವ ವಿಕಸನಕ್ಕೆ ನೆರವಾಗುತ್ತದೆ. ಈ ಹಂತದಲ್ಲಿ ಗುರಿಯೆಡೆಗೆ ಗಮನ ಕೇಂದ್ರೀಕರಿಸಿ ಅನಗತ್ಯ ಆಕರ್ಷಣೆಗಳಿಂದ ದೂರವಿರಬೇಕು. ಜವಾಬ್ದಾರಿಯುತ ಯುವ ಸಮೂಹವೇ ರಾಷ್ಟ್ರದ ಭವಿಷ್ಯವನ್ನು ರೂಪಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾಲೇಜಿನ ಪ್ರಾಚಾರ್ಯ ಡಾ. ಕುರಿಯನ್ ಮಾತನಾಡಿ, ವಿದ್ಯಾರ್ಥಿಗಳ ಬೆಳವಣಿಗೆಗೆ ಸುರಕ್ಷಿತ ಹಾಗೂ ಪ್ರೇರಣಾತ್ಮಕ ವಾತಾವರಣ ಅತ್ಯಗತ್ಯವಾಗಿದ್ದು, ಅಭದ್ರತೆ ಇರುವಲ್ಲಿ ಯಾವುದೇ ಸಾಧನೆ ಸಾಧ್ಯವಿಲ್ಲ ಎಂದರು. ಒಂದು ರಾಷ್ಟ್ರದ ಭವಿಷ್ಯ ರೂಪುಗೊಳ್ಳುವುದು ತರಗತಿ ಕೊಠಡಿಗಳಲ್ಲಿಯೇ. ಆದ್ದರಿಂದ ಶಿಕ್ಷಣ ಸಂಸ್ಥೆಗಳ ಪರಿಸರವು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಸೃಜನಶೀಲತೆ ಮತ್ತು ನಾಯಕತ್ವ ಗುಣಗಳನ್ನು ಬೆಳೆಸುವಂತಿರಬೇಕು. ವಿದ್ಯಾರ್ಥಿಗಳು ಸದಾ ಸಕಾರಾತ್ಮಕ ಚಿಂತನೆ ಹೊಂದಿದವರೊಂದಿಗೆ ಬೆರೆಯಬೇಕು. ನಕಾರಾತ್ಮಕ ಮನೋಭಾವದ ವ್ಯಕ್ತಿಗಳಿಂದ ದೂರವಿರುವುದು ವೈಯಕ್ತಿಕ ಬೆಳವಣಿಗೆ ಮತ್ತು ಯಶಸ್ಸಿಗೆ ಸಹಕಾರಿಯಾಗುತ್ತದೆ.

ಪರೀಕ್ಷಾಂಗ ಕುಲಸಚಿವ ಡಾ. ಎನ್. ಪಿ. ನಾರಾಯಣ ಶೆಟ್ಟಿ, ವಿದ್ಯಾರ್ಥಿಗಳು ಅನುಸರಿಸಬೇಕಾದ ಶೈಕ್ಷಣಿಕ ಮಾರ್ಗಸೂಚಿಗಳ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಆಡಳಿತಾಧಿಕಾರಿ ಬಾಲಕೃಷ್ಣ ಶೆಟ್ಟಿ, ಶೈಕ್ಷಣಿಕ ಕುಲಸಚಿವ ಡಾ ಟಿಕೆ ರವೀಂದ್ರನ್ ಇದ್ದರು. ಡಾ ಯೋಗಿಶ್ ಕೈರೋಡಿ ಕಾರ್ಯಕ್ರಮ ನಿರ್ವಹಿಸಿದರು.

ವಿವೇಕ ಜಾಗೃತಿ ಸರಣಿ ಉಪನ್ಯಾಸ ಮಾಲಿಕೆ ಕಾರ್ಯಕ್ರಮ

ಇಚ್ಛಾಶಕ್ತಿಯಿಂದ ಸರ್ವಾಂಗೀಣ ವೃದ್ಧಿ

• **ಪುತ್ತೂರು:** ಪ್ರಬಲ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದು ಪ್ರತೀ ವ್ಯಕ್ತಿಯಿಂದ ಸಾಧ್ಯವಿದೆ. ಇದಕ್ಕೆ ಅಪಾರವಾದ ಇಚ್ಛಾಶಕ್ತಿ ಬೇಕಾಗುತ್ತದೆ. ನಾವು ಇಚ್ಛಾಶಕ್ತಿಯನ್ನು ಸಕಾರಾತ್ಮಕವಾಗಿ ಬೆಳೆಸಿಕೊಂಡಲ್ಲಿ ಸರ್ವಾಂಗೀಣ ಬೆಳವಣಿಗೆ ಸಾಧ್ಯ ಎಂದು ಬಳ್ಳಾರಿಯ ರಾಮಕೃಷ್ಣ ಮಿಷನ್‌ನ ಮುಖ್ಯಸ್ಥರಾದ ಸ್ವಾಮಿ ಮಂಗಳನಾಥಾನಂದಜಿ ಹೇಳಿದರು.

ನಗರದ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ವೈದೇಹಿ ಸಭಾಂಗಣದಲ್ಲಿ ಮಂಗಳೂರು ರಾಮಕೃಷ್ಣ ಮಿಷನ್ ವತಿಯಿಂದ ನಡೆಯುತ್ತಿರುವ ವಿವೇಕ ಜಾಗೃತಿ ಸರಣಿ ಉಪನ್ಯಾಸ ಮಾಲಿಕೆ ಕಾರ್ಯಕ್ರಮದಲ್ಲಿ ಅವರು 'ಶಕ್ತಿ, ಶ್ರದ್ಧೆ ಮತ್ತು ಸಾಧನೆ ಯುವಕರಿಗೆ ಸ್ವಾಮಿ ವಿವೇಕಾನಂದರ ಸಂದೇಶ' ಎಂಬ ವಿಷಯದ ಕುರಿತು ಮಾತನಾಡಿದರು.

ಇಚ್ಛಾಶಕ್ತಿ ಎನ್ನುವುದು ವ್ಯಕ್ತಿಯು ತನ್ನ ಗುರಿಯನ್ನು ಸಾಧಿಸಲು ಹೊಂದಿರುವ ದೃಢ ಸಂಕಲ್ಪ, ಮನೋಬಲ ಮತ್ತು ನಿರಂತರ ಪ್ರಯತ್ನ ಮಾಡುವ ಶಕ್ತಿ. ಇದು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಪ್ರತಿ ವಿದ್ಯಾರ್ಥಿಯು ತನ್ನ ವಿದ್ಯಾರ್ಥಿ ದೆಸೆ ಯಲ್ಲಿ ಇಚ್ಛಾಶಕ್ತಿಯನ್ನು ಪ್ರಬಲಗೊಳಿಸಿಕೊಂಡಲ್ಲಿ ಗುರಿ ಸಾಧನೆ ಸುಲಭವೆನಿಸಬಹುದು ಎಂದರು.

ಸಂಸ್ಥೆಯ ಆಡಳಿತ ಮಂಡಳಿ ಅಧ್ಯಕ್ಷ ರವೀಂದ್ರ ಪಿ. ಅಧ್ಯಕ್ಷತೆ ವಹಿಸಿದ್ದರು.



> ವಿದ್ಯಾರ್ಥಿಗಳು ತಾವು ನೋಡುವ, ಕೇಳುವ, ಮಾಡುವ ಸಂಗತಿಗಳು ಸದಾ ಮೇಲ್ಪಂಕ್ತಿಯಲ್ಲಿ ಇರಬೇಕು. ಅದು ಕಳಪೆ ಮಟ್ಟದ್ದಾದಲ್ಲಿ ಇಚ್ಛಾಶಕ್ತಿ ಕ್ಷೀಣಗೊಳ್ಳಬಲ್ಲದು. ಆದುದರಿಂದ ಸ್ವಾಮಿ ವಿವೇಕಾನಂದರ ಮೌಲ್ಯ, ತತ್ವ ಆದರ್ಶಗಳನ್ನು ಪ್ರತಿ ವಿದ್ಯಾರ್ಥಿ ಮೈಗೂಡಿಸಿಕೊಂಡು ಅದ್ಭುತವಾದ ಜೀವನವನ್ನು ರೂಪಿಸಿಕೊಳ್ಳ ಬೇಕು.
> ■ ಸ್ವಾಮಿ ಮಂಗಳನಾಥಾನಂದಜಿ

ವೇದಿಕೆಯಲ್ಲಿ ಭಾರತೀಯ ಸೇನೆಯ ನಿವೃತ್ತ ಯೋಧ ಹಾಗೂ ಮಂಗಳೂರು ರಾಮಕೃಷ್ಣ ಮಿಷನ್‌ನ ಹಿರಿಯ ಸ್ವಯಂಸೇವಕ ಬೆಳ್ಳಾಲ ಗೋಪಿನಾಥ ರಾವ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮಂಗಳೂರು ರಾಮಕೃಷ್ಣ ಮಿಷನ್‌ನ ಮೌಲ್ಯ ಶಿಕ್ಷಣ ಕಾರ್ಯಕ್ರಮಗಳ ಸಂಯೋಜಕ ಸಜೀತ್, ಸ್ವಯಂಸೇವಕರಾದ ಸನತ್ ಮತ್ತಿತರರು ಭಾಗವಹಿಸಿದರು. ಪ್ರಾಂಶುಪಾಲ ದೇವಿ ಚರಣ್ ರೈ ಎಂ. ಸ್ವಾಗತಿಸಿ, ಉಪನ್ಯಾಸಕಿ ಡಾ. ಸ್ನೇಹ ಬಿ.ಎಸ್. ವಂದಿಸಿದರು.

ಜೂ.21: ದ್ವಾರಕಾ ಕಾರ್ಪೊರೇಷನ್ ಸಂಸ್ಥೆಯ 'ಉಜ್ಜೀವನ' ಲೋಕಾರ್ಪಣೆ

• **ಪುತ್ತೂರು:** ಪುತ್ತೂರಿನ ದ್ವಾರಕಾ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಉಪ್ಪಿನಂಗಡಿ-ಕುಕ್ಕೆ ಸುಬ್ರಹ್ಮಣ್ಯ ರಾಜ್ಯ ಹೆದ್ದಾರಿ (113) ಬಳಿಯ ಕೆಮ್ಮಾರದಲ್ಲಿ ಸಾಕಾರಗೊಳಿಸಿರುವ 'ಉಜ್ಜೀವನ' ಎಂಬ ಹಿರಿಯ ನಾಗರಿಕರ ಬಡಾವಣೆ ಜೂ.21ರಂದು ಲೋಕಾರ್ಪಣೆಗೊಳ್ಳಲಿದೆ.

'ಉಜ್ಜೀವನ' ಹೆಸರು ಕೇಳಿದಾಗಲೇ ಜೀವನದ ಉನ್ನತಿಯ ಕಡೆಗೆ ಲಕ್ಷ್ಯ ಎಂಬುದು ಸ್ಪಷ್ಟವಾಗುತ್ತದೆ. ಇದು ಹಿರಿಯರ ಬದುಕಿಗೆ ಕಿರಿಯರು ನೀಡಲೇಬೇಕಾದ ಆಸರೆ, ಭದ್ರತೆ, ಪ್ರೀತಿ, ಗೌರವಗಳ ಕುರುಹಾಗಿ ಅರ್ಪಣೆಗೊಳ್ಳುತ್ತಿರುವ ನೂತನ ಬಡಾವಣೆಯಿದು. ಕಳೆದ ಎರಡು ದಶಕಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮನೆಮಾತಾಗಿರುವ 'ನಿಮ್ಮ ಮನೆ/ ಸೈಟ್ ಕನಸು, ನಮ್ಮಲ್ಲಿ ನನಸು' ಎಂಬ ಧ್ಯೇಯ ವಾಕ್ಯದೊಂದಿಗೆ ಮುನ್ನಡೆ ಸಾಧಿಸಿರುವ ಸಂಸ್ಥೆಯಿದು. ಗುಣಮಟ್ಟದ ಖಾತ್ರಿಗಾಗಿ ಐಎಸ್‌ಒ ಸರ್ಟಿಫಿಕೇಟ್ ಈ ಸಂಸ್ಥೆಗೆ ದೊರೆತಿದೆ. ಬಿಡಿ ಮನೆ ಕಟ್ಟುವ ಕಾಂಟ್ರಾಕ್ಟ್ ಕೆಲಸದೊಂದಿಗೆ ತೊಡಗಿ, ರಿಯಲ್ ಎಸ್ಟೇಟ್ ಉದ್ಯಮವನ್ನೂ ಸಮಾನಾಂತರವಾಗಿ ಮಾಡುತ್ತಾ, 2010ರಿಂದ ಈಚೆಗೆ ರೇರಾ ಅನುಮೋದಿತ ಬಡಾವಣೆಗಳ ನಿರ್ಮಾಣದಲ್ಲಿಯೂ ಯಶಸ್ವಿಯಾಗಿದೆ ಎಂದು ದ್ವಾರಕಾ ಸಮೂಹ ಸಂಸ್ಥೆಗಳ ಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕ ಗೋಪಾಲಕೃಷ್ಣ ಭಟ್ ಅತ್ರ್ಯಡ್ಕ ಹೇಳಿದ್ದಾರೆ.

ದ್ವಾರಕಾ ಕನ್‌ಸ್ಟ್ರಕ್ಷನ್ಸ್, ದ್ವಾರಕಾ ಕನ್ಸಲ್ಟೆನ್ಸಿ, ದ್ವಾರಕಾ ಹಾಡ್‌ವೇರ್, ದ್ವಾರಕಾ ಸ್ಯಾನಿಟರಿ, ದ್ವಾರಕಾ ಟೈಲ್ಸ್, ದ್ವಾರಕಾ ಸಿಮೆಂಟ್ ಪ್ರಾಡಕ್ಟ್, ದ್ವಾರಕಾ ಅರ್ಥ್ ಮೂವರ್ಸ್, ದ್ವಾರಕಾ ಪ್ರತಿಷ್ಠಾನ, ದ್ವಾರಕಾ ಫಾರ್ಮ್ಸ್, ಶ್ರೀಕೃಷ್ಣ ವಿದ್ಯಾ ಸಂಸ್ಥೆಗಳು, ಸುರಭಿ ಗೋಶಾಲೆ ಮುಂತಾದ ಹಲವು ಸಂಸ್ಥೆಗಳು ದ್ವಾರಕಾ ಸಮೂಹದಲ್ಲಿ ಕ್ರಿಯಾಶೀಲವಾಗಿವೆ. ಮಯೂರ, ಶ್ರೀರಾಮ, ತುಳಸಿ, ಮಾನಸ, ಗೋಕುಲ, ಹರಿಹರ, ನಂದಿಲ, ಶೇಷಾದ್ರಿ, ಗೋಮತಿ, ಶಿವೋಹಂ, ಜಲಧಿ ಮುಂತಾದ ಅನೇಕ ಬಡಾವಣೆಗಳನ್ನು ದ.ಕ. ಜಿಲ್ಲೆಯ ವಿವಿಧ ಭಾಗಗಳಲ್ಲಿ ನಿರ್ಮಿಸಿ, ಅಭಿವೃದ್ಧಿಗೊಳಿಸುತ್ತಾ ಬಂದಿರುವ ಈ ಸಂಸ್ಥೆಯು 'ಉಜ್ಜೀವನ' ಎಂಬ ವಿನೂತನವಾದ ಹಿರಿಯ ನಾಗರಿಕರ ಬಡಾವಣೆಯನ್ನು ರೂಪಿಸುತ್ತಿದೆ.





ಸಂಪೂರ್ಣ ಸೌಲಭ್ಯ : 'ಉಜ್ಜೀವನ' ಬಡಾವಣೆಯಲ್ಲಿ ಹಿರಿಯ ನಾಗರಿಕರಿಗಾಗಿ ಅವರ ಅಭಿರುಚಿಯಂತೆ ಮನೆಗಳನ್ನು ಕಟ್ಟಿಸಿ ಕೊಡುವುದು ಮಾತ್ರವಲ್ಲದೆ 'ದಿನಸಿಯಿಂದ ಔಷಧಿಯವರೆಗೆ' ಒಂದೇ ಸೂರಿನಡಿಯಲ್ಲಿ ಸಂಪೂರ್ಣ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ. ಆರೋಗ್ಯ ಸಾಧನೆಗಾಗಿ ನ್ಯಾಚುರೋಪತಿ, ಫಿಜಿಯೋಥೆರಪಿ ಕ್ಲಿನಿಕ್, ಮಾನಸಿಕ ನೆಮ್ಮದಿ ಸಂತೋಷಕ್ಕಾಗಿ ಯೋಗ ಕೇಂದ್ರ, ಧ್ಯಾನ ಮಂದಿರ, ವಾಯುವಿಹಾರಕ್ಕೆ ಗಾರ್ಡನ್, ವಾಕಿಂಗ್ ಟ್ರ್ಯಾಕ್, ದಿನಬಳಕೆಯ ಸಾಮಗ್ರಿಗಳ ಖರೀದಿಗಾಗಿ ಸೂಪರ್ ಮಾರ್ಕೆಟ್, ಪುಸ್ತಕ ಪ್ರೇಮಿಗಳಿಗೆ ಅಧ್ಯಯನಕ್ಕಾಗಿ ಲೈಬ್ರೆರಿ, ಆರೋಗ್ಯ ವರ್ಧನೆಗೆ ಒಳಾಂಗಣ, ಹೊರಾಂಗಣ ಕ್ರೀಡಾ ಅಂಕಣಗಳು, ಯಾವುದೇ ಹೊತ್ತಿನಲ್ಲಿ ಕರೆದಾಗ ಬಳಿಗೆ ಬರುವ, ಸಹಾಯ ಮಾಡುವ ಕೇರ್ ಟೇಕರ್ಸ್, ತುರ್ತು ಅನಾರೋಗ್ಯ ಸಂದರ್ಭಗಳಲ್ಲಿ ಆಸ್ಪತ್ರೆಗೆ ಕರೆದೊಯ್ಯಲು ಅಂಬುಲೆನ್ಸ್, ಸುರಕ್ಷತೆಯ ದೃಷ್ಟಿಯಿಂದ ಸಿಸಿ ಕ್ಯಾಮೆರಾ ಕಣ್ಗಾವಲು, ಮನೆ ಊಟದೊಂದಿಗೆ ಖಾದ್ಯ ವೈವಿಧ್ಯಗಳನ್ನು ಸವಿಯಲು ಹಾಗೂ ಅತಿಥಿಗಳನ್ನು ಉಪಚರಿಸಲು ರೆಸ್ಟೋರೆಂಟ್, ಹಿರಿಯರನ್ನು ಭೇಟಿ ಮಾಡಲು ಬಂದ ಬಂಧು ಮಿತ್ರರು ಉಳಿದುಕೊಳ್ಳಲು ಅತಿಥಿ ಕೊಠಡಿಗಳು, ಗೋಮಾತೆಯ ಸಹವಾಸ ಸೇವೆಗಾಗಿ ಗೋಶಾಲೆ, ಮನೆಯ ಪರಿಸರದ ಶುಚಿತ್ವವನ್ನು ಕಾಪಾಡುವ ದೃಷ್ಟಿಯಿಂದ ತ್ಯಾಜ್ಯ ನಿರ್ವಹಣೆ, ಅಗತ್ಯ ಪ್ರಯಾಣಗಳಿಗಾಗಿ ಕ್ಯಾಂಪಸ್ ವಾಹನ, ಔಷಧೀಯ ವನ, ಹೀಗೆ... ಹತ್ತು ಹಲವು ಸೌಲಭ್ಯಗಳಿವೆ.

> **ಜೂ.21ರಂದು ಉದ್ಘಾಟನೆ**
> ದ್ವಾರಕಾ ಕಾರ್ಪೊರೇಷನ್ ಸಂಸ್ಥೆಯ 'ಉಜ್ಜೀವನ' ಬಡಾವಣೆಯನ್ನು ಜೂ.21ರ ಇಳಿಹಗಲು 3.30ಕ್ಕೆ ಗಣ್ಯರ ಸಮ್ಮುಖದಲ್ಲಿ ಲೋಕಾರ್ಪಣೆಯಾಗಲಿದ್ದು, ಸಂಜೆ 6ರಿಂದ ಅಂತಾರಾಷ್ಟ್ರೀಯ ಗಾಯಕ ರಾಹುಲ್ ವೆಲ್ಲಾಳ್ ಬೆಂಗಳೂರು ಮತ್ತು ಬಳಗದವರಿಂದ ಭಕ್ತಿ ಸಂಗೀತ ಸುಧಾ ಕಾರ್ಯಕ್ರಮವಿದೆ.

ಅವಿಭಕ್ತ ಕುಟುಂಬ ವ್ಯವಸ್ಥೆಗಳಿಂದ ವಿಭಕ್ತ ಕುಟುಂಬಕ್ಕೆ ಪರಿವರ್ತನೆಗೊಳ್ಳುತ್ತಿರುವ ನಮ್ಮ ಸಮಾಜದಲ್ಲಿ ಸುವ್ಯವಸ್ಥಿತವಾದ ಹಿರಿಯ ನಾಗರಿಕರ ಬಡಾವಣೆಯ ಅಗತ್ಯವಿದೆ. ನಿವೃತ್ತಿಯ ಅನಂತರ ಶಾಂತಿಯುತ ತೃಪ್ತಿಕರ ಜೀವನವನ್ನು ನಡೆಸಲು ಬೇಕಾದ ವ್ಯವಸ್ಥೆ ಹಿರಿಯರಿಗೆ ದೊರೆಯಬೇಕಾಗಿದೆ. ವಿದೇಶ ಅಥವಾ ಪರವೂರಿನಲ್ಲಿರುವ ತಮ್ಮ ಮಕ್ಕಳ ಸಾಧನೆಯನ್ನು ನೋಡುತ್ತಾ ಇಳಿವಯಸ್ಸಿನಲ್ಲಿ ಸಂತುಷ್ಟರಾಗಿ ಜೀವಿಸಲು ಅವರಿಗೆ ಪ್ರೀತಿ, ಗೌರವ, ಭದ್ರತೆಗಳೊಂದಿಗೆ ಸೌಲಭ್ಯಗಳ ಅಗತ್ಯವಿದೆ. 'ನಿವೃತ್ತಿ ಹೊರೆಯಲ್ಲ, ಹೊಸ ಜೀವನದ ಆರಂಭ' ಎಂಬ ನುಡಿಯನ್ನು ಸಾಕಾರಗೊಳಿಸುವುದು ಸಂಸ್ಥೆಯ ಕರ್ತವ್ಯವಾಗಿದೆ.

ಮಂಗಳವಾರದ ಪಂದ್ಯಗಳು

- ಇರಾನ್-ನ್ಯೂಜಿಲೆಂಡ್ (ಬೆಳಗ್ಗೆ 6:30)
- ಫ್ರಾನ್ಸ್-ಸೆನೆಗಲ್ (ಮಧ್ಯರಾತ್ರಿ 12:30)
- ಇರಾಕ್-ನಾರ್ವೆ (ಬುಧವಾರ ಬೆಳಗ್ಗೆ 3:30)
- ಅರ್ಜೆಂಟೀನಾ-ಅಲ್ಜೀರಿಯಾ (ಬುಧವಾರ ಬೆಳಗ್ಗೆ 6:30)

ಕಿರುಸುದ್ದಿ

2ನೇ ಅತಿ ವೇಗದ ಗೋಲ್ ಹೊಡೆದ ಬದಲಿ ಆಟಗಾರ



• **ಮೊಂಟೆರೆ (ಮೆಕ್ಸಿಕೊ):** ವಿಶ್ವಕಪ್ ಇತಿಹಾಸದಲ್ಲೇ ಸ್ವೀಡನ್‌ನ ಮತ್ತಿಯಾಸ್ ಸ್ವಾನ್‌ಬರ್ಗ್ ಎರಡನೇ ಅತಿ ವೇಗದ ಗೋಲ್ ದಾಖಲಿಸಿದ ಬದಲಿ ಆಟಗಾರನೆಂಬ ದಾಖಲೆಯನ್ನು ಸೋಮವಾರ ಬರೆದಿದ್ದಾರೆ. ಟ್ಯುನೀಶಿಯಾ ವಿರುದ್ಧದ ಪಂದ್ಯದಲ್ಲಿ ಬದಲಿ ಆಟಗಾರನಾಗಿ ಮೈದಾನಕ್ಕಿಳಿದ 27 ವರ್ಷದ ಸ್ವಾನ್‌ಬರ್ಗ್ 18 ಸೆಕೆಂಡಿನಲ್ಲಿ ಗೋಲ್ ದಾಖಲಿಸಿದ್ದಾರೆ. 2002ರ ವಿಶ್ವಕಪ್‌ನಲ್ಲಿ ಬದಲಿ ಆಟಗಾರನಾಗಿ ಇಳಿದ ಉರುಗ್ವೆಯ ರಿಚರ್ಡ್ ಮೊರೇಲ್ಸ್ 16 ಸೆಕೆಂಡುಗಳಲ್ಲಿ ಗೋಲ್ ಹೊಡೆದಿದ್ದರು.

ನೇಷನ್ಸ್ ಕಪ್ ಮಹಿಳಾ ಹಾಕಿ: ಅಮೆರಿಕ ಮಣಿಸಿದ ಭಾರತ

• **ಆಕ್ಲೆಂಡ್:** ಎಫ್‌ಐಎಚ್ ನೇಷನ್ಸ್ ಕಪ್ ಹಾಕಿ ಪಂದ್ಯಾವಳಿಯ ಎ ಗುಂಪಿನ ಪಂದ್ಯದಲ್ಲಿ ಸೋಮವಾರ ಅಮೆರಿಕ ವಿರುದ್ಧ ಭಾರತೀಯ ವನಿತೆಯರು 3-2 ಗೋಲ್‌ಗಳ ಅಂತರದಿಂದ ಜಯ ಸಾಧಿಸಿದ್ದಾರೆ. ದೀಪಿಕಾ ಭಾರತದ ರೋಚಕ ಗೆಲುವಿನ ರೂವಾರಿ ಆಗಿದ್ದರು. ಭಾರತದ ಪರ ದೀಪಿಕಾ (17, 24ನೇ ನಿಮಿಷ) ಎರಡು ಗೋಲ್, ನವನೀತ್ ಕೌರ್(28ನೇ ನಿಮಿಷ) ಸ್ಕೋರ್ ಮಾಡಿದರು. ಅಮೆರಿಕ ಪರ ಆಶ್ಲೆ ಸೆಸ್ಸಾ(4ನೇ ನಿಮಿಷ) ಮತ್ತು ಮೇಡಿಲಿನ್ ಜಿಮ್ಮರ್(7ನೇ ನಿಮಿಷ) ಸ್ಕೋರ್ ಮಾಡಿದ್ದರು. ನೇಷನ್ಸ್ ಕಪ್ ಗೆಲ್ಲುವ ತಂಡ ಪ್ರೊ ಲೀಗ್‌ಗೆ ಪ್ರವೇಶ ಪಡೆಯುತ್ತದೆ. 2-2 ಸಮಬಲದ ಹೋರಾಟ ಇದ್ದಾಗ ದೀಪಿಕಾ 24ನೇ ನಿಮಿಷದಲ್ಲಿ ಗೋಲ್ ದಾಖಲಿಸಿದ್ದರು.

ಕಳರಿಪಯಟ್ಟು: ಪ್ರಣಿಕಾಗೆ 2 ಸ್ವರ್ಣ, ವರುಣ್‌ಗೆ ಬೆಳ್ಳಿ

• **ಬೆಂಗಳೂರು:** ಬೆಂಗಳೂರು ಜಿಲ್ಲಾ ಕಳರಿಪಯಟ್ಟು ಕೌನ್ಸಿಲ್ ವತಿಯಿಂದ ಸ್ಟ್ರೈಡ್ ಬ್ಯಾಡ್ಮಿಂಟನ್ ಕೋರ್ಟ್‌ನಲ್ಲಿ ಹಮ್ಮಿಕೊಳ್ಳಲಾದ ಬೆಂಗಳೂರು ಜಿಲ್ಲಾ ಕಳರಿಪ್ಪಯಟ್ಟು ಚಾಂಪಿಯನ್ ಶಿಪ್ 2026-27 ಜೂನಿಯರ್ ಇವೆಂಟ್‌ನಲ್ಲಿ ಪ್ರಣಿಕಾ ರಾಜ ಎರಡು ಸ್ವರ್ಣ ಪದಕ ಗೆದ್ದರೆ, ವರುಣ್ ಒಂದು ಬೆಳ್ಳಿ ಪದಕ ಗೆದ್ದಿದ್ದಾರೆ. ಜೂ.13 ಮತ್ತು 14ರಂದು ನಡೆದ ಜಿಲ್ಲಾಮಟ್ಟದ ಕಳರಿಪಯಟ್ಟು ಚಾಂಪಿಯನಶಿಪ್‌ನ ಜೂನಿಯರ್ ಇವೆಂಟ್‌ನಲ್ಲಿ ಪ್ರಣಿಕಾ ರಾಜ ಚವುಟ್ಟುಪಯಟ್ಟು, ಚುವಾಡುಗಲ್‌ನಲ್ಲಿ ಚಿನ್ನದ ಪದಕ, ವರುಣ್ ಕೈ ಮುಕ್ಕಟ್ಟನ್‌ನಲ್ಲಿ ಬೆಳ್ಳಿ ಪದಕ ಪಡೆದುಕೊಂಡಿದ್ದಾರೆ.



ಕೆರಳಿದ ಸೂರ್ಯವಂಶಿ!

• **ದಾಂಬುಲ್ಲಾ:** ಶ್ರೀಲಂಕಾ ಎ ವಿರುದ್ಧ ಸೂಪರ್ ಓವರ್ ಸೋಲಿನ ಬಳಿಕ ವೈಭವ್ ಸೂರ್ಯವಂಶಿ ಹಾಗೂ ಶ್ರೀಲಂಕಾ ಆಟಗಾರ ಮಧ್ಯೆ ಮಾತಿನ ಚಕಮಕಿ ನಡೆದಿದ್ದು, ಸೂರ್ಯವಂಶಿ ತಮ್ಮ ತಾಳ್ಮೆ ಕಳೆದು ಕೊಂಡು ಲಂಕಾ ಆಟಗಾರರೊಬ್ಬರನ್ನು ತಳ್ಳಿದ್ದಾರೆ. ಶ್ರೀಲಂಕಾ ಆಟಗಾರರು ಸೂರ್ಯವಂಶಿ ಅವರನ್ನು ಹಿಂದಕ್ಕೆ ತಳ್ಳಿದ್ದಾರೆ. ಶ್ರೀಲಂಕಾ ಬೌಲರ್ ಮತುಲನ್ ಸಂಭ್ರಮಿಸಿದ ಶೈಲಿ ವೈಭವ್‌ರನ್ನು ಟ್ರಿಗರ್ ಮಾಡಿದೆ. ಈ ವೇಳೆ ನಿರೋಶನ್ ಡಿಕೆವೆಲ್ಲಾ ಆಟಗಾರರ ಮಧ್ಯೆ ಪ್ರವೇಶಿಸಿ ಶಾಂತಗೊಳಿಸಿದ್ದಾರೆ. ಕಳೆದ ವರ್ಷ ಅ-19 ಏಷ್ಯಾ ಕಪ್ ಫೈನಲ್‌ನಲ್ಲಿ ಪಾಕಿಸ್ತಾನದ ಅಲಿ ರಾಜಾ ಮತ್ತು ವೈಭವ್ ಮಧ್ಯೆ ಮಾತಿನ ಚಕಮಕಿ ಏರ್ಪಟ್ಟಿತ್ತು.



ಸ್ವೀಡನ್ ಎದುರು 1-5ರಿಂದ ಸೋತ ಟ್ಯುನೀಶಿಯಾ

ಅವಳಿ ಗೋಲ್ ಅಯಾರಿ ಸ್ವೀಡನ್ ಗೆಲುವಿನ ಯಾರಿ

• **ಮೊಂಟೆರೆ (ಮೆಕ್ಸಿಕೊ):** ಯಾಸಿನ್ ಅಯಾರಿ ಅವಳಿ ಗೋಲ್‌ಗಳ ನೆರವಿನಿಂದ ಟ್ಯುನೀಶಿಯಾವನ್ನು 5-1 ಅಂತರದಿಂದ ಪರಾಭವಗೊಳಿಸಿದ ಸ್ವೀಡನ್ 2026ರ ವಿಶ್ವಕಪ್‌ನಲ್ಲಿ ತನ್ನ ಅಭಿಯಾನವನ್ನು ಆರಂಭಿಸಿದೆ. ಸೋಮವಾರ ಬೆಳಗ್ಗೆ ನಡೆದ ಎಫ್ ಗುಂಪಿನ ಪಂದ್ಯದಲ್ಲಿ ಟ್ಯುನೀಶಿಯಾ ಮಣಿಸಿದ ಸ್ವೀಡನ್ ಅಗ್ರಸ್ಥಾನಕ್ಕೇರಿದೆ. ಅಲೆಗ್ಸಾಂಡರ್ ಇಸಾಕ್ ಮತ್ತು ವಿಕ್ಟರ್ ಗ್ಯೋಕೆರೆಸ್ ತಲಾ ಒಂದು ಗೋಲ್ ಅಸಿಸ್ಟ್ ಮಾಡಿದ್ದು, ಮತ್ತಿಯಾಸ್ ಸ್ವಾನ್‌ಬರ್ಗ್ ಸಹ ಸ್ವೀಡನ್‌ಗಾಗಿ ಒಂದು ಗೋಲ್ ಸ್ಕೋರ್ ಮಾಡಿದ್ದರು. ಟ್ಯುನೀಶಿಯಾ ಪರ ಒಮರ್ ರೆಕಿಕ್ ಏಕೈಕ ಗೋಲ್ ದಾಖಲಿಸಿದ್ದರು.

ಅಯಾರಿ ರಾಕೆಟ್: ಪಂದ್ಯ ಆರಂಭವಾದ 7ನೇ ನಿಮಿಷದೊಳಗೆ ರಾಕೆಟ್‌ನಂತೆ ದೂರದಿಂದ ನಿಖರವಾಗಿ ಗೋಲ್ ದಾಖಲಿಸಿದ ಅಯಾರಿ, ಸಂಭ್ರಮಾಚರಣೆ ನಡೆಸದೆ ಎರಡು ಕೈಗಳನ್ನೆತ್ತಿ ತಮ್ಮ ತಂದೆಯ ಜನ್ಮಭೂಮಿ ಟ್ಯುನೀಶಿಯಾಗೆ ಗೌರವ ಸಲ್ಲಿಸಿದರು. 30ನೇ ನಿಮಿಷದಲ್ಲಿ ಅಲೆಗ್ಸಾಂಡರ್ ಇಸಾಕ್ ತಮ್ಮ 18ನೇ ಅಂತಾರಾಷ್ಟ್ರೀಯ ಗೋಲ್ ಹೊಡೆದರು. ಸ್ವೀಡನ್ ಒಂದರ ಮೇಲೊಂದು ಗೋಲ್‌ಗಳನ್ನು ದಾಖಲಿಸುತ್ತಿದ್ದರೆ, ಟ್ಯುನೀಶಿಯಾ ಗೋಲಿ ಮೌಹಿಬ್ ಛಾಮಖ್ ಗೋಲ್ ತಡೆಯುವಲ್ಲಿ ವಿಫಲರಾಗಿ ಪರದಾಡಿದರು. 43ನೇ ನಿಮಿಷದಲ್ಲಿ ಟ್ಯುನೀಶಿಯಾ ಪರ ಒಮರ್ ರೆಕಿಕ್ ಗೋಲ್ ದಾಖಲಿಸುವ ಮೂಲಕ ಸ್ವೀಡನ್ ನಾಗಾಲೋಟವನ್ನು ತಡೆಯುವ ಪ್ರಯತ್ನ ಮಾಡಿದ್ದರು. ಆದರೆ ಇಸಾಕ್ ಮತ್ತು ಗ್ಯೋಕೆರೆಸ್ ಜತೆಗೂಡಿ ಸ್ವೀಡನ್ ಮೇಲುಗೈ ಸಾಧಿಸುವುದನ್ನು ಖಚಿತಪಡಿಸಿದರು. ಇಸಾಕ್ ಚೆಂಡನ್ನು ವಿಕ್ಟರ್ ಗ್ಯೋಕೆರೆಸ್‌ಗೆ ಪಾಸ್ ಮಾಡಿದ್ದು, ಆರ್ಸೆನಲ್ ಸ್ಟ್ರೈಕರ್ ಗ್ಯೋಕೆರೆಸ್ 59ನೇ ನಿಮಿಷದಲ್ಲಿ ತಮ್ಮ ಒಟ್ಟಾರೆ 21ನೇ ಗೋಲ್ ಹೊಡೆದಿದ್ದರು. ಇದರೊಂದಿಗೆ ಸ್ವೀಡನ್ ಪ್ರತಿನಿಧಿಸಿದ 15 ಪಂದ್ಯಗಳಲ್ಲಿ ಗ್ಯೋಕೆರೆಸ್ 16 ಗೋಲ್‌ಗಳನ್ನು ಹೊಡೆದಿದ್ದಾರೆ. 84ನೇ ನಿಮಿಷದಲ್ಲಿ ಮತ್ತಿಯಾಸ್ ಸ್ವಾನ್‌ಬರ್ಗ್ ಗೋಲ್ ಪ್ರಾಬಲ್ಯ ಹೆಚ್ಚಿಸಿತು. ವಿಡಿಯೊ ರಿವ್ಯೂ ಬಳಿಕ ಗೋಲ್ ನೀಡಲಾಯಿತು. ಪಂದ್ಯದ ಕೊನೆಯಲ್ಲಿ ಎಕ್ಸ್‌ಟ್ರಾ ಮಿನಿಟ್‌ನಲ್ಲಿ ಯಾಸಿನ್ ಅಯಾರಿ ಇನ್ನೊಂದು ಗೋಲ್ ಸ್ಕೋರ್ ಮಾಡುವ ಮೂಲಕ ಫಿನಿಶಿಂಗ್ ಟಚ್ ನೀಡಿದ್ದರು. ತಂಡದ ಐದನೇ ಗೋಲ್ ಅನ್ನು ಅಯಾರಿ ಸಂಭ್ರಮಿಸಿದರು.

ಎಂಟು ವರ್ಷಗಳ ಹಿಂದೆ ರಷ್ಯಾದಲ್ಲಿ ನಡೆದ 2022ರ ವಿಶ್ವಕಪ್‌ನಲ್ಲಿ ಕ್ವಾರ್ಟರ್ ಫೈನಲ್‌ವರೆಗೆ ತಲುಪಿದ್ದ ಸ್ವೀಡನ್, ಈ ಬಾರಿಯ ವಿಶ್ವಕಪ್‌ನಲ್ಲಿ 39ನೇ ರ‍್ಯಾಂಕ್‌ನಲ್ಲಿ ಪ್ರವೇಶಿಸಿದೆ. 45ನೇ ರ‍್ಯಾಂಕ್‌ನ ಟ್ಯುನೀಶಿಯಾ ಈವರೆಗೆ ವಿಶ್ವಕಪ್ ಗುಂಪಿನ ಹಂತ ದಾಟಿ ಮುಂದೆ ಹೋಗಿಲ್ಲ.



> ನನ್ನ ಪುತ್ರ ಸ್ವೀಡನ್ ಪ್ರತಿನಿಧಿಸುವುದನ್ನು ಬಯಸಿದ್ದ. ಆ ಮೂಲಕ ತನ್ನನ್ನು ಬೆಳೆಸಿದ ದೇಶಕ್ಕೆ ಸೇವೆ ಸಲ್ಲಿಸಿದ ಭಾವ ಆತನಿಗೆ ಇರಬೇಕು.
> ■ ಅಬ್ದುಜ್ ಅಯಾರಿ, ಅಯಾರಿ ತಂದೆ

ಸ್ವೀಡನ್ 5-1 ಟ್ಯುನೀಶಿಯಾ
- 7ನೇ ನಿಮಿಷ - ಯಾಸಿನ್ ಅಯಾರಿ(ಸ್ವೀಡನ್)
- 30ನೇ ನಿಮಿಷ - ಅಲೆಗ್ಸಾಂಡರ್ ಇಸಾಕ್(ಸ್ವೀಡನ್)
- 43ನೇ ನಿಮಿಷ - ಒಮರ್ ರೆಕಿಕ್(ಟ್ಯುನೀಶಿಯಾ)
- 59ನೇ ನಿಮಿಷ - ವಿಕ್ಟರ್ ಗ್ಯೋಕೆರೆಸ್(ಸ್ವೀಡನ್)
- 84ನೇ ನಿಮಿಷ - ಮತ್ತಿಯಾಸ್ ಸ್ವಾನ್‌ಬರ್ಗ್(ಸ್ವೀಡನ್)
- 90+6ನೇ ನಿಮಿಷ - ಯಾಸಿನ್ ಅಯಾರಿ(ಸ್ವೀಡನ್)

ಮೊದಲ ಗೋಲ್ ಸಂಭ್ರಮಿಸದ ಅಯಾರಿ!

ಸ್ವೀಡನ್ ಆಟಗಾರ ಯಾಸಿನ್ ಅಯಾರಿ ಅವರ ತಂದೆ ಟುನೀಶಿ ಯಾದವರು ಹಾಗೂ ತಾಯಿ ಮೊರೊಕ್ಕೊ ದೇಶದವರು. ತಂದೆ ಸ್ವೀಡನ್‌ನಲ್ಲಿ ಫುಟ್ಬಾಲ್ ವೃತ್ತಿಜೀವನ ಕಟ್ಟಲು ಪ್ರಯತ್ನಿಸಿ ಯಶಸ್ವಿಯಾಗಲಿಲ್ಲ. ಬಾಲ್ಯದಲ್ಲೇ ಯಾಸಿನ್ ಪ್ರತಿಭೆಯನ್ನು ಫುಟ್ಬಾಲ್ ಪ್ರತಿಭಾನ್ವೇಷಕರೊಬ್ಬರು ಗುರುತಿಸಿದ ಕಾರಣ ಕುಟುಂಬವು ಸ್ವೀಡನ್‌ನಲ್ಲೇ ಉಳಿಯಲು ನಿರ್ಧರಿಸಿತು. ಟುನೀಶಿಯಾ ವಿರುದ್ಧ ವಿಶ್ವಕಪ್ ಗೋಲು ಗಳಿಸಿದರೂ ಯಾಸಿನ್ ಸ್ವೀಡನ್ ಪರ ಸಂಭ್ರಮಾಚರಣೆ ಮಾಡದಿರುವುದು, ಟ್ಯುನೀಶಿಯಾ ಮೇಲೆ ಅವರಿಗಿರುವ ಗೌರವ ಮತ್ತು ಸಾಂಸ್ಕೃತಿಕ ಬಾಂಧವ್ಯವನ್ನು ತೋರಿಸುತ್ತದೆ. ಈ ಬಾರಿಯ ವಿಶ್ವಕಪ್‌ನಲ್ಲಿ ವಿವಿಧ ದೇಶಗಳ ಮೂಲ ಹೊಂದಿರುವ ಆಟಗಾರರ ಸಂಖ್ಯೆ ಹೆಚ್ಚಿರುವುದನ್ನೂ ಇದು ಉಲ್ಲೇಖಿಸುತ್ತದೆ. ಒಟ್ಟಾರೆ ಸ್ವೀಡನ್ ಪರ 3 ಗೋಲ್ ದಾಖಲಿಸಿದ ಅಯಾರಿ, ಎರಡು ಗೋಲ್ ಈ ವಿಶ್ವಕಪ್ ಪಂದ್ಯದಲ್ಲೇ ಹೊಡೆದಿದ್ದಾರೆ. 22 ವರ್ಷದ ಅಯಾರಿ ಸ್ವೀಡನ್‌ನ ಸೊಲ್ನಾ ನಗರದಲ್ಲಿ ಜನಿಸಿದ್ದರು. ಯೂಥ್ ಮಟ್ಟದಲ್ಲಿ ಸ್ವೀಡನ್ ಪ್ರತಿನಿಧಿಸಿದ್ದ ಅಯಾರಿಗೆ 2022ರ ವಿಶ್ವಕಪ್‌ನಲ್ಲಿ ಟ್ಯುನೀಶಿಯಾ ಪ್ರತಿನಿಧಿಸಲು ಆಯ್ಕೆ ನೀಡಿದ್ದರೂ, ಅಯಾರಿ ತಿರಸ್ಕರಿಸಿದ್ದರು.



4 ಬಾರಿಯ ಚಾಂಪಿಯನ್ನರಿಗೆ 7-1 ಜಯ

ಜರ್ಮನ್ನರ ಆರ್ಭಟಕ್ಕೆ ಕುರಸಾವೊ ಕಂಗಾಲು


• **ಹ್ಯೂಸ್ಟನ್ (ಅಮೆರಿಕ):** ಪದಾರ್ಪಣಾ ವಿಶ್ವಕಪ್ ಆಡುತ್ತಿರುವ ಕುರಸಾವೊ ವಿರುದ್ಧ ನಾಲ್ಕು ಬಾರಿಯ ಚಾಂಪಿಯನ್ ಜರ್ಮನಿ 7-1 ಗೋಲ್ ಅಂತರದ ಭರ್ಜರಿ ಜಯ ಸಾಧಿಸಿದೆ. ಜರ್ಮನಿ ಪರ ಕೈ ಹಾವರ್ಟ್ಜ್ ಅವಳಿ ಗೋಲ್ ದಾಖಲಿಸಿದರು. ಪಂದ್ಯ ನಾಲ್ಕನೇ ಮತ್ತು ಎಂಟನೇ ಗೋಲ್ ಹೊಡೆದು ಹಾವರ್ಟ್ಜ್ ಮಿಂಚಿದರು.

ಭಾನುವಾರ ಮಧ್ಯರಾತ್ರಿ ಟೆಕ್ಸಾಸ್‌ನ ಹ್ಯೂಸ್ಟನ್‌ನಲ್ಲಿ ನಡೆದ ಇ ಗುಂಪಿನ ಪಂದ್ಯದಲ್ಲಿ, ಪುಟ್ಟ ಕೆರೇಬಿಯನ್ ದ್ವೀಪ ರಾಷ್ಟ್ರವು ಚೊಚ್ಚಲ ಗೋಲ್ ದಾಖಲಿಸಿ ವಿಶ್ವಕಪ್‌ನಲ್ಲಿ ಐತಿಹಾಸಿಕ ಮೈಲಿಗಲ್ಲು ಬರೆದಿದೆ. ಆದರೆ ಮುಂದಿನ ಪಂದ್ಯಗಳಲ್ಲಿ ಜರ್ಮನಿ ಫೈಪೋಟಿ ನೀಡಬಲ್ಲ ಇಕ್ವಾಡೋರ್ ಮತ್ತು ಐವರಿಕೋಸ್ಟ್ ತಂಡಗಳನ್ನು ಎದುರಿಸಲಿದೆ.

ಪಂದ್ಯದ 6ನೇ ನಿಮಿಷದಲ್ಲೇ ಫೆಲಿಕ್ಸ್ ಎನ್‌ಮೆಚ ಜರ್ಮನಿ ಪರ ಗೋಲ್ ದಾಖಲಿಸಲು ಆರಂಭಿಸಿದರು. ಎನ್‌ಮೆಚ ಗೋಲು ದಾಖಲಿಸುತ್ತಲೇ ಬ್ಲೂ ವೇವ್ ಹೆಸರಿನ ಕುರಸಾವೊ ಅಭಿಮಾನಿಗಳಲ್ಲಿ ಆತಂಕ ಮನೆಮಾಡಿತ್ತು. ಆದರೆ ಜರ್ಮನಿ ಗೋಲ್ ಮಳೆ ಅಲ್ಲಿಗೇ ನಿಲ್ಲದೆ ಮುಂದುವರಿಯಿತು. ಹಾವರ್ಟ್ಜ್ ಅವಳಿ ಗೋಲ್ ಹೊಡೆದರೆ, ನಿಕೊ, ಜಮಾಲ್, ಬ್ರೌನ್, ಡೆನಿಸ್ ಸ್ಕೋರ್ ಮಾಡುವ ಮೂಲಕ ಕುರಸಾವೊ ಎದ್ದೇಳಲು ಅವಕಾಶ ಇರಲಿಲ್ಲ. ತಂಡದ ಪ್ರದರ್ಶನಕ್ಕೆ ಟೂರ್ನಿಯ ಅತಿ ಕಿರಿಯ ಕೋಚ್ ಜೂಲಿಯನ್ ನೇಗೆಲ್ಸ್‌ಮನ್ ಸಂಭ್ರಮಿಸಿದರು.

ಅತಿ ಹಿರಿಯ ಜರ್ಮನಿ ಗೋಲ್‌ಕೀಪರ್ 40 ವರ್ಷದ ಮ್ಯಾನುಯೆಲ್ ನ್ಯೂಯರ್ ತಮ್ಮ 5ನೇ ವಿಶ್ವಕಪ್‌ನಲ್ಲಿ ಮೈದಾನಕ್ಕಿಳಿದಿದ್ದರು. ಹಾವರ್ಟ್ಜ್ ಒಟ್ಟಾರೆ ತಮ್ಮ 24ನೇ ಗೋಲ್ ದಾಖಲಿಸಿದ್ದರು. ಬದಲಿ ಆಟಗಾರ ಉಂಡವ್ ತಮ್ಮ ಸತತ 7ನೇ ಪಂದ್ಯದಲ್ಲಿ 7ನೇ ಗೋಲ್ ಹೊಡೆದಿದ್ದರು.





ಬ್ರೆಜಿಲ್ ದಾಖಲೆ ಮುರಿದ ಜರ್ಮನಿ!

ಫಿಫಾ ವಿಶ್ವಕಪ್‌ನಲ್ಲಿ ಅತ್ಯಧಿಕ ಗೋಲ್ ದಾಖಲಿಸುವ ಮೂಲಕ ಬ್ರೆಜಿಲ್ ದಾಖಲೆಯನ್ನು ಜರ್ಮನಿ ಮುರಿದಿದೆ. ಕಡೆಯದಾಗಿ 2014ರಲ್ಲಿ ವಿಶ್ವಕಪ್ ಗೆದ್ದ ಜರ್ಮನಿ, 2022ರ ಕತಾರ್ ವಿಶ್ವಕಪ್‌ನಲ್ಲಿ ಗುಂಪಿನ ಹಂತದಲ್ಲೇ ಹೊರಬಿದ್ದಿತ್ತು. 2026ರಲ್ಲಿ ಟೂರ್ನಿಯ ಅತಿ ಕಿರಿಯ ಕೋಚ್ ಜೂಲಿಯನ್ ಸಾರಥ್ಯದಲ್ಲಿ ಜರ್ಮನಿ ಗೆಲುವಿನ ಶುಭಾರಂಭ ಮಾಡಿದೆ. 2014ರ ಸೆಮಿಫೈನಲ್‌ನಲ್ಲಿ ಬ್ರೆಜಿಲ್ ವಿರುದ್ಧ 7 ಗೋಲ್ ಹೊಡೆದಿತ್ತು.

ಜರ್ಮನಿ 7-1 ಕುರಸಾವೊ
- 6ನೇ ನಿಮಿಷ-ಫೆಲಿಕ್ಸ್ ಎನ್‌ಮೆಚ (ಜರ್ಮನಿ)
- 21ನೇ ನಿಮಿಷ-ಲಿವಾನೊ ಕೊಮೆನೆನ್ಸಿಯಾ (ಕುರಸಾವೊ)
- 38ನೇ ನಿಮಿಷ-ನಿಕೊ ಸ್ಲೋಟರ್‌ಬೆಕ್ (ಜರ್ಮನಿ)
- 45+5ನೇ ನಿಮಿಷ (ಪೆ)-ಕೈ ಹಾವರ್ಟ್ಜ್ (ಜರ್ಮನಿ)
- 47ನೇ ನಿಮಿಷ-ಜಮಾಲ್ ಮ್ಯುಸಿಯಲ (ಜರ್ಮನಿ)
- 68ನೇ ನಿಮಿಷ-ನೇಥನೀಲ್ ಬ್ರೌನ್ (ಜರ್ಮನಿ)
- 78ನೇ ನಿಮಿಷ-ಡೆನಿಸ್ ಉಂಡಾವ್ (ಜರ್ಮನಿ)
- 88ನೇ ನಿಮಿಷ-ಕೈ ಹಾವರ್ಟ್ಜ್ (ಜರ್ಮನಿ)

ವಿಶ್ವಕಪ್ ಗೋಲ್ಸ್

ಜರ್ಮನಿ	239
ಬ್ರೆಜಿಲ್	238
ಅರ್ಜೆಂಟೀನಾ	152
ಫ್ರಾನ್ಸ್	136
ಇಟಲಿ	128

ವಿಶ್ವಕಪ್‌ನಲ್ಲಿ ನಾಲ್ಕು ಬಾರಿ 7+ ಗೋಲ್ ದಾಖಲಿಸಿದ ಜರ್ಮನಿ

ಕ್ರೀಡಾ ಕೇಂದ್ರ ಕಾಮಗಾರಿ ಆರಂಭ


ವಿಜಯಕುಮಾರ ಬೆಳ್ಳೇರಿಮಠ

• **ಹುಬ್ಬಳ್ಳಿ:** ಕಳೆದ ಮೂರು ವರ್ಷದಿಂದ ನನೆಗುದಿಗೆ ಬಿದ್ದಿದ್ದ ಇಲ್ಲಿಯ ರಾಜನಗರದಲ್ಲಿನ ಕರ್ನಾಟಕ ಕ್ರಿಕೆಟ್ ಸಂಸ್ಥೆಯ(ಕೆಎಸ್‌ಸಿಎ) ಕ್ರೀಡಾಂಗಣದಲ್ಲಿ ನಿರ್ಮಿಸಲಾಗುತ್ತಿರುವ ಕ್ರೀಡಾ ಕೇಂದ್ರ(ಕ್ಲಬ್‌ಹೌಸ್) ಕೊನೆಗೂ ಆರಂಭವಾಗಿದೆ.

ಅಗತ್ಯ ಮೂಲಸೌಕರ್ಯ ಕಲ್ಪಿಸಿ ಉತ್ತರ ಕರ್ನಾಟಕ ಭಾಗವನ್ನು ಕ್ರಿಕೆಟ್ ಹಬ್ ಮಾಡಲಾಗುವುದು ಎಂದು ಕೆಎಸ್‌ಸಿಎಯ ಈ ಹಿಂದಿನ ಆಡಳಿತ ಮಂಡಳಿ ಹೇಳಿತ್ತು. ಮುಂಬೈನ ವಾಸ್ತುಶಿಲ್ಪಿಯನ್ನು ಕರೆಸಿ ಕ್ರೀಡಾ ಕೇಂದ್ರಕ್ಕೆ ವಿನ್ಯಾಸ ರೂಪಿಸಲಾಗಿತ್ತು.

2015-16ನೇ ಸಾಲಿನಲ್ಲಿ 35 ಕೋಟಿ ಮೊತ್ತದಲ್ಲಿ ಯೋಜನೆ ಆರಂಭವಾಗಿತ್ತು. 2022ರ ನವೆಂಬರ್‌ನಿಂದ ಕಾಮಗಾರಿ ಸ್ಥಗಿತವಾಗಿತ್ತು. 30 ಕೋಟಿ ಮೊತ್ತದ ಕಾಮಗಾರಿ ಮಾತ್ರ ನಡೆದಿತ್ತು. ಆಟಗಾರರ ಡ್ರೆಸ್ಸಿಂಗ್ ಕೊಠಡಿ, ವೀಕ್ಷಕ ವಿವರಣೆಗಾರರ ಕೊಠಡಿ, ಈಜುಕೊಳ, ಆಟಗಾರರು ಉಳಿದುಕೊಳ್ಳಲು 60 ಬೆಡ್‌ಗಳ ಡಾರ್ಮೆಟರಿ, ಕ್ಲಬ್ ಸದಸ್ಯರಿಗಾಗಿ 22 ಕೊಠಡಿಗಳನ್ನು ನಿರ್ಮಿಸಲಾಗಿದೆ. ರೆಸ್ಟೋರೆಂಟ್, ಡೈನಿಂಗ್, ಕಿಚನ್, ಜಿಮ್, ಒಳವಿನ್ಯಾಸ ಸೇರಿದಂತೆ ಇನ್ನೂ ಕೆಲವು ಕಾಮಗಾರಿಗಳು ಬಾಕಿ ಉಳಿದಿದ್ದು, ಕಟ್ಟಡಕ್ಕೆ ಅಂತಿಮ ಸ್ಪರ್ಶ ನೀಡಬೇಕಿದೆ. ಹಿಂದಿನ ಆಡಳಿತ ಮಂಡಳಿ ಅವಧಿಯಲ್ಲಿ ಕಾಮಗಾರಿ ಆರಂಭಿಸಲು ಆಸಕ್ತಿ ವಹಿಸಿರಲಿಲ್ಲ. ಆದರೆ, ಹೊಸ ಆಡಳಿತ ಮಂಡಳಿ ಈಗ 30-40 ಲಕ್ಷ ರೂ. ಮೊತ್ತದಲ್ಲಿ ಕಾಮಗಾರಿ ಕೈಗೆತ್ತಿಕೊಂಡಿದೆ. ಪ್ಲಂಬಿಂಗ್, ಪಿಒಪಿ, ಪೇಂಟಿಂಗ್, ಎಲೆಕ್ಟ್ರಾನಿಕ್ಸ್ ಕಾಮಗಾರಿ ನಡೆಯುತ್ತಿದೆ. ಇದೇ ತಿಂಗಳು(ಜೂ.27ರಂದು) ಆರಂಭವಾಗುವ ಮಹಾರಾಜ ಟ್ರೋಫಿ ಟೂರ್ನಿಯ ಮುಂಚೆಯೇ ಕಾಮಗಾರಿಯು ಮುಗಿಯುವ ಸಾಧ್ಯತೆ ಇದೆ ಎನ್ನುತ್ತಾರೆ ಕೆಎಸ್‌ಸಿಎ ಸಿಬ್ಬಂದಿ. ಕೆಎಸ್‌ಸಿಎಗೆ ನೂತನ ಆಡಳಿತ ಮಂಡಳಿ ಅಧಿಕಾರ ವಹಿಸಿಕೊಂಡ ಬಳಿಕ ಸದಸ್ಯರು ಹಾಗೂ ತಾಂತ್ರಿಕ ತಂಡ ಹುಬ್ಬಳ್ಳಿ ಹಾಗೂ ಬೆಳಗಾವಿ ಮೈದಾನಕ್ಕೆ ಭೇಟಿ ನೀಡಿ ಕ್ರೀಡಾ ಕೇಂದ್ರ ಆಗಬೇಕಾದ ಕೆಲಸಗಳ ಬಗ್ಗೆ ಪರಿಶೀಲಿಸಿತ್ತು. ಈ ವರದಿ ಪಡೆದು ಕಾಮಗಾರಿ ಆರಂಭಿಸುವುದಾಗಿ ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ತಿಳಿಸಿದ್ದರು. ಅದರಂತೆ ಮೊದಲ ಹಂತದಲ್ಲಿ 30-40 ಲಕ್ಷ ರೂ.ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಚಾವಣಿಗೆ ಅಳವಡಿಸಿದ್ದ ಪಿಒಪಿ ಹಾಳಾಗಿದ್ದು, ಮಳೆ ನೀರು ಸೋರಿ ಗೋಡೆಗಳು ಪಾಚಿಗಟ್ಟಿದ್ದವು. ಸದ್ಯ ಪಿಒಪಿ ಕಾಮಗಾರಿ ಆರಂಭವಾಗಿದ್ದು, ಪೇಂಟಿಂಗ್ ಕೆಲಸ ನಡೆಯುತ್ತಿದೆ.

ಪಂದ್ಯಗಳು ನಡೆದಾಗ ಆಟಗಾರರು, ಸಿಬ್ಬಂದಿ ಉಳಿದುಕೊಳ್ಳಲು ಜಿಮ್ಖಾನ ಕ್ಲಬ್, ಹೋಟೆಲ್‌ಗಳಲ್ಲಿ ಕೊಠಡಿಗಳನ್ನು ಬಾಡಿಗೆಗೆ ಪಡೆಯಲಾಗುತ್ತಿದೆ. ಕ್ರೀಡಾ ಕೇಂದ್ರದ ಕಾಮಗಾರಿ ಪೂರ್ಣಗೊಂಡರೆ ಇಲ್ಲಿಯೇ ಆಟಗಾರರಿಗೆ ವ್ಯವಸ್ಥೆ ಕಲ್ಪಿಸಬಹುದು. ವೆಚ್ಚ ಸಹ ಉಳಿತಾಯವಾಗಲಿದೆ ಎನ್ನುತ್ತಾರೆ ಎಂದು ಕ್ರೀಡಾಪಟುಗಳು.



16.6 ಎಕರೆಯಲ್ಲಿ ಕ್ರೀಡಾಂಗಣ

ಕೆಎಸ್‌ಸಿಎ ಮೈದಾನ 16.5 ಎಕರೆ ಜಾಗ ಇದ್ದು, ಎಂಟು ಮುಖ್ಯ ಪಿಚ್, 10 ಅಭ್ಯಾಸ ಪಿಚ್ ಮತ್ತು 2 ಕಾಂಕ್ರೀಟ್ ಪಿಚ್ ಗಳಿವೆ. ಸದ್ಯ ಎಲ್‌ಇಡಿ ಫ್ಲಡ್‌ಲೈಟ್ ಅಳವಡಿಸುವ ಕಾಮಗಾರಿ ನಡೆದಿದೆ. ಅನಿವಾರ್ಯ ಕಾರಣದಿಂದ ಇತ್ತೀಚೆಗೆ ಇಲ್ಲಿ ರಣಜಿ ಫೈನಲ್ ಪಂದ್ಯ ನಡೆದಿತ್ತು ಎನ್ನುತ್ತಾರೆ ಕ್ರೀಡಾಪಟುಗಳು.

> 30-40 ಲಕ್ಷ ರೂ.ಮೊತ್ತದಲ್ಲಿ ಕ್ಲಬ್ ಹೌಸ್‌ನ ವಿವಿಧ ಕಾಮಗಾರಿ ಆರಂಭವಾಗಿದೆ. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಕಾಮಗಾರಿ ಪೂರ್ಣಗೊಳಿಸಲಾಗುವುದು.
> ■ ವೀರಣ್ಣ ಸವಡಿ, ನಿಮಂತ್ರಕ ಧಾರವಾಡ ವಲಯ ಕೆಎಸ್‌ಸಿಎ

ಐವರಿಕೋಸ್ಟ್ ಗೆಲ್ಲಿಸಿದ ಡಿಯಾಲೊ

- ಗೋಲ್‌ಲೆಸ್ ಡ್ರಾ ಫಲಿತಾಂಶ ನಿರೀಕ್ಷೆಯಿದ್ದ ಪಂದ್ಯ
- ಈಕ್ವೆಡಾರ್ ವಿರುದ್ಧ ಐವರಿಕೋಸ್ಟ್‌ಗೆ 1-0 ಜಯ

• **ಫಿಲಡೆಲ್ಫಿಯಾ(ಅಮೆರಿಕ):** ಅಮದ್ ಡಿಯಾಲೊ 90ನೇ ನಿಮಿಷದಲ್ಲಿ ಚೊಚ್ಚಲ ವಿಶ್ವಕಪ್ ಗೋಲ್ ಹೊಡೆಯುವ ಮೂಲಕ ಐವರಿಕೋಸ್ಟ್‌ನ ರೋಚಕ ಗೆಲುವಿನ ರೂವಾರಿ ಆಗಿಬಿಟ್ಟರು. ಪಂದ್ಯವು ಈ ಬಾರಿಯ ವಿಶ್ವಕಪ್‌ನ ಮೊದಲ ಗೋಲ್‌ಲೆಸ್ ಡ್ರಾ ಫಲಿತಾಂಶ ಕಾಣುತ್ತದೆ ಎಂದೇ ನಿರೀಕ್ಷಿಸಲಾಗಿತ್ತು. ಆದರೆ ಡಿಯಾಲೊ ಡ್ರಾ ಆಗಬೇಕಿದ್ದ ಪಂದ್ಯವನ್ನು ಗೆಲ್ಲಿಸಿಕೊಟ್ಟರು.

ಸೋಮವಾರ ಬೆಳಗ್ಗಿನ ಪಂದ್ಯದಲ್ಲಿ ಈಕ್ವೆಡಾರ್ ಎದುರು 1-0 ಅಂತರದಿಂದ ಐವರಿಕೋಸ್ಟ್ ಗೆಲುವು ಸಾಧಿಸಿತು. ಸುಮಾರು ಹನ್ನೆರಡು ವರ್ಷಗಳ ಬಳಿಕ ವಿಶ್ವಕಪ್ ಅರ್ಹತೆ ಸಂಪಾದಿಸಿದ ಐವರಿಕೋಸ್ಟ್ ಮೊದಲ ಪಂದ್ಯದಲ್ಲೇ ಗೆಲುವಿನ ಕೇಕೆ ಹಾಕಿದೆ. 56ನೇ ನಿಮಿಷದಲ್ಲಿ ಬದಲಿ ಆಟಗಾರನಾಗಿ ಮೈದಾನಕ್ಕಿಳಿದ ಡಿಯಾಲೊ ಎಡಗಾಲಿನ ಮೂಲಕ ಅದೃಷ್ಟದ ಬಾಗಿಲು ತೆರೆದರು. ಚೆಂಡನ್ನು ಈಕ್ವೆಡಾರ್ ಗೋಲಿ ಹರ್ನಾನ್ ಗಾಲಿಂಡೆಜ್ ಅವರಿಗೆ ತಡೆಯಲು ಸಾಧ್ಯವಾಗಲಿಲ್ಲ. ವಿಲ್‌ಫ್ರೆಡ್ ಸಿಂಗೊ ಬಲದಿಂದ ಡಿಯಾಲೊಗೆ ಚೆಂಡನ್ನು ಪಾಸ್ ಮಾಡಿದ್ದರು. ವಿಶ್ವಕಪ್‌ನಲ್ಲಿ 2014ರ ಬಳಿಕ ಮೊದಲ ಬಾರಿ ಕಾಣಿಸಿಕೊಂಡರೂ ಐವರಿಕೋಸ್ಟ್‌ಗಿದು ನಾಲ್ಕನೇ ವಿಶ್ವಕಪ್. ಅಚ್ಚರಿಯ ಫಲಿತಾಂಶ ನೀಡಿದರೆ ಐವರಿಕೋಸ್ಟ್ ಇದೇ ಮೊದಲ ಬಾರಿಗೆ ನಾಕೌಟ್ ಹಂತವನ್ನು ಪ್ರವೇಶಿಸುವ ಅವಕಾಶ ಹೊಂದಿದೆ.

> ನಮಗೆ ಗೆಲುವಿನ ಅವಶ್ಯಕತೆ ಇತ್ತು. ನಾವಿಲ್ಲಿ ಇತಿಹಾಸ ಬರೆಯಲು ಬಂದಿದ್ದೇವೆ. ಇದು ನಮಗೆಲ್ಲರಿಗೂ ಮೊದಲ ಪ್ರಮುಖ ಟೂರ್ನಿ. ನಾವು ಉತ್ಸಾಹದಲ್ಲಿದ್ದೇವೆ.
> ■ ಅಮದ್ ಡಿಯಾಲೊ, ಗೆಲುವಿನ ರೂವಾರಿ



ತಪ್ಪಿದ ಈಕ್ವೆಡಾರ್ ಅವಕಾಶ

ಐದನೇ ವಿಶ್ವಕಪ್ ಆಡುತ್ತಿರುವ ಈಕ್ವೆಡಾರ್ ಎರಡನೇ ಬಾರಿಗೆ ನಾಕೌಟ್ ಹಂತ ಪ್ರವೇಶಿಸುವ ಅವಕಾಶ ಹೊಂದಿದೆ. ಡಿಯಾಲೊ ಗೋಲ್ ಹೊಡೆಯುವ ಮುನ್ನ ಪಂದ್ಯ ಸಂಪೂರ್ಣ ಈಕ್ವೆಡಾರ್ ಕೈಯಲ್ಲಿತ್ತು. 68ನೇ ನಿಮಿಷದಲ್ಲಿ ಇಕ್ವಾಡೋರ್ ಅತ್ಯುತ್ತಮ ಅವಕಾಶ ಹೊಂದಿತ್ತು. ದುರಾದೃಷ್ಟವಶಾತ್ ಗೋನ್ಜಾಲೊ ಪ್ಲಾಟಾ 25 ಯಾರ್ಡ್ ದೂರದಿಂದ ಹೊಡೆದ ಚೆಂಡನ್ನು ಐವರಿಕೋಸ್ಟ್ ಗೋಲಿ ಯಾಹಿಯಾ ಫೊಫಾನ ತಡೆದಿದ್ದರು.

ಐವರಿಕೋಸ್ಟ್ 1-0 ಇಕ್ವಾಡೋರ್
90ನೇ ನಿಮಿಷ - ಅಮದ್ ಡಿಯಾಲೊ (ಐವರಿಕೋಸ್ಟ್)

ಭಾರತಕ್ಕೆ ಸೂಪರ್ ಓವರ್ ಸೋಲು

ಶ್ರೀಲಂಕಾಗೆ ಜಯ

• **ಡಾಂಬುಲ್ಲಾ:** ಶ್ರೀಲಂಕಾ ಎ ಹಾಗೂ ಭಾರತ ಎ ನಡುವಿನ ಏಕದಿನ ಪಂದ್ಯವು ರೋಚಕ ಟೈ ಆಗಿದ್ದು, ಸೂಪರ್ ಓವರ್‌ನಲ್ಲಿ ಶ್ರೀಲಂಕಾ ಗೆಲುವು ದಾಖಲಿಸಿದೆ. ಕೊನೆಯ ಓವರ್‌ನಲ್ಲಿ 5 ರನ್ ಹೊಡೆದು ಸುಲಭದಲ್ಲಿ ಗೆಲ್ಲುವ ಪಂದ್ಯವನ್ನು ಸೂಪರ್ ಓವರ್‌ವರೆಗೆ ಎಳೆದುತಂದ ಶ್ರೀಲಂಕಾ ಕೊನೆಗೂ ಗೆಲುವಿನ ನಗೆ ಬೀರಿತು. ಟೈ ಫಲಿತಾಂಶ ಬಂದಿದ್ದರಿಂದ ಸೂಪರ್ ಓವರ್ ಆಡಿಸಲಾಗಿದ್ದು, ಈಗ 16 ರನ್ ಬಿಟ್ಟುಕೊಟ್ಟು ದುಬಾರಿಯಾದರು. ಅವಿಷ್ಕಾ ಫೆರ್ನಾಂಡೊ 5ನೇ ಎಸೆತವನ್ನು ಸಿಕ್ಸರ್ ಗಟ್ಟಿದ್ದರು. 17 ರನ್ ಗುರಿ ಪಡೆದ ಭಾರತ ಎ ಪರ ಯುವ ಬ್ಯಾಟರ್ ವೈಭವ್ ಸೂರ್ಯವಂಶಿ ಕ್ರೀಸ್‌ಗಿಳಿದಿದ್ದು, ಭಾರತ ಎ ಗೆಲುವಿನ ವಿಶ್ವಾಸದಲ್ಲಿತ್ತು. ಆದರೆ ಮುತುಲನ್ ಬೌಲಿಂಗ್ ಉತ್ತಮವಾಗಿದ್ದು, ಸುರ್ಯಾಂಶ್ ಶೆಡ್ಗೆ ಮೂರು ಎಸೆತಗಳಲ್ಲಿ 3 ರನ್ ಅಷ್ಟೇ ಮಾಡಿದ್ದರು. ಉಳಿದ ಮೂರು ಎಸೆತಗಳಿಂದ ಸೂರ್ಯವಂಶಿ 1 ಬೌಂಡರಿ ಸಹಿತ 6 ರನ್ ಗಳಿಸಿದರು. ಭಾರತ ಸೋಲೊಪ್ಪಿತು.

ಸಂಕ್ಷಿಪ್ತ ಸ್ಕೋರ್
ಭಾರತ ಎ 265/10(49.2): ಸೂರ್ಯಾಂಶ್ 72, ವಿಹ್ರಾಜ್ 51. ವಿಜಯಕಾಂತ್ 26ಕ್ಕೆ 3, ಶಿರಾಜ್ 33ಕ್ಕೆ 3.
ಶ್ರೀಲಂಕಾ ಎ 265/9(50): ಸಮರವಿಕ್ರಮ 93, ನಿರೋಶನ್ 37. ಬಡೋಣಿ 45ಕ್ಕೆ 2.

ಆಪದ್ಬಾಂಧವ ಕಮಾಡ!


• **ಆರ್ಲಿಂಗ್ಟನ್(ಅಮೆರಿಕ):** ಇನ್ನೇನು ಜಪಾನ್ 2026ರ ವಿಶ್ವಕಪ್‌ನಲ್ಲಿ ತನ್ನ ಮೊದಲ ಸೋಲುಂಡಿತು ಎನ್ನುವಷ್ಟರಲ್ಲಿ 89ನೇ ನಿಮಿಷದಲ್ಲಿ ಇಕ್ವಲೈಸರ್ ಗೋಲ್ ದಾಖಲಿಸುವ ಮೂಲಕ ನೆದರ್‌ಲೆಂಡ್ಸ್ ವಿರುದ್ಧದ ಸೋಲನ್ನು ತಪ್ಪಿಸಿದರು. ಸೋಮವಾರ ಎಫ್ ಗುಂಪಿನ ಪಂದ್ಯದಲ್ಲಿ ಜಪಾನ್ ತನಗಿಂತ ಮೇಲಿನ ರ‍್ಯಾಂಕ್‌ನ ನೆದರ್‌ಲೆಂಡ್ಸ್‌ಗೆ ಉತ್ತಮ ಹೋರಾಟ ನೀಡಿದ್ದು, ಸೋಲೊಪ್ಪಲಿಲ್ಲ. ಸಹ ಆಟಗಾರ ಕೊಕಿ ಒಗಾವಾ ನೀಡಿದ ಹೆಡ್ಡರ್ ಬಳಸಿಕೊಂಡು ಕಮಾಡ ಸ್ಕೋರ್ ಮಾಡಿದ್ದರು. ನೆದರ್‌ಲೆಂಡ್ ಗೋಲಿ ಬಾರ್ಟ್ ವರ್‌ಬ್ರುಗೆನ್ ತಡೆಯುವಲ್ಲಿ ವಿಫಲರಾದರು. ಪಂದ್ಯ ಡ್ರಾ ಫಲಿತಾಂಶ ಕಂಡಿತು.



ನೆದರ್‌ಲೆಂಡ್ಸ್ 2-2 ಜಪಾನ್
- 51ನೇ ನಿಮಿಷ - ವಾನ್ ಡಿಜಿಕೆ (ನೆದರ್‌ಲೆಂಡ್ಸ್)
- 57ನೇ ನಿಮಿಷ - ಕೀಟೊ ನಕಮುರ (ಜಪಾನ್)
- 64ನೇ ನಿಮಿಷ - ಕ್ರಿಸೆನ್ಸಿಯೊ ಸಮ್ಮರ್‌ವಿಲ್ಲೆ (ನೆದರ್‌ಲೆಂಡ್ಸ್)
- 89ನೇ ನಿಮಿಷ - ಡೈಚಿ ಕಮಾಡ

ಪದಬಂಧ

ರಾಜಾ ಸಂಗಮೇಶ ಹಿರೇಮಠ



6016

ಎಡದಿಂದ ಬಲಕ್ಕೆ
1.ನೋಡಲು ಆಕರ್ಷಕವಾಗಿರುವಂಥಾದ್ದು (4)
3.ಅನಿರೀಕ್ಷಿತ ಘಟನೆಯಿಂದ ಗಾಬರಿಯಾಗು (4)
6.ಪಕ್ಷಿಗಳ ಇಂಪಾದ ಶಬ್ದ (4)
7.ನಾಗರಹಾವು ಚಿತ್ರದ ಕೇಂದ್ರಪಾತ್ರ (4)
8.ಗರಿಯನ್ನು ಕಡೆಯಲ್ಲಿಟ್ಟುಕೊಂಡ ಕುಂಬಾರನ ಚಕ್ರ (3)
10.ವಾಣಿಜ್ಯ ವ್ಯವಹಾರ ಮಾಡುವವನು (3)
12.ಒಳ್ಳೆಯ ಮಗಳು-ಸುಪುತ್ರಿ (4)
13.ಬೆಲೆಯುಳ್ಳ ಮಣಿಗಳ ಗಣಿ-ಸಮುದ್ರ (4)
16.ಎಲ್ಲೆಯನ್ನು ಸೂಚಿಸಲು ನೆಟ್ಟ ಶಿಲೆ (4)
17.ರೋಗಿಗಳಿಗೆ ಚಿಕಿತ್ಸೆ ನೀಡುವ ಮನೆ (4)

ಮೇಲಿನಿಂದ ಕೆಳಕ್ಕೆ
1.ಈತ ಹಿರಿಯ ಸಹೋದರ (2)
2.ಚಿತ್ರದುರ್ಗದ ಪಾಳೆಗಾರರಲ್ಲಿ ಪ್ರಸಿದ್ಧ ನಾಯಕ (4)
4.ಸತ್ವ ಭಾವ ಹೊಂದಿರುವ ಸ್ತ್ರೀ (4)
5.ವಸ್ತು-ವಾಹನಗಳು ಪರಸ್ಪರ ಅಪ್ಪಳಿಸುವಿಕೆ (2)
7.ನೀಲಿ-ಕೆಂಪು ಬಣ್ಣದ ಸುಂದರ ಕಮಲ (3)
9.ಕೆಟ್ಟದ್ದನ್ನು ಕೆಲಸ ಮಾಡುವ ಸ್ಥಿತಿ ತರುವುದು (3)
11.ಹಳೆಯ ಕಾಲದ ಲೆಕ್ಕಪತ್ರ ಬರೆವ ಅಧಿಕಾರಿ (4)
12.ಕಲ್ಪವೃಕ್ಷವನ್ನು ಹೀಗೂ ಹೇಳುತ್ತೇವೆ (4)
14.ಪ್ರಾಣಿಯ ದೇಹದ ಒಂದು ಭಾಗ (2)
15.ಕಾಣದಾಗುವಿಕೆ-ಮರೆಯಾಗುವಿಕೆ (2)

6015 ಉತ್ತರ

ಎಡದಿಂದ ಬಲಕ್ಕೆ:
1.ಲುಪ್ತ 2.ಸಂನ್ಯಾಸ
4.ತಂಪು 6.ರಾಜದ್ರೋಹ
8.ಬಲಭಾಗ 11.ಕಡವರ
13.ಪಡಿತರ 15.ತೆಪ್ಪ
16.ಕವಲು 17.ಬಂಡಿ

ಮೇಲಿನಿಂದ ಕೆಳಕ್ಕೆ
: 1.ಬಡಕಲು
2.ಸಂಧ್ಯಾರಾಗ 3.ಸಹಾರಾ
5.ಮುರಹರ 7.ಜಡದೇಹ
9.ಭಾಗ್ಯವಂತ
10.ಸಂಪನ್ನತೆ
11.ಕಲ್ಲಿದ್ದಲು
12.ರಣಚಂಡಿ 14.ರಸಿಕ

ಕಿರುಸುದ್ದಿ

ಪಿಎಂಶ್ರೀ ಯೋಜನೆ ಜಾರಿ ಕುರಿತು ಚರ್ಚೆಯ ಬಳಿಕ ತೀರ್ಮಾನ

ಕಾಸರಗೋಡು: ಶಾಲೆಗಳ ಅಭಿವೃದ್ಧಿಯನ್ನು ಮುಂದಿರಿಸಿಕೊಂಡು ಕೇಂದ್ರ ಸರಕಾರ ಜಾರಿಗೊಳಿಸಿರುವ ಪಿಎಂಶ್ರೀ ಯೋಜನೆಯನ್ನು ಕೇರಳದಲ್ಲಿ ಜಾರಿಗೊಳಿಸುವ ವಿಷಯದ ಕುರಿತು ಯುಡಿಎಫ್‌ನಲ್ಲಿ ಚರ್ಚೆ ನಡೆಸಿದ ಬಳಿಕವಷ್ಟೇ ಯಾವುದೇ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ರಾಜ್ಯ ಶಿಕ್ಷಣ ಸಚಿವ ಎನ್. ಶಂಸುದ್ದೀನ್ ತಿಳಿಸಿದ್ದಾರೆ. ರಾಜಕೀಯ ನಿಲುವಿನಲ್ಲಿ ಸಡಿಲೀಕರಣ ತಂದು ಯಾವುದೇ ಯೋಜನೆಯನ್ನು ಜಾರಿಗೊಳಿಸುವಂತಿಲ್ಲ. ಶಾಲಾ ವಿದ್ಯಾರ್ಥಿಗಳು ವಾರಗಳಿಗೊಮ್ಮೆ ಸಮವಸ್ತ್ರದ ಬದಲು ತಮ್ಮ ಇಷ್ಟದ ಉಡುಪು ಧರಿಸಬೇಕೆಂಬ ಬೇಡಿಕೆ ವಿಷಯದಲ್ಲಿ ಸರಕಾರ ಈ ತನಕ ಯಾವುದೇ ತೀರ್ಮಾನ ಕೈಗೊಂಡಿಲ್ಲ. ತಜ್ಞರೊಂದಿಗೆ ಸಮಾಲೋಚನೆ ನಡೆಸಿದ ಬಳಿಕ ಈ ವಿಷಯದಲ್ಲಿ ಯಾವುದೇ ಅಂತಿಮ ತೀರ್ಮಾನಕ್ಕೆ ಬರಲಾಗುವುದು ಎಂದು ಸಚಿವರು ಹೇಳಿದ್ದಾರೆ.

ಪಿಯುಸಿ ವಿದ್ಯಾರ್ಥಿನಿ ನೇಣು ಬಿಗಿದು ಆತ್ಮಹತ್ಯೆ

ಉಳ್ಳಾಲ: ಪ್ರಥಮ ಪಿಯುಸಿ ವಿದ್ಯಾರ್ಥಿನಿಯೋರ್ವಳು ಮನೆಯ ಕೋಣೆಯೊಳಗೆ ನೇಣುಬಿಗಿದು ಆತ್ಮಹತ್ಯೆಗೈದ ಘಟನೆ ಭಾನುವಾರ ಸಂಜೆ ಸೋಮೇಶ್ವರ ಬಸ್ಸು ತಂಗುದಾಣದ ಬಳಿ ನಡೆದಿದೆ. ಸೋಮೇಶ್ವರ ಬಸ್ಸು ತಂಗುದಾಣದ ಬಳಿಯ ನಿವಾಸಿ ಶಾಂತಿ ಎಂಬವರ ಪುತ್ರಿ ಸಮನ್ವಿ (16) ಆತ್ಮಹತ್ಯೆಗೈದ ವಿದ್ಯಾರ್ಥಿನಿ. ಸಮನ್ವಿ ಸೋಮೇಶ್ವರದ ಖಾಸಗಿ ವಿದ್ಯಾ ಸಂಸ್ಥೆಯ ವಿಜ್ಞಾನ ವಿಭಾಗದಲ್ಲಿ ಪ್ರಥಮ ಪಿಯುಸಿ ಓದುತ್ತಿದ್ದಳು. ಭಾನುವಾರ ಸಂಜೆ ಮನೆಯಲ್ಲಿ ತಾಯಿ ಹಾಗೂ ಹಿರಿಯ ಸಹೋದರಿ ಇದ್ದಾಗ ಸ್ನಾನಕ್ಕೆಂದು ಕೋಣೆಗೆ ಸೇರಿದ ಸಮನ್ವಿ ಎಷ್ಟು ಹೊತ್ತಾದರೂ ಹೊರಬಾರದೆ ಇದ್ದು, ಮನೆ ಮಂದಿ ಮನೆಯ ಬಾಗಿಲು ಮುರಿದು ಒಳ ನುಗ್ಗಿದಾಗ ಆತ್ಮಹತ್ಯೆ ಮಾಡಿಕೊಂಡಿರುವುದು ಬೆಳಕಿಗೆ ಬಂದಿದೆ. ಉಳ್ಳಾಲ ಠಾಣಾ ಪೊಲೀಸರು ಮೃತ ದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಿ, ಯುಡಿಆರ್ ಪ್ರಕರಣ ದಾಖಲಿಸಿದ್ದಾರೆ. ಘಟನಾ ಸ್ಥಳದಲ್ಲಿ ಪೊಲೀಸರಿಗೆ ಡೆತ್ ನೋಟ್ ಲಭಿಸದ ಕಾರಣ ಸಮನ್ವಿ ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಮೃತ ಸಮನ್ವಿ ತಂದೆ, ತಾಯಿ, ಸಹೋದರಿಯನ್ನ ಆಗಲಿದ್ದಾಳೆ.

ಅಂಗಳಕ್ಕೆ ಮುರಿದು ಬಿದ್ದ ತೆಂಗಿನ ಮರ: ಪವಾಡ ಸದೃಶ್ಯರಾಗಿ ಪಾರಾದ ವ್ಯಕ್ತಿ

ಸುಳ್ಯ: ಮನೆಯ ಟ್ಯಾರೀಸ್ ಮೇಲಿನಿಂದ ಬೀಳುತ್ತಿದ್ದ ನೀರನ್ನು ಬಕೆಟ್‌ನಲ್ಲಿ ಸಂಗ್ರಹಿಸುವ ವೇಳೆಯಲ್ಲಿ ತೆಂಗಿನ ಮರ ಬಿದ್ದು ವ್ಯಕ್ತಿ ಪವಾಡ ಸದೃಶ್ಯವಾಗಿ ಪಾರಾದ ಘಟನೆ ಸೋಮವಾರ ನಡೆದಿದೆ. ನೀರು ಸಂಗ್ರಹಿಸುವ ವೇಳೆಯಲ್ಲಿ ತುಂಡಾಗಿ ತೆಂಗಿನ ಮರ ಬೀಳುವುದನ್ನು ಶಾಫಿ ಗಮನಿಸಿ ಅಲ್ಲಿಂದ ಓಡಿ ಹೋಗಿ ಅಪಾಯದಿಂದ ಪಾರಾಗಿದ್ದು ಇದೇ ಸ್ಥಳದಲ್ಲಿ ಘಟನೆ ಸಂಭವಿಸುವ ಮೊದಲು ಅವರ ತಾಯಿ ಆದೇ ಸ್ಥಳದಲ್ಲಿ ಕುಳಿತಿದ್ದು ಇದೀಗ ಮರ ಬೀಳುವ ದೃಶ್ಯ ಸಿಸಿ ಟಿವಿ ಚಿತ್ರ ಎಲ್ಲೆಡೆ ವೈರಲ್ ಆಗುತ್ತಿದೆ.

ಯುವತಿಯನ್ನು ವಸತಿ ಗೃಹಕ್ಕೆ ಕರೆದೊಯ್ದು ಕಟ್ಟಿ ಹಾಕಿ ಲೈಂಗಿಕ ಕಿರುಕುಳ: ಪ್ರಕರಣ ದಾಖಲು

ಕಾಸರಗೋಡು: ಪರಿಚಯ ಹೊಂದಿರುವ ಯುವತಿಯನ್ನು ನಗರದ ವಸತಿಗೃಹವೊಂದಕ್ಕೆ ಕರೆದೊಯ್ದು ಕಟ್ಟಿಹಾಕಿ ಲೈಂಗಿಕ ಕಿರುಕುಳ ನೀಡಿರುವುದಾಗಿ ಆರೋಪಿಸಿ ಯುವತಿಯೋರ್ವೆ ಕಾಸರಗೋಡು ಪೊಲೀಸರಿಗೆ ದೂರು ನೀಡಿದ್ದು, ಅದರಂತೆ ಪೊಲೀಸರು ಯುವಕನೋರ್ವನ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದ್ದಾರೆ. ಶನಿವಾರ ಘಟನೆ ನಡೆದಿದ್ದು, ದೂರು ನೀಡಿದ ಯುವತಿ ಕಾಸರಗೋಡು ನಗರ ಸಮೀಪದ ಪಂಚಾಯತ್ ವ್ಯಾಪ್ತಿಗೊಳಪಟ್ಟ ಪ್ರದೇಶವೊಂದರ ನಿವಾಸಿಯಾಗಿದ್ದಾಳೆ. ಆದರೆ ತನಿಖೆಯ ಅಂಗವಾಗಿ ಪೊಲೀಸರು ಆರೋಪಿಯ ಹೆಸರನ್ನು ಬಹಿರಂಗಪಡಿಸಿಲ್ಲ.

ವೀರಾಜಪೇಟೆಯಲ್ಲಿ ಗೋವಾದ ಪ್ರವಾಸಿಗ ಸಾವು

ಮಡಿಕೇರಿ: ಗೋವಾದಿಂದ ಕೊಡಗಿಗೆ ಆಗಮಿಸಿದ್ದ ಪ್ರವಾಸಿಗರೊಬ್ಬರು ರೆಸಾರ್ಟ್‌ನ ಈಜುಕೊಳದಲ್ಲಿ ಸಾವಿಗೀಡಾದ ಘಟನೆ ಸೋಮವಾರ ನಡೆದಿದೆ. ಗೋವಾದ ಪಣಜಿಯಿಂದ ವೀರಾಜಪೇಟೆ ಸಮೀಪದ ರೆಸಾರ್ಟ್‌ಗೆ ಆಗಮಿಸಿದ್ದ ಮನೋಜ್ ಆನಂದ್ (57) ಎಂಬವರೇ ಮೃತ ದುರ್ದೈವಿ. ಸೋಮವಾರ ಮಧ್ಯಾಹ್ನ 2 ಗಂಟೆಗೆ ಪತ್ನಿ ಮತ್ತು ಇಬ್ಬರು ಮಕ್ಕಳೊಂದಿಗೆ ರೆಸಾರ್ಟ್‌ಗೆ ಆಗಮಿಸಿದ್ದ ಮನೋಜ್ ಆನಂದ್ 2.30ರ ಸಮಯದಲ್ಲಿ ಈಜುಕೊಳಕ್ಕೆ ಇಳಿದಿದ್ದ ಸಂದರ್ಭ ಉಸಿರಾಟದ ತೊಂದರೆ ಉಂಟಾಗಿದ್ದು, ನೀರಿನಲ್ಲಿ ಮುಳುಗಿದರೆನ್ನಲಾಗಿದೆ. ಬಳಿಕ ರೆಸಾರ್ಟ್ ಸಿಬ್ಬಂದಿಗಳು ಅವರನ್ನು ನೀರಿನಿಂದ ಹೊರ ತೆಗೆದು ವೀರಾಜಪೇಟೆ ಸರಕಾರಿ ಆಸ್ಪತ್ರೆಗೆ ಕರೆದೊಯ್ದ ಸಂದರ್ಭ ಪರೀಕ್ಷಿಸಿದ ವೈದ್ಯರು ಮನೋಜ್ ಆನಂದ್ ಮೃತಪಟ್ಟಿರುವುದಾಗಿ ದೃಢಪಡಿಸಿದ್ದಾರೆ. ಘಟನೆಯ ಮಾಹಿತಿ ಅರಿತು ಸ್ಥಳಕ್ಕೆ ವೀರಾಜಪೇಟೆ ಗ್ರಾಮಾಂತರ ಠಾಣಾಧಿಕಾರಿ ಮತ್ತು ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಮೃತದೇಹವನ್ನು ವೀರಾಜಪೇಟೆ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಲಾಗಿದೆ. ನೀರಿಗೆ ಇಳಿದ ಸಂದರ್ಭ ಹೃದಯಾಘಾತ ಆಗಿರುವ ಸಾಧ್ಯತೆಯಿದೆ ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ. ಮರಣೋತ್ತರ ಪರೀಕ್ಷೆ ಬಳಿಕ ಪ್ರವಾಸಿಯ ಸಾವಿಗೆ ನಿಖರ ಕಾರಣ ತಿಳಿದು ಬರಬೇಕಿದೆ.

ಕಾರು ಡಿಕ್ಕಿ: ಯುವಕ ಸಾವು

ಮಂಗಳೂರು: ಕಾವೂರು ಕೆಐಓಸಿಎಲ್ ಬಳಿ ನಡೆದ ರಸ್ತೆ ಅಪಘಾತದಲ್ಲಿ ಕಾವೂರು ನಿವಾಸಿ ವಿನೋದ್ (28) ಎಂಬವರು ಮೃತಪಟ್ಟಿದ್ದಾರೆ. ಅವರು ರಸ್ತೆ ದಾಟುತ್ತಿದ್ದ ಸಂದರ್ಭ ಕಾರು ಡಿಕ್ಕಿಯಾಗಿ ಗಂಭೀರ ಗಾಯಗೊಂಡಿದ್ದರು. ತಕ್ಷಣ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಸಾವನ್ನಪ್ಪಿದ್ದಾರೆ. ಜೂ.14ರಂದು ರಾತ್ರಿ 8 ಗಂಟೆಗೆ ವಿನೋದ್ ಅವರು ಬೊಂದೇಲ್‌ನ ನಿರ್ಮಾಣ ಹಂತದ ಕಟ್ಟಡದಿಂದ ಕಾವೂರು ಕೆಐಓಸಿಎಲ್ ಟೌನ್‌ಶಿಪ್ ಬಳಿಯಿರುವ ಗೂಡಂಗಡಿಗೆ ಸಾಮಾನು ಖರೀದಿಸಲು ಹೋಗಿದ್ದರು. ಸಾಮಾನು ಖರೀದಿಸಿ ರಸ್ತೆಯನ್ನು ದಾಟುತ್ತಿದ್ದ ಸಂದರ್ಭ ದೀಕ್ಷಿತ್ ಎಂಬಾತ ಚಲಾಯಿಸುತ್ತಿದ್ದ ಕಾರು ವಿನೋದ್ ಅವರಿಗೆ ಡಿಕ್ಕಿಯಾಗಿತ್ತು. ಮಂಗಳೂರು ಉತ್ತರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಗಳೂರು ಏರ್‌ಪೋರ್ಟ್‌ಗೆ ಕ್ಯಾಟ್ ಐ ಲ್ಯಾಂಡಿಂಗ್ ಲೈಟ್ | ದೇಶದ ಮೊದಲ, ಏಷ್ಯಾದ ದ್ವಿತೀಯ ಹೆಗ್ಗಳಿಕೆ

'ಟೇಬಲ್ ಟಾಪ್' ಇನ್ನಷ್ಟು ಸುರಕ್ಷಿತ

ಮಂಗಳೂರು: ನಾಗರಿಕ ವಿಮಾನಯಾನ ನಿರ್ದೇಶನಾಲಯದ(ಡಿಜಿಸಿಎ)ಅನುಮೋದನೆಯ ನಂತರ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ರನ್ ವೇ 24ಕ್ಕಾಗಿ ನಿಖರ ಸಂಪರ್ಕ ಬೆಳಕಿನ (ಪಿಎಎಲ್) ವರ್ಗ 1 (ಕ್ಯಾಟ್-ಐ ಲ್ಯಾಂಡಿಂಗ್ ಲೈಟ್) ವ್ಯವಸ್ಥೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಿದೆ. ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆಯ ಸುರಕ್ಷತೆ ಮತ್ತು ಲ್ಯಾಂಡಿಂಗ್ ನಿಖರತೆಯನ್ನು ಹೆಚ್ಚಿಸುವಲ್ಲಿ ಇದು ಮಹತ್ವದ ಮೈಲಿಗಲ್ಲಾಗಿದೆ. ವಿಶೇಷವೆಂದರೆ, ಈ ಸೌಲಭ್ಯ ಏಷ್ಯಾದಲ್ಲಿ ಎರಡನೆಯದಾಗಿದೆ.

ಪಿಎಎಲ್ ವರ್ಗ 1 ವ್ಯವಸ್ಥೆಯನ್ನು ಲ್ಯಾಂಡಿಂಗ್‌ನ ನಿರ್ಣಾಯಕ ಅಂತಿಮ ಹಂತಗಳಲ್ಲಿ ಪೈಲಟ್‌ಗಳಿಗೆ ವರ್ಧಿತ ದೃಶ್ಯ ಮಾರ್ಗದರ್ಶನವನ್ನು ಒದಗಿಸಲು, ವಿಶೇಷವಾಗಿ ಟೇಬಲ್ ಟಾಪ್ ಸೌಲಭ್ಯದಲ್ಲಿ ಕಡಿಮೆ ಗೋಚರತೆಯ ಪರಿಸ್ಥಿತಿಗಳಿಗೆ ಅನುಗುಣವಾಗಿ ವಿನ್ಯಾಸಗೊಳಿಸಲಾಗಿದೆ. ಈ ಕಾರ್ಯಾರಂಭದೊಂದಿಗೆ ವಿಮಾನ ನಿಲ್ದಾಣವು ನಿಯಂತ್ರಕ ಅನುಸರಣೆಯನ್ನು ಪೂರೈಸುವಾಗ ಸುರಕ್ಷಿತ, ವಿಶ್ವಾಸಾರ್ಹ ಮತ್ತು ಪರಿಣಾಮಕಾರಿ ವಿಮಾನ ಕಾರ್ಯಾಚರಣೆಗಳಿಗೆ ತನ್ನ ಬದ್ಧತೆಯನ್ನು ಮತ್ತಷ್ಟು ಬಲಪಡಿಸುತ್ತದೆ.

ಈ ಯೋಜನೆಯು ಭಾರತದ ಅತ್ಯಂತ ವಿಶಿಷ್ಟ ಮತ್ತು ಮೊದಲ ರೀತಿಯ ಏರ್ ಫೀಲ್ಡ್ ಲೈಟಿಂಗ್ ಅಳವಡಿಕೆಗಳಲ್ಲಿ ಒಂದಾಗಿದೆ. ಅಪ್ರೋಚ್ ಲೈಟಿಂಗ್ ಸಿಸ್ಟಮ್ ವಿಶೇಷವಾಗಿ ಇಂಜಿನಿಯರಿಂಗ್ ಮಾಡಿದ ಗೋಪುರಗಳ ಮೇಲೆ ಅಳವಡಿಸಲಾದ ಏರ್ ಫೀಲ್ಡ್ ಲೈಟಿಂಗ್ ಇಂಟೆಲಿಜೆಂಟ್ ಮ್ಯಾನೇಜ್‌ಮೆಂಟ್ ಸಿಸ್ಟಮ್ಸ್ (ಎಎಲ್ ಐಎಂಎಸ್) ಹೊಂದಿದೆ. ಇದು ರನ್ ವೇ ಹೊಸ್ತಿಲಿನಿಂದ 900 ಮೀಟರ್ ಹೊರಕ್ಕೆ ವಿಸ್ತರಿಸುತ್ತದೆ. ಈ ಗೋಪುರಗಳಲ್ಲಿ ಹೆಚ್ಚಿನವು ಕುತುಬ್ ಮಿನಾರ್‌ಗಿಂತ ಎತ್ತರಕ್ಕೆ ಏರುತ್ತವೆ. ಈ ವ್ಯವಸ್ಥೆಯ ಪ್ರಮುಖ ಅಂಶವೆಂದರೆ ನಿರ್ಮಾಣ ಹಂತದುದ್ದಕ್ಕೂ ನಿರ್ವಹಿಸಲಾದ ಶೂನ್ಯ-ಅಪಘಾತ ದಾಖಲೆ, ಇದು ವಿಮಾನ ನಿಲ್ದಾಣದ ಸುರಕ್ಷತೆ, ಯೋಜನೆ ಮತ್ತು ಕಾರ್ಯಗತಗೊಳಿಸುವಿಕೆಯ ಅತ್ಯುನ್ನತ ಮಾನದಂಡಗಳಿಗೆ ಪೂರಕವಾಗಿರುವುದರಿಂದ ವಾಯುಯಾನ ಸುರಕ್ಷತೆಯನ್ನು ಹೆಚ್ಚಿಸಿದಂತಾಗಿದೆ.





ವಿಶ್ವಾಸಾರ್ಹತೆಯ ಹೆಚ್ಚಳ
ಪಿಎಎಲ್ ವ್ಯವಸ್ಥೆಯ ಕಾರ್ಯಾರಂಭವು ವಾಯುಯಾನ ಸುರಕ್ಷತೆ ಮತ್ತು ಪ್ರಯಾಣಿಕರ ವಿಶ್ವಾಸವನ್ನು ಹೆಚ್ಚಿಸಲು ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವತ್ತ ವಿಮಾನ ನಿಲ್ದಾಣದ ನಿರಂತರ ಗಮನವನ್ನು ಪ್ರತಿಬಿಂಬಿಸುತ್ತದೆ ಎಂದು ವಿಮಾನ ನಿಲ್ದಾಣದ ವಕ್ತಾರರು ತಿಳಿಸಿದ್ದಾರೆ.

- ಟೇಬಲ್ ಟಾಪ್ ಸೌಲಭ್ಯದಲ್ಲಿ ಕಡಿಮೆ ಗೋಚರತೆಯ ಪರಿಸ್ಥಿತಿಗಳಿಗೆ ಅನುಗುಣವಾಗಿ ವಿನ್ಯಾಸಗೊಳಿಸಲಾಗಿದೆ.
- ಈ ಯೋಜನೆಯು ಭಾರತದ ಅತ್ಯಂತ ವಿಶಿಷ್ಟ ಮತ್ತು ಮೊದಲ ರೀತಿಯ ಏರ್ ಫೀಲ್ಡ್ ಲೈಟಿಂಗ್ ಅಳವಡಿಕೆಗಳಲ್ಲಿ ಒಂದಾಗಿದೆ.

ಸುಧಾರಿತ ರನ್ ವೇ ಗೋಚರತೆ, ವರ್ಧಿತ ಸಾಂದರ್ಭಿಕ ಜಾಗೃತಿ, ಟೇಬಲ್ ಟಾಪ್ ವಿಮಾನ ನಿಲ್ದಾಣದಲ್ಲಿ ಸುರಕ್ಷಿತ ಕಾರ್ಯಾಚರಣೆಗಳು, ಉತ್ತಮ ದೃಶ್ಯ ಸೂಚನೆಗಳು, ಸುಗಮ ಲ್ಯಾಂಡಿಂಗ್‌ಗಳಿಗೆ ಸಹಾಯ ಮಾಡುತ್ತವೆ, ಕಾರ್ಯಾಚರಣೆಯ ದಕ್ಷತೆಯನ್ನು ಸುಧಾರಿಸುತ್ತವೆ ಮತ್ತು ಅಡೆತಡೆಗಳನ್ನು ಕಡಿಮೆ ಮಾಡುತ್ತವೆ, ಸುಧಾರಿತ ಬೆಳಕಿನ ನಿಯಂತ್ರಣಗಳೊಂದಿಗೆ ಏಕೀಕರಣ: ಎಎಲ್‌ಐಎಂಎಸ್ ಬಳಕೆಯು ಕೇಂದ್ರೀಕೃತ ಮೇಲ್ವಿಚಾರಣೆ ಮತ್ತು ವಾಯುನೆಲೆ ಬೆಳಕಿನ ವ್ಯವಸ್ಥೆಗಳ ಸಮರ್ಥ ನಿರ್ವಹಣೆಯನ್ನು ಖಚಿತಪಡಿಸುತ್ತದೆ. ಪಿಎಎಲ್ ವ್ಯವಸ್ಥೆಯು ವಿಮಾನ ನಿಲ್ದಾಣವು ಕೈಗೊಳ್ಳುತ್ತಿರುವ ಏರ್ ಸೈಡ್ ವರ್ಧನೆಗಳಿಗೆ ಪೂರಕವಾಗಿದ್ದು, ಇದರಲ್ಲಿ ರನ್‌ವೇ ಲೈಟಿಂಗ್ ಮತ್ತು ಸುರಕ್ಷತಾ ಮೂಲ ಸೌಕರ್ಯದಲ್ಲಿನ ನವೀಕರಣಗಳು ಸೇರಿವೆ.

ಪಿಎಎಲ್ ವೈಶಿಷ್ಟ್ಯ
ಎತ್ತರದ ಲ್ಯಾಟಿಸ್ ರಚನೆಗಳ ಮೇಲೆ ನಿಖರವಾದ ವಿಧಾನದ ದೀಪಗಳನ್ನು ಅಳವಡಿಸುವುದನ್ನು ಒಳಗೊಂಡಿದ್ದು, ಇದು ಜಾಗತಿಕವಾಗಿ ಅಪರೂಪದ ವಿಧಾನವಾಗಿದೆ. 17 ಸಂಖ್ಯೆಯ ಪ್ರತಿ ಜಾಲರಿ ರಚನೆಯು 4 ದೀಪಗಳನ್ನು ಹೊಂದಿರುವ ಬ್ಯಾರೆಟ್ ಮತ್ತು ಮಧ್ಯದಲ್ಲಿ ಅನುಕ್ರಮ ಮಿನುಗುವ ಬೆಳಕನ್ನು ಹೊಂದಿದೆ. ನಿರ್ವಹಣೆಗಾಗಿ ಬ್ಯಾರೆಟ್‌ಗಳನ್ನು ನೆಲದ ಮಟ್ಟಕ್ಕೆ ಇಳಿಸಬಹುದು.


ಬಾವಿಗೆ ಬಿದ್ದ ಬೆಕ್ಕನ್ನು ರಕ್ಷಿಸಲು ಹೋಗಿ ಸಿಲುಕಿಕೊಂಡಿದ್ದ ಅರ್ಚಕನ ರಕ್ಷಣೆ

ಕಾರ್ಕಳ: ಬಾವಿಗೆ ಬಿದ್ದ ಬೆಕ್ಕನ್ನು ರಕ್ಷಿಸಲು ಮುಂದಾಗಿ ಬಾವಿಯೊಳಗೆ ಸಿಲುಕಿಕೊಂಡಿದ್ದ ಅರ್ಚಕರೊಬ್ಬರನ್ನು ಕಾರ್ಕಳ ಅಗ್ನಿಶಾಮಕ ದಳದ ಸಿಬ್ಬಂದಿಗಳು ರಕ್ಷಿಸಿದ ಘಟನೆ ಕಾರ್ಕಳದ ಪುಲ್ಕೆರಿ ಬೈಪಾಸಿನಲ್ಲಿ ನಡೆದಿದೆ.

ಸೋಮವಾರ ಬೆಳಿಗ್ಗೆ 7.15ರ ವೇಳೆಗೆ ಈ ಘಟನೆ ನಡೆದಿದೆ.

ಅಗ್ನಿಶಾಮಕ ದಳಕ್ಕೆ ಬಂದ ಕರೆ ಅನ್ವಯ ಅಗ್ನಿಶಾಮಕ ದಳದ ಸಿಬ್ಬಂದಿಯರು ಘಟನಾ ಸ್ಥಳಕ್ಕೆ ತೆರಳಿದಾಗ ಬಾವಿಯಲ್ಲಿ ನಾರಾಯಣ ಭಟ್ಟ (48) ಎಂಬವರು ಸ್ಥಳೀಯ ಬಾವಿಯೊಳಗೆ ಸಿಲುಕಿಕೊಂಡಿದ್ದರು.

ಅಗ್ನಿಶಾಮಕ ದಳದ ಸಿಬ್ಬಂದಿಯರು ಕಾರ್ಯಪ್ರವೃತ್ತಗೊಂಡು ಕೂಡಲೇ ನಾರಾಯಣ ಭಟ್ಟ ಅವರನ್ನು ಬಾವಿಯಿಂ ದ ಮೇಲಕ್ಕೇತಿ ಪ್ರಾಣ ಉಳಿಸಿದ್ದಾರೆ.



- ಕಾರ್ಕಳದ ಪುಲ್ಕೆರಿ ಬೈಪಾಸಿನಲ್ಲಿ ನಡೆದ ಘಟನೆ
- ಬಾವಿಯೊಳಗೆ ಸಿಲುಕಿಕೊಂಡಿದ್ದ ಅರ್ಚಕರೊಬ್ಬರ ರಕ್ಷಣೆ

ಅಗ್ನಿಶಾಮಕದಳದ ಠಾಣಾಧಿಕಾರಿ ಚಂದ್ರಶೇಖರ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಪ್ರಮುಖ ಅಗ್ನಿಶಾಮಕ ದಳದ ರೂಪೇಶ್ ಅವರು ಬಾವಿಗೆ ಇಳಿದು ನಾರಾಯಣ ಭಟ್ಟ ಅವರ ಪ್ರಾಣ ಉಳಿಸಿದ್ದಾರೆ.

ಅಗ್ನಿಶಾಮಕ ದಳದ ಸಿಬ್ಬಂದಿಯರಾದ ದಿನೇಶ್, ಭೀಮಪ್ಪ, ಗಣೇಶ್, ಸುರೇಶ್ ಹಾಗೂ ಚಾಲಕ ಮುಜಾಮೀರ್ ಸಹಕರಿಸಿದರು.

ಗುದದ್ವಾರದಲ್ಲಿರಿಸಿ ಸಾಗಿಸುತ್ತಿದ್ದ 1.87 ಕೋಟಿ ರೂಪ್ಯಾ ಮೌಲ್ಯದ ಚಿನ್ನ ವಶಕ್ಕೆ

ಕಾಸರಗೋಡು: ಕಣ್ಣೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ತಂಡ ನಡೆಸಿದ ಕಾರ್ಯಾಚರಣೆಯಲ್ಲಿ 1.87 ಕೋಟಿ ರೂ. ಮೌಲ್ಯದ 1281.7 ಗ್ರಾಂ ಚಿನ್ನ ಪತ್ತೆಹಚ್ಚಿ ವಶಪಡಿಸಿಕೊಂಡಿದೆ. ಇದಕ್ಕೆ ಸಂಬಂಧಿಸಿ ಕುಂಬಳೆ ನಿವಾಸಿ ಅಬ್ದುಲ್ ರಶೀದ್ (24) ಎಂಬಾತನನ್ನು ಕಸ್ಟಮ್ಸ್ ತಂಡ ಬಂಧಿಸಿ ಸಮಗ್ರ ವಿಚಾರಣೆ ನಡೆಸಿದೆ.

ಆತ ಶಾರ್ಜಾದಿಂದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನದಲ್ಲಿ ಭಾನುವಾರ ಬಂದಿಳಿದಿದ್ದನು. ಆಗ ಆತನನ್ನು ತಪಾಸಣೆಗೊಳಪಡಿಸಿದಾಗ ಮಿಶ್ರಿತ ರೂಪದ ನಾಲ್ಕು ಚಿನ್ನದ ಮಾತ್ರೆಗಳನ್ನು ಆತನ ಗುದದ್ವಾರದಲ್ಲಿ ಬಚ್ಚಿಟ್ಟ ಸ್ಥಿತಿಯಲ್ಲಿ ಪತ್ತೆಯಾಯಿತೆಂದು ಕಸ್ಟಮ್ಸ್ ತಂಡ ತಿಳಿಸಿದೆ.

ಕಲ್ಲಿಕೋಟೆ ಸೈಬರ್ ಪೊಲೀಸರು ದಾಖಲಿಸಿಕೊಂಡಿರುವ ಪ್ರಕರಣವೊಂದರಲ್ಲೂ ಅಬ್ದುಲ್ ರಶೀದ್ ಆರೋಪಿಯಾಗಿದ್ದಾನೆ. ಕಲ್ಲಿಕೋಟೆ ರಾಮನಾಟ್ಟುಕರೆ ನಿವಾಸಿಗಳಾದ ದಂಪತಿಯಿಂದ ಶೇರ್ ಟ್ರೇಡಿಂಗ್ ಕಂಪೆನಿಯ ಹೆಸರಲ್ಲಿ ಒಂದು ಕೋಟಿ ರೂ. ಎಗರಿಸಿದ ದೂರಿನಂತೆ ಆ ದಂಪತಿ ನೀಡಿದ ದೂರಿನಂತೆ ಕಲ್ಲಿಕೋಟೆ ಸೈಬರ್ ಪೊಲೀಸರು ಅಬ್ದುಲ್ ರಶೀದ್‌ನ ವಿರುದ್ಧ ಈ ಹಿಂದೆ ಪ್ರಕರಣ ದಾಖಲಿಸಿಕೊಂಡಿದ್ದರು. ಅದಕ್ಕೆ ಸಂಬಂಧಿಸಿ ಪೊಲೀಸರು ಶೋಧ ನಡೆಸಿದಾಗ ಆತ ವಿದೇಶಕ್ಕೆ ಪರಾರಿಯಾಗಿದ್ದನು. ನಂತರ ಭಾನುವಾರ ಮುಂಜಾನೆ ಕಣ್ಣೂರು ವಿಮಾನ ನಿಲ್ದಾಣದಲ್ಲಿ ಬಂದಿಳಿಯುತ್ತಿದ್ದಂತೆ ಆ ಪ್ರಕರಣಕ್ಕೆ ಸಂಬಂಧಿಸಿ ವಿಮಾನ ನಿಲ್ದಾಣದ ಎಮಿಗ್ರೇಷನ್ ವಿಭಾಗ ವಶಕ್ಕೆ ತೆಗೆದುಕೊಂಡಿತ್ತು. ನಂತರ ಕಸ್ಟಮ್ಸ್ ತಂಡ ನಡೆಸಿದ ಶೋಧದಲ್ಲಿ ಆತನಿಂದ ಚಿನ್ನ ಪತ್ತೆಯಾಗಿದೆ. ಬಂಧಿತನನ್ನು ಕಣ್ಣೂರಿನ ನ್ಯಾಯಾಲಯದಲ್ಲಿ ಹಾಜರುಪಡಿಸಿದ ಬಳಿಕ ನ್ಯಾಯಾಂಗ ಬಂಧನದಲ್ಲಿರಿಸಲಾಗಿದೆ.

- ಕಸ್ಟಮ್ಸ್ ತಂಡ ನಡೆಸಿದ ಕಾರ್ಯಾಚರಣೆಯಲ್ಲಿ 1.87 ಕೋಟಿ ರೂ. ಮೌಲ್ಯದ 1281.7 ಗ್ರಾಂ ಚಿನ್ನ ಪತ್ತೆಹಚ್ಚಿ ವಶಪಡಿಸಿಕೊಂಡಿದೆ.
- ಆತ ಶಾರ್ಜಾದಿಂದ ಏರ್ ಇಂಡಿ ಯಾ ಎಕ್ಸ್‌ಪ್ರೆಸ್ ವಿಮಾನದಲ್ಲಿ ಭಾನುವಾರ ಬಂದಿಳಿದಿದ್ದನು.
- ದೂರಿನಂತೆ ಕಲ್ಲಿಕೋಟೆ ಸೈಬರ್ ಪೊಲೀಸರು ಅಬ್ದುಲ್ ರಶೀದ್‌ನ ವಿರುದ್ಧ ಈ ಹಿಂದೆ ಪ್ರಕರಣ ದಾಖಲಿಸಿಕೊಂಡಿದ್ದರು.

ಮುಂಗಾರು ಮಳೆ ಏಕಾಏಕಿ ಮಾಯ: ಕರಾವಳಿಯಲ್ಲಿ ಮತ್ತೆ ಬಿರು ಬಿಸಿಲು

ಮಂಗಳೂರು: ಕಳೆದ ಒಂದು ವಾರದಿಂದ ಕರಾವಳಿಯಾದ್ಯಂತ ಉತ್ತಮ ಮಳೆಯಾಗಿದ್ದು ಸೋಮವಾರ ಕೊಂಚ ಬಿಡುವು ಪಡೆದಿತ್ತು.

ದಕ್ಷಿಣ ಕನ್ನಡ ಮತ್ತು ಉಡುಪಿ ಭಾಗದಲ್ಲಿ ಸೋಮವಾರ ಬಿಸಿಲಿನ ವಾತಾವರಣ ಕಂಡುಬಂದಿದೆ. ಕರಾವಳಿ ಮತ್ತು ಮಲೆನಾಡು ಭಾಗದಲ್ಲಿ ಮುಂಗಾರು ಮಾರುತಗಳು ನಿರೀಕ್ಷಿತ ಮಟ್ಟದಲ್ಲಿ ಚುರುಕಾಗದ ಹಿನ್ನೆಲೆಯಲ್ಲಿ, ಪ್ರಸಕ್ತ ವಾರದಲ್ಲಿ ಸಾಧಾರಣ ಮಳೆಯ ವಾತಾವರಣ ಮುಂದುವರಿಯುವ ಸಾಧ್ಯತೆಯಿದೆ. ಮಧ್ಯಾಹ್ನದ ಬಳಿಕ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣ ಭಾಗಗಳಾದ ಬೆಳ್ತಂಗಡಿ, ಸುಳ್ಯ ಹಾಗೂ ಚಾರ್ಮಾಡಿ ಸುತ್ತಮುತ್ತಲಿನ ಘಟ್ಟ ಪ್ರದೇಶಗಳಲ್ಲಿ ಚದುರಿದಂತೆ ಸಾಧಾರಣ ಮಳೆಯಾಗಿದೆ. ಸೋಮವಾರ ಬೆಳಗ್ಗಿನ ವರೆಗೆ ಕಳೆದ 24 ಗಂಟೆಯಲ್ಲಿ ದ.ಕ ಜಿಲ್ಲೆಯಲ್ಲಿ 10.7 ಮಿಮಿ ಮಳೆಯಾಗಿದೆ.

- ಪ್ರಸಕ್ತ ವಾರದಲ್ಲಿ ಸಾಧಾರಣ ಮಳೆ ಸಾಧ್ಯತೆಯಿದೆ.
- ಕಳೆದ 24 ಗಂಟೆಯಲ್ಲಿ ದ.ಕ ಜಿಲ್ಲೆಯಲ್ಲಿ 10.7 ಮಿ.ಮಿ ಮಳೆ

ಸುಳ್ಯ ತಾಲೂಕಿನೆಲ್ಲೆಡೆ ಬೀಸಿದ ಭಾರೀ ಗಾಳಿಗೆ ವಿದ್ಯುತ್ ಕಂಬಗಳು ಧರಾಶಾಹಿ



ಸುಳ್ಯ: ಸುಳ್ಯ ವ್ಯಾಪ್ತಿಯಲ್ಲಿ ಸೋಮವಾರ ಮಧ್ಯಾಹ್ನ ಬೀಸಿದ ಭಾರೀ ಗಾಳಿಗೆ ತಾಲೂಕಿನ ನಾನಾ ಕಡೆಗಳಲ್ಲಿ 30 ವಿದ್ಯುತ್ ಕಂಬಗಳು ಹಾಗೂ ವಿದ್ಯುತ್ ಪರಿವರ್ತಕ ಧರಾ ಶಾಯಿಯಾದ ಘಟನೆ ನಡೆದಿದೆ.

ಸುಳ್ಯ ತಾಲೂಕಿನ ಆಲೆಟ್ಟಿ ಪೈಂಬಚ್ಚಾಲು, ಸುಳ್ಯ ಕಸಬಾ ಗ್ರಾಮದ ದುಗಲಡ್ಕ, ಬೊಳುಬೈಲು, ಅಜ್ಜಾವರ ಗ್ರಾಮದ ಅಡ್ಪಂಗಾಯ, ಕರ್ಲಪ್ಪಾಡಿ ಸೇರಿದಂತೆ ನಾನಾ ಕಡೆಗಳಲ್ಲಿ ಸುಮಾರು 30 ಕಡೆಗಳಲ್ಲಿ ವಿದ್ಯುತ್ ಕಂಬಗಳು ಹಾನಿಗೊಂಡಿದ್ದರೆ ಮಂಡೆಕೋಲು ಗ್ರಾಮದ ಡೆಂಜಿಗುರಿ ಎಂಬಲ್ಲಿ ವಿದ್ಯುತ್ ಪರಿವರ್ತಕ ಹಾನಿಯಾಗಿದೆ. ಉಳಿದಂತೆ ತಾಲೂಕಿನ ನಾನಾ ಭಾಗಗಳಲ್ಲಿ ವಿದ್ಯುತ್ ತಂತಿಗಳಿಗೆ ಹಾನಿಯಾಗಿದೆ.

ಮಾಣಿಲ ಗ್ರಾಮದ ಮಾಣಿ ಮೂಲೆ ನಿವಾಸಿ ರಘು ರಾಮ ಪಾತಾಳಿ ಬಿನ್ ಚಂದು ಪಾತಾಳಿ ರವರ ವಾಸ್ತವ್ಯದ ಮನೆ ಮೇಲೆ ಮರ ಬಿದ್ದು ಹಾನಿ, ಯಾವುದೇ ಪ್ರಾಣ ಹಾನಿಯಿಲ್ಲ.



ದನಗಳ ಗುದ್ದಾಟ: ಹಗ್ಗ ಸಿಲುಕಿ ಗಾಯಗೊಂಡ ವೃದ್ಧೆ ಸಾವು

ಉಡುಪಿ: ಮನೆಯ ದನಗಳನ್ನು ಮೇಯಿಸಲು ಕರೆದುಕೊಂಡು ಹೋಗುತ್ತಿದ್ದಾಗ ಎರಡು ದನಗಳು ಪರಸ್ಪರ ಗುದ್ದಾಡಿಕೊಂಡ ಪರಿಣಾಮ, ಕೈಯಲ್ಲಿದ್ದ ಹಗ್ಗ ಕುತ್ತಿಗೆಗೆ ಸಿಲುಕಿ ಗಂಭೀರವಾಗಿ ಗಾಯಗೊಂಡಿದ್ದ ವೃದ್ಧೆಯೊಬ್ಬರು ಒಂಬತ್ತು ದಿನಗಳ ಕಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಬೈಂದೂರು ತಾಲೂಕಿನ ಜಡ್ಕಲ್ ಗ್ರಾಮದ ಹೆದ್ದಾರಿ ಮನೆ ನಿವಾಸಿ ಮೂಕಾಂಬು (61) ಮೃತಪಟ್ಟ ದುರ್ದೈವಿ.

ಜೂನ್ 6ರಂದು ಮಧ್ಯಾಹ್ನ ಮೂಕಾಂಬು ಅವರು ದನಗಳನ್ನು ಮೇಯಿಸಲು ಕರೆದುಕೊಂಡು ಹೋಗುತ್ತಿದ್ದಾಗ ಎರಡು ದನಗಳು ಒಮ್ಮೆಲೇ ಗುದ್ದಾಡಿಕೊಂಡಿವೆ. ಈ ವೇಳೆ ಕೈಯಲ್ಲಿದ್ದ ದನದ ಹಗ್ಗವು ಅವರ ಕುತ್ತಿಗೆಗೆ ಬಿಗಿಯಾಗಿ ಸಿಲುಕಿಕೊಂಡಿದ್ದರಿಂದ ಅವರು ಸ್ಥಳದಲ್ಲೇ ಕುಸಿದು ಬಿದ್ದಿದ್ದರು. ತಕ್ಷಣ ಕುಟುಂಬಸ್ಥರು ಅವರನ್ನು ಕುಂದಾಪುರದ ವಿನಯ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿದ್ದರು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲ ಕೆಎಂಸಿ ಆಸ್ಪತ್ರೆ ಮತ್ತು ಉಡುಪಿಯ ಅಜ್ಜರಕಾಡು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಜೂನ್ 15ರಂದು ಬೆಳಿಗ್ಗೆ 7.10ಕ್ಕೆ ಚಿಕಿತ್ಸೆ ಫಲಕಾರಿಯಾಗದೆ ಅವರು ಕೊನೆಯುಸಿರೆಳೆದಿದ್ದಾರೆ.

ಮೃತರ ಮಗ ಉದಯ್ ನಾಯ್ಕ್ ನೀಡಿದ ದೂರಿನಂತೆ ಕೊಲ್ಲೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇನ್ನು ನೆನಪಷ್ಟೇ: ಕರಗುತ್ತಿದೆ ಸೆಲ್ಫಿ ಪಾಯಿಂಟ್ ಆಗಿದ್ದ ಬೃಹತ್ ಡ್ರೆಡ್ಜರ್!

ದಿಗಂತ ವಿಶೇಷ

ಸುರತ್ಕಲ್: ಸುರತ್ಕಲ್ ಗುಡ್ಡೆಕೊಪ್ಲ ಕಡಲತೀರದಲ್ಲಿ ಕಳೆದ ಕೆಲವು ವರ್ಷಗಳಿಂದ ಹೆಮ್ಮರವಾಗಿ ನಿಂತಿದ್ದ 'ಭಗವತಿ ಪ್ರೇಮ್' ಡ್ರೆಡ್ಜರ್ ಇದೀಗ ನೆನಪು ಮಾತ್ರ. ಸೆಲ್ಫಿ ಪಾಯಿಂಟ್ ಆಗಿ, ಸಂಜೆಯ ವಾಯುವಿಹಾರದ ತಾಣವಾಗಿ ಜನರ ಮನಗೆದ್ದಿದ್ದ ಬೃಹತ್ ಹಡಗು ಈಗ ತುಂಡು ತುಂಡಾಗಿ ಕರಗುತ್ತಿದೆ.

ಅನಿರೀಕ್ಷಿತ ಅತಿಥಿಯಾಗಿದ್ದ ಡ್ರೆಡ್ಜರ್

ಕೆಲ ವರ್ಷಗಳ ಹಿಂದೆ ಮಳೆಗಾಲದಲ್ಲಿ ಬೀಸಿದ ಭಾರೀ ಮಳೆ-ಗಾಳಿಗೆ ಎನ್‌ಎಂಪಿಟಿ ಬಂದರಿನಲ್ಲಿ ಲಂಗರು ಹಾಕಿದ್ದ 'ಭಗವತಿ ಪ್ರೇಮ್' ಡ್ರೆಡ್ಜರ್ ಆ್ಯಂಕರ್ ಕಿತ್ತುಕೊಂಡು ಸುರತ್ಕಲ್ ಗುಡ್ಡೆಕೊಪ್ಲ ತೀರಕ್ಕೆ ಬಂದು ನಿಂತಿತ್ತು. ತಾಂತ್ರಿಕ ಕಾರಣಗಳಿಂದ ಅದನ್ನು ಮತ್ತೆ ಸಮುದ್ರಕ್ಕೆ ಎಳೆಯಲು ಸಾಧ್ಯವಾಗಿರಲಿಲ್ಲ. ಹೀಗೆ ಅನಿರೀಕ್ಷಿತವಾಗಿ ಬಂದು ನಿಂತ ಹಡಗು ಬಳಿಕ ಪ್ರವಾಸಿ ತಾಣವಾಗಿ ಬದಲಾಗಿತ್ತು.

ಜನರ ಪಾಲಿನ 'ವ್ಯೂ ಪಾಯಿಂಟ್'

ಕಡಲ ತಡಿಯಲ್ಲಿ ಸಿಲುಕಿದ್ದ ಈ ಬೃಹತ್ ಹಡಗು ನೋಡಲು ಪ್ರತಿದಿನ ನೂರಾರು ಜನ ಬರುತ್ತಿದ್ದರು. ಮಕ್ಕಳನ್ನು ಕರೆದುಕೊಂಡು ಕುಟುಂಬ ಸಮೇತ ಬಂದು ಸಮಯ ಕಳೆಯುವುದು, ಹಡಗಿನ ಹಿನ್ನೆಲೆಯಲ್ಲಿ ಸೆಲ್ಫಿ ತೆಗೆದುಕೊಳ್ಳುವುದು ಸಾಮಾನ್ಯವಾಗಿತ್ತು. ಹಿರಿಯ ನಾಗರಿಕರಿಗೆ ಇದು ವಾಯುವಿಹಾರದ ಸ್ಥಳವಾಗಿತ್ತು. ಹೊರಗಿನಿಂದ ಬರುವ ಪ್ರವಾಸಿಗರಿಗೂ 'ಗುಡ್ಡೆಕೊಪ್ಲ ಡ್ರೆಡ್ಜರ್' ಆಕರ್ಷಣೆಯ ಕೇಂದ್ರಬಿಂದುವಾಗಿತ್ತು. ಸ್ಥಳೀಯರ ಪಾಲಿಗೆ ಇದು ಒಂದು ಹೆಗ್ಗುರುತಾಗಿ ಬಿಟ್ಟಿತ್ತು.

ಈಗ ಕರಗುವ ಹಂತದಲ್ಲಿ

ವರ್ಷಗಳ ಕಾಲ ಜನರ ಪ್ರೀತಿಗೆ ಪಾತ್ರವಾಗಿದ್ದ 'ಭಗವತಿ ಪ್ರೇಮ್' ಅನ್ನು ಇದೀಗ ತೆರವುಗೊಳಿಸುವ ಕಾರ್ಯ ಭರದಿಂದ ಸಾಗಿದೆ. ಸಮುದ್ರ ಶಾಂತವಾಗಿರುವ, ತಿಳಿಯಾಗಿರುವ ಸಂದರ್ಭ ನೋಡಿಕೊಂಡು ಕಾಮಗಾರಿ ನಡೆಸಲಾಗುತ್ತಿದೆ. ಬೃಹತ್ ಗಾತ್ರದ ಹಡಗನ್ನು ಸ್ಥಳದಲ್ಲೇ ಕಬ್ಬಿಣದ ತುಂಡುಗಳಾಗಿ ಕತ್ತರಿಸಿ ತೆಗೆಯಲಾಗುತ್ತಿದೆ. ನೀರಿನಡಿ ಇರುವ ಭಾಗವನ್ನು ಕತ್ತರಿಸಲು ವಿಶೇಷ ತಂತ್ರಜ್ಞಾನ ಬಳಸಲಾಗುತ್ತಿದೆ. ನುರಿತ ಕಾರ್ಮಿಕರು ಗ್ಯಾಸ್ ಕಟರ್ ಬಳಸಿ ಹಂತ ಹಂತವಾಗಿ ಹಡಗನ್ನು ಬೇರ್ಪಡಿಸುತ್ತಿದ್ದಾರೆ.



ಮೀನುಗಾರರ ಆಕ್ರೋಶ, ತೆರವಿಗೆ ಆಗ್ರಹ
ಇತ್ತ ಡ್ರೆಡ್ಜರ್‌ನಿಂದ ಮೀನುಗಾರಿಕೆಗೆ ತೊಂದರೆಯಾಗುತ್ತಿದೆ, ಪರಿಸರ ಮಾಲಿನ್ಯ ಉಂಟಾಗುತ್ತಿದೆ ಎಂದು ಸ್ಥಳೀಯರು, ಮೀನುಗಾರರು ನಿರಂತರವಾಗಿ ಆಕ್ರೋಶ ವ್ಯಕ್ತಪಡಿಸುತ್ತಲೇ ಇದ್ದರು. ಹಡಗನ್ನು ತೆರವು ಮಾಡುವಂತೆ ಒತ್ತಾಯ ಕೇಳಿಬರುತ್ತಿತ್ತು. ಹಲವು ಮಳೆಗಾಲಗಳನ್ನು ಕಂಡ ಈ ಹಡಗಿನಿಂದಾಗುವ ಸಮಸ್ಯೆ ಬಗ್ಗೆ ದೂರುಗಳು ಹೆಚ್ಚಾಗಿದ್ದವು. ಇದರ ಬೆನ್ನಲ್ಲೇ ಬಂದರು ಇಲಾಖೆ ಹಡಗು ಒಡೆಯಲು ಗುತ್ತಿಗೆ ನೀಡಿತ್ತು.

ಪರಿಸರಕ್ಕೆ ಹಾನಿಯಾಗದಂತೆ ಎಚ್ಚರ
ಹಡಗು ಒಡೆಯುವ ಸಂದರ್ಭದಲ್ಲಿ ಸಮುದ್ರಕ್ಕೆ ತೈಲ ಸೋರಿಕೆಯಾಗದಂತೆ ಹಾಗೂ ಇತರ ಮಾಲಿನ್ಯ ಉಂಟಾಗದಂತೆ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಗುತ್ತಿಗೆದಾರರು ತಿಳಿಸಿದ್ದಾರೆ. ಪರಿಸರ ನಿಯಮಗಳ ಪಾಲನೆಯೊಂದಿಗೆ ಕಾರ್ಯ ನಡೆಯುತ್ತಿದೆ. ಸುರತ್ಕಲ್ ಕಡಲತೀರದ 'ಐಕಾನ್' ಆಗಿದ್ದ ಭಗವತಿ ಪ್ರೇಮ್ ಕಣ್ಮರೆಯಾಗುತ್ತಿದ್ದರೂ, ಅದು ನೀಡಿದ ಸಾವಿರಾರು ಸೆಲ್ಫಿಗಳು, ಸಂಜೆಯ ನೆನಪುಗಳು ಮಾತ್ರ ಜನರ ಮನದಲ್ಲಿ ಶಾಶ್ವತವಾಗಿ ಉಳಿಯಲಿವೆ.

- ಮಳೆಗಾಲದಲ್ಲಿ ಎನ್‌ಎಂಪಿಟಿಯಿಂದ ಆ್ಯಂಕರ್ ಕಿತ್ತು ಬಂದು ಗುಡ್ಡೆಕೊಪ್ಲದಲ್ಲಿ ಸಿಲುಕಿತ್ತು
- ಹಲವು ಮಳೆಗಾಲ ಕಂಡಿದ್ದ ಹಡಗು ಮೀನುಗಾರಿಕೆಗೆ ಅಡ್ಡಿ ಎಂಬ ಆರೋಪ
- ಸ್ಥಳೀಯರ ಆಗ್ರಹದ ಬಳಿಕ ಬಂದರು ಇಲಾಖೆಯಿಂದ ತೆರವಿಗೆ ಗುತ್ತಿಗೆ
- ಸೆಲ್ಫಿ ಪಾಯಿಂಟ್, ವ್ಯೂ ಪಾಯಿಂಟ್ ಆಗಿ ಪ್ರಸಿದ್ಧಿ
- ಸಮುದ್ರ ತಿಳಿಯಾಗಿರುವಾಗ ವಿಶೇಷ ತಂತ್ರಜ್ಞಾನ ಬಳಸಿ ತೆರವು ಕಾರ್ಯ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ 29° 24° | ಉಡುಪಿ 30° 24°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಮಂಗಳವಾರ 16, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2

ಕೆಸರಲ್ಲೇ ಮುಳುಗಿರುವ ರಸ್ತೆಯಲ್ಲಿ ವಾಹನ ಸವಾರರ ಪರದಾಟ !



ಪುಟ 6

ಸುಬ್ರಮಣ್ಯ ಕುರ್ಯಗೆ 'ಯಶೋ ಮಾಧ್ಯಮ' ಪ್ರಶಸ್ತಿ ಪ್ರದಾನ



ದೇವರ ಸ್ವಂತ ನಾಡಿನಲ್ಲಿ ಮಹಿಳೆಯರ ಪಾಲಿಗೆ ಖುಷಿ ಹೆಚ್ಚಿಸಿದಳು 'ಪ್ರಿಯದರ್ಶಿನಿ'!



ಯುಡಿಎಫ್‌ನ ಚುನಾವಣಾ ಭರವಸೆಯಾದ ಕೆಎಸ್ಸಾರ್ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಯೋಜನೆ 'ಪ್ರಿಯದರ್ಶಿನಿ'ಗೆ ತಿರುವನಂತಪುರದ ತಂಬಾನೂರು ಬಸ್ ನಿಲ್ದಾಣದಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ವಿ.ಡಿ. ಸತೀಶನ್ ಚಾಲನೆ ನೀಡಿದರು. ಕಾಸರಗೋಡು ಸೇರಿದಂತೆ ಉಪ್ಪಳ, ಪೆರ್ಲ, ಕುಂಬಳೆಯಲ್ಲಿ ಕೂಡಾ ಉದ್ಘಾಟನಾ ಸಂಭ್ರಮ ಹಮ್ಮಿಕೊಳ್ಳಲಾಗಿತ್ತು. (ವಿವರ ಪುಟ 5)

ಸುತ್ತಮುತ್ತ

ವನ್ಯಜೀವಿಗಳ ಉಪಟಳ: ನಗರ ಪ್ರದೇಶಗಳಲ್ಲೂ ರೆಸ್ಕ್ಯೂ ಟೀಮ್ ಸಕ್ರಿಯ

ಕಾಸರಗೋಡು: ಅರಣ್ಯ ಗಡಿ ಪ್ರದೇಶಗಳಲ್ಲಿ ವನ್ಯ ಜೀವಿಗಳ ಉಪಟಳ ಸಾಮಾನ್ಯವಾಗಿದ್ದರೂ ಇದೀಗ ನಗರ ಪ್ರದೇಶಗಳಲ್ಲೂ ವನ್ಯಜೀವಿಗಳು ಪ್ರವೇಶಿಸಿ ಉಪಟಳ ನೀಡುತ್ತಿರುವ ಹಿನ್ನೆಲೆಯಲ್ಲಿ ಅದನ್ನು ತಡೆಗಟ್ಟಲು ನಗರ ಪ್ರದೇಶಗಳಲ್ಲಿ ಮೆಟ್ರೋ ರೆಸ್ಕ್ಯೂ ಟೀಮ್‌ಗಳಿಗೆ ರೂಪು ನೀಡಲು ರಾಜ್ಯ ಅರಣ್ಯ ಇಲಾಖೆ ತೀರ್ಮಾನಿಸಿದೆ. ಅದರಂತೆ ರಾಜ್ಯದ ಪ್ರಧಾನ ನಗರಗಳಲ್ಲಿ ಈಗ ಕಾರ್ಯವೆಸಗುತ್ತಿರುವ ಪ್ರೈಮರಿ ರೆಸ್ಪೋನ್ಸ್ ತಂಡಗಳ ಮಾದರಿಯಲ್ಲಿ ನುರಿತ ತರಬೇತಿ ಪಡೆದ ಸ್ವಯಂಸೇವಕರನ್ನು ಒಳಪಡಿಸಿ ಮೆಟ್ರೋ ರೆಸ್ಕ್ಯೂ ಟೀಮ್‌ಗಳಿಗೆ ರೂಪು ನೀಡಲು ಅರಣ್ಯ ಇಲಾಖೆ ತೀರ್ಮಾನಿಸಿದೆ.

ಮೂಲ್ಕಿ ಕೆಂಚನಕೆರೆಯ ಬಳಿ ಕಾರಿಗೆ ಲಾರಿ ಡಿಕ್ಕಿ: ವಾಹನ ಸಂಚಾರ ಅಸ್ತವ್ಯಸ್ತ

ಮುಲ್ಕಿ: ಕಿನ್ನಿಗೋಳಿ ಮುಲ್ಕಿ ರಾಜ್ಯ ಹೆದ್ದಾರಿಯ ಕೆಂಚನಕೆರೆ ಅಂಗರಗುಡ್ಡೆ ತಿರುವಿನಲ್ಲಿ ಕಾರಿಗೆ ಲಾರಿ ಡಿಕ್ಕಿಯಾಗಿ ಕಾರಿನಲ್ಲಿದ್ದ ಇಬ್ಬರು ಅಪಾಯದಿಂದ ಪಾರಾಗಿದ್ದಾರೆ. ಅಪಘಾತದ ರಭಸಕ್ಕೆ ಕಾರಿನ ಎದುರು ಭಾಗಕ್ಕೆ ಹಾನಿಯಾಯಿತು. ಈ ಸಂದರ್ಭ ಸ್ಥಳದಲ್ಲಿ ಮಾತಿನ ಚಕಮುಕಿ ನಡೆದಿದ್ದು ವಾಹನ ಸಂಚಾರ ಅಸ್ತವ್ಯಸ್ತ ಉಂಟಾಯಿತು. ಕೂಡಲೇ ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಎರಡು ವಾಹನಗಳನ್ನು ಸ್ಥಳದಿಂದ ತೆರವುಗೊಳಿಸಿದ್ದಾರೆ. ಕೆಂಚನಕೆರೆ ತಿರುವು ಅಪಾಯಕಾರಿಯಾಗಿದ್ದು ಸರಿಯಾದ ದಾರಿದೀಪದ ವ್ಯವಸ್ಥೆ ಇಲ್ಲದೆ ಅವಘಡ ಆಹ್ವಾನಿಸುತ್ತಿದೆ.

ಕಾರು - ಬೈಕ್ ನಡುವೆ ಮುಖಾಮುಖಿ ಡಿಕ್ಕಿ: ಗಾಯಾಳು ಸಾವು

ಉಪ್ಪಿನಂಗಡಿ: ಕಾರು ಮತ್ತು ಬೈಕ್ ನಡುವೆ ಮುಖಾಮುಖಿ ಡಿಕ್ಕಿಯಾಗಿ ಗಂಭೀರ ಗಾಯಗೊಂಡು ಕೋಮಾ ಸ್ಥಿತಿಯಲ್ಲಿದ್ದ ಬೈಕ್ ಸವಾರ ಬದ್ರುದ್ದೀನ್ ಮಠ (26) ಅವರು ನೆಕ್ಕಿಲಾಡಿಯ ಅವರ ಬಾಡಿಗೆ ಮನೆಯಲ್ಲಿ ನಿಧನರಾಗಿದ್ದಾರೆ. ಮೂಲತಃ ಉಪ್ಪಿನಂಗಡಿಯ ಮಠ ನಿವಾಸಿಯಾಗಿದ್ದು ಪ್ರಸ್ತುತ 34 ನೆಕ್ಕಿಲಾಡಿಯ ಬಾಡಿಗೆ ಮನೆಯೊಂದರಲ್ಲಿ ವಾಸವಿದ್ದರು. ಕೊಟೇಲ್‌ನ ಹೊಟೇಲೊಂದರಲ್ಲಿ ಕೆಲಸದಲ್ಲಿದ್ದ ಇವರು 2025ರ ಡಿ.11ರಂದು ರಾತ್ರಿ ಬೈಕ್‌ನಲ್ಲಿ ಉಪ್ಪಿನಂಗಡಿಯಿಂದ 34 ನೆಕ್ಕಿಲಾಡಿಗೆ ಬರುತ್ತಿದ್ದಾಗ ಅಪಘಾತ ಸಂಭವಿಸಿತ್ತು. ಗಂಭೀರ ಗಾಯಗೊಂಡು ಕೋಮಾವಸ್ಥೆಗೆ ತಲುಪಿದ್ದ ಇವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಒದಗಿಸಿ ಸುಧಾರಿಸದ ಕಾರಣ ಮನೆಯಲ್ಲಿಯೇ ಇವರ ಆರೈಕೆಯಲ್ಲಿ ತೊಡಗಿದ್ದರು.

ಅನಾಥವಾಗಿದೆ 632 ಚೀಲ ಯೂರಿಯಾ ಎಂತ ಮಾಡೋದು?

ಪೊಲೀಸರಿಗೆ ಈಗ ಹೊಸ ತಲೆನೋವು

ವಿಟ್ಲ: ಕೊಳ್ನಾಡು ಖಂಡಿಗದ ಮನೆಯ ಅಂಗಳದಲ್ಲಿ ಕೃಷಿಕರಿಗೆ ಸೇರಬೇಕಾದ ಯುರಿಯಾ ರಸಗೊಬ್ಬರವನ್ನು ಆರು ಪಟ್ಟು ಅಧಿಕ ಮೊತ್ತಕ್ಕೆ ಮಾರಾಟ ಮಾಡುವ ಅಡ್ಡೆಗೆ ಪೊಲೀಸ್ ಹಾಗೂ ಕೃಷಿ ಇಲಾಖೆ ಅಧಿಕಾರಿಗಳ ದಾಳಿ ನಡೆಸಿ ವಶಕ್ಕೆ ಪಡೆದ 632 ಚೀಲ ಗೊಬ್ಬರ ವಿಲೇವಾರಿಗೆ ಈಗ ಜಿಲ್ಲಾಡಳಿತ ತುರ್ತು ಕ್ರಮ ಕೈಗೊಳ್ಳದೆ, ಹಾಳಾಗಿ ಹೋಗುವ ಆತಂಕ ಎದುರಾಗಿದೆ.

ಕೊಳ್ನಾಡು ಬೋಳಂತೂರು ಖಂಡಿಗ ನಿವಾಸಿ ಮೊಹಮ್ಮದ್ ಅಶ್ರಫ್ ಹಾಗೂ ಬೆಂಗಳೂರು ಮೂಲದ ಸತೀಶ್ ಮೇಲೆ ಈ ಬಗ್ಗೆ ಪ್ರಕರಣ ದಾಖಲಾಗಿದ್ದು, ಈ ಇಬ್ಬರೂ ತಲೆಮರೆಸಿಕೊಂಡಿದ್ದಾರೆ.

ವಿಲೇವಾರಿಗೆ ಆದೇಶ ಬೇಕಿದೆ

ಗುರುವಾರ ಬಾರೀ ಪ್ರಮಾಣದಲ್ಲಿ ಕೃಷಿಕರಿಗೆ ಸರ್ಕಾರದ ಸಹಾಯ ಧನದಲ್ಲಿ ವಿತರಣೆ ಆಗಬೇಕಾಗಿದ್ದ ಯೂರಿಯಾವನ್ನು ಪೊಲೀಸರು ವಶಪಡಿಸಿಕೊಂಡಿದ್ದು, ಇದರ ಮಾದರಿಯನ್ನು ಸಂಗ್ರಹಿಸಿ ಉಳಿದ ಚೀಲಗಳನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಲು ಜಿಲ್ಲಾಡಳಿತದ ಆದೇಶವೂ ಅಗತ್ಯವಿದೆ.

ಆದರೆ ಸ್ಥಳೀಯವಾಗಿ ಈ ರಸಗೊಬ್ಬರ ಎಲ್ಲಿಗೆ ವಿತರಣೆ ಮಾಡಬೇಕೆ ಎಂಬುದನ್ನು ಎರಡನೇ ಶನಿವಾರ ಹಾಗೂ ಭಾನುವಾರ ಎಂದು ನೆಪ ಹೇಳುತ್ತಾ ತ್ವರಿತವಾಗಿ ಆದೇಶವನ್ನೂ ಮಾಡದೆ, ಗೊಬ್ಬರ ರಕ್ಷಣೆಯನ್ನೂ ಮಾಡುವುದು ಇದೀಗ ಪೊಲೀಸರಿಗೆ ತಲೆನೋವಾಗಿದೆ.



ನಿರ್ವಹಣೆ, ಸಾಗಾಟ, ಕೂಲಿ ವೆಚ್ಚ ಎಲ್ಲ ಇಲಾಖೆಗೆ!

ತ್ವರಿತವಾಗಿ ಕ್ರಮಕೈಗೊಳ್ಳಬೇಕಾದ ಕೃಷಿ ಇಲಾಖೆಯೂ ರಸ ಗೊಬ್ಬರ ವಿಲೇವಾರಿಗೆ ಸೂಕ್ತ ಕ್ರಮ ಕೈಗೊಂಡಿಲ್ಲ. ಮಳೆ ಅಧಿಕವಾದರೆ, ಇದು ನೀರಾಗಿ ಹೋಗುವ ಸಾಧ್ಯತೆಯೂ ಹೆಚ್ಚಿದೆ. ಸಂಬಂಧಪಟ್ಟವರು ಸೂಕ್ತ ಗೋದಾಮು ವ್ಯವಸ್ಥೆಯನ್ನೂ ಕಲ್ಪಿಸಿಲ್ಲ. ಇವುಗಳ ನಿರ್ವಹಣೆ, ಸಾಗಾಟ, ಕೂಲಿ ವೆಚ್ಚ ಎಲ್ಲವೂ ಪೊಲೀಸ್ ಇಲಾಖೆಗೆ ಹೊರೆಯಾಗಿ ಪರಿಣಮಿಸಿದೆ.

- ಸರ್ಕಾರದಿಂದ ರಿಯಾಯಿತಿ ದರದಲ್ಲಿ ರೈತರಿಗೆಸಿಗುವ ರಸಗೊಬ್ಬರಹೆಚ್ಚಿನ ದರದಲ್ಲಿ ಮಾರಾಟ ಮಾಡಲು ಯತ್ನಿಸುತ್ತಿರುವ ಮಾಹಿತಿ ಮೇರೆಗೆ ದಾಳಿ ನಡೆಸಲಾಗಿತ್ತು
- ಇದೀಗ ದಾಳಿ ನಡೆಸಿದ 632 ಚೀಲ ಗೊಬ್ಬರ ವಿಲೇವಾರಿಗೆ ಜಿಲ್ಲಾಡಳಿತ ತುರ್ತು ಕ್ರಮ ಕೈಗೊಳ್ಳದೆ, ಹಾಳಾಗಿ ಹೋಗುವ ಆತಂಕ ಎದುರಾಗಿದೆ.

'ಫ್ರೀಡಂ ಫುಡ್'ಗೆ ಹೆಚ್ಚಿದ ಬೇಡಿಕೆ

ಜೈಲು ಬಿರಿಯಾನಿ ಬೆಲೆಯೂ ಏರಿಕೆ!

ವರ್ಷದ ಹಿಂದೆಯೇ ಬೇಡಿಕೆ ಪಟ್ಟಿ

ಕಾಸರಗೋಡು: 'ಫ್ರೀಡಂ ಫುಡ್' ಹೆಸರಲ್ಲಿ ರಾಜ್ಯದ ಜೈಲುಗಳಲ್ಲಿ ಕೈದಿಗಳು ತಯಾರಿಸಿ ಮಾರುಕಟ್ಟೆಗೆ ಪೂರೈಸುವ ಜೈಲು ಬಿರಿಯಾನಿನ ಬೆಲೆಯೂ ಈಗ ಏರಿಕೆ ಕಂಡಿದೆ.

ಬಿರಿಯಾನಿಗೆ 10 ರೂ.ಗಳ ಏರಿಕೆ

ಚಿಕನ್ ಬಿರಿಯಾನಿ ಬೆಲೆ 70ರಿಂದ 80ಕ್ಕೆ ಏರಿಕೆಯಾಗಿದ್ದು, ವೆಜ್ ಬಿರಿಯಾನಿ ಬೆಲೆ 40 ರೂ.ನಿಂದ 45 ರೂ. ಗೇರಿಸಲಾಗಿದೆ. ಇದಲ್ಲದೆ ಜೈಲುಗಳಲ್ಲಿ ತಯಾರಿಸಿ ಮಾರುಕಟ್ಟೆಗಿಳಿಸುವ ಇತರ ಆಹಾರಗಳ ಬೆಲೆಯೂ ಏರಿಕೆಯಾಗಿದೆ.

ಆಹಾರ ಸಾಮಗ್ರಿಗೂ ಹೆಚ್ಚಳ

ಜೈಲುಗಳಲ್ಲಿ ತಯಾರಿಸಲಾಗುತ್ತಿರುವ ಆಹಾರಗಳಲ್ಲಿ ಚಿಕನ್ ಬಿರಿಯಾನಿ ಮತ್ತು ಚಪಾತಿಗೆ ಮಾರುಕಟ್ಟೆಗಳಲ್ಲಿ ಅತೀ ಹೆಚ್ಚು ಬೇಡಿಕೆ ಇದೆ. ಆಹಾರ ಸಾಮಗ್ರಿಗಳ ಬೆಲೆಯಲ್ಲಿ ಉಂಟಾಗಿರುವ ಏರಿಕೆಯಿಂದಾಗಿ ಜೈಲುಗಳಲ್ಲಿ ತಯಾರಿಸುವ ಆಹಾರ ಸಾಮಗ್ರಿಗಳ ಬೆಲೆಯನ್ನು ಹೆಚ್ಚಿಸಬೇಕಾಗಿ ಬಂದಿದೆ ಎಂದು ಜೈಲು ಅಧಿಕಾರಿಗಳು ತಿಳಿಸಿದ್ದಾರೆ.

ಕಣ್ಣೂರು ಸೆಂಟ್ರಲ್ ಜೈಲಿನಲ್ಲಿ ಇಂತಹ ಅತೀ ಹೆಚ್ಚು ಆಹಾರ ಸಾಮಗ್ರಿ ತಯಾರಿಸುತ್ತಾರೆ.



ಬೇಡಿಕೆ ಇದೆ

ಜೈಲುಗಳಲ್ಲಿ ತಯಾರಿಸುವ ಆಹಾರ ಸಾಮಗ್ರಿಗಳ ಬೆಲೆ ಹೆಚ್ಚಿಸಬೇಕೆಂಬ ಬೇಡಿಕೆ 1 ವರ್ಷದ ಹಿಂದೆ ಸರಕಾರದ ಮುಂದೆ ಇರಿಸಲಾಗಿತ್ತು. ಇತರ ಮಾರುಕಟ್ಟೆಗಳಲ್ಲಿರುವ ಆಹಾರ ಸಾಮಗ್ರಿಗಳಿಗಿಂತ ಜೈಲುಗಳಲ್ಲಿ ತಯಾರಿಸಲಾಗುತ್ತಿರುವ ಆಹಾರ ಸಾಮಗ್ರಿಗಳ ಬೆಲೆ ಅತ್ಯಂತ ಕಡಿಮೆಯಾಗಿದೆ ಎಂದು ಜೈಲು ಅಧಿಕಾರಿಗಳು ತಿಳಿಸುತ್ತಾರೆ.

ಕುಂಟುತ್ತಾ ಸಾಗಿದೆ ಪುತ್ತೂರು-ಉಪ್ಪಿನಂಗಡಿ ರಸ್ತೆಯಲ್ಲಿ ಮಳೆಗಾಲ ತಯಾರಿ

ಇಲ್ಲಿನ ಚರಂಡಿಗಳಿಗೆ ಇನ್ನೂ ಸಿಕ್ಕಿಲ್ಲ ಕ್ಲೀನ್ ಭಾಗ್ಯ

ಪುತ್ತೂರು: ಭಾಗಶ: ಚತುಷ್ಪಥ ರಸ್ತೆಯಾಗಿ ಪರಿವರ್ತನೆಗೊಂಡು ಎರಡು ಪ್ರಮುಖ ನಗರಗಳನ್ನು ಸಂಪರ್ಕಿಸುವ ಪುತ್ತೂರು-ಉಪ್ಪಿನಂಗಡಿ ರಸ್ತೆಯಲ್ಲಿ ಮಳೆಗಾಲಕ್ಕೆ ಪೂರ್ವ ತಯಾರಿಯಾಗಿ ನಡೆಯಬೇಕಾಗಿದ್ದ ರಸ್ತೆಬದಿಯ ಚರಂಡಿ ಸ್ವಚ್ಛತೆ ಮಾತ್ರ ಇನ್ನೂ ಪೂರ್ಣಗೊಂಡಿಲ್ಲ.

ಅತೀ ಪ್ರಮುಖ ರಸ್ತೆಯಿದು

ಇಲ್ಲಿನ ಪುತ್ತೂರು- ಉಪ್ಪಿನಂಗಡಿ ನಡುವೆ ಸುಮಾರು 13 ಕಿ.ಮೀ. ರಸ್ತೆಯಿದೆ. ಇದರಲ್ಲಿ ಸ್ವಲ್ಪ ಭಾಗ ಹೊರತುಪಡಿಸಿದರೆ ಉಳಿದ ಕಡೆಗಳಲ್ಲಿ ಚತುಷ್ಪಥ ರಸ್ತೆಯಾಗಿ ಈ ಭಾಗದ ಜನತೆಗೆ ಬಹಳಷ್ಟು ಉಪಯುಕ್ತವಾಗಿದೆ. »ಪುಟ 6



ಲೋಕೋಪಯೋಗಿ ಇಲಾಖೆ ಯಾಕೆ ಮೌನ?

ಮೇ ಅಂತ್ಯದಲ್ಲಿಯಾದರೂ ಈ ರಸ್ತೆಗಳ ಚರಂಡಿಗಳನ್ನು ಸ್ವಚ್ಛಗೊಳಿಸುವ ಪ್ರಕ್ರಿಯೆ ಆರಂಭವಾಗಬೇಕಿತ್ತು. ಆದರೆ, ಈ ಬಗ್ಗೆ ಲೋಕೋಪಯೋಗಿ ಇಲಾಖೆ ತಲೆ ಕೆಡಿಸಿಕೊಂಡಿಲ್ಲ. ರಸ್ತೆ ಸುವ್ಯವಸ್ಥೆ ಜೊತೆಗೆಚರಂಡಿಗಳ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂಬ ಮೂಲ ಅಂಶವನ್ನೇ ಇಲಾಖೆ ಮರೆತಂತಿದೆ ಎನ್ನುತ್ತಿದ್ದಾರೆ ನಾಗರಿಕರು.

"ತಕ್ಷಣ ಕೆಲಸ ಆರಂಭಿಸಲಿ

ಈ ಚರಂಡಿಗಳಲ್ಲಿ ಮಳೆ ನೀರು ಸರಾಗವಾಗಿ ಹರಿಯದಿದ್ದರೆ ಮಳೆನೀರು ರಸ್ತೆಗೆ ಬಂದು ಸಮಸ್ಯೆ ಉಂಟಾಗುತ್ತದೆ.ದಟ್ಟಣೆ ಕಳೆದ ವರ್ಷವೂ ಇದೇಸಮಸ್ಯೆ ಉಂಟಾಗಿತ್ತು. ತಕ್ಷಣ ಲೋಕೋಪಯೋಗಿ ಇಲಾಖೆ ಪುತ್ತೂರು-ಉಪ್ಪಿನಂಗಡಿ ರಸ್ತೆಯ ಎರಡೂ ಬದಿಗಳಲ್ಲಿರುವ ಚರಂಡಿ ದುರಸ್ತಿಗೊಳಿಸಬೇಕು.

• ರತ್ನಾಕರ ಪ್ರಭು, ಸಾಮಾಜಿಕ ಸೇವಾ ಕಾರ್ಯಕರ್ತರು

ಕಡಗದಾಳು ಸರ್ಕಾರಿ ಶಾಲೆಗೆ ಡೀಸಿ ಭೇಟಿ



ಕೊಡಗು ಜಿಲ್ಲೆಯ ಕಡಗದಾಳು ಸರ್ಕಾರಿ ಪ್ರೌಢಶಾಲೆಗೆ ಮಡಿಕೇರಿ ಜಿಲ್ಲಾಧಿಕಾರಿ ಎಸ್.ಜಿ. ಸೋಮಶೇಖರ್ ಸೋಮವಾರ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಖ್ಯೋಪಾಧ್ಯಾಯರು, ಸಹಶಿಕ್ಷಕರ ಹಾಜರಾತಿ, ಶಾಲಾ ಮಕ್ಕಳ ಹಾಜರಾತಿ, ಬಿಸಿಯೂಟ, ಅಡುಗೆ ಕೋಣೆ ಬಗ್ಗೆ ಮಾಹಿತಿ ಪಡೆದರು.

ಹೆಚ್ಚುತ್ತಿದೆ ಕೃಷಿ ಕಾರ್ಮಿಕರ ಕೊರತೆ, ನಿರ್ವಹಣಾ ವೆಚ್ಚ | ಆಧುನಿಕತೆಯತ್ತ ಮುಖಮಾಡಿದ್ದಾನೆ ನಾಡಿನ ಅನ್ನದಾತ

ಕೋಟ ಹೋಬಳಿ ಗದ್ದೆಗಳಲ್ಲಿ ಕೇಳಿಸುತ್ತಿದೆ ಯಂತ್ರಗಳ ಸದ್ದು!

ಸಂಗಮ ವಿಶೇಷ



ಕೋಟ: ಒಂದು ಕಾಲದಲ್ಲಿ ಮಳೆಗಾಲ ಆರಂಭವಾದರೆ ಸಾಕು, ಹೊಲಗಳಲ್ಲಿ ಮಹಿಳೆಯರು, ಪುರುಷರು ಸಾಲಾಗಿ ನಿಂತು ಭತ್ತದ ನಾಟಿ ಮಾಡುವ ದೃಶ್ಯ ಸಾಮಾನ್ಯವಾಗಿತ್ತು. ಆದರೆ ಕಾಲ ಬದಲಾಗುತ್ತಿದ್ದಂತೆ ಕೃಷಿ ಪದ್ಧತಿ ಬದಲಾಗುತ್ತಿದೆ. ಉಡುಪಿ ಜಿಲ್ಲೆಯ ಕೋಟ ಹೋಬಳಿ ವ್ಯಾಪ್ತಿಯಲ್ಲಿ ಈಗ ಸಾಂಪ್ರದಾಯಿಕ ನಾಟಿ ಪದ್ಧತಿ ನಿಧಾನವಾಗಿ ಮರೆಯಾಗುತ್ತಿದ್ದು, ಅನ್ನದಾತರು ಈಗ ಯಂತ್ರಾಧಾರಿತ ಕೃಷಿಯತ್ತ ಮುಖಮಾಡುತ್ತಿರುವುದು ಕಾಣಸುತ್ತಿದೆ.

ನಿರೀಕ್ಷೆಯಮಟ್ಟ ಮುಟ್ಟದ ಮುಂಗಾರು

ಈ ಬಾರಿ ಮುಂಗಾರು, ನಿರೀಕ್ಷಿತ ಮಟ್ಟದಲ್ಲಿ ಸುರಿಯದಿದ್ದರೂ ರೈತರು ಇಲ್ಲಿ ಕೃಷಿ ಚಟುವಟಿಕೆ ಆರಂಭಿಸಿದ್ದಾರೆ. ಆದರೆ, ವರ್ಷದಿಂದ ವರ್ಷಕ್ಕೆ ಕೃಷಿ ಕೂಲಿಯಾಳುಗಳ ಕೊರತೆ ಮತ್ತು ನಿರ್ವಹಣಾ ವೆಚ್ಚ ಹೆಚ್ಚುತ್ತಿರುವುದು ಅವರನ್ನು ಹೊಸ ಪರ್ಯಾಯಗಳ ಹುಡುಕಾಟಕ್ಕೆ ತಳ್ಳಿದೆ.

ಟ್ರ್ಯಾಕ್ಟರ್ ಮೂಲಕ ಬಿತ್ತನೆಗೆ ಹೆಚ್ಚಿನ ಆದ್ಯತೆ

ತೆಕ್ಕಟ್ಟೆ, ಕೊರವಡಿ, ಕೋಟ, ಸಾಲಿಗ್ರಾಮ, ಸಾಸ್ತಾನ, ವಡ್ಡರ್ಸೆ ಸೇರಿದಂತೆ ಇಡೀ ಹೋಬಳಿ ವ್ಯಾಪ್ತಿಯಲ್ಲಿ ಬಿತ್ತನೆ, ಹಿಂಡ್ ಬಿತ್ತನೆ ಹಾಗೂ ಟ್ರ್ಯಾಕ್ಟರ್ ಕೂರಿಗೆ ಬಿತ್ತನೆಗೆ ರೈತರು ಹೆಚ್ಚಿನ ಆದ್ಯತೆ ನೀಡಿದ್ದಾರೆ. ಇನ್ನು ಅಳಿದುಳಿದ ಕೆಲವು ಭಾಗಗಳಲ್ಲಿ ಸಾಂಪ್ರದಾಯಿಕ ನಾಟಿ ಕಾರ್ಯಕ್ಕಾಗಿ ಗಂಗಾವತಿ, ಅಸ್ಸಾಂ ಭಾಗದ ಕೂಲಿಯಾಳುಗಳನ್ನು ಅವಲಂಬಿಸಲಾಗಿದೆ.

ಬಹುತೇಕ ಭಾಗಗಳಲ್ಲಿ ಬಿತ್ತನೆ ಪೂರ್ಣಗೊಂಡಿದೆ

ನಮ್ಮ ತೆಕಟ್ಟೆಯ ಬಹುತೇಕ ಭಾಗಗಳಲ್ಲಿ ಭತ್ತದ ಬಿತ್ತನೆ ಕಾರ್ಯವು ಪೂರ್ಣಗೊಂಡಿದ್ದು, ಸಾಂಪ್ರದಾಯಿಕ ಕೃಷಿಯಿಂದ ಇಲ್ಲಿನ ರೈತರು ವಿಮುಕ್ತಿ ಪಡೆದಿದ್ದಾರೆ. ಇಲ್ಲೀಗ ಬಿತ್ತನೆ ಮತ್ತು ಕೂರಿಗೆ ಕೃಷಿ ಅನುಸರಿಸುತ್ತಿರುವುದರಿಂದ ವೆಚ್ಚ ಕೂಡಾ ಕಡಿತಗೊಂಡು ಮುಂದೆ ಕೃಷಿಗೆ ಪೂರಕ ವಾತಾವರಣ ನಿರ್ಮಾಣವಾಗಲಿದೆ ಎನ್ನುತ್ತಾರೆ ತೆಕ್ಕಟ್ಟೆಯ ಕೃಷಿಕರಾದ ರೇವತಿ.

"ಆತಂಕ ಈಗ ಬಿಸಿಲಿನದ್ದು...

ಮಳೆಯನ್ನೇ ಅವಲಂಬಿಸಿದ ಭತ್ತದ ಬೇಸಾಯಕ್ಕೆ ಈ ಬಾರಿ ಗ್ರಹಣ ಹಿಡಿದಂತಾಗಿದೆ. ಸಾಂಪ್ರದಾಯಿಕ ನಾಟಿ ಬಿಟ್ಟು ನಾವು ಯಂತ್ರಗಳ ಮೊರೆ ಹೋಗಿದ್ದು, ನಾಲ್ಕು ಎಕರೆಗೂ ಅಧಿಕ ಭೂಮಿಯಲ್ಲಿ ಚಾಪೆ ಹಾಗೂ ಹಿಂಡ್ ಬಿತ್ತನೆ ಮಾಡಿದ್ದೇವೆ. ಮಳೆ ಸುರಿದರೆ ಒಳಿತು, ಇದೇ ರೀತಿ ಬಿಸಿಲು ಮುಂದುವರಿದರೆ ರೈತನ ಪಾಡು ಆಯೋಮಯ.

• ಭೋಜ ಪೂಜಾರಿ, ಯುವ ಕೃಷಿಕ, ಗಿಳಿಯಾರು

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಮಂಗಳವಾರ 16, ಜೂನ್ 2026

ಸುತ್ತಮುತ್ತ

ಶಿಮಂತೂರಿನಲ್ಲಿ ಲೋಕಕಲ್ಯಾಣಾರ್ಥ ಸೀಯಾಳಾಭಿಷೇಕ

ಮುಲ್ಕಿ: ಶಿಮಂತೂರು ಶ್ರೀ ಆದಿಜನಾರ್ದನ ದೇವಸ್ಥಾನದಲ್ಲಿ ಲೋಕಕಲ್ಯಾಣಾರ್ಥ



ಸೋಮವಾರ ಬೆಳಗ್ಗೆ ಶ್ರೀ ಆದಿಜನಾರ್ದನ ದೇವರಿಗೆ ಸೀಯಾಳಾಭಿಷೇಕ ಕ್ಷೇತ್ರದ ಅರ್ಚಕ ಪುರುಷೋತ್ತಮ ಭಟ್ ನೇತೃತ್ವದಲ್ಲಿ ವಿಜೃಂಭಣೆಯಿಂದ ನಡೆಯಿತು. ಈ ಸಂದರ್ಭ ವಿಷ್ಣುಮೂರ್ತಿ ಭಟ್ ಪರೆಂಕಿಲ, ಮಾಜೀ ವ್ಯವಸ್ಥಾಪನಾ ಸಮಿತಿಯ ಸದಸ್ಯರಾದ ಹರೀಶ್ ಶೆಟ್ಟಿ, ಭರತ್ ದೇವಾಡಿಗ,ಕಿಶೋರ್ ಶೆಟ್ಟಿ ಪರೆಂಕಿಲ, ಪ್ರಬಂಧಕ ಜಯ ದೇವಾಡಿಗ, ಕಿಶೋರ್ ಶೆಟ್ಟಿ ಶಿಮಂತೂರು ಇದ್ದರು.

ಶ್ರೀ ಲಕ್ಷ್ಮೀ ಹೃದಯ ಪಾರಾಯಣ ಪೂರಕ ಹೋಮ

ಮೂಡುಬಿದಿರೆ: ಇಲ್ಲಿನ ವೈದಿಕ ಸಂರಕ್ಷಣಾ ಸಭಾದ ವತಿಯಿಂದ ಶ್ರೀಗುರುಮಠ ಕಾಳಿಕಾಂಬಾ ದೇವಸ್ಥಾನದಲ್ಲಿ ಲೋಕ ಕಲ್ಯಾಣಾರ್ಥ ಶ್ರೀ ಲಕ್ಷ್ಮೀ ಹೃದಯ ಪಾರಾಯಣ ಪೂರಕ ಹೋಮವು ಸಭಾದ ಅಧ್ಯಕ್ಷ ರಾಜೇಶ್ ಪುರೋಹಿತ್ ಮಂಗಲಪದವು ಇವರ ನೇತೃತ್ವದಲ್ಲಿ ಜರಗಿತು. ಎನ್. ಕೇಶವ ತಂತ್ರಿ ಆಚಾರ್ಯ ನೇತೃತ್ವದಲ್ಲಿ ನಡೆದ ಈ ಹೋಮದ ವಿಧಿ ವಿಧಾನಗಳಲ್ಲಿ 30ಕ್ಕೂ ಅಧಿಕ ಸಂಖ್ಯೆಯಲ್ಲಿ ಸದಸ್ಯ ವೈದಿಕರು ಪಾಲ್ಗೊಂಡಿದ್ದರು. ಸಭಾದ ಕಾರ್ಯದರ್ಶಿ ಪ್ರವೀಣ ಪುರೋಹಿತ್ ಬೆಳುವಾಯಿ, ಕೋಶಾಧಿಕಾರಿ ನಾಗೇಶ ಪುರೋಹಿತ ಸಹಿತ ಪದಾಧಿಕಾರಿಗಳು, ಕ್ಷೇತ್ರದ ಆಡಳಿತ ಮೊಕ್ತೇಸರ ಎಂ.ಕೆ. ಬಾಲಕೃಷ್ಣ ಆಚಾರ್ಯ ಉಳಿಯ, ಮೊಕ್ತೇಸರರಾದ ಶಿವರಾಮ ಆಚಾರ್ಯ ಉಳಿಯ, ಯೋಗೀಶ ಆಚಾರ್ಯ ಇದ್ದರು.

ನರೇಂದ್ರ ಪಿಯು ಕಾಲೇಜಿನಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆ



ಪುತ್ತೂರು: 2026–27ನೇ ಸಾಲಿನ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳ ಆಯ್ಕೆಯ ಸಲುವಾಗಿ ಸೋಮವಾರ ಚುನಾವಣೆ ನಡೆದು ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ದ್ವಿತೀಯ ವಿಜ್ಞಾನ ವಿಭಾಗದ ಶ್ರೀಶನ್ ಡಿ.ಕೆ., ಕಾರ್ಯದರ್ಶಿಯಾಗಿ ದ್ವಿತೀಯ ವಿಜ್ಞಾನ ವಿಭಾಗದ ಕನ್ನಿಕ ಜೆ.ಆರ್., ಜೊತೆ ಕಾರ್ಯದರ್ಶಿಯಾಗಿ ಪ್ರಥಮ ವಿಜ್ಞಾನ ವಿಭಾಗದ ಜೆ. ಶ್ರುಜ ಚುನಾಯಿತರಾದರು. ಕ್ರೀಡಾ ಸಂಘದ ಅಧ್ಯಕ್ಷರಾಗಿ ದ್ವಿತೀಯ ವಿಜ್ಞಾನ ವಿಭಾಗದ ಶ್ರೀಶ ಕುಮಾರ್, ಕಾರ್ಯದರ್ಶಿಯಾಗಿ ದ್ವಿತೀಯ ವಿಜ್ಞಾನ ವಿಭಾಗದ ಪಿ. ಯಶಸ್ವಿ ನಾಯಕ್ ಆಯ್ಕೆಯಾದರು. ಈ ಪ್ರಕ್ರಿಯೆಯನ್ನು ನರೇಂದ್ರ ಪಿಯು ಕಾಲೇಜಿನ ಪ್ರಾಂಶುಪಾಲ ಪ್ರಸಾದ್ ಶ್ಯಾನಭಾಗ್ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿ ಕ್ಷೇಮಪಾಲಕರಾದ ಉಪನ್ಯಾಸಕರಾದ ಕಾರ್ತಿಕ್ ಕುಮಾರ್ ಎನ್., ಮಧುರಾ, ರುಚಿತಾಕೃಷ್ಣ ಸಾಯಿಗೀತ ಅವರು ನಡೆಸಿಕೊಟ್ಟರು.

ನಾಳೆ ವಿದ್ಯುತ್ ವ್ಯತ್ಯಯ

ಮೂಡುಬಿದಿರೆ: ದಡ್ಡಲ್ ಪಲ್ಕೆ ಮಾಂಟ್ರಾಡಿ, ಜೋಗೊಟ್ಟು ಕೊಣಾಜೆ, ದರೆಗುಡ್ಡೆ, ಮಕ್ಕಿ ಕಜೆ, ಶಿರ್ತಾಡಿ ಫೀಡರ್‌ಗಳಲ್ಲಿ ಜೂ. 17ರಂದು ಬೆಳಿಗ್ಗೆ 9.30ರಿಂದ ಸಂಜೆ 6ವರೆಗೆ ತುರ್ತು ನಿರ್ವಹಣಾ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ಶಿರ್ತಾಡಿ, ಕೊಯಿಕುಡೆ, ಪಿದಮಲೆ, ಬೈಲಬರ್ಕೆ, ಬೋರುಗುಡ್ಡೆ, ಕರ್ನಲ್ ಗುಡ್ಡೆ, ಹೊಂಪೆಟ್ಟು, ಆನೆಗುಡ್ಡೆ, ಕುಕ್ಕುದಕಟ್ಟೆ, ಮರ್ಗಾರ್ ಕಳ, ಪಡುಕೊಣಾಜೆ, ಮೇಕಾರು ದ್ವಾರ, ಅರಸುಕಟ್ಟೆ, ಶುಭಮಂಗಳ, ವಿದ್ಯಾನಗರ, ಕಜೆ, ಕಾಶಿಪಟ್ಣ ಕಾನ, ಕಲ್ಲೋಳಿ, ನಡಿಗುಡ್ಡೆ, ಕಾಂತಾವರ ಕ್ರಾಸ್, ಬೆಳುವಾಯಿ, ಬನ್ನಡ್ಕ, ಕಾಯರ್ ಕಟ್ಟೆ ಆಜಾದ್ ನಗರ, ಕರಿಯನಂಗಡಿ, ಮಲೆಬೆಟ್ಟು ಮಂಜನಕಟ್ಟೆ ಕಾಯದೆ, ಕೆಸರಗದ್ದೆ, ಪೆಲಕುಂಜ, ಮೂಡಾಯಿಕಾಡು, ಬೆಳುವಾಯಿ ಚರ್ಚ್, ಇರ್ವತ್ತೂರು ಕ್ರಾಸ್, ಗುಂಡುಕಲ್ಲು, ಕೆಲ್ಲಪುತ್ತಿಗೆ ದರೆಗುಡ್ಡೆ, ಅರಸುಕಟ್ಟೆ, ಪಣಪಿಲ, ಅಳಿಯೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.

ಮಾಯಿಲ್ತೋಡಿ-ಎಂಜಿರಪಳಿಕೆ-ಕನ್ಯಾರಕೋಡಿ ಮಾರ್ಗ | ಪ್ರಮುಖ ರಸ್ತೆಯಾಗಿದ್ದರೂ ಅಭಿವೃದ್ಧಿಗೆ ನಿರ್ಲಕ್ಷ್ಯ

ಕೆಸರಲ್ಲೇ ಮುಳುಗಿರುವ ರಸ್ತೆಯಲ್ಲಿ ವಾಹನ ಸವಾರರ ಪರದಾಟ

ಉಪ್ಪಿನಂಗಡಿ: ಬೆಳ್ತಂಗಡಿ ತಾಲೂಕಿನ ಎರಡು ಗ್ರಾಮಗಳು ಸಂಧಿಸುವ ಹಾಗೂ ಗಡಿ ಪ್ರದೇಶದ ರಸ್ತೆಯೊಂದು ರಸ್ತೆಯಂತಿರದೆ ಸಂಚಾರದ ವೇಳೆ ಅವಘಡಕ್ಕೆ ಆಹ್ವಾನ ನೀಡುವಂತಿದ್ದು, ಆಡಳಿತ ವ್ಯವಸ್ಥೆಯ ನಿರ್ಲಕ್ಷ್ಯಕ್ಕೆ ನಾಗರಿಕರು ಬಲಿಯಾಗುತ್ತಿರುವ ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದೆ.

ಬೆಳ್ತಂಗಡಿ ತಾಲೂಕಿನ ಇಳಂತಿಲ ಗ್ರಾಮ ಹಾಗೂ ಉರುವಾಲು ಗ್ರಾಮಗಳಿಗೆ ಸೇರಿದ ಮಾಯಿಲ್ತೋಡಿ–ಎಂಜಿರಪಳಿಕೆ–ಕನ್ಯಾರಕೋಡಿ ಸಂಪರ್ಕಿಸುವ ರಸ್ತೆ ಸಂಪೂರ್ಣ ಕೆಸರುಮಯವಾಗಿದ್ದು, ಮಳೆಗಾಲದಲ್ಲಿ ವಾಹನ ಸವಾರರು ದಿನನಿತ್ಯ ಪರದಾಟ ನಡೆಸಬೇಕಾಗಿದೆ. ಕಳೆದ ಕೆಲದಿನಗಳಿಂದ ಸುರಿದ ಮಳೆಯಿಂದಾಗಿ ರಸ್ತೆ ಇಡೀ ಕೆಸರುಮಯವಾಗಿದ್ದು ಸಂಚಾರಕ್ಕೆ ತ್ರಾಸದಾಯಕವಾಗಿದೆ. ದ್ವಿಚಕ್ರ ವಾಹನ ಸವಾರರಂತೂ ಎದ್ದುಬಿದ್ದು ಸಂಚರಿಸುವ ಸ್ಥಿತಿ ಉಂಟಾಗಿದೆ. ನಾಡಿನ ಪ್ರಸಿದ್ಧ ತೀರ್ಥಕ್ಷೇತ್ರ ಧರ್ಮಸ್ಥಳಕ್ಕೆ ಸುಲಭವಾಗಿ ಸಂಪರ್ಕ ಸಾಧಿಸುವಲ್ಲಿರುವ ಈ ರಸ್ತೆಯಲ್ಲಿ ವಾಹನಗಳ ಸಂಚಾರವೂ





ಹೆಚ್ಚುತ್ತಿದ್ದು, ರಸ್ತೆಯ ದುಸ್ಥಿತಿಯಿಂದಾಗಿ ಸ್ಥಳೀಯರೂ, ಪರವೂರಿನವರೂ ಸಂಕಷ್ಟಕ್ಕೆ ಸಿಲುಕುವಂತಾಗಿದೆ.

ಭರವಸೆ ಮಾತ್ರ ಲಭಿಸುತ್ತಿದೆ

ಹಲವು ವರ್ಷಗಳ ಹಿಂದೆ ಡಾಮರು ಕಂಡ ಈ ರಸ್ತೆ ಈಗ ಡಾಮರು ಕಿತ್ತು ಹೋಗಿ ಸಂಚಾರಕ್ಕೆ ಅಯೋಗ್ಯವಾಗಿದೆ. ರಸ್ತೆ ಅಭಿವೃದ್ಧಿಗಾಗಿ ಸ್ಥಳೀಯರ ಬೇಡಿಕೆಗಳಿಗೆ ಸ್ಥಳೀಯ ಪಂಚಾಯತ್ ಚುನಾವಣೆಗಳಲ್ಲಿ ಅಭಿವೃದ್ಧಿ ಪಡಿಸುವ ಭರವಸೆ ಮಾತ್ರ ಲಭಿಸುತ್ತಿದ್ದವು. ಆದರೆ, ಇಂದಿಗೂ ರಸ್ತೆ ಅಭಿವೃದ್ಧಿ ಕಾಣದೆ ಜೀರ್ಣಾವಸ್ಥೆ ತಲುಪಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ದೊಡ್ಡ ಮೊತ್ತ ಬೇಕಾಗಿದೆ

ರಸ್ತೆ ಸಮಸ್ಯೆಯ ಬಗ್ಗೆ ಪ್ರತಿಕ್ರಿಯಿಸಿದ ಇಳಂತಿಲ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ತಿಮ್ಮಪ್ಪ ಗೌಡ, ಉರುವಾಲು ಗ್ರಾಮ ಮತ್ತು ಇಳಂತಿಲ ಗ್ರಾಮವನ್ನು ಬೆಸೆಯುವ ಈ ರಸ್ತೆಯ ಅಭಿವೃದ್ಧಿಗೆ ಅಧಿಕ ಮೊತ್ತದ ಅನುದಾನ ಬೇಕಾಗಿದೆ.

ಎರಡೂ ಗ್ರಾಮಗಳು ಕನಿಷ್ಠ ಆದಾಯವನ್ನು ಹೊಂದಿರುವುದರಿಂದ ಈ ರಸ್ತೆಗೆ ಅಗತ್ಯವಿರುವ ಅನುದಾನವನ್ನು ಭರಿಸಲು ಶಕ್ತವಾಗಿಲ್ಲ. ಶಾಸಕರಿಂದ ಅಥವಾ ಸಂಸದರಿಂದ ಅಗತ್ಯ ಅನುದಾನ ಲಭಿಸಿದರೆ ಈ ಭಾಗದ ರಸ್ತೆಯ ಅಭಿವೃದ್ಧಿ ಸಾಧ್ಯವಾಗಬಹುದೆಂದು ತಿಳಿಸಿದ್ದಾರೆ.

ಉಜಿರೆ, ಧರ್ಮಸ್ಥಳಕ್ಕೆ ಸಮೀಪದ ರಸ್ತೆ

ಉಜಿರೆ, ಧರ್ಮಸ್ಥಳಕ್ಕೆ ಸಂಪರ್ಕಿಸಲು ಈ ಮಾರ್ಗವು ಅತ್ಯಂತ ಹತ್ತಿರದ ಮಾರ್ಗವಾಗಿದೆ. ಅಲ್ಲದೇ ಗ್ರಾಮದ ಸುತ್ತಮುತ್ತಲಿನ ಮಂದಿಗೂ ಈ ಮಾರ್ಗ ಅಭಿವೃದ್ಧಿಗೊಂಡರೆ ಹೆಚ್ಚು ಹೆಚ್ಚು ಬಳಸಲು ಅನುಕೂಲವಾಗಲಿದೆ. ಅಲ್ಲದೇ ಇಲ್ಲಿನ ಇಚ್ಲೂರು ಬಾಲಸುಬ್ರಹ್ಮಣ್ಯ ದೇವಳಕ್ಕೂ ತೆರಳಲು ಅನುಕೂಲವಾಗಲಿದೆ.

ಸಂತ ಹಣದಲ್ಲಿ ರಸ್ತೆ ದುರಸ್ತಿ

ಗ್ರಾಮಗಳ ಆಡಳಿತಕ್ಕೆ ಬೇಸತ್ತು ಅನೇಕ ಬಾರಿ ಸ್ಥಳೀಯ ಮುಖಂಡ, ತಾಲೂಕು ಪಂಚಾಯತ್ ಮಾಜಿ ಸದಸ್ಯ ಮಾಯಿಲ್ತೋಡಿ ಈಶ್ವರ್ ಭಟ್ ಅವರು ಸ್ವಂತ ಖರ್ಚಿನಲ್ಲಿ ತಾತ್ಕಾಲಿಕ ದುರಸ್ತಿ ಮಾಡಿದ್ದರು. ಮಾಜಿ ಶಾಸಕ ದಿವಂಗತ ವಸಂತ ಬಂಗೇರ ಅವರ ಮುತುವರ್ಜಿಯಿಂದ ಈ ಭಾಗದಲ್ಲಿ ಹಾರಕೆರೆ ಭಾಗದಲ್ಲಿ ರಸ್ತೆ ನಿರ್ಮಾಣಕ್ಕೆ ಅನುದಾನ ಬಿಡುಗಡೆಗೊಂಡು ರಸ್ತೆ ನಿರ್ಮಾಣವಾಗಿತ್ತು. ಆದರೆ ಹಾರಕೆರೆ ನಂತರ ಭಾಗದಲ್ಲಿ ಮಳೆಯ ಕಾರಣದಿಂದ ರಸ್ತೆ ಹಾಳಾಗಿದ್ದು, ರಸ್ತೆ ದುರಸ್ತಿಯಾಗಿಲ್ಲ.

ಬೀಜೋಪಚಾರ ಆಂದೋಲನ, ಸುರಕ್ಷಿತ ಕೀಟ ನಾಶಕ ಬಳಕೆ ತರಬೇತಿ



ಬಂಟ್ವಾಳ: ತಾಲೂಕು ಕೃಷಿ ಇಲಾಖೆ ಯ ವತಿಯಿಂದ ಬಂಟ್ವಾಳ ಹೋಬಳಿ ಮಟ್ಟದ 'ಬೀಜೋಪಚಾರ ಆಂದೋಲನ' ಹಾಗೂ ಸುರಕ್ಷಿತ ಕೀಟ ನಾಶಕಗಳ ಬಳಕೆ ಕುರಿತು ತರಬೇತಿ ಸೋಮವಾರ ತಾಲೂಕಿನ ಸಂಗಬೆಟ್ಟು ಗ್ರಾಮದ ಕರ್ಪೆ ಸಮಾಜ ಮಂದಿರದಲ್ಲಿ ನಡೆಸಲಾಯಿತು.

ಸಿದ್ಧಕಟ್ಟೆ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ರತ್ನ ಕುಮಾರ್ ಚೌಟ ಉದ್ಘಾಟಿಸಿದರು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಪ್ರಭಾಕರ ಪ್ರಭು, ಸಂಗಬೆಟ್ಟು ಗ್ರಾ.ಪಂ. ಮಾಜಿ ಅಧ್ಯಕ್ಷ ಸತೀಶ್ ಪೂಜಾರಿ ಅಲಕ್ಕೆ, ಪ್ರಗತಿಪರ ಕೃಷಿಕರಾದ ರೇವತಿ ದೋಟ, ದಾಮೋದರ, ಸಂಗಬೆಟ್ಟು ಗ್ರಾ.ಪಂ. ಒಕ್ಕೂಟದ ಅಧ್ಯಕ್ಷೆ ಪ್ರಮೀಳಾ, ಎಂಕೆಪಿಐ ಸಿಇಒ ವಿವೇಕ್ ಹಾಗೂ ಎನ್ ಆರ್‌ಎಲ್‌ಎಂ ಜಿಲ್ಲಾ ವ್ಯವಸ್ಥಾಪಕ ವಿನಿತ್ ಅತಿಥಿಗಳಾಗಿದ್ದರು. ತಾಲೂಕು ಕೃಷಿ ಇಲಾಖೆ ತಾಂತ್ರಿಕ ಅಧಿಕಾರಿ ನಂದನ್ ಶೆಣೈ ಹಾಗೂ ನಿವೃತ್ತ ಕೃಷಿ ಅಧಿಕಾರಿ ಕೊರಗಪ್ಪ ಕೃಷಿ, ಭತ್ತ ಕೃಷಿಯ ಸಮಗ್ರ ತಾಂತ್ರಿಕತೆ, ಬೀಜೋಪಚಾರ, ಸುರಕ್ಷಿತ ಕೀಟನಾಶಕ ಬಳಕೆ ಕುರಿತು ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ನೀಡಿದರು. ತಾಲೂಕು ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಪ್ರದೀಪ್ ಡಿಸೋಜಾ ಕೀಟನಾಶಕಗಳ ಬಳಕೆ, ಅದರಿಂದಾಗುವ ತೊಂದರೆಗಳ ಮಾಹಿತಿ ನೀಡಿದರು. ರೈತರು ಅಧಿಕಾರಿಗಳೊಂದಿಗೆ ಸಂವಾದ ನಡೆಯಿತು. ಕೃಷಿ ತೋಟಗಾರಿಕಾ ಇಲಾಖೆಗಳ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲಾಯಿತು. ದಾಮೋದರ ಪೂಜಾರಿ ಕರ್ಪೆ ಸ್ವಾಗತಿಸಿದರು. ಆತ್ಮ ಸಂಜೀವಿನಿ ಒಕ್ಕೂಟದ ಎಲ್ ಸಿ ಆರ್ ಪಿ ಪ್ರೇಮ ವಂದಿಸಿದರು. ರಾಮಕೃಷ್ಣ ಪ್ರಭು ಕರ್ಪೆ ನಿರೂಪಿಸಿದರು. 70ಕ್ಕೂ ಮಿಕ್ಕ ರೈತರು ಪಾಲ್ಗೊಂಡಿದ್ದರು.

ಮುಳಿಯ ಫಾರ್ಮ್ ಲ್ಯಾಂಡ್‌ನಿಂದ ಸಮಗ್ರ ಮಲ್ಲಿಗೆ ಕೃಷಿಯ ತರಬೇತಿ



ಪುತ್ತೂರು: ಹಿಂದೂ ಎಕನಾಮಿಕ್ ಫೋರಂ ಮತ್ತು ಮುಳಿಯ ಮ್ಯಾನೇಜ್ಡ್ ಫಾರ್ಮ ಲ್ಯಾಂಡ್ ವತಿಯಿಂದ ಸಮಗ್ರ ಮಲ್ಲಿಗೆ ಕೃಷಿ ನಿರ್ವಹಣೆ ಮತ್ತು ಮಾರುಕಟ್ಟೆ ವಿಷಯದಲ್ಲಿ ತರಬೇತಿ ಕಾರ್ಯಕ್ರಮ ನಡೆಯಿತು.

- ಮಲ್ಲಿಗೆ ಕೃಷಿ ನಿರ್ವಹಣೆ, ಮಾರುಕಟ್ಟೆ ತರಬೇತಿ
- 120 ಮಂದಿ ಅಭ್ಯರ್ಥಿಗಳು ತರಬೇತಿಯಲ್ಲಿ ಭಾಗಿ

ಉದ್ಘಾಟನೆಯನ್ನು ಮಲ್ಲಿಗೆ ಕೃಷಿ ತರಬೇತಿಯ ಸಂಪನ್ಮೂಲ ವ್ಯಕ್ತಿ ರಾಮಕೃಷ್ಣ ಶರ್ಮ ಶಂಕರಪುರ ನೆರವೇರಿಸಿದರು. ಹಿಂದೂ ಎಕನಾಮಿಕ್ ಫೋರಂನ ಪುತ್ತೂರು ಘಟಕದ ಅಧ್ಯಕ್ಷ ಮೋಹನ ಕೆ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಯಾಗಿದ್ದ ಕೃಷ್ಣವೇಣಿ ಮುಳಿಯ ಅವರು ಕಾರ್ಯಕ್ರಮದ ಉದ್ದೇಶ ಮತ್ತು ಸ್ವಾವಲಂಬಿ ಜೀವನಕ್ಕೆ ಮಲ್ಲಿಗೆ ಕೃಷಿ ಹೇಗೆ ಉಪಯೋಗ ಆಗಬಹುದು ಮತ್ತು ಹಿಂದೂ ಎಕನಾಮಿಕ್ ಫಾರಂನ ಮಹಿಳಾ ಘಟಕದ ಯೋಜನೆಗಳ ಕುರಿತು ಮಾಹಿತಿ ನೀಡಿ ಶುಭ ಕೋರಿದರು.

ವೇದಿಕೆಯಲ್ಲಿ ಹಿಂದೂ ಎಕನಾಮಿಕ್ ಫೋರಂನ ಮಹಿಳಾ ಘಟಕದ ಉಪಾಧ್ಯಕ್ಷೆ ಉಮಾ ಡಿ. ಪ್ರಸನ್ನ ಮಹಿಳಾ ಘಟಕದ ಕಾರ್ಯದರ್ಶಿ ಆಶಾ ಮುತ್ಲಾಜೆ, ಹಿಂದೂ ಎಕನಾಮಿಕ್ ಫೋರಂನ ಕಾರ್ಯದರ್ಶಿ ಅನೂಪ್ ಕೆ.ಜೆ. ಉಪಸ್ಥಿತರಿದ್ದರು.

ಸುಮಾರು 120 ಮಂದಿ ಅಭ್ಯರ್ಥಿಗಳು ಈ ತರಬೇತಿಯ ಪ್ರಯೋಜನವನ್ನು ಪಡೆದುಕೊಂಡರು. ಹಿಂದೂ ಎಕನಾಮಿಕ್ ಅಧ್ಯಕ್ಷ ಮೋಹನ ಕೆ. ಪ್ರಸ್ತಾವಿಸಿದರು. ಹಿಂದೂ ಎಕನಾಮಿಕ್ ಫೋರಂನ ಸ್ಥಾಪಕಾಧ್ಯಕ್ಷ ಕೃಷ್ಣಮೋಹನ್ ಪರಿಚಯಿಸಿದರು.

ಮೌಲ್ಯವರ್ಧಿತ ಪಾಲನೆ ಮಕ್ಕಳಿಗೆ ಅಗತ್ಯ: ಡಾ. ಗುರುರಾಜ್ ಇಟಗಿ



ಮಂಗಳೂರು: ಶಿಕ್ಷಣವು ಮಕ್ಕಳಲ್ಲಿ ಬೌದ್ಧಿಕ, ವೈಜ್ಞಾನಿಕ, ಸಾಮಾಜಿಕ, ಮಾನವೀಯ ಮೌಲ್ಯಗಳನ್ನು ಮೂಡಿಸಿ, ಒಳ್ಳೆಯ ವ್ಯಕ್ತಿತ್ವ ಹಾಗೂ ವ್ಯಕ್ತಿಯನ್ನು ಸೃಷ್ಟಿಸುವಂತಿರಬೇಕು. ಉದ್ಯೋಗ ಗಳಿಕೆ ಶಿಕ್ಷಣದ ಉದ್ದೇಶವಾಗಿರಬಾರದು. ಪೋಷಕರ ನೈತಿಕ ಬೆಂಬಲದೊಂದಿಗೆ ಗುಣಮಟ್ಟದ ಶಿಕ್ಷಣ ದೊರೆತಾಗ ಮಕ್ಕಳ ಸರ್ವಾಂಗೀಣ ಬೆಳವಣಿಗೆ ಪರಿಪೂರ್ಣಗೊಳ್ಳಲು ಸಾಧ್ಯ ಎಂದು ಶಾರದಾ ಸಮೂಹ ಸಂಸ್ಥೆಗಳ ಕೌನ್ಸಿಲರ್ ಡಾ. ಗುರುರಾಜ್ ಇಟಗಿ ಹೇಳಿದರು.

ತಲಪಾಡಿಯ ಶಾರದಾ ವಿದ್ಯಾನಿಕೇತನ ಪಬ್ಲಿಕ್ ಶಾಲೆಯಲ್ಲಿ ನಡೆದ ರಕ್ಷಕ – ಶಿಕ್ಷಕ ಸಂಘದ ಪ್ರಥಮ ಸಭೆಯಲ್ಲಿ ಅವರು ಮಾತನಾಡಿದರು. ಕಿರಿಯ ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯಿನಿ ಶ್ಯಾಮಲಾ ಮಟ್ ಮಾತನಾಡಿದರು. ಪ್ರಾಂಶುಪಾಲ ಮೋಹನ್ ದಾಸ್ ಶೈಕ್ಷಣಿಕ ವರ್ಷದ ಮಾರ್ಗಸೂಚಿ ಹಾಗೂ ನೂತನ ಪಠ್ಯ ಕ್ರಮಗಳ ಬಗ್ಗೆ ವಿವರಿಸಿದರು. ಥಾಯ್ಲೆಂಡ್ ಬ್ಯಾಂಕಾಕ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಮುಕ್ತ ಟೇಕ್ವಾಂಡೋ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ರಕ್ಷಕ – ಶಿಕ್ಷಕ ಸಂಘದ ನೂತನ ಅಧ್ಯಕ್ಷರಾಗಿ ಹರ್ಷಿತ್ ಗಟ್ಟಿ ಉಪಾಧ್ಯಕ್ಷರಾಗಿ ರಕ್ಷಾ, ಕಾರ್ಯದರ್ಶಿಯಾಗಿ ರಾಮಮೋಹನ್, ಉಪ ಕಾರ್ಯದರ್ಶಿ ಯಾಗಿ ಶುಭಾಕಾಂತಿ ಮತ್ತು ಸದಸ್ಯರಾಗಿ ಗುಣಶ್ರೀ, ಶ್ವೇತಾ ಅನಿಲ್, ಸೌಮ್ಯ ಎಸ್.ಪಿ., ನಮ್ರತಾ ಡಿ., ಅಶ್ವಿನಿ ಡಿ. ಗಟ್ಟಿ ತೇಜೇಶ್ ಕಿರಣ್ ಕೆ.ಎ., ನಿಶಾ ಬಿ.ಜೆ. ಹಾಗೂ ಅನುಪಮಾ ನೇಮಕಗೊಂಡರು. ಪ್ರವೀಣ್ ಶುಭಾಶಂಸನೆಗೈದರು. ಪ್ರಾಂಶುಪಾಲೆ ಸುಷ್ಮಾ ದಿನಕರ್ ಇದ್ದರು. ಉಪ ಪ್ರಾಂಶುಪಾಲರಾದ ಜಯಶ್ರೀ ಎಲ್. ಸ್ವಾಗತಿಸಿ, ರಜನಿ ಕೆ. ರೈ ವಂದಿಸಿದರು. ಶಿಕ್ಷಕಿ ರಶ್ಮಿ ನಿರೂಪಿಸಿದರು.

ಕಿನ್ನಿಗೋಳಿಯಲ್ಲಿ ಶ್ರೀ ಮೇಘ ರಂಜನಿ | ಪುಷ್ಕಳ್‌ಕುಮಾರ್ ಅಭಿಪ್ರಾಯ

ಪಕ್ವತೆಯಿಂದ ಕಲಾವಿದನಿಗೆ ಪ್ರೇಕ್ಷಕರ ಅಭಿಮಾನ ಗಳಿಕೆ

ಮಂಗಳೂರು: ಮಧುರತರಂಗ, ದಕ್ಷಿಣಕನ್ನಡ, ಮಂಗಳೂರು ಆರ್ಪಿಸಿದ, ಯುಗಪುರುಷ ಹಾಗೂ ಸಂಗೀತ ಕಲಾವಿದರ ಒಕ್ಕೂಟ ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆ ಜಂಟಿಯಾಗಿ ಶ್ರೀ ಮೇಘ ರಂಜನಿ ಎಂಬ ಶೀರ್ಷಿಕೆಯಲ್ಲಿ ಜಗದೀಶ್ ಶಿವಪುರ ಸಾರಥ್ಯದ ಕಾರ್ಯಕ್ರಮ ಸಂಪನ್ನಗೊಂಡಿತು.

ಉಡುಪಿಯ ಕಾನಂಗಿ ದೇವಸ್ಥಾನ ಪ್ರಧಾನ ಅರ್ಚಕ ಕುತ್ಪಾಡಿ ರಾಧಾಕೃಷ್ಣ ಭಟ್ ದೀಪಪ್ರಜ್ವಲನೆ ಮಾಡಿದರು.

ಹರಿಕಥೆ ಕಲಾವಿದ ತೋನ್ಸೆ ಪುಷ್ಕಳ್ ಕುಮಾರ್ ಮಾತನಾಡಿ, ಕಲಾವಿದನ ಪ್ರದರ್ಶನ, ಪ್ರತಿಭೆಯಲ್ಲಿ ಪಕ್ವತೆ ಇರಬೇಕು. ಕಲಾವಿದರಲ್ಲಿ ಶಾಸ್ತ್ರೀಯ ಅಧ್ಯಯನ ಕಡಿಮೆ ಇದ್ದರೂ ಕೂಡ ಶ್ರುತಿ ಲಯ ರಾಗಗಳ ಸಾಮಾನ್ಯ ಜ್ಞಾನ ಪ್ರತಿಭೆಯಲ್ಲಿ ಪಕ್ವತೆ ಇದ್ದಾಗ ಪ್ರೇಕ್ಷಕರ ಅಭಿಮಾನ ಗಳಿಸಲು ಸಾಧ್ಯ ಎಂದು ಹೇಳಿದರು.

ಭುವನಾಭಿರಾಮ ಉಡುಪ ಇವರ ಘನ ಅಧ್ಯಕ್ಷತೆ ವಹಿಸಿದ್ದರು. ಒಕ್ಕೂಟದ ಅಧ್ಯಕ್ಷ ಶ್ರೀ ಧನರಾಜ್, ಪ್ರಕಾಶ್, ಶ್ರೀಮತಿ ಡಾ. ಸರಳ ರಮೇಶ್ ಕುಂದರ್, ಮಧುರತರಂಗದ ಕೋಶಾಧಿಕಾರಿ ಪಿ. ಶಿವರಾಮ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀ ಮೇಘ ರಂಜನಿ ಕಾರ್ಯಕ್ರಮದಲ್ಲಿ ಕರಾವಳಿ ಸಂಗೀತದ ಒಕ್ಕೂಟದ ಕಲಾವಿದರಾದ ಹಾಗೂ ಮಧುರತರಂಗ ಸಂಸ್ಥೆಯಿಂದ ಗೌರವವನ್ನು ಪಡೆದಿರುವ ಮುರಳೀಧರ ಕಾಮತ್, ಸತೀಶ್ ಸುರತ್ಕಲ್, ನವಗಿರಿ ಗಣೇಶ್, ಅಧ್ಯಕ್ಷರಾದ ಧನರಾಜ್ ಅತ್ತಾವರ ಹಾಗೂ ಕಲಾವಿದರಾದ ದೀಪಕ್ ಉಳ್ಳಾಲ್, ಐವನ್ ರಿಚರ್ಡ್ ಡಿಸೋಜ ವಾದ್ಯಗೋಷ್ಠಿಯಲ್ಲಿದ್ದರು.

ಉಡುಪಿಯ ಮುಕ್ತ ಶ್ರೀನಿವಾಸರವರು ಅಭಿಪ್ರಾಯ ವ್ಯಕ್ತಪಡಿಸಿದರು. ರವೀಂದ್ರ ಪ್ರಭು ಹಾಗೂ ಮುರಳೀಧರ ಕಾಮತ್ ವಾದ್ಯಗೋಷ್ಠಿಯ ಕಲಾವಿದರು ಹಾಗೂ ಗಾಯಕರ ಸಂಯೋಜನೆಯನ್ನು ಮಾಡಿ ಗಾಯಕರಾದ ಕರ್ನಾಟಕ ಸ್ವರಕಂಠೀರವ, ಸ್ವರ ತಪಸ್ವಿ ಜಗದೀಶ್ ಶಿವಪುರ, ತೋನ್ಸೆ ಪುಷ್ಕಳ್‌ಕುಮಾರ್, ರಾಮು, ರೇಷ್ಮಾ ಮಂಜುನಾಥ್ ಹಾಗೂ ಅದ್ಭುತ ಗಾಯಕಿ ವೈಷ್ಣವಿ ಭಟ್ ಕಟೀಲು, ರಮೇಶ್ ಸಾಲ್ಯಾನ್, ಶೀಲಾಪಡೀಲ್ ಉತ್ತಮವಾದ ಕಂಠಸಿರಿಯಲ್ಲಿ ಗಾಯನವನ್ನು ಮಾಡಿ ನೆರೆದಿದ್ದ ಪ್ರೇಕ್ಷಕರನ್ನು ಮನರಂಜಿಸಿತು.

ವರ್ಣಶ್ರೀ ನಿರೂಪಿಸಿದರು ನಯನ ದಿವಾಕರ್ ವಂದಿಸಿದರು. ಸಮಾರಂಭದಲ್ಲಿ ರೇಖಾ ಜಗದೀಶ್ ಶಿವಪುರ, ಭಜನಾ ಭಗೀರಥ ಶ್ರೀ ಭರತ್‌ಕುಮಾರ್, ಲೆಕ್ಕಪರಿಶೋಧಕ ಕೆ. ಆರ್. ಕಾರಂತ್, ಸುಭಾಷಿತ್ ಉಡುಪಿ ಹಾಗೂ ಒಕ್ಕೂಟದ ಕಲಾವಿದರು ಪಾಲ್ಗೊಂಡಿದ್ದರು.



ಬಿರುದು ಪ್ರದಾನ

ಮಂಗಳೂರಿನ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆಯ ವೈದ್ಯಕೀಯ ನಿರ್ದೇಶಕ ಡಾ. ಹಂಸರಾಜ್ ಆಳ್ವ ಅವರನ್ನು ಮಧುರತರಂಗ ಸಂಗೀತ ಸಂಸ್ಥೆಯ ವತಿಯಿಂದ 'ವೈದ್ಯೋ ನಾರಾಯಣ ಋಷಿ' ಬಿರುದು ಪ್ರದಾನ ಮಾಡಿ ಗೌರವಿಸಲಾಯಿತು.

ಮರಾಠಿ ಸೇವಾ ಸಂಘದ ಮಹಾಸಭೆ | ಡಾ. ಭರತ್ ಶೆಟ್ಟಿ ಅಭಿಪ್ರಾಯ

ಸುಸಂಸ್ಕೃತ ಸಮಾಜ ನಿರ್ಮಾಣ ನಮ್ಮ ಜವಾಬ್ದಾರಿ

ಕೈಕಂಬ: ಮಂಗಳೂರು ತಾಲೂಕು ಮರಾಠಿ ಸಮಾಜ ಸೇವಾ ಸಂಘಗಂಜಿಮಠ ಇದರ 6ನೇ ವರ್ಷದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ಶಾಸಕ ಭರತ್ ಶೆಟ್ಟಿ ಅನುದಾನ ಮತ್ತು ಕರಾವಳಿ ಅಭಿವೃದ್ಧಿ ಮಂಡಳಿ ಅನುದಾನದಲ್ಲಿ ನಿರ್ಮಾಣಗೊಂಡ ಸಂಘದ ವಿಸ್ತರಿತ ಕಟ್ಟಡದ ಉದ್ಘಾಟನೆ, ಮಹಾಸಭೆ, ವಿದ್ಯಾರ್ಥಿಗಳಿಗೆ ಪುರಸ್ಕಾರ ಹಾಗೂ ಅಭಿನಂದನಾ ಕಾರ್ಯಕ್ರಮ ಭಾನುವಾರ ಸಂಘದ ಸಭಾಭವನದಲ್ಲಿ ನಡೆಯಿತು.

ದೀಪ ಬೆಳಗಿಸಿ ಸಭಾ ಕಾರ್ಯಕ್ರಮ ಉದ್ಘಾಟಿಸಿ, ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ಮರಾಠಿ ಸಮಾಜದ ಮಕ್ಕಳನ್ನು ಸನ್ಮಾನಿಸಿ ಮಾತನಾಡಿದ ಶಾಸಕ ಡಾ. ಭರತ್ ಶೆಟ್ಟಿ, ಮರಾಠಿ ಸಮಾಜದ ಜನರಲ್ಲಿ ಮುಗ್ಧತೆ, ಪ್ರಾಮಾಣಿಕತೆ ಮತ್ತು ದೇಶಪ್ರೇಮವನ್ನು ಕಾಣಬಹುದು. ಸುಸಂಸ್ಕೃತ ಸಮಾಜ ಕಟ್ಟುವ ಜವಾಬ್ದಾರಿ ನಮ್ಮೆಲ್ಲರಲ್ಲಿ ಇದೆ. ಸ್ಪಷ್ಟ ಗುರಿಯೊಂದಿಗೆ ಮಕ್ಕಳಲ್ಲಿ ಛಲ ಮತ್ತು ಹಟ ಇರಬೇಕು. ಹಾಗಿದ್ದಾಗ ಮಾತ್ರ ಸಾಧನೆಯ ಯಶಸ್ಸು ನಮ್ಮದಾಗುತ್ತದೆ ಎಂದರು.

ಕರಾವಳಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಂ.ಎ. ಗಫೂರ್ ಮಾತನಾಡಿ, ಮರಾಠಿ ಸಮಾಜ ಸಾಂಸ್ಕೃತಿಕ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದೆ. ಒಂದು ಸಮುದಾಯದ ಅಭಿವೃದ್ಧಿಗೆ ಹಣ ನೀಡುತ್ತಿದ್ದೇವೆ. ಅದು ನಿಮ್ಮದೇ ಹಣವಾಗಿದ್ದು, ಸಮಾಜಮುಖಿ ಕೆಲಸಗಳ ಮೂಲಕ ಸದ್ಬಳಕೆಯಾಗುತ್ತಿದೆ. ಸರ್ಕಾರಗಳು ಎಲ್ಲ ಸಮುದಾಯಗಳ ಅಭಿವೃದ್ಧಿ ದೃಷ್ಟಿಯಿಂದ ಕೆಲಸ ಮಾಡಬೇಕು ಎಂದರು.



ಉದ್ಯಮಶೀಲತೆ ಬೆಳೆಯಲಿ

ಸಿಂಡಿಕೇಟ್–ಕೆನರಾ ಬ್ಯಾಂಕ್‌ನ ನಿವೃತ್ತ ಮಹಾಪ್ರಬಂಧಕ ರಾಮ ನಾಯ್ಕ್ ಮಾತನಾಡಿ, ನಮ್ಮ ಸಮಾಜದಲ್ಲಿ ಉದ್ಯಮಶೀಲತೆ ಇನ್ನೂ ಬೆಳೆದಿಲ್ಲ. ಉದ್ಯಮಿಗಳ ಸಂಖ್ಯೆ ವಿರಳವಾಗಿದೆ. ಸ್ವಂತ ಉದ್ಯಮಕ್ಕೆ ನಮ್ಮ ಮಕ್ಕಳು ಪ್ರಯತ್ನಿಸಬೇಕು. ಸಂಘದಲ್ಲಿ ಗ್ರಾಮೀಣ ಮಕ್ಕಳಿಗೆ ಉದ್ಯಮಶೀಲತೆ ಬಗ್ಗೆ ಕಾರ್ಯಾಗಾರ ನಡೆಸುವ ಅಗತ್ಯವಿದೆ ಎಂದರು.

ಸನ್ಮಾನ

ಸಂಘದ ಅಧ್ಯಕ್ಷ ಗುಣಪಾಲ ನಾಯ್ಕ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಾಸಕ ಡಾ. ಭರತ್ ಶೆಟ್ಟಿ ಎಂ.ಎ. ಗಫೂರ್, ಸಿಂಡಿಕೇಟ್–ಕೆನರಾ ಬ್ಯಾಂಕ್‌ನ ನಿವೃತ್ತ ಹಿರಿಯ ಅಧಿಕಾರಿ ರಾಮ ನಾಯ್ಕ್ ಹಾಗೂ ಮರಾಠಿ ಸಮಾಜದ ಹಲವರನ್ನು ಸನ್ಮಾನಿಸಲಾಯಿತು.

ಸಂಘದ ಗೌರವಾಧ್ಯಕ್ಷ ವಿ.ಪಿ. ನಾಯ್ಕ್ ಸ್ವಾಗತಿಸಿದರು. ಸಂಚಾಲಕ ಶೇಖರ ಕಡ್ತಲ ಅವರು ಪ್ರಸ್ತಾವಿಸಿದರು.

ಕರಾವಳಿ ಅಭಿವೃದ್ಧಿ ಮಂಡಳಿ ಕಾರ್ಯದರ್ಶಿ ಪ್ರದೀಪ್ ಡಿ'ಸೋಜ, ಧಾರ್ಮಿಕ, ಸಾಮಾಜಿಕ ಮುಖಂಡ ಚಂದ್ರಹಾಸ ಶೆಟ್ಟಿ ನಾರಳ, ಮಂಜೇಶ್ವರ ಮಂಜುನಾಥ ಕಾಮತ್, ಶಾರದಾ ಡಿ. ನಾಯ್ಕ್, ಸುನೀಲ್ ಗಂಜಿಮಠ, ತಾಲೂಕು ಮರಾಠಿ ಸಂಘದ ಪದಾಧಿಕಾರಿಗಳು, ಜಿಲ್ಲಾ ಮಟ್ಟದ ಮರಾಠಿ ಸಂಘಗಳ ಅಧ್ಯಕ್ಷರು, ಮಾಜಿ ಅಧ್ಯಕ್ಷರು, ಪದಾಧಿಕಾರಿಗಳು, ಸಮಾಜದ ಹಿರಿಯರು ಇದ್ದರು. ಶಿಕ್ಷಕಿ ನಿವೇದಿತಾ ನಿರೂಪಿಸಿದರು. ಸಂಘದ ಉಪಾಧ್ಯಕ್ಷೆ ಪದ್ಮಾ ಎಸ್. ವಂದಿಸಿದರು.

ಸಿಪಿಸಿಆರ್‌ಐನಿಂದ ಪಾಲ್ತಾಡಿಯಲ್ಲಿ ಕೃಷಿ ಉಳಿಸಿ ಅಭಿಯಾನ, ರೈತರೊಂದಿಗೆ ನೇರ ಸಂವಾದ | ಹಿರಿಯ ಕೃಷಿಕ ಬಾಳಪ್ಪ ಪೂಜಾರಿ ಬಂಬಿಲದೋಳ ಅಭಿಪ್ರಾಯ

ಸಿಪಿಸಿಆರ್‌ಐ ವೈಜ್ಞಾನಿಕ ಸಂಶೋಧನೆ ಮೂಲಕ ಕೃಷಿಕರ ಹಿತ ಕಾಯುವ ಕೆಲಸ ಮಾಡಿದೆ

ಸವಣೂರು: ವೈಜ್ಞಾನಿಕ ಸಂಶೋಧನೆಯ ಮೂಲಕ ಕೃಷಿಕರ ಹಿತ ಕಾಯುವ ಕೆಲಸವನ್ನು ಸಿಪಿಸಿಆರ್‌ಐ ಮಾಡುತ್ತಿದೆ. ಕೃಷಿಕರ ಬಳಿಗೆ ಬಂದು ಮಾಹಿತಿ ಹಾಗೂ ಪ್ರಾತ್ಯಕ್ಷಿಕೆ ನೀಡುವ ಮೂಲಕ ಶ್ಲಾಘನೀಯ ಕಾರ್ಯ ಮಾಡಿದೆ ಎಂದು ಕಡಬ ತಾಲೂಕು ಕೃಷಿಕ ಸಮಾಜದ ನಿರ್ದೇಶಕ, ಹಿರಿಯ ಕೃಷಿಕ ಬಾಳಪ್ಪ ಪೂಜಾರಿ ಬಂಬಿಲದೋಳ ಹೇಳಿದರು.

ಅವರು ಪಾಲ್ತಾಡಿ ಗ್ರಾಮದ ಮಂಜುನಾಥನಗರ ಶ್ರೀ ಸಿದ್ಧಿವಿನಾಯಕ ಸಭಾಭವನದಲ್ಲಿ ಸಿಪಿಸಿಆರ್‌ಐ ಪ್ರಾಂತೀಯ ಕ್ಷೇತ್ರ ವಿಟ್ಲ ಇದರ ವತಿಯಿಂದ ಸಿದ್ಧಿವಿನಾಯಕ ಸೇವಾ ಸಂಘ ಮಂಜುನಾಥನಗರ ಇದರ ಸಹಯೋಗದಲ್ಲಿ ಕೃಷಿ ಉಳಿಸಿ ಅಭಿಯಾನದ ಅಂಗವಾಗಿ ನಡೆದ ಮಾಹಿತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.



ಪುತ್ತೂರು ಮಹಿಳಾ ವಿವಿಧೋದ್ದೇಶ ಸಹಕಾರಿ ಸಂಘದ ಉಪಾಧ್ಯಕ್ಷೆ ಇಂದಿರಾ ಬಿ.ಕೆ., ಸವಣೂರು ಪಿಡಿಒ ವಸಂತ ಶೆಟ್ಟಿ ಶುಭ ಹಾರೈಸಿದರು.

ಮಾಹಿತಿ ಕಾರ್ಯಾಗಾರ

ಸಭೆಯ ಬಳಿಕ ರೈತರೊಂದಿಗೆ ನೇರ ಸಂವಾದ ಪ್ರಾತ್ಯಕ್ಷಿಕೆಗಳು ಹಾಗೂ ತಾಂತ್ರಿಕ ಸಲಹಾ ಕಾರ್ಯಕ್ರಮ ಮಾಹಿತಿ ಕಾರ್ಯಾಗಾರ ನಡೆಯಿತು. ಸಿಪಿಸಿಆರ್‌ಐ ಪ್ರಾದೇಶಿಕ ಕೇಂದ್ರದ ವಿಜ್ಞಾನಿ ಡಾ. ಭವಿಷ್ಯ ಅಡಿಕೆಗೆ ಬಾಧಿಸುವ ರೋಗಗಳು ಹಾಗೂ ನಿರ್ವಹಣೆ ಕುರಿತು ಮಾಹಿತಿ ನೀಡಿದರು.ರೈತರು ಮಣ್ಣು ಪರೀಕ್ಷೆ ಮಾಡಿಕೊಂಡು ಬಂದ ವರದಿಯ ಮೇಲೆ ಗೊಬ್ಬರಗಳನ್ನು ನೀಡಬೇಕು. ಮಣ್ಣಿನ ರಸಸಾರವನ್ನು ಹೆಚ್ಚಿಸಬೇಕು. ರಸಸಾರ ಕಡಿಮೆ ಇದ್ದರೆ, ಉಪಕಾರಿ ಸೂಕ್ಷ್ಮಾಣು ಜೀವಿಗಳ ಚಟುವಟಿಕೆ, ಬೇಕಾದ ಪೋಷಕಾಂಶಗಳ ಲಭ್ಯತೆ, ಬೇರಿನ ಬೆಳವಣಿಗೆ, ಇವೆಲ್ಲವೂ ಕಡಿಮೆ. ಅಲ್ಲದೆ, ಕಡಿಮೆ ಪ್ರಮಾಣದಲ್ಲಿ ಬೇಕಾಗಿರುವ ಅಲ್ಯುಮಿನಿಯಂ, ಕಬ್ಬಿಣ ಮತ್ತು ಮ್ಯಾಂಗನೀಸ್ ಅಂಶಗಳ ಲಭ್ಯತೆ ಹೆಚ್ಚು. ಹಾಗಾಗಿ, ಮಣ್ಣಿನ ರಸಸಾರ ಹೆಚ್ಚು ಮಾಡಲೇಬೇಕು. ಸುಣ್ಣ ಹಾಕಿದ ಎರಡರಿಂದ ಮೂರು ವಾರಗಳ ನಂತರ ಪೋಷಕಾಂಶ ನೀಡಬಹುದು. ಮಣ್ಣಿಗೆ ಸಾವಯವ ಗೊಬ್ಬರ ಸೇರಿಸುವುದು ಅತಿ ಮುಖ್ಯ. ಇದರಿಂದ ಮಣ್ಣಿನ ಭೌತಿಕ ಗುಣ, ಬೇರಿನ ಬೆಳವಣಿಗೆ, ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೆಚ್ಚುತ್ತದೆ ಎಂದರು.

ಸಿಪಿಸಿಆರ್‌ಐ ಹಿರಿಯ ವಿಜ್ಞಾನಿ ಡಾ. ನಾಗರಾಜ್ ಎನ್.ಆರ್. ಮಾತನಾಡಿದರು. ತೋಟಗಾರಿಕೆ ಇಲಾಖೆ ತಾಂತ್ರಿಕ ಸಹಾಯಕ ಶಿವಪ್ರಕಾಶ್ ಮಾಹಿತಿ ನೀಡಿದರು. ಬಂಬಿಲ ಹಾಲು ಉತ್ಪಾದಕರ ಸಹಕಾರ ಸಂಘದ ಉಪಾಧ್ಯಕ್ಷ ಅನ್ನಪೂರ್ಣ ಪ್ರಸಾದ್ ರೈ, ನಿರ್ದೇಶಕ ಸುರೇಶ್ ಬಂಬಿಲದೋಳ, ಸವಣೂರು ಕಾಣಿಯೂರು ಎಫ್‌ಪಿಒ ಅಧ್ಯಕ್ಷ ಗಿರಿಶಂಕರ ಸುಲಾಯ, ಗ್ರಾ.ಪಂ. ಮಾಜಿ ಸದಸ್ಯರಾದ ಹರಿಕಲಾ ರೈ, ತಾರಾನಾಥ ಬೊಳಿಯಾಲ, ದಿವಾಕರ ಬಂಗೇರ ಬೊಳಿಯಾಲ, ಸಿದ್ಧಿವಿನಾಯಕ ಸೇವಾ ಸಂಘದ ಮಾಜಿ ಅಧ್ಯಕ್ಷ ಈಶ್ವರ ಕೆ.ಎಸ್., ಸಂಜೀವ ಗೌಡ ಪಾಲ್ತಾಡಿ, ಶ್ರೀಧರ ಗೌಡ ಅಂಗಡಿಹಿತ್ಲು, ವಿನಯಚಂದ್ರ ಕೆಳಗಿನಮನೆ, ಸಂಜೀವಿನಿ ಒಕ್ಕೂಟದ ಎಂಬಿಕೆ ಗೀತಾ, ಪಶು ಸಖಿ ಹೇಮಲತಾ ಪಾಲ್ಗೊಂಡಿದ್ದರು. ಪ್ರವೀಣ್ ಚೆನ್ನಾವರ ನಿರ್ವಹಿಸಿದರು. ಸಿಪಿಸಿಆರ್‌ಐ ರಮ್ಯಾ, ಪ್ರಶಾಂತ್, ಕೃಷಿ ಸಖಿ ಜಯಂತಿ ಸಹಕರಿಸಿದರು.

ಶತಮಂಗಳಕ್ಕೆ ಹೆಚ್ಚು ಬೇಡಿಕೆ

ಕೃಷಿಕರ ಆದಾಯ ವೃದ್ಧಿಗೆ ಸಿಪಿಸಿಆರ್‌ಐ ಇದುವರೆಗೆ ಸುಮಾರು 12 ಅಡಿಕೆ ತಳಿ ಬಿಡುಗಡೆ ಮಾಡಿದೆ. 2016ರಲ್ಲಿ ಬಿಡುಗಡೆಯಾದ ಶತಮಂಗಳ ತಳಿಗೆ ಹೆಚ್ಚಿನ ಬೇಡಿಕೆ ಇದೆ. ಇದು ಮಧ್ಯಮ ಎತ್ತರ ತಳಿಯಾಗಿದ್ದು, 2ರಿಂದ ಎರಡೂವರೆ ವರ್ಷಕ್ಕೇ ಹಿಂಗಾರ ಬಿಡುತ್ತದೆ. ಕರಾವಳಿ ಚಾಲಿ ಅಡಕೆ , ಮಲೆನಾಡಿನ ಕೆಂಪಡಕೆ ವರ್ಗಕ್ಕೂ ಈ ತಳಿ ಹೊಂದಿಕೊಳ್ಳುತ್ತದೆ.

- ಡಾ. ನಾಗರಾಜ್ ಎನ್.ಆರ್., ಹಿರಿಯ ವಿಜ್ಞಾನಿ, ಸಿಪಿಸಿಆರ್‌ಐ

ಸುತ್ತಮುತ್ತ

ಪಾಣಾಜೆ ಸುಬೋಧ ಪ್ರೌಢ ಶಾಲೆಯ ಮಂತ್ರಿ ಮಂಡಲ ರಚನೆ

ನಿಡ್ಪಳ್ಳಿ: ಪಾಣಾಜೆ ಸುಬೋಧ ಪ್ರೌಢಶಾಲಾ 2026–27 ನೇ ಸಾಲಿನ ಶೈಕ್ಷಣಿಕ ವರ್ಷದ ಮಂತ್ರಿ ಮಂಡಲವನ್ನು ರಚಿಸಲಾಯಿತು. ಶಾಲಾ ನಾಯಕನಾಗಿ ರಕ್ಷಿತ್ ಭಟ್ ಹಾಗೂ ಉಪನಾಯಕನಾಗಿ ಅಬೂತಾಲಿಬ್ ಎ.ಬಿ. ಅವರನ್ನು



ಆರಿಸಲಾಯಿತು. ಸಭಾಪತಿಯಾಗಿ ಆಮನ್ ರೈ, ಉಪಸಭಾಪತಿಯಾಗಿ ಗಗನ ಬಿ ., ಸಾಂಸ್ಕೃತಿಕ ಮಂತ್ರಿಯಾಗಿ ತನ್ವಿ ಎಸ್.ಪಿ., ಉಪ ಸಾಂಸ್ಕೃತಿಕ ಮಂತ್ರಿಯಾಗಿ ಸಮೀಕ್ಷಾ, ಆರೋಗ್ಯ ಮಂತ್ರಿಯಾಗಿ ನಿದಾ ಖಿದೀಜ, ಉಪ ಆರೋಗ್ಯ ಮಂತ್ರಿಯಾಗಿ ಗೌತಮಿ, ಸ್ವಚ್ಛತಾ ಮಂತ್ರಿಯಾಗಿ ಪ್ರಾರ್ಥನಾ, ಉಪ ಸ್ವಚ್ಛತಾ ಮಂತ್ರಿಯಾಗಿ ಮೊಹಮ್ಮದ್ ಅಫ್ ಕರ್, ಕ್ರೀಡಾ ಮಂತ್ರಿಯಾಗಿ ಮೊಹಮ್ಮದ್ ಮಿದ್ ಲಾಜ್, ಉಪ ಕ್ರೀಡಾ ಮಂತ್ರಿಯಾಗಿ ಶಾಮಿಲ್, ವಾಚನಾಲಯ ಮಂತ್ರಿಯಾಗಿ ಫಾತಿಮತ್ ರಿಂಶಾ, ಉಪ ವಾಚನಾಲಯ ಮಂತ್ರಿಯಾಗಿ ಅರ್ಪಿತ, ಶಿಸ್ತು ಮಂತ್ರಿಯಾಗಿ ಯದುರಾಜ್ ಎಸ್., ಉಪ ಶಿಸ್ತು ಮಂತ್ರಿಯಾಗಿ ಎಂ. ಕಲಂದರ್ ಶಿರ್ಝುನ್, ಕೃಷಿ ಮಂತ್ರಿಯಾಗಿ ನಿಶಾಂತ್ ಎ., ಉಪ ಕೃಷಿ ಮಂತ್ರಿಯಾಗಿ ಹರ್ಷಿತ್ ಎ., ನೀರಾವರಿ ಮಂತ್ರಿಯಾಗಿ ದೀಪಕ್ ರೈ, ಉಪ ನೀರಾವರಿ ಮಂತ್ರಿಯಾಗಿ ಸುಹೈಬತ್ ಅಸ್ಲಾಮಿಯಾ, ವಿರೋಧ ಪಕ್ಷದ ನಾಯಕಿಯಾಗಿ ವೈಶವಿ ಕೆ.ಪಿ, ಉಪ ವಿರೋಧ ಪಕ್ಷದ ನಾಯಕಿಯಾಗಿ ದೀಪಿಕಾ ಪಿ.ಎಸ್. ಅವರನ್ನು ಆರಿಸಲಾಯಿತು. ಚುನಾವಣಾ ಪ್ರಕ್ರಿಯೆಯ ನೋಡಲ್ ಅಧಿಕಾರಿಯಾಗಿ ಮುಖ್ಯ ಶಿಕ್ಷಕಿ ನಿರ್ಮಲ ಕೆ. ಕಾರ್ಯ ನಿರ್ವಹಿಸಿದರು. ಸಮಾಜ ವಿಜ್ಞಾನ ಶಿಕ್ಷಕಿ ವಿನುತ ಕುಮಾರಿ ಬಿ. ಪ್ರಮಾಣವಚನ ಬೋಧಿಸಿದರು. ಸಹ ಶಿಕ್ಷಕರು ಸಹಕರಿಸಿದರು.

ಬಂಟ್ವಾಳ ಕುಲಾಲ ಸುಧಾರಕ ಸಂಘ: ನೂತನ ಪದಾಧಿಕಾರಿಗಳ ಆಯ್ಕೆ

ಬಂಟ್ವಾಳ: ಬಂಟ್ವಾಳ ತಾಲೂಕು ಕುಲಾಲ ಸುಧಾರಕ ಸಂಘ ಇದರ 2026–28ನೇ ಸಾಲಿನ ನೂತನ ಅಧ್ಯಕ್ಷರಾಗಿ ಬಿ. ರಮೇಶ್ ಸಾಲಿಯಾನ್ ಸಂಚಯಗಿರಿ ಅವರು ಪುನರಾಯ್ಕೆಯಾಗಿದ್ದಾರೆ.





ಸಂಘದ ಕಚೇರಿಯಲ್ಲಿ ಭಾನುವಾರ ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಯಿತು. ಪ್ರಧಾನ ಕಾರ್ಯದರ್ಶಿಯಾಗಿ ಎಸ್. ಸತೀಶ್ ಸಂಪಾಜೆ, ಉಪಾಧ್ಯಕ್ಷ ಗಣೇಶ್ ಮರ್ದೋಳಿ, ಜತೆ ಕಾರ್ಯದರ್ಶಿಗಳಾಗಿ ಜಯಂತ್ ಬಂಗೇರ ವಗ್ಗ, ಪ್ರೇಮಾ ಜನಾರ್ದನ್ ಪೊಸಳ್ಳಿ,ಕೋಶಾಧಿಕಾರಿಯಾಗಿ ಸೋಮನಾಥ್ ಸಾಲಿಯಾನ್, ಸಂಘಟನಾ ಕಾರ್ಯದರ್ಶಿಯಾಗಿ ಆಶಾ ಗಿರಿಧರ್, ಸೇವಾದಳಪತಿಯಾಗಿ ಚಂದ್ರಶೇಖರ್, ಮಹಿಳಾ ಸಂಘದ ಅಧ್ಯಕ್ಷೆಯಾಗಿ ವಾರಿಜಾ ಚೇತನ್ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಮಚ್ಚೇಂದ್ರ ಸಾಲಿಯಾನ್, ಜಲಜಾಕ್ಷಿ ಕುಲಾಲ್, ಜನಾರ್ದನ ಬೊಂಡಾಲ, ರಮೇಶ್ ಸಾಲಿಯಾನ್, ಮಾಧವ ಕುಲಾಲ್ ಬಿ.ಸಿ.ರೋಡು, ಕವಿತಾ ಯಾದವ್, ಸುರೇಶ್ ಕುಲಾಲ್ ಬಂಟ್ವಾಳ ಅವರು ಆಯ್ಕೆಯಾಗಿದ್ದಾರೆ. ಇದೇ ವೇಳೆ ಬಂಟ್ವಾಳ ಕುಲಾಲ ಸಮುದಾಯ ಭವನದ ಮೇಲಂತಸ್ತಿನ ಕಟ್ಟಡ ನಿರ್ಮಾಣಕ್ಕೆ ಸರ್ಕಾರದಿಂದ ಅನುದಾನ ಮಂಜೂರುಗೊಳಿಸುವಲ್ಲಿ ಶ್ರಮಿಸಿದ ಕಟ್ಟಡ ಸಮಿತಿಯ ಅಧ್ಯಕ್ಷ ಸುರೇಶ್ ಕುಮಾರ್ ನಾವೂರು ಅವರನ್ನು ಅಭಿನಂದಿಸಲಾಯಿತು.

ಪಡುಮಲೆ ದೇಗುಲ: ವರಮಹಾಲಕ್ಷ್ಮೀ ಪೂಜಾ ಸಮಿತಿ ರಚನೆ

ಬಡಗನ್ನೂರು: ಪಡುಮಲೆ ಶ್ರೀ ಕೂವೆ ಶಾಸ್ತಾರ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಪ್ರಸಕ್ತ ವರ್ಷದ ಶ್ರೀ ವರಮಹಾಲಕ್ಷ್ಮಿ ಪೂಜೆಯ ಪೂರ್ವಭಾವಿ ಸಭೆ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಶ್ರೀ ಸತೀಶ್ ರೈ ಕಟ್ಟಾವು, ಸದಸ್ಯರಾದ ಜನಾರ್ದನ ಪೂಜಾರಿ ಪದಡ್ಕ, ಪುರಂದರ ರೈ ಕುದ್ಕಾಡಿ, ಉದಯ ಕುಮಾರ್ ಪಡುಮಲೆ ಅವರ ಉಪಸ್ಥಿತಿಯಲ್ಲಿ ನಡೆಯಿತು. ಈ ಸಂದರ್ಭ ನೂತನ ಸಮಿತಿಯನ್ನು ರಚಿಸಲಾಯಿತು. ಗೌರವಾಧ್ಯಕ್ಷರಾಗಿ ವಾಣಿಶ್ರೀ ಉದಯ ಕುಮಾರ್ ಪಡುಮಲೆ, ಅಧ್ಯಕ್ಷೆ ಭಾರತಿ ರೈ ಕುದ್ಕಾಡಿ, ಕಾರ್ಯದರ್ಶಿಯಾಗಿ ಭವ್ಯ ವೇಣುಗೋಪಾಲ್ ಪಡುಮಲೆ, ಜೊತೆ ಕಾರ್ಯದರ್ಶಿಯಾಗಿ ವಿನೋದ ರೈ ಸೇನೆರೆಮಜಲು, ಕೋಶಾಧಿಕಾರಿಯಾಗಿ ಸುನಿತಾ ರೈ ಮೇಗಿನಮನೆ ಆಯ್ಕೆಗೊಂಡರು. ಗೌರವ ಸಲಹೆಗಾರರಾಗಿ ವೀಣಾ ಶ್ರೀನಿವಾಸ ಭಟ್ ಚಂದುಕೂಡ್ಲು, ಸುಧಾ ಎಸ್. ರೈ ಕಟ್ಟಾವು, ಶಂಕರಿ ನಾರಾಯಣ ಪಟ್ಟೆ, ಮಲ್ಲಿಕಾ ಕೋಡಿಯಡ್ಕ ಸುಳ್ಯಪದವು, ಸುಲೋಚನಾ ನೇರ್ಲಂಪಾಡಿ, ಪ್ರೇಮ ಮೈಂದನಡ್ಕ, ಪ್ರೇಮ ರೈ ಮೈಂದನಡ್ಕ, ರಮಾಕಾಂತಿ ಸುಳ್ಯಪದವು, ಉಮಾವತಿ ಮೈಂದನಡ್ಕ, ಯಶೋಧ, ವಿದ್ಯಾಶ್ರೀ ರೈ ಸೇನೆರೆಮಜಲು, ದೇವಿಪ್ರಭ ರೈ ನೆಕ್ಕರೆ, ಸುಜಾತ ವಿರಾಜೆ, ವಿಜಯಲಕ್ಷ್ಮಿ ಹಾಗೂ ಸದಸ್ಯರಾಗಿ ಪುಷ್ಪಾವತಿ ಪೇರಾಲು, ಪದ್ಮಲತಾ ಪೇರಾಲು, ಲತಾ ಕಟ್ಟಾವು, ಭವ್ಯ ಮೈಂದನಡ್ಕ, ಮೋಹಿನಿ ರೈ ದೊಡ್ಡಡ್ಕ ಆಯ್ಕೆಯಾಗಿದ್ದಾರೆ.

ಲ್ಯಾಟರಲ್ ಪ್ರವೇಶ

ಕಾಸರಗೋಡು: ಜಿಲ್ಲೆಯ ಎಲ್ಲಾ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಎರಡನೇ ವರ್ಷದ ಲ್ಯಾಟರಲ್ ಎಂಟ್ರಿ ಇಂಜಿನಿಯರಿಂಗ್ ಡಿಪ್ಲೊಮಾ ಕೋರ್ಸ್‌ಗಳಿಗೆ ಜೂ.17 ಮತ್ತು 18 ರಂದು ಪೆರಿಯದಲ್ಲಿರುವ ಕಾಸರಗೋಡು ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಪ್ರವೇಶ ನಡೆಯಲಿದೆ.

ಪುತ್ತೂರು ವಿಭಾಗದ ಕಚೇರಿಯಲ್ಲಿ ಪ್ರತಿಭಟನೆ | ಪ್ರತಿಯೊಬ್ಬರು ಆಕ್ಷೇಪಣೆ ಸಲ್ಲಿಸಲು ಮನವಿ

ವಿದ್ಯುತ್ ಖಾಸಗೀಕರಣದ ವಿರುದ್ಧ ಸಿಡಿದೆದ್ದ ಮೆಸ್ಕಾಂ ಸಿಬ್ಬಂದಿಗಳು

ಪುತ್ತೂರು: ಮೆಸ್ಕಾಂನ 3 ಜಿಲ್ಲೆ ಸೇರಿದಂತೆ ರಾಜ್ಯದ 15 ಜಿಲ್ಲೆಗಳಲ್ಲಿ ವಿದ್ಯುತ್ ಇಲಾಖೆಯನ್ನು ಖಾಸಗೀಕರಣಗೊಳಿಸುವುದರ ವಿರುದ್ಧ ಸೋಮವಾರ ಬನ್ನೂರಿನಲ್ಲಿರುವ ಮೆಸ್ಕಾಂನ ಪುತ್ತೂರು ವಿಭಾಗದ ಕಚೇರಿಯಲ್ಲಿ ಮೆಸ್ಕಾಂ ಅಧಿಕಾರಿ ಹಾಗೂ ಸಿಬ್ಬಂದಿಗಳು ಪ್ರತಿಭಟನೆ ನಡೆಸಿದರು.

ವಿದ್ಯುತ್ ಇಲಾಖೆಯನ್ನು ಖಾಸಗೀಕರಣಗೊಳಿಸುವ ಪ್ರಕ್ರಿಯೆ ಈಗಾಗಲೇ ಕರ್ನಾಟಕದಲ್ಲಿ ಪ್ರಾರಂಭಗೊಂಡಿದೆ. ಟಾಟಾ ಕಂಪನಿಯವರು ಖಾಸಗಿಗೆ ಅರ್ಜಿ ಹಾಕಿದ್ದಾರೆ. ಖಾಸಗಿಯವರಿಗೆ ನೀಡಬೇಕಾದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಸಾರ್ವಜನಿಕರ ಅಭಿಪ್ರಾಯ, ಆಕ್ಷೇಪಣೆಗಳನ್ನು ಪಡೆಯಬೇಕು. ಆಕ್ಷೇಪಣೆಗಳನ್ನು ಸಲ್ಲಿಸಲು ಜೂ.23ರ ತನಕ ಅವಕಾಶವಿದ್ದು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು. ಖಾಸಗೀಕರಣಗೊಂಡರೆ ಕೃಷಿ, ಕೈಗಾರಿಕೆ, ಗುತ್ತಿಗೆದಾರರು ಸಹಿತ ಎಲ್ಲಾ ವರ್ಗದವರಿಗೂ ಪರಿಣಾಮ ಬೀಳಲಿದೆ. ಹೀಗಾಗಿ ಪ್ರತಿಯೊಬ್ಬ ನಾಗರೀಕರು ಆಕ್ಷೇಪಣೆಗಳನ್ನು ಸಲ್ಲಿಸುವ ಮೂಲಕ ಖಾಸಗೀಕರಣದಿಂದ ಸಂಭವಿಸಬಹುದಾದ ಹೊಡೆತ, ಸಮಸ್ಯೆಗಳನ್ನು ತಡೆಯುವಂತೆ ಪ್ರತಿಭಟನೆಯಲ್ಲಿ ಆಗ್ರಹಿಸಲಾಯಿತು.

ಬಿಸ್ಸೆನ್ನೆಲ್‌ನ ಪರಿಸ್ಥಿತಿ ಬರಬಹುದು

ಮೆಸ್ಕಾಂ ಪುತ್ತೂರು ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್, ಡಿಪ್ಲೋಮ ಇಂಜಿನಿಯರ್ಸ್ ಅಸೋಸಿಯೇಶನ್ ರಾಜ್ಯಾಧ್ಯಕ್ಷ ರಾಮಚಂದ್ರ ಎ. ಮಾತನಾಡಿ, ವಿದ್ಯುತ್ ಇಲಾಖೆಯನ್ನು ಖಾಸಗೀಕರಣಗೊಳಿಸುವ ಪ್ರಕ್ರಿಯೆ ಈಗಾಗಲೇ ಆರಂಭಗೊಂಡಿದೆ. ವಿದ್ಯುತ್ ಖಾಸಗೀಕರಣಗೊಂಡರೆ ಬಿಎಸ್‌ಎನ್‌ಎಲ್‌ನ ಪರಿಸ್ಥಿತಿ ಎದುರಿಸಬೇಕಾಗಬಹುದು. ಅಧಿಕ ಜನಸಂಖ್ಯೆ ಆದಾಯ ಬರುವ ಪ್ರಮುಖ ನಗರಗಳನ್ನು ಏರ್‌ಟೆಲ್, ಜಿಯೋದಂತಹ ಖಾಸಗಿ ಕಂಪನಿಗಳು ಪಡೆದುಕೊಂಡಿದೆ. ಆದಾಯ ಇಲ್ಲದೇ ಇರುವ ಗ್ರಾಮೀಣ ಪ್ರದೇಶಗಳು ಸರಕಾರಿ ಸಂಸ್ಥೆಗಳ ಕೈಯಲ್ಲಿದ್ದು ಅಲ್ಲಿ ಸಮಸ್ಯೆ ನಿಭಾಯಿಸಲು ಅಸಾಧ್ಯವಾಗಿದೆ. ಮುಂದೆ ಮೆಸ್ಕಾಂನ ಸ್ಥಿತಿಯೂ ಇದೇ ರೀತಿಯಾಗುವ ಸಾಧ್ಯತೆಯಿದೆ ಎಂದು ಹೇಳಿದರು.



> **ಮುಂಜಾಗ್ರತೆ ವಹಿಸಬೇಕು**
>
> ವಿದ್ಯುತ್ ಇಲಾಖೆ ಖಾಸಗೀಕರಣದಿಂದ ಇಲಾಖೆಗೆ ಮಾತ್ರ ಸಂಕಷ್ಟವಲ್ಲ. ಗೃಹ ಜ್ಯೋತಿಯಂತಹ ಉಚಿತ ವಿದ್ಯುತ್ ಯೋಜನೆ, ಪಂಪ್‌ಸೆಟ್‌ಗಳಿಗೆ ರಿಯಾಯಿತಿ ಸಹಿತ ಎಲ್ಲಾ ರಿಯಾಯಿತಿಗಳಿಗೂ ಹೊಡೆತ ಬೀಳಲಿದೆ. ನಾವು ಇಲಾಖೆಯ ಒಳಗಡೆ ಇರುವುದರಿಂದ ನಮಗೆ ಇದರ ಸುಳಿವು ದೊರೆತ್ತಿದ್ದು ಆಕ್ಷೇಪಣೆ ಪ್ರಾರಂಭಿಸಿದ್ದೇವೆ. ಸಾರ್ವಜನಿಕರು, ರೈತರು, ಕೈಗಾರಿಕೋದ್ಯಮಿಗಳು, ಗುತ್ತಿಗೆದಾರರು ಸಹಿತ ಪ್ರತಿಯೊಬ್ಬರೂ ಆಕ್ಷೇಪಣೆ ಸಲ್ಲಿಸುವ ಮೂಲಕ ಖಾಸಗೀಕರಣ ಎಂಬ ಪ್ರಕ್ರಿಯೆ ರಾಜ್ಯದೊಳಗೆ ಪ್ರವೇಶಿಸದಂತೆ ಮುಂಜಾಗ್ರತೆ ವಹಿಸಬೇಕು.
>
> ● ರಾಮಚಂದ್ರ, ಕಾರ್ಯನಿರ್ವಾಹಕ ಇಂಜಿನಿಯರ್

ಟಾಟಾ ಸಂಸ್ಥೆಯ ಮಂಗಳೂರು ಮಹಾನಗರ ಪಾಲಿಕೆ, ಉಳ್ಳಾಲ, ಉಡುಪಿ, ಶಿವಮೊಗ್ಗ ನಗರ ಮಾತ್ರ ಖಾಸಗಿಕರಣಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಸುಳ್ಯ, ನೆಲ್ಯಾಡಿ ಪುತ್ತೂರುಗಳನ್ನು ಅವರು ಬಿಟ್ಟಿದ್ದಾರೆ. ಈಗಾಗಲೇ ಖಾಸಗೀಕರಣಗೊಂಡಿರುವ ದೆಹಲಿ, ಒಡಿಸ್ಸಾ, ಮಹಾರಾಷ್ಟ್ರ ಸಹಿತ ಹಲವು ರಾಜ್ಯಗಳಲ್ಲಿ ಅಲ್ಲಿನ ಜನತೆ ಬಹಳಷ್ಟು ಸಂಕಷ್ಟು ಎದುರಿಸುತ್ತಿದ್ದು ಈ ಪರಿಸ್ಥಿತಿ ಕರ್ನಾಟಕದ ಜನತೆಗೆ ಬಾರದಂತೆ ಪ್ರತಿಯೊಬ್ಬರೂ ಆಕ್ಷೇಪಣೆ ಸಲ್ಲಿಸುವಂತೆ ಅವರು ವಿನಂತಿಸಿದರು.

ಜನರಿಗೆ ಅರಿವು ಮೂಡಿಸಬೇಕು

659 ಸಂಘದ ಕೇಂದ್ರ ಸಮಿತಿ ಸದಸ್ಯ ಕರಿಬಸಪ್ಪ, 659 ನೌಕರರ ಸಂಘದ ಸಂಘಟನಾ ಕಾರ್ಯದರ್ಶಿ ಷಣ್ಮುಗಪ್ಪ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೃಷ್ಣಪ್ರಶಾಂತ್, ಸುಳ್ಯದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಸುಪ್ರೀತ್ ಕುಮಾರ್, ಇಂಜಿನಿಯರ್ಸ್ ಸಂಘದ ಕೇಂದ್ರ ಸಮಿತಿ ಸಂಘಟನಾ ಕಾರ್ಯದರ್ಶಿ ಪ್ರಶಾಂತ್ ಪೈ, 659 ನೌಕರರ ಸಂಘದ ಅಧ್ಯಕ್ಷ ಶಂಕರ ಪ್ರಕಾಶ್, ಎಸ್‌ಎಲ್ ಇಎಸ್‌ಟಿ ಅಸೋಸಿಯೇಶನ್‌ನ ಕೇಂದ್ರ ಸಮಿತಿ ಸದಸ್ಯ ಸದಾಶಿವ, 659 ಸಂಘದ ಕೇಂದ್ರ ಸಮಿತಿ ಸದಸ್ಯ ಮತ್ತು ಜೆ. ಮಾತನಾಡಿ, ವಿದ್ಯುತ್ ಖಾಸಗೀಕರಣದ ವಿರುದ್ಧ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಆಗ್ರಹಿಸಿದರು.

ನಗರ ಉಪ ವಿಭಾಗ ಸಹಾಯಕ ಲೆಕ್ಕಾಧಿಕಾರಿ ಕೃಷ್ಣಮೂರ್ತಿ ಸ್ವಾಗತಿಸಿ, ವಂದಿಸಿದರು.

ಕಿನ್ನಿಗೋಳಿ ರೈತ ಹಿತರಕ್ಷಣಾ ಸಮಿತಿ ವಿರೋಧ



ಕಿನ್ನಿಗೋಳಿ: ಕರ್ನಾಟಕ ಸರಕಾರಿ ಸ್ವಾಮ್ಯದ ವಿದ್ಯುತ್ ಕಂಪನಿಗಳ ವ್ಯಾಪ್ತಿಯಲ್ಲಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಗೆ ನೀಡುವ ಬಗ್ಗೆ ವರದಿಗಳು ಮಾಹಿತಿ ಬಂದಿದ್ದು ಇದರಿಂದ ಸಾರ್ವಜನಿಕರಿಗೆ, ರೈತರಿಗೆ, ಕೈಗಾರಿಗಳಿಗೆ ತೊಂದರೆ ಆಗುವ ಸಂಭವವಿದ್ದು ಈ ನಿಟ್ಟಿನಲ್ಲಿ ಕಿನ್ನಿಗೋಳಿ ರೈತ ಹಿತರಕ್ಷಣಾ ಸಮಿತಿ ತೀವ್ರವಾಗಿ ವಿರೋಧ ವ್ಯಕ್ತಪಡಿಸುತ್ತಿದೆ.

ಈ ಕುರಿತು ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಮುಕ್ಕ ಶ್ರೀಧರ ಶೆಟ್ಟಿ ನೇತೃತ್ವದ ನಿಯೋಗವು ಕಿನ್ನಿಗೋಳಿ ಮೆಸ್ಕಾಂ ಕಚೇರಿಯಲ್ಲಿ ಹಿರಿಯ ಅಧಿಕಾರಿ ರಾಮಕೃಷ್ಣ ಐತಾಳ್ ಅವರಿಗೆ ಮನವಿ ಸಲ್ಲಿಸಿ, ಸಮಸ್ಯೆಯನ್ನು ಮನವರಿಕೆ ಮಾಡಲಾಯಿತು.

ಅರ್ಜಿ ತಿರಸ್ಕರಿಸಲು ಒತ್ತಾಯ

ಈ ವೇಳೆ ಮಾತನಾಡಿದ ಸಮಿತಿ ಕಾರ್ಯದರ್ಶಿ ಭುವನಾಭಿರಾಮ ಉಡುಪ, ಖಾಸಗಿಯವರಿಗೆ ವಿದ್ಯುತ್ ವಿತರಣೆ ಮಾಡಲು ನೀಡಿದರೆ ಸರಕಾರದ ನಿಯಂತ್ರಣ ಇಲ್ಲದೆ ಅರಾಜಕತೆ ನಿರ್ಮಾಣವಾಗುತ್ತದೆ. ಆದುದರಿಂದ ಟಾಟಾ ಕಂಪನಿ ಸಲ್ಲಿಸಿದ ಅರ್ಜಿಯನ್ನು ವಿದ್ಯುತ್‌ಚ್ಛಕ್ತಿ ಕಾಯ್ದೆ 2003ರ ಸೆಕ್ಷನ್ 108ರ ಅನ್ವಯ ತಿರಸ್ಕರಿಸಬೇಕು ಎಂದು ತಿಳಿಸಿದರು.

ಸಮಿತಿಯ ಜಯರಾಮ ಶೆಟ್ಟಿ ಎಳತ್ತೂರು, ಜಯಪಾಲ ಶೆಟ್ಟಿ ಐಕಳ, ಬಳಕೆದಾರರ ಸಮಿತಿಯ ಗಂಗಾಧರ ಮರಾಠಿ, ಉಮೇಶ್ ಕೊಡೆತ್ತೂರು, ಶರತ್ ಶೆಟ್ಟಿ ಎಳತ್ತೂರು, ಶಶೀಂದ್ರ ಶೆಟ್ಟಿ ಜೇಕಬ್ ಡಿಸೋಜ, ರಾಮಣ್ಣ ಕುಲಾಲ್ ಕೊಡೆತ್ತೂರು, ಮೆಸ್ಕಾಂ ಇಲಾಖೆಯ ಅಧಿಕಾರಿಗಳಾದ ಸುಧಾಕರ್, ದಾಮೋದರ್, ಬಸವರಾಜು ಉಪಸ್ಥಿತರಿದ್ದರು.

ಸರಕಾರದ ಬಹುತೇಕ ಯೋಜನೆಗಳು ಮನೆಯ ಯಜಮಾನಿಯ ಪರ: ಶಾಸಕ ರೈ



ಪುತ್ತೂರು: ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಗ್ಯಾರಂಟಿ ಯೋಜನೆ ಸೇರಿದಂತೆ ಹತ್ತು ಹಲವು ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿದ್ದು ಇದರಲ್ಲಿ ಬಹುಪಾಲು ಸೌಲಭ್ಯಗಳು ಮನೆಯ ಯಜಮಾನಿ ಪರವಾಗಿದೆ ಎಂದು ಶಾಸಕ ಅಶೋಕ್ ರೈ ಹೇಳಿದರು.

ಅವರು ದೇವರಾಜ ಅರಸು ಹಿಂದುಳಿದ ನಿಗಮದ ವತಿಯಿಂದ ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ ವಿತರಣೆ ಮಾಡಿ ಮಾತನಾಡಿದರು. ಕಾರ್ಯಕ್ರಮವು ಶಾಸಕರ ಕಚೇರಿ ಸಭಾಂಗಣದಲ್ಲಿ ನಡೆಯಿತು.

ಮಹಿಳೆ ಪ್ರತೀ ಕುಟುಂಬದ ಯಜಮಾನಿಯಾಗಿರುತ್ತಾಳೆ, ಮಹಿಳೆಯ ಕೈಗೆ ಸರಕಾರದ ಸೌಲಭ್ಯ ದೊರೆತಲ್ಲಿ ಆದು ಕುಟುಂಬದ ಅಭಿವೃದ್ಧಿಗೆ ಕಾರಣವಾಗುತ್ತದೆ. ಇದೇ ಕಾರಣಕ್ಕೆ ರಾಜ್ಯ ಕಾಂಗ್ರೆಸ್ ಸರಕಾರದ ಬಹುತೇಕ ಯೋಜನೆಗಳು ಮಹಿಳಾ ಪರವಾಗಿದೆ. ಇಷ್ಟು ವರ್ಷದಲ್ಲಿ ಹೊಲಿಗೆ ಯಂತ್ರವನ್ನು ವಿತರಣೆ ಮಾಡಿದ್ದು ನನ್ನ ಗಮನಕ್ಕೆ ಬಂದಿಲ್ಲ, ಕೇವಲ ಹೊಲಿಗೆ ಯಂತ್ರ ಮಾತ್ರವಲ್ಲ ಮಹಿಳಾ ಸ್ವಾಉದ್ಯೋಗಕ್ಕೆ 3 ಲಕ್ಷದವರೆಗೆ ಲೋನ್ ದೊರೆಯುತ್ತಿದ್ದು ಇದರಲ್ಲಿ ಎರಡು ಲಕ್ಷ ಸಬ್ಸಿಡಿ ಮೊತ್ತವನ್ನು ನೀಡುತ್ತಿದೆ. ಪಂಚ ಗ್ಯಾರಂಟಿ ಯೋಜನೆಯ ಗೃಹ ಲಕ್ಷ್ಮಿ, ಶಕ್ತಿ ಯೋಜನೆಯನ್ನು ಸರಕಾರ ಮಹಿಳೆಯರಿಗೆ ನೀಡಿದೆ ಇದು ಸಂತೋಷದ ವಿಚಾರವಾಗಿದೆ ಎಂದು ಹೇಳಿದರು.

25 ಯಂತ್ರ ವಿತರಣೆ

ಕಾರ್ಯಕ್ರಮದಲ್ಲಿ ಸುಮಾರು 25 ಮಂದಿ ವಿವಿಧ ಗ್ರಾಮಗಳ ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರವನ್ನು ವಿತರಣೆ ಮಾಡಲಾಯಿತು. ವೇದಿಕೆಯಲ್ಲಿ ಗ್ಯಾರಂಟಿ ಸಮಿತಿ ಅಧ್ಯಕ್ಷ ಉಮಾನಾಥ ಶೆಟ್ಟಿ ಪೆರ್ನೆ, ಪುಡಾ ಸದಸ್ಯ ನಿಹಾಲ್ ಪಿ. ಶೆಟ್ಟಿ ಉದ್ಯಮಿ ಕೃಷ್ಣಪ್ರಸಾದ್ ಆಳ್ವ ಅಕ್ರಮ–ಸಕ್ರಮ ಸಮಿತಿ ಸದಸ್ಯ ರಾಮಣ್ಣ ಪಿಲಿಂಜ ಮೊದಲಾದವರು ಉಪಸ್ಥಿತರಿದ್ದರು. ಇಲಾಖಾಧಿಕಾರಿ ಜಯಶ್ರೀ ಸ್ವಾಗತಿಸಿ, ಶಾಸಕರ ಕಚೇರಿ ಸಹಾಯಕ ಲಿಂಗಪ್ಪ ವಂದಿಸಿದರು.

‘ಹೊಸ ದಿಗಂತ’ ವರದಿಗೆ ಸಿಕ್ಕಿತು ಸ್ಪಂದನೆ: ಕುಮಾರ ಮಂಗಿಲ ರಸ್ತೆ ತಾತ್ಕಾಲಿಕ ದುರಸ್ತಿ!



ಮುಲ್ಕಿ: ಕಿಲ್ಪಾಡಿ ಗ್ರಾ. ಪಂ. ವ್ಯಾಪ್ತಿಯ ಕುಮಾರ ಮಂಗಿಲ ದೇವಸ್ಥಾನದ ಮಣ್ಣಿನ ರಸ್ತೆ ಭಾರೀ ಮಳೆಗೆ ಕೆಸರುಮಯವಾಗಿದ್ದು ಸಂಚಾರ ದುಸ್ತರವಾಗಿ ಪರಿಣಮಿಸಿದೆ. ಈ ಭಾಗದಲ್ಲಿ ಸುಮಾರು 60ಕ್ಕೂ ಹೆಚ್ಚು ಮನೆಗಳಿದ್ದು, ಸರಕಾರಿ ಶಾಲೆ ಹಾಗೂ ಪ್ರಸಿದ್ಧ ಕಿಲ್ಪಾಡಿ ಶ್ರೀ ರಾಘವೇಂದ್ರ ಮಠ ಕೂಡ ಇದ್ದು, ಮಕ್ಕಳು ಸಹಿತ ದೇಗುಲಕ್ಕೆ ಬರುವ ಭಕ್ತಾದಿಗಳು ಈ ರಸ್ತೆ ಬಳಸಿಕೊಂಡು ಸಂಚಾರ ಮಾಡುತ್ತಿದ್ದು ತೀವ್ರ ತೊಂದರೆಯಾಗಿದೆ ಎಂಬ ಕುರಿತು ‘ಹೊಸ ದಿಗಂತ’ ಪತ್ರಿಕೆಯಲ್ಲಿ ವರದಿ ಪ್ರಕಟವಾಗಿತ್ತು.

ಜಲ್ಲಿಕಲ್ಲು, ಹುಡಿ ಹಾಕಿ ದುರಸ್ತಿ

ಈ ಬೆನ್ನಲ್ಲೇ ಸ್ಪಂದಿಸಿದ ಸ್ಥಳೀಯ ಸಾಮಾಜಿಕ ಕಾರ್ಯಕರ್ತ ರಂಜನ್ ಶೆಟ್ಟಿ ಕೆಂಪುಗುಡ್ಡೆ ಅವರು, ಕೂಡಲೇ ಕಾರ್ಯ ಪ್ರವೃತ್ತರಾಗಿ ಸೋಮವಾರ ಜೆಸಿಬಿ ಮೂಲಕ ಕೆಸರುಮಯ ಮಣ್ಣಿನ ರಸ್ತೆಗೆ ಜಲ್ಲಿಕಲ್ಲು ಹಾಗೂ ಜಲ್ಲಿಹುಡಿ ರಸ್ತೆಗೆ ಹಾಕಿ ತಾತ್ಕಾಲಿಕ ನೆಲೆಯಲ್ಲಿ ಸರಿಪಡಿಸಿದರು.

ಸ್ಥಳೀಯರಿಂದ ಅಭಿನಂದನೆ

ರಂಜನ್ ಶೆಟ್ಟಿ ಅವರು ಕಳೆದ ಬೇಸಿಗೆಯಲ್ಲಿ ಇದೇ ರಸ್ತೆಯನ್ನು ದುರಸ್ತಿ ಪಡಿಸಲು ಮುಂದಾದಾಗ ಕೊಂಕಣ ರೈಲ್ವೇ ಇಲಾಖೆಯ ಅಧಿಕಾರಿಗಳು ಅಡ್ಡಿಪಡಿಸಿದ್ದರು. ಇದೀಗ ರಂಜನ್ ಶೆಟ್ಟಿ ಕಾರ್ಯಕ್ಕೆ ಸ್ಥಳೀಯರು ಅಭಿನಂದಿಸಿದ್ದಾರೆ.

ರಸ್ತೆ ಅಭಿವೃದ್ಧಿಗೆ ಸ್ಥಳೀಯರ ಆಗ್ರಹ

ಈ ರಸ್ತೆಯು ಮಂಗಳೂರು ಉಡುಪಿ, ಕೊಂಕಣ ರೈಲ್ವೇ ಹಳಿಯ ಸಮೀಪದಲ್ಲಿ ಬರುತ್ತಿದ್ದು, ಅಭಿವೃದ್ಧಿಪಡಿಸಲು ಕೊಂಕಣ ರೈಲ್ವೆ ಇಲಾಖೆಯ ಅಧಿಕಾರಿಗಳು ಅನುಮತಿ ನೀಡುತ್ತಿಲ್ಲ. ಮುಂದಿನ ದಿನಗಳಲ್ಲಿ ಕೊಂಕಣ ರೈಲ್ವೆ ಚತುಷ್ಪಥಗೊಂಡರೂ, ಇನ್ನೊಂದು ಭಾಗದಲ್ಲಿ ಕಾಮಗಾರಿ ನಡೆಯುತ್ತದೆ ವಿನಹ ಮಣ್ಣಿನ ರಸ್ತೆ ಬಳಿ ಕಾಮಗಾರಿಯ ನಕ್ಷೆ ಇಲ್ಲ ಎಂದು ಸ್ಥಳೀಯರು ಹೇಳಿದ್ದು, ತಾತ್ಕಾಲಿಕ ನೆಲೆಯಲ್ಲಿ ಇಲಾಖೆಯ ಅಧಿಕಾರಿಗಳು ರಸ್ತೆ ದುರಸ್ತಿ ಪಡಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಪ್ರಧಾನಿ ಮೋದಿ ದೀರ್ಘಾವಧಿ ಆಡಳಿತ: ನಾವೂರೇಶ್ವರ ದೇಗುಲದಲ್ಲಿ ವಿಶೇಷ ಪೂಜೆ



ಬಂಟ್ವಾಳ: ತಾಲೂಕಿನ ನಾವೂರು ಶ್ರೀ ವಿಷ್ಣುಮೂರ್ತಿ ನಾವೂರೇಶ್ವರ ದೇವಸ್ಥಾನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ದೀರ್ಘಾವಧಿ ಆಡಳಿತ ಪೂರೈಸಿದ ಪ್ರಯುಕ್ತ ಅವರ ಒಳಿತಿಗಾಗಿ ವಿಶೇಷ ಪೂಜೆ ನಡೆಸಲಾಯಿತು.

ಮೋದಿ ಅವರಿಗೆ ದೀರ್ಘಾಯುಷ್ಯ, ಆರೋಗ್ಯ ವೃದ್ಧಿ ಆಡಳಿತ ಅವಧಿಯಲ್ಲಿ ದೇಶ ಸುಭಿಕ್ಷೆಯಾಗಲಿ ಮತ್ತು ಸಂಪತ್ಭರಿತವಾಗಲಿ ಎಂದು ಪ್ರಾರ್ಥಿಸಲಾಯಿತು. ಈ ಸಂದರ್ಭ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ , ಬಿಜೆಪಿ ಪ್ರಮುಖರಾದ ಸುದರ್ಶನ್ ಬಜ, ಶಾಂತವೀರ ಪೂಜಾರಿ, ಮುರಳೀಧರ್ ಭಟ್, ಜನಾ ರ್ದನ ಕೊಂಬೆಟ್ಟು ನಾರಾಯಣ ಕಿನ್ನಿಯೂರು, ಸದಾನಂದ ಹಳೆಗೇಟು ಹಾಗೂ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

ಕಿನ್ನಿಗೋಳಿ ರಾಮ ಮಂದಿರದಲ್ಲಿ ಲಕ್ಷ ತುಳಸಿ ಅರ್ಚನೆ, ಸಾಮೂಹಿಕ ಕುಂಕುಮಾರ್ಚನೆ



ಕಿನ್ನಿಗೋಳಿ: ಶ್ರೀ ರಾಮ ಮಂದಿರದಲ್ಲಿ ಅಧಿಕ ಮಾಸದ ಪ್ರಯುಕ್ತ ಶ್ರೀ ರಾಮ ದೇವರಿಗೆ ಕಲಶಾಭಿಷೇಕ, ಉಪನೀತ ವಟುಗಳಿಂದ ಲಕ್ಷ ತುಳಸಿ ಅರ್ಚನೆ, ಸಾಮೂಹಿಕ ಕುಂಕುಮಾರ್ಚನೆ ದೇವರಿಗೆ ವಿವಿಧ ಅಭಿಷೇಕ , ಭಜನ ಕಾರ್ಯಕ್ರಮ ಮಹಾ ಪೂಜೆ ಹಾಗೂ ಸಮಾರಾಧನೆ ನಡೆಯಿತು.

ರಾಮ ಮಂದಿರದ ಪ್ರಧಾನ ಅರ್ಚಕ ವೆ. ಮೂ. ಗಿರೀಶ್ ಭಟ್ ಅವರ ಮುತವರ್ಜಿಯಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆಯಿತು. ಈ ಸಂದರ್ಭ ಉಮೇಶ್ ಭಟ್ ರಾಮ ಮಂದಿರ ಅಧ್ಯಕ್ಷ ರಾಜೇಶ್ ನಾಯಕ್, ಉಪಾಧ್ಯಕ್ಷ ಆದಿತ್ಯ ಕಾಮತ್, ಕಾರ್ಯದರ್ಶಿ ರಾಘವೇಂದ್ರ ಪ್ರಭು, ಕೋಶಾಧಿಕಾರಿ ಸುಧೀರ್ ಶೆಣೈ, ಆಡಳಿತ ಮಂಡಳಿಯ ವಿನಾಯಕ ಮಲ್ಯ, ಅತ್ಯುತ ಪ್ರಭು, ಪ್ರಜ್ವಲ್ ನಾಯಕ್, ಗಣನಾಥ ಮಲ್ಯ, ನರೇಂದ್ರ ಪ್ರಭು, ರಾಧಾಕೃಷ್ಣ ನಾಯಕ್, ಅನಂತ ಕಾಮತ್, ಮಾತೃ ಮಂಡಳಿಯ ಭಾರತಿ ಶೆಣೈ, ರಂಜನಿ ರಾವ್, ಸೀಮಾ ಭಟ್ ಹಾಗೂ ಸದಸ್ಯರು , ಯೂತ್ ಜಿ. ಎಸ್. ಬಿಯ ಸದಸ್ಯರು ಮೊದಲಾದವರು ಉಪಸ್ಥಿತರಿದ್ದರು.

ಹಟ್ಟಿಯಂಗಡಿ ವಸತಿ ಶಾಲೆಯಲ್ಲಿ ಪೋಷಕರ ಸಮಾಲೋಚನ ಸಭೆ



ಕುಂದಾಪುರ: ಹಟ್ಟಿಯಂಗಡಿ ಶ್ರೀ ಸಿದ್ಧಿ ವಿನಾಯಕ ವಸತಿ ಶಾಲೆಯಲ್ಲಿ ಪೋಷಕರ ಸಮಾಲೋಚನ ಸಭೆ ಗುರುವಾರ ಮತ್ತು ಶುಕ್ರವಾರ ನಡೆಯಿತು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಸಿದ್ಧಿ ಪ್ರತಿಷ್ಠಾನದ ಕಾರ್ಯದರ್ಶಿ ಹಾಗೂ ಸಂಸ್ಥೆಯ ಪ್ರಾಂಶುಪಾಲ ಶರಣ ಕುಮಾರ, ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದು ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಿದ್ದೇವೆ. ಪೋಷಕರು ಕೂಡ ವಿದ್ಯಾರ್ಥಿಗಳ ಓದುವಿಕೆಗೆ ಯೋಗ್ಯವಾದ ವಾತಾವರಣವನ್ನು ಮನೆಯಲ್ಲೂ ಸಂರಚಿಸಬೇಕು. ಮಕ್ಕಳ ಮಾನಸಿಕ ಮತ್ತು ದೈಹಿಕ ಬದಲಾವಣೆಗಳನ್ನು ಆಗಾಗ ಪರಿಶೀಲಿಸುತ್ತಿದ್ದು, ಶಿಕ್ಷಕರ ಜೊತೆ ತಮ್ಮ ಮಗುವಿನ ಏಳಿಗೆಯ ಕುರಿತು ಆಗಾಗ ಸಂವಹನ ನಡೆಸುತ್ತಿರಬೇಕು. ಶಾಲೆಯು ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸದ ಬಗ್ಗೆ ಚಿಂತಿಸುತ್ತಿದ್ದು, ಅದಕ್ಕೆ ಪೂರಕವಾಗಿ ಪೋಷಕರು ಸ್ಪಂದಿಸಬೇಕು ಎಂದರು.

ಪ್ರಸಕ್ತ ವರ್ಷದ ಶೈಕ್ಷಣಿಕ ಚಟುವಟಿಕೆಗಳು, ಸಂಸ್ಥೆಯ ಕ್ರಿಯಾ ಯೋಜನೆಗಳು ಮತ್ತು ಧ್ಯೇಯೋದ್ದೇಶಗಳು, ಪಠ್ಯಕ್ರಮದ ವ್ಯಾಪ್ತಿ, ಶಿಕ್ಷಣ ಕ್ಷೇತ್ರದಲ್ಲಿನ ನೂತನ ಸವಾಲುಗಳು, ಪೋಷಕ–ಶಿಕ್ಷಕರ ಸಹಕಾರ, ಸಹಭಾಗಿತ್ವದ ಅವಶ್ಯಕತೆಗಳು ಇತ್ಯಾದಿ ಅಂಶಗಳನ್ನು ತಿಳಿಸಲಾಯಿತು. ಐ.ಸಿ.ಎಸ್.ಇ. ಪಠ್ಯಕ್ರಮ, ಪರೀಕ್ಷೆಗಳು, ವಿದ್ಯಾರ್ಥಿಗಳ ಮನೆಗೆಲಸ, ವಿದ್ಯಾರ್ಥಿಗಳ ವರ್ತನೆ ಮತ್ತು ದಿನಚರಿಯ ಕುರಿತು ಶಿಕ್ಷಕಿಯರಾದ ಶ್ರದ್ಧಾ ನಾಯಕ್ ಮತ್ತು ಆಶ್ವಿನಿ ಮಾಹಿತಿಯನ್ನು ನೀಡಿದರು.

ಆಡಳಿತಾಧಿಕಾರಿ ವೀಣಾ ರಶ್ಮಿ ಎಂ., ಉಪಪ್ರಾಂಶುಪಾಲ ರಾಮ ದೇವಾಡಿಗ, ಆಡಳಿತ ಸಲಹೆಗಾರ ಸುಜಾತಾ ಸದಾ ರಾಮ್, ಪ್ರಾ. ಶಾಲಾ ವಿಭಾಗದ ಮುಖ್ಯೋ ಪಾಧ್ಯಾಯಿನಿ ಹೇಮಮಾಲಿನಿ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶಿಕ್ಷಕರಾದ ಪ್ರಸನ್ನ ಎಂ. ಮತ್ತು ಸುಮಲತಾ ಜೋಗಿ ನಿರ್ವಹಿಸಿದರು.

ಕಟಪಾಡಿ- ಉಳ್ಳಾಲ ಅಬ್ಬಕ್ಕ ಸರ್ಕಲ್ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ಆಗ್ರಹ

ಸಂಸದ ಕ್ಯಾ. ಬ್ರಿಜೇಶ್ ಚೌಟಗೆ ಮನವಿ ಸಲ್ಲಿಸಿದ ಸಿದ್ಧಕಟ್ಟೆ ಪ್ರಮುಖರ ನಿಯೋಗ

ಬಂಟ್ವಾಳ: ಕಟಪಾಡಿ– ಉಳ್ಳಾಲ ಅಬ್ಬಕ್ಕ ಸರ್ಕಲ್ ರಾಜ್ಯ ಹೆದ್ದಾರಿ 300 ಅನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಬಂಟ್ವಾಳ ತಾಲೂಕಿನ ಸಿದ್ಧಕಟ್ಟೆ ಭಾಗದ ಪ್ರಮುಖರ ನಿಯೋಗ ದ. ಕ. ಸಂಸದ ಕ್ಯಾ.ಬ್ರಿಜೇಶ್ ಚೌಟ ಅವರಿಗೆ ಲಿಖಿತ ಮನವಿ ಸಲ್ಲಿಸಿ ಆಗ್ರಹಿಸಿದೆ.

ದಿನನಿತ್ಯ ಲಕ್ಷಾಂತರ ವಾಹನ ಸಂಚಾರ

ಕಟಪಾಡಿಯಿಂದ ಆರಂಭವಾಗಿ ಕಾರ್ಕಳ, ಮೂಡಬಿದಿರೆ, ಸಿದ್ಧಕಟ್ಟೆ, ಬಂಟ್ವಾಳ ಮಾರ್ಗವಾಗಿ ಮೆಲ್ಕಾರ್, ಮುಡಿಪು ಮೂಲಕ ಉಳ್ಳಾಲ ಅಬ್ಬಕ್ಕ ಸರ್ಕಲ್ ವರೆಗಿನ ರಾಜ್ಯ ಹೆದ್ದಾರಿ300 ರಲ್ಲಿ ದಿನನಿತ್ಯ ಲಕ್ಷಾಂತರ ವಾಹನಗಳು ಸಂಚರಿಸುತ್ತಿದ್ದು ರಸ್ತೆಯು ಅಲ್ಲಲ್ಲಿ ತಿರುವುಗಳಿಂದ ಕೂಡಿದೆಯಲ್ಲದೆ ವಾಹನಗಳ ಸಂಚಾರಕ್ಕೆ ಬೇಕಾದಷ್ಟು ಅಗಲೀಕರಣ ಇರುವುದಿಲ್ಲ ಎಂದು ಮನವಿಯಲ್ಲಿ ತಿಳಿಸಿದರು.



ಭಾನುವಾರ ಕೊರ್ಯಾರು ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನದ ದೃಢಕಲಶ ಕಾರ್ಯಕ್ರಮದಲ್ಲಿ ಭಾಗವಹಿದ ಸಂದರ್ಭದಲ್ಲಿ ಸಂಸದ ಚೌಟ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭ ಸಿದ್ಧಕಟ್ಟೆ ಪಲ್ಗುಣಿ ರೋಟರಿ ಕ್ಲಬ್ ಅಧ್ಯಕ್ಷ ದುರ್ಗಾದಾಸ್ ಶೆಟ್ಟಿ ಕೊರ್ಯಾರ್ ದೇವಸ್ಥಾನದ ಗುರಿಕಾರ ಗೋಪಾಲ ಗೌಡ, ಸಿದ್ಧಕಟ್ಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಪ್ರಭಾಕರ ಪ್ರಭು, ಸಿದ್ಧಕಟ್ಟೆ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ರತ್ನಕುಮಾರ್ ಚೌಟ, ಸಂಗಬೆಟ್ಟು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಸತೀಶ್ ಪೂಜಾರಿ ಅಲಕ್ಕೆ, ಗ್ರಾಮ ಪಂಚಾಯತ್ ಮಾಜಿ ಸದಸ್ಯ ದಾಮೋದರ ಪೂಜಾರಿ, ಸಿದ್ಧಕಟ್ಟೆ ಸಿ.ಎ. ಬ್ಯಾಂಕ್ ನಿರ್ದೇಶಕ ನವೀನ ಹೆಗ್ಡೆ ಮಾಜಿ ನಿರ್ದೇಶಕ ದೇವುರಾಜ್ ಸಾಲಿಯಾನ್, ಪ್ರಮುಖರಾದ ಹೇಮಚಂದ್ರ ಗೌಡ, ರಾಮಕೃಷ್ಣ ನಾಯಕ್ ಕಿನ್ನಾಜೆ, ಚಂದ್ರಶೇಖರ ಪುವಳ ಕರ್ಪೆ, ಗಂಗಾಧರ್ ಗೌಡ, ಉಮೇಶ್ ಗೌಡ ಮಂಚಕಲ್, ಕರುಣಾ ಮಂಚಕಲ್, ಸದಾನಂದ ಕುಲಾಲ್, ಡಾಕಯ ಗೌಡ ಮೊದಲಾದವರು ಸದಸ್ಯರು ಉಪಸ್ಥಿತರಿದ್ದರು.

> **ಸುಗಮ ಸಂಚಾರಕ್ಕೆ ಅಡಚಣೆ**
>
> ರಾಜ್ಯ ಹೆದ್ದಾರಿಯಲ್ಲಿ ಮುಖ್ಯವಾಗಿ ಬಂಟ್ವಾಳ– ಮೂಡಬಿದ್ರಿ ರಸ್ತೆಯು ತುಂಬಾ ಕಿರಿದಾಗಿದಲ್ಲದೆ ಅನೇಕ ಕಡೆಗಳಲ್ಲಿ ತಿರುವುಗಳನ್ನು ಹೊಂದಿರುವುದರಿಂದ ವಾಹನಗಳ ಸುಗಮ ಸಂಚಾರಕ್ಕೆ ಅಡಚಣೆಯಾಗಿದೆ. ಈ ಹಿನ್ನಲೆ ಕಟಪಾಡಿ –ಉಳ್ಳಾಲ ಅಬ್ಬಕ್ಕ ಸರ್ಕಲ್ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವ ನಿಟ್ಟಿನಲ್ಲಿ ಸಂಬಂಧ ಪಟ್ಟ ಕೇಂದ್ರ ಸಚಿವರ ಗಮನಕ್ಕೆ ತಂದು ಕ್ರಮಕೈಗೊಳ್ಳುವಂತೆ ಮನವಿಯಲ್ಲಿ ಆಗ್ರಹಿಸಲಾಗಿದೆ.

ಮಡಿಕೇರಿಯ ಮಾರ್ನಿಂಗ್ ಸ್ಟಾರ್ ತಂಡದಿಂದ ದೊರಕಿತು ತರಬೇತಿ

ಭಾರತೀಯ ಸೇನೆಗೆ ಆಯ್ಕೆಯಾದ ಐವರಿಗೆ ಸನ್ಮಾನ

ಮಡಿಕೇರಿ: ನಗರದ ಮಾರ್ನಿಂಗ್ ಸ್ಟಾರ್ ತಂಡದಿಂದ ತರಬೇತಿ ಪಡೆದ ಐವರು ಯುವಕರು ಅಗ್ನಿವೀರ್ ಯೋಜನೆ ಮೂಲಕ ಭಾರತೀಯ ಸೇನೆಗೆ ಆಯ್ಕೆಯಾಗಿದ್ದಾರೆ. ಆಯ್ಕೆಯಾದವರಿಗೆ ಅಭಿನಂದನೆ ಹಾಗೂ ಬೀಳ್ಕೊಡುಗೆ ಕಾರ್ಯಕ್ರಮ ಮಡಿಕೇರಿಯಲ್ಲಿ ನಡೆಯಿತು.

ಶುಕ್ರವಾರ ಸಂಜೆ ನಗರದ ಹೋಟೆಲ್ ಸಮುದ್ರ ಸಭಾಂಗಣದಲ್ಲಿ ತಂಡದ ಪ್ರಮುಖರಾದ ಸುರೇಶ್ ರೈ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಜರುಗಿತು. ಸೇನೆಗೆ ಆಯ್ಕೆಯಾಗಿರುವ ಎಸ್.ವಿ. ಮೋಕ್ಷಿತ್ ಭಾಗಮಂಡಲ, ಡಿ.ಎಚ್. ಆಕಾಶ್ ಭಾಗಮಂಡಲ, ಎಚ್.ಆರ್. ಯಶ್ವಂತ್ ಕೂಡಿಗೆ, ಬಿ.ಜಿ. ಹರ್ಷಿತ್ ಚೆಂಬು, ಬಿ.ಎಸ್. ತಿಲಕ್ ಮಡಿಕೇರಿ ಅವರನ್ನು ಶಾಲು ಹೊದಿಸಿ, ಫಲ ತಾಂಬೂಲ ನೀಡಿ ಗಣ್ಯರು ಅಭಿನಂದಿಸಿದರು. ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಉದ್ಯಮಿ ಶರೀನ್ ಮಾತನಾಡಿ, ವಿವಿಧ ಕ್ಷೇತ್ರದಲ್ಲಿರುವ ಮಂದಿ ಸೇರಿಕೊಂಡು ನಡೆಸುತ್ತಿರುವ ಮಾರ್ನಿಂಗ್ ಸ್ಟಾರ್ ತಂಡ ಸೇನೆಗೆ ಸೇರಲು ಆಸಕ್ತಿ ಇರುವ ಯುವಕರಿಗೆ ತರಬೇತಿ ನೀಡುವ ಮೂಲಕ



ಅತ್ಯುತ್ತಮ ಕಾರ್ಯ ಮಾಡುತ್ತಿದೆ. ತಂಡದ ಎಲ್ಲಾ ಕಾರ್ಯಕ್ಕೂ ತನ್ನ ಸಹಕಾರ ನೀಡುವುದಾಗಿ ತಿಳಿಸಿದರು. ಮತ್ತೋರ್ವ ಅತಿಥಿ ಉದ್ಯಮಿ ಪಪ್ಪಿ ವಸಂತ ಮಾತನಾಡಿ, ಒಳ್ಳೆಯ ಉದ್ದೇಶದಿಂದ ಸಮಾನ ಮನಸ್ಕರ ತಂಡ ರಚನೆಯಾಗಿದೆ. ಸದುದ್ದೇಶದಿಂದ ನಡೆಸುತ್ತಿರುವ ಕಾರ್ಯಗಳು ಮುಂದುವರೆಯಲಿ ಎಂದು ಆಶಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ತಂಡದ ಪ್ರಮುಖ ಹಾಗೂ ತರಬೇತುದಾರ ಯೋಗೇಶ್ ಶೆಟ್ಟಿ ಕಾರ್ಯಚಟುವಟಿಕೆ ಬಗ್ಗೆ ವಿವರಿಸಿದರು. 2019ರಲ್ಲಿ ಮಾರ್ನಿಂಗ್ ಸ್ಟಾರ್ ತಂಡವನ್ನು ರಚಿಸಲಾಯಿತು. ಬಳಿಕ ಸೇನೆಗೆ ಸೇರಲು ಆಸಕ್ತಿ ಇರುವ ಯುವಕರನ್ನು ಸೇರಿಸಿ ಪ್ರತಿ ದಿನ ತರಬೇತಿ ನೀಡುವ ಕಾರ್ಯ ಆರಂಭಿಸಿದೆವು. ಅನೇಕ ಮಂದಿ ಯುವಕರು ನಮ್ಮೊಂದಿಗೆ ಸೇರಿ ತರಬೇತಿ ಪಡೆದಿದ್ದಾರೆ. ಈವರೆಗೆ ಅನೇಕ ತರುಣರಿಗೆ ತರಬೇತಿ ನೀಡಿದ್ದು, ಅದರಲ್ಲಿ 25 ಮಂದಿ ಸೇನೆಗೆ ಸೇರಿರುವ ತೃಪ್ತಿ ಇದೆ ಎಂದರು.

ಪ್ರಮುಖರಾದ ವಿಜಯ್ ಕುಮಾರ್ ಶೆಟ್ಟಿ, ಕಪಿಲ್, ಬಿ.ಎಸ್. ಆರತಿ, ಶರಣ್, ನಂಜಪ್ಪ ಮಧು, ಸುರೇಶ್ ಮೊಗವೀರ, ತರಬೇತಿ ಪಡೆದ ಯುವಕರ ಪೋಷಕರು ಮುಂತಾದವರಿದ್ದರು. ಹಿತ ಯೋಗೇಶ್ ಶೆಟ್ಟಿ ಪ್ರಾರ್ಥಿಸಿದರು. ಶರತ್ ಕುಮಾರ್ ಶೆಟ್ಟಿ ಸ್ವಾಗತಿಸಿದರು. ಸುಬ್ರಹ್ಮಣ್ಯ ವಂದಿಸಿದರು. ಹರ್ಷಿತಾ ಶೆಟ್ಟಿ ನಿರೂಪಿಸಿದರು.

> ಮಡಿಕೇರಿ ಮಾತ್ರವಲ್ಲದೆ ಗ್ರಾಮೀಣ ಭಾಗದಿಂದಲೂ ಯುವಕರು ಆಸಕ್ತಿಯಿಂದ ಪಾಲ್ಗೊಳ್ಳುತ್ತಿದ್ದಾರೆ. ಅವರ ತರಬೇತಿ ಹಾಗೂ ಸೇನಾ ಆಯ್ಕೆಯ ಸಂದರ್ಭದಲ್ಲಿ ಎಲ್ಲಾ ರೀತಿಯ ಸಹಕಾರವನ್ನು ನಮ್ಮ ತಂಡದ ವತಿಯಿಂದ ನೀಡುತ್ತಿದ್ದೇವೆ. ಇದಕ್ಕೆ ತಂಡದ ಸದಸ್ಯರು ಕೂಡಾ ಕೈಜೋಡಿಸುತ್ತಿದ್ದಾರೆ. ಎಲ್ಲರ ಸಹಕಾರದೊಂದಿಗೆ ಈ ಕಾರ್ಯ ಮುಂದುವರಿಸಿಕೊಂಡು ಹೋಗುವುದಾಗಿ ತಿಳಿಸಿದರು.
>
> ● ಯೋಗೇಶ್ ಶೆಟ್ಟಿ ತರಬೇತುದಾರ

ಪ್ರಿಯದರ್ಶಿನಿ ಸೊಸೈಟಿಯಿಂದ ಸಾಧಕರಿಗೆ 'ಪ್ರತಿಭಾ ಗೌರವ': ವಸಂತ್ ಬೆರ್ನಾರ್ಡ್

ಮುಲ್ಕಿ: ಹಳೆಯಂಗಡಿಯ ಪ್ರತಿಷ್ಠಿತ ಪ್ರಿಯದರ್ಶಿನಿ ಕೋ ಆಪರೇಟಿವ್ ಸೊಸೈಟಿ ವತಿಯಿಂದ 2025–26 ನೇ ಸಾಲಿನ



ಎಸ್ಎಸ್ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ 85 ಹಾಗೂ ಮೇಲ್ಪಟ್ಟು ಅಂಕ ಗಳಿಸಿ ತೇರ್ಗಡೆಗೊಂಡ ಸೊಸೈಟಿಯ ಸದಸ್ಯರ ಮಕ್ಕಳನ್ನು ಗೌರವಿಸುವ ಕಾರ್ಯಕ್ರಮವು ಸೊಸೈಟಿಯ ಮಹಾಸಭೆಯ ದಿನದಂದು (ಆಗಸ್ಟ್ 8) ನಡೆಯಲಿದೆ. ಅರ್ಹ ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿ ಮತ್ತು ಭಾವಚಿತ್ರದೊಂದಿಗೆ ಪ್ರಿಯದರ್ಶಿನಿ ಕೋ ಆಪರೇಟಿವ್ ಸೊಸೈಟಿಯ ಎಲ್ಲಾ ಶಾಖೆ ಹಾಗೂ ಸೊಸೈಟಿಯ ಅಧಿಕೃತ ವೆಬ್ ಸೈಟ್ www. priyadarshinisociety.com ನಲ್ಲಿ ಲಭ್ಯವಿರುವ ಅರ್ಜಿಯನ್ನು ಪಡೆದುಕೊಂಡು ಜುಲೈ 31 ರ ಒಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಇದರ ಪ್ರಯೋಜನವನ್ನು ಪಡೆಯುವಂತೆ ಸೊಸೈಟಿ ಅಧ್ಯಕ್ಷ ಎಚ್ ವಸಂತ್ ಬೆರ್ನಾರ್ಡ್ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುತ್ತ ಮುತ್ತ

ಕೋಟೆಕಾರು: ನೀರಿನ ಬಿಲ್ ಪಾವತಿಗೆ ಡಿಜಿಟಲ್ ವ್ಯವಸ್ಥೆ

ಉಳ್ಳಾಲ: ಕೋಟೆಕಾರು ಪಟ್ಟಣ ಪಂಚಾಯತ್ ವ್ಯಾಪ್ತಿಯ ಸಾರ್ವಜನಿಕರ ಅನುಕೂಲಕ್ಕಾಗಿ ಜೂ.15ರಂದು ಕುಡಿಯುವ ನೀರಿನ ಬಿಲ್ ಪಾವತಿಯ ಸ್ಕ್ಯಾನರ್ ವ್ಯವಸ್ಥೆಯನ್ನು ಅಧಿಕೃತವಾಗಿ ಬಿಡುಗಡೆಗೊಳಿಸಲಾಯಿತು. ಈ ವ್ಯವಸ್ಥೆಯ ಮೂಲಕ ನಾಗರಿಕರು ತಮ್ಮ ನೀರಿನ ಬಿಲ್ಲನ್ನು ಸ್ಕ್ಯಾನ್ ಮಾಡಿ ಸುಲಭವಾಗಿ ಪಾವತಿಸಬಹುದಾಗಿದೆ. ಇದರಿಂದ ಬಿಲ್ಲು ಪಾವತಿ ಪ್ರಕ್ರಿಯೆ ಡಿಜಿಟಲೀಕರಣ ಮತ್ತು ಪಾರದರ್ಶಕಗೊಳಿಸುವ ನಿಟ್ಟಿನಲ್ಲಿ ಪಟ್ಟಣ ಪಂಚಾಯತ್ ಕೈಗೊಂಡ ಮಹತ್ವದ ಹೆಜ್ಜೆಯಾಗಿದೆ. ಸಾರ್ವಜನಿಕರು ಈ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಂಡು ಸಹಕರಿಸಬೇಕೆಂದು ವಿನಂತಿಸಲಾಗಿದೆ. ಈ ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ಅಧಿಕೃತವಾಗಿ ಪಟ್ಟಣ ಪಂಚಾಯತ್ ಅಧ್ಯಕ್ಷ ದಿವ್ಯ ಸತೀಶ್ ಶೆಟ್ಟಿ ನೀರಿನ ಬಿಲ್ಲನ್ನು ಸ್ಕ್ಯಾನ್ ಮಾಡಿ ಪಾವತಿ ಮಾಡುವ ಮೂಲಕ ಚಾಲನೆ ನೀಡಿದರು. ಈ ಸಂದರ್ಭ ಉಪಾಧ್ಯಕ್ಷ ಪ್ರವೀಣ್ ಐ. ಬಗಂಬಿಲ, ಮುಖ್ಯಾಧಿಕಾರಿ, ಕಿರಿಯ ಅಭಿಯಂತರರು, ಮೌ ಪ್ರಸ್ನ ಟೆಕ್ನಾಲಜಿ ಇದರ ಅಧಿಕಾರಿ ಹಾಗೂ ಸಿಬ್ಬಂದಿಗಳು ಹಾಗೂ ಪ.ಪಂ.ನ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಜೂ.17: ಮೆಸ್ಕಾಂ ಜನ ಸಂಪರ್ಕ ಸಭೆ

ಕುಂದಾಪುರ: ಮೆಸ್ಕಾಂ ತಲ್ಲೂರು ಉಪವಿಭಾಗ ಕಚೇರಿಯಲ್ಲಿ ಜೂ.17ರಂದು ಬೆಳಗ್ಗೆ 10.30 ರಿಂದ 12ರವರೆಗೆ ಸಂಪರ್ಕ ಸಭೆ ನಡೆಯಲಿದ್ದು, ಮೆಸ್ಕಾಂ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸುವುದರಿಂದ, ಈ ಅವಕಾಶವನ್ನು ಗ್ರಾಹಕರು ಸದುಪಯೋಗಿಸಿಕೊಳ್ಳಲು ಕೋರಲಾಗಿದೆ. ದೂ.ಸಂ.: 08254–238182 ಮೂಲಕ ಸಂಪರ್ಕಿಸಿ ದೂರು ಸಲ್ಲಿಸಬಹುದು ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಲಯನ್ಸ್ ಕ್ಲಬ್‌ನೂತನ ಅಧ್ಯಕ್ಷರಾಗಿ ಸುಂದರ್ ಕೊಠಾರಿ ಆಯ್ಕೆ

ಬೈಂದೂರು: ಬೈಂದೂರು-ಉಪ್ಪುಂದ ಲಯನ್ಸ್ ಕ್ಲಬ್‌ನ 2026–27ನೇ ಸಾಲಿನ ನೂತನ



ಅಧ್ಯಕ್ಷರಾಗಿ ಸುಂದರ್ ಕೊಠಾರಿ ಸರ್ವಾನುಮತದಿಂದ ಆಯ್ಕೆ ಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿಯಾಗಿ ರವೀಂದ್ರ ಕೆ. ಸೋಡಿತಾರ್ ಹಾಗೂಖಜಾಂಚಿಯಾಗಿ ಶೇಖರ ಶೆಟ್ಟಿ ಅವಿರೋಧವಾಗಿ ಆಯ್ಕೆಯಾದರು. ಬೈಂದೂರು ಬಂಟರ ಭವನದಲ್ಲಿ ಕ್ಲಬ್ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಯಿತು.

ರಸ್ತೆಗಳ ಅವ್ಯವಸ್ಥೆಗೆ ಶಾಸಕರ ನಿರ್ಲಕ್ಷ್ಯವೇ ಕಾರಣ: ಬಿಜೆಪಿ ಟೀಕೆ

ಮಡಿಕೇರಿ: ಕೊಡಗು ಜಿಲ್ಲೆಯ ಬಹುತೇಕ ರಸ್ತೆಗಳು ಹೊಂಡಗುಂಡಿಗಳಿಂದ ಕೂಡಿದ್ದು ಸುಗಮ ಸಂಚಾರ ಅಸಾಧ್ಯವಾಗಿದೆ. ರಸ್ತೆಗಳ ಅವ್ಯವಸ್ಥೆಗೆ ಇಬ್ಬರು ಶಾಸಕರುಗಳ ನಿರ್ಲಕ್ಷ್ಯವೇ



ಕಾರಣವೆಂದು ಸೋಮವಾರಪೇಟೆ ಬಿಜೆಪಿ ಮಂಡಲದ ವಕ್ತಾರ ಬಲ್ಲಾರಂಡ ಕಂಠಿ ಕಾರ್ಯಪ್ಪ ಆರೋಪಿಸಿದ್ದಾರೆ. ಪತ್ರಿಕಾ ಪ್ರಕಟಣೆ ನೀಡಿರುವ ಅವರು ಕಳೆದ ಮೂರು ವರ್ಷಗಳಿಂದ ಅಭಿವೃದ್ಧಿ ಕಾರ್ಯಗಳಿಗಾಗಿ ಕಾದು ಜನ ಬೇಸತ್ತು ಹೋಗಿದ್ದಾರೆ. ಕನಿಷ್ಠ ರಸ್ತೆಗಳ ದುರಸ್ತಿ ಕಾರ್ಯವನ್ನು ಕೂಡ ಮಾಡಲಾಗದ ಪರಿಸ್ಥಿತಿಯಲ್ಲಿ ಶಾಸಕರುಗಳು ಇದ್ದಾರೆ. ಆರಂಭದ ಶೂರತನವೆಂಬಂತೆ ಆರಂಭದಲ್ಲಿ ಡಾಂಬರೀಕರಣಗೊಳಿಸಿದ ರಸ್ತೆಗಳು ಕಳೆದ ಒಂದು ವಾರದ ಮಳೆಗೆ ನೀರುಪಾಲಾಗಿದ್ದು ಹೊಂಡಗುಂಡಿಗಳು ಮತ್ತೆ ಅಪಾಯವನ್ನು ಆಹ್ವಾನಿಸುತ್ತಿವೆ ಎಂದು ಟೀಕಿಸಿದ್ದಾರೆ. ರಸ್ತೆಗಳ ಅಭಿವೃದ್ಧಿಗಾಗಿ ಕೋಟಿ ಕೋಟಿ ಅನುದಾನ ಬಂದಿದೆ ಎಂದು ಪ್ರಚಾರವನ್ನಷ್ಟೇ ಮಾಡಲಾಗುತ್ತಿದೆ. ಜನರ ಕಣ್ಣೊರೆಸುವ ಉದ್ದೇಶದಿಂದ ರಸ್ತೆ ಕಾಮಗಾರಿಗೆ ವಿವಿಧೆಡೆ ಭೂಮಿಪೂಜೆ ನೆರವೇರಿಸಲಾಗಿದೆ. ಆದರೆ ಇಲ್ಲಿಯವರೆಗೆ ಎಲ್ಲೂ ಕಾಮಗಾರಿ ಆರಂಭಗೊಂಡಿಲ್ಲ, ಆರಂಭಗೊಂಡಿರುವ ಕಾಮಗಾರಿ ಪೂರ್ಣಗೊಂಡಿಲ್ಲ, ಮಳೆಗಾಲ ಸಮೀಪಿಸುವ ಹಂತದಲ್ಲಿ ಕಾಮಗಾರಿ ಆರಂಭಿಸುವ ನಾಟಕ ಮಾಡಲಾಗಿದೆ. ಮಳೆಯ ಕಾರಣ ನೀಡಿ ಕಾಮಗಾರಿ ನಡೆಸದೆ ನಿರಾಸಕ್ತಿ ತೋರಲಾಗುತ್ತಿದೆ. ಇನ್ನುಳಿದಿರುವ ಕೇವಲ 2 ವರ್ಷಗಳನ್ನು ಸಾಮಾಜಿಕ ಜಾಲತಾಣದ ಪ್ರಚಾರದಲ್ಲೇ ಕಳೆದು ಬಿಡುವ ಮನೋಸ್ಥಿತಿಯಲ್ಲಿ ಶಾಸಕರುಗಳು ಇದ್ದಂತಿದೆ ಎಂದು ಆರೋಪಿಸಿದರು.

ಜ್ಞಾನವಿಕಾಸ ಕೇಂದ್ರದಲ್ಲಿ ಮಾಸಿಕ ಸಭೆ

ವಿಟ್ಲ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ವಿಟ್ಲ ತಾಲೂಕಿನ ಕಲ್ಲಡ್ಕ ವಲಯದ ಮಾಮೇಶ್ವರ ಕಾರ್ಯ ಕ್ಷೇತ್ರದ ಜ್ಞಾನದೀಪ ಜ್ಞಾನವಿಕಾಸ ಕೇಂದ್ರದ ಮಾಸಿಕ ಸಭೆಯು ಭಾನುವಾರ ಮಾಮೇಶ್ವರದಲ್ಲಿ ಜರಗಿತು.

ಗ್ರಾಮಾಭಿವೃದ್ಧಿ ಯೋಜನೆಯ ವಿಟ್ಲ ತಾಲೂಕು ಯೋಜನಾಧಿಕಾರಿ ಸುರೇಶ್ ಮಾರ್ಗದರ್ಶನ ಮಾಡಿದರು. ಯೋಗದ ಮಹತ್ವ ಹಾಗೂ ಯೋಗ ಮಾಡುವ ವಿಧಾನದ ಬಗ್ಗೆ ಯೋಗ ಶಿಕ್ಷಕ ಕುಶಾಲಪ್ಪ ಮಾಹಿತಿ ನೀಡಲಾಯಿತು. ಮಾಮೇಶ್ವರ ಒಕ್ಕೂಟ ಅಧ್ಯಕ್ಷ ಹರೀಶ್, ಕೇಂದ್ರದ ಸದಸ್ಯ ಕುಸುಮ, ಒಕ್ಕೂಟ ಸದಸ್ಯರಾದ ಉಮೇಶ್, ಜ್ಞಾನ ವಿಕಾಸ ಸಮನ್ವಯಾಧಿಕಾರಿ ದೀಪ ಇದ್ದರು. ಜ್ಞಾನವಿಕಾಸ ಕೇಂದ್ರ ದಲ್ಲಿ ಸದಸ್ಯರು ಭಾಗವಹಿಸಿದ್ದರು.

ಕಾಯರ್ತೋಡಿ ದೇಗುಲದ ರಸ್ತೆಗೆ ಎರಡೆರಡು ಬಾರಿ ಉದ್ಘಾಟನೆ ಭಾಗ್ಯ!



ಸುಳ್ಯ: ಸಿದ್ದರಾಮಯ್ಯ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಶಾಸಕ ಭಾಗೀರಥಿ ಮುರುಳ್ಯ ಶಿಫಾರಸ್ಸಿನ ಮೇರೆಗೆ ಸುಳ್ಯ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿದ್ದ ಅನುದಾನ ರೂ.20 ಲಕ್ಷ ವೆಚ್ಚದಲ್ಲಿ ಕಾಯರ್ತೋಡಿ ಶ್ರೀ ಮಹಾವಿಷ್ಣು ದೇವಸ್ಥಾನದ ರಸ್ತೆ ಕಾಂಕ್ರೀಟೀಕರಣವಾಗಿದ್ದು ಇದರ ಉದ್ಘಾಟನೆ ಎರಡೆರಡು ಬಾರಿ ನಡೆಯಿತು.

ಭಾನುವಾರ ಸಂಜೆ ಶಾಸಕರ ನೇತೃತ್ವದಲ್ಲಿ ರಸ್ತೆ ಉದ್ಘಾಟನೆ ನಡೆದರೆ ಸೋಮವಾರ ಕಾಯರ್ತೋಡಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಎಂ. ವೆಂಕಪ್ಪ ಗೌಡರ ನೇತೃತ್ವದಲ್ಲಿ ನಡೆಯಿತು. ಕೃಷ್ಣ ಕಾಮತ್ ರಸ್ತೆ ಉದ್ಘಾಟಿಸಿದರೆ, ಗ್ಯಾರಂಟಿ ಅನುಷ್ಠಾನ ಸಮಿತಿಯ ಜಿಲ್ಲಾಧ್ಯಕ್ಷ ಭರತ್ ಮುಂಡೋಡಿ ದ್ವಾರವನ್ನು ಲೋಕಾರ್ಪಣೆಗೊಳಿಸಿದರು.

ಲೋಕಾರ್ಪಣೆ ಕಾರ್ಯಕ್ರಮದಲ್ಲಿ ನಗರ ಪಂಚಾಯತ್ ಆಡಳಿತಾಧಿಕಾರಿ ತಹಶೀಲ್ದಾರ್ ಮಂಜುಳಾ, ಹಿರಿಯರಾದ ಉದ್ಯಮಿ ಕೃಷ್ಣ ಕಾಮತ್ ಅರಂಬೂರು, ಅರೆಭಾಷೆ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಭರತ್ ಮುಂಡೋಡಿ, ಸುಡಾ ಅಧ್ಯಕ್ಷ ಕೆ.ಎಂ. ಮುಸ್ತಫಾ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಧಾಕೃಷ್ಣ ಬೊಳ್ಳೂರು, ಮಾಜಿ ಅಧ್ಯಕ್ಷ ಪಿ.ಸಿ. ಜಯರಾಮ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಶಾಹುಲ್ ಹಮೀದ್ ಕುತ್ತಮೊಟ್ಟೆ ಸುಳ್ಯ ವಿಧಾನಸಭಾ ಕ್ಷೇತ್ರದ ಇಂಟಕ್ ಕಾಂಗ್ರೆಸ್ ಅಧ್ಯಕ್ಷ ಶಾಫಿ ಕುತ್ತಮೊಟ್ಟೆ, ಬ್ಲಾಕ್ ಕಾಂಗ್ರೆಸ್ ಮಾಜಿ ಪ್ರಧಾನ ಕಾರ್ಯದರ್ಶಿ ಓ.ಎಸ್.ಗಂಗಾಧರ್, ನ.ಪಂ. ನಾಮನಿರ್ದೇಶಿತ ಸದಸ್ಯ ರಾಜು ಪಂಡಿತ್, ಆಶ್ರಮ ಸಕ್ರಮ ಸಮಿತಿ ಸದಸ್ಯರಾದ ಗೀತಾ ಕೋಲ್ಚಾರ್, ಸತ್ಯಕುಮಾರ್ ಆಡಿಂಜ, ಶರೀಫ್ ಕಂಠಿ, ರಾಧಾಕೃಷ್ಣ ಪರಿವಾರಕಾನ, ಸುರೇಶ್ ಎಂ.ಎಚ್., ಹೇಮಂತ್ ಕೊಡಿಯಾಲಬೈಲು, ಆರ್.ಐ. ಅವಿನ್ ರಂಗತ್ತಮಲೆ ಪ್ರಚಾರ ಸಮಿತಿ ಅಧ್ಯಕ್ಷ ದಿನೇಶ್ ಅಂಬೆಕಲ್ಲು, ಜನಾರ್ದನ ದೋಳ, ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಭವಾನಿಶಂಕರ ಕಲ್ಮಡ್ಕ ಮತ್ತಿತರರು ಉಪಸ್ಥಿತರಿದ್ದರು.

ಜು.12: ಕಾವೂರಿನ ಬಂಟರ ಸಂಘದ ವಾರ್ಷಿಕ ಮಹಾಸಭೆ, ಸಾಧಕರಿಗೆ ಗೌರವ



ಮಂಗಳೂರು: ಕಾವೂರು ಬಂಟರ ಸಂಘದ 24ನೇ ವಾರ್ಷಿಕ ಮಹಾಸಭೆಯು ಜುಲೈ 12ರಂದು ಸಂಜೆ 4ಗಂಟೆಗೆ ಕಾವೂರಿನ ಮಾಲಾಡಿ ಕೋರ್ಟ್ ಮುಖ್ಯ ರಸ್ತೆಯಲ್ಲಿರುವ ಬಂಟರ ಭವನದ ಬಯಲು ರಂಗಮಂಟಪದಲ್ಲಿ ನಡೆಯಲಿದೆ. ಇದರ ಪೂರ್ವ ಸಿದ್ಧತಾ ಸಭೆಯು ಬಂಟರ ಸಂಘ ಮತ್ತು ಕಟ್ಟಡ ಸಮಿತಿಯ ಜಂಟಿ ಆಶ್ರಯದಲ್ಲಿ ಸಭೆಯು ಸಂಘದ ಅಧ್ಯಕ್ಷ ಆನಂದ ಶೆಟ್ಟಿ ಅಡ್ಯಾರ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಆನಂದ ಶೆಟ್ಟಿ ಅಡ್ಯಾರ್, ಜು.12ರಂದು ನಡೆಯುವ ಮಹಾಸಭೆಯನ್ನು ಬಂಟರ ಮಾತೃ ಸಂಘದ ಅಧ್ಯಕ್ಷ ಮಾಲಾಡಿ ಅಜಿತ್ ಕುಮಾರ್ ರೈ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಗ್ಯಾರಂಟಿ ಗುತ್ತು ರವೀಂದ್ರ ಶೆಟ್ಟಿ, ಎಸ್.ಪಿ. ಶಾಂತಾರಾಮ್ ಶೆಟ್ಟಿ ನಿತ್ಯಾನಂದ ಶೆಟ್ಟಿ ಉಮೇಶ್ ಶೆಟ್ಟಿ ಅಜಿತ್ ಶೆಟ್ಟಿ ಸುಶಾಂತ್ ಭಂಡಾರಿ, ಪ್ರಸಾದ್ ರೈ ಕಲಿಮಾರು, ನವೀನ್ ಶೆಟ್ಟಿ ಸುರೇಂದ್ರ ಕಾಂಬ್ಳೆ, ಲಯನ್ ಚಂದ್ರಹಾಸ್ ಶೆಟ್ಟಿ ಇನ್ನಿತರರು ಉಪಸ್ಥಿತರಿರುವರು ಎಂದರು.

ಸಂಜೆ 4ರಿಂದ 5ರ ವರೆಗೆ ಕಾವೂರು ಬಂಟರ ಸಂಘದ ಮಹಿಳಾ ವಿಭಾಗದಿಂದ ಭಜನೆ, ಸಭಾ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಗೌರವ, ಅತ್ಯಧಿಕ ಅಂಕ ಪಡೆದ ಎಸ್ಎಸ್ಎಲ್‌ಸಿ ಮತ್ತು ಪಿ.ಯು.ಸಿ. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಪ್ರತಿಭಾ ಪುರಸ್ಕಾರ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ. ಕಾವೂರು ಬಂಟರ ಭವನದ ಕಟ್ಟಡ ಸಮಿತಿಯ ಅಧ್ಯಕ್ಷ ಡಿ. ಸುಧಾಕರ ಶೆಟ್ಟಿ ಮಾತನಾಡಿ, ಮುಂದಿನ ಜನವರಿ ತಿಂಗಳಲ್ಲಿ ಉದ್ಘಾಟನೆಗೊಳ್ಳಲಿರುವ ಬಂಟರ ಭವನದ ಕಾಮಗಾರಿಕೆ ಅಂತಿಮ ಹಂತದಲ್ಲಿದ್ದು ಬಂಟ ಸಮುದಾಯ ಹಾಗೂ ಕೊಡುಗೈ ದಾನಿಗಳ ಆರ್ಥಿಕ ನೆರವು ಈ ಸಂದರ್ಭದಲ್ಲಿ ಅತ್ಯಗತ್ಯವಿದ್ದು ಸಹಕಾರ ಪ್ರೋತ್ಸಾಹ ಬಯಸಿ ಮನವಿ ಮಾಡಿದರು.

ಪೂರ್ವ ಸಿದ್ಧತಾ ಸಭೆಯಲ್ಲಿ ಸಂಘದ ಮತ್ತು ಕಟ್ಟಡ ಮತ್ತು ಪದಾಧಿಕಾರಿಗಳಾದ ಡಿ. ಸುಧಾಕರ ಶೆಟ್ಟಿ ಮುಗ್ರೋಡಿ, ಸುಧಾಕರ ಆಳ್ವ ವಿಠಲ ಆಳ್ವ ಮಹಾಬಲ ಶೆಟ್ಟಿ ಎಂ.ಎಸ್. ಶೆಟ್ಟಿ ಸರಪಾಡಿ, ಅವಿನಾಶ್ ನಾಯಕ್, ರೇಖಾ ವಿ. ಶೆಟ್ಟಿ ನೀತಾ ಹರೀಶ್ ಶೆಟ್ಟಿ ಮತ್ತಿತ್ತರರು ಉಪಸ್ಥಿತರಿದ್ದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋ. ಕೆದಿಲ ಒಕ್ಕೂಟದ ತ್ರೈ ಮಾಸಿಕ ಸಭೆ



ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೆದಿಲ ಒಕ್ಕೂಟದ ತ್ರೈ ಮಾಸಿಕ ಸಭೆ ಹಾಗೂ ನೂತನ ಪದಾಧಿಕಾರಿಗಳ ಆಯ್ಕೆ ಒಕ್ಕೂಟ ಅಧ್ಯಕ್ಷ ಮೀನಾಕ್ಷಿ ಅಧ್ಯಕ್ಷತೆ ಯಲ್ಲಿ ಕೆದಿಲ ಶ್ರೀದೇವಿ ಭಜನಾ ಮಂದಿರದಲ್ಲಿ ಭಾನುವಾರ ನಡೆಯಿತು.

ಗ್ರಾಮಾಭಿವೃದ್ಧಿ ಯೋಜನೆಯ ತಾಲೂಕು ವಿಚಕ್ಷಣಾಧಿಕಾರಿ ಕವಿತಾ ವಸಂತ ಅವರು ಮಹಿಳೆಯರ ಜವಾಬ್ದಾರಿ ಹಾಗೂ ಯೋಜನೆಯ ವಿವಿಧ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಒಕ್ಕೂಟದ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು.

ಪದಾಧಿಕಾರಿಗಳ ಆಯ್ಕೆ

ನೂತನ ಅಧ್ಯಕ್ಷರಾಗಿ ಸ್ವಾತಿ, ಉಪಾಧ್ಯಕ್ಷರಾಗಿ ರಾಜು, ಕಾರ್ಯದರ್ಶಿಯಾಗಿ ಸಾಜಿದ, ಜೊತೆಕಾರ್ಯದರ್ಶಿಯಾಗಿ ಅಕ್ಷತಾ, ಕೋಶಾಧಿಕಾರಿಯಾಗಿ ಗಂಗಾಧರ್ ಆಯ್ಕೆಯಾದರು. ಜ್ಞಾನ ವಿಕಾಸ ಸಮನ್ವಯ ಅಧಿಕಾರಿ ದೀಪ, ಒಕ್ಕೂಟ ಸೇವಾಪ್ರತಿನಿಧಿ ಜಯಂತಿ, ಪದಾಧಿಕಾರಿ ಸುಂದರ, ಪ್ರಭಾ, ಶಾರ್ದಾನ್, ಚಂದ್ರಶೇಖರ ಇದ್ದರು. ಕಾರ್ಯಕ್ರಮ ಜವಾಬ್ದಾರಿ ಪ್ರಗತಿ ಹಾಗೂ ವನದುರ್ಗ ಸಂಘದ ಸದಸ್ಯರು ವಹಿಸಿದ್ದರು. ರೇವತಿ ಸ್ವಾಗತಿಸಿ, ರತ್ನಾವತಿ ವಂದಿಸಿದರು.



ಮಂಗಳೂರಿನ ಪದವಿನಂಗಡಿ ಬೆನಕ ಬಾಲ ಸಂಸ್ಕಾರ ಕೇಂದ್ರದಲ್ಲಿ ಭಾನುವಾರ ವೈಬ್ ಆಫ್ ಕುಡ್ಲ ಕಲಾ ಸಂಸ್ಥೆಯ ಸಹಯೋಗದಲ್ಲಿ ಪುನರ್ಮಿಲನ ಹಾಗೂ ಮಾತೃ ಭೋಜನ ಕಾರ್ಯಕ್ರಮ ಜರುಗಿತು. ನೂರಾರು ಮಕ್ಕಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ರಕ್ತದಾನದಿಂದ ಆಪತ್ತಿನಲ್ಲಿರುವ ಜೀವ ಉಳಿಸಲು ಸಾಧ್ಯ: ಶಾಸಕ ರಾಜೇಶ್ ನ್ಯಾಕ್



ಬಂಟ್ವಾಳ: ಸೆಕ್ಯೂರ್ ಇನ್ಶೂರೆನ್ಸ್ ಕನ್ಸಲ್ಟೆನ್ಸಿ ಹಾಗೂ ಫರಂಗಿಪೇಟೆ ಸೇವಾಂಜಲಿ ಪ್ರತಿಷ್ಠಾನ ವತಿಯಿಂದ ಕೆಎಂಸಿ ಆಸ್ಪತ್ರೆ ಸಹಯೋಗದೊಂದಿಗೆ 136ನೇ ರಕ್ತದಾನ ಶಿಬಿರ ಬಿ.ಸಿ ರೋಡಿನ ಶ್ರೀ ರಕ್ತೇಶ್ವರೀ ಸನ್ನಿಧಿ ಸಮೀಪದ ಆರ್.ಕಾಂಪ್ಲೆಕ್ಸ್‌ನ 2 ನೇ ಮಹಡಿಯಲ್ಲಿ ಭಾನುವಾರ ನಡೆಯಿತು.

ಶಾಸಕ ರಾಜೇಶ್ ನ್ಯಾಕ್ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ರಕ್ತದಾನ ಶ್ರೇಷ್ಠ ದಾನ. ಆ ಮೂಲಕ ಜೀವ ರಕ್ಷಣೆಯ ಮಹಾನ್ ಕಾರ್ಯ ಈಡೇರಲು ಸಾಧ್ಯ ಎಂದು ಶ್ಲಾಘಿಸಿದರು.

ಮೊಡಂಕಾಪು ಚರ್ಚ್‌ನ ಧರ್ಮಗುರು ವಂ.ಫಾ. ವಿಕ್ಟರ್ ಡಿಸೋಜ, ಅಮ್ಟಾಡಿ ಗ್ರಾ.ಪಂ. ನ ನಿಕಟಪೂರ್ವಾಧ್ಯಕ್ಷ ವಿಜಯ್ ಕುಮಾರ್, ಸೆಕ್ಯೂರ್ ಇನ್ಶೂರೆನ್ಸ್ ಕನ್ಸಲ್ಟೆನ್ಸಿ ಮಾಲಕ ಪ್ರಶಾಂತ್ ಫ್ರಾಂಕ್, ಜೆಸಿಂತ ಜ್ಯೋತಿ ಡಿಸೋಜ ಮುಂತಾದವರು ಉಪಸ್ಥಿತರಿದ್ದರು. ಸೇವಾಂಜಲಿ ಪ್ರತಿಷ್ಠಾನದ ಆಡಳಿತ ಟ್ರಸ್ಟಿ ಕೆ. ಕೃಷ್ಣಕುಮಾರ್ ಪೂಂಜ ಮಾತನಾಡಿ, ಕಳೆದ ಕೆಲವು ವರ್ಷದಿಂದ ರಕ್ತದಾನದ ಮಹಾನ್ ಕಾರ್ಯ ಸಾಕಾರವಾಗುತ್ತಿದೆ. ಈ ಮೂಲಕ ಆರೋಗ್ಯ ಕ್ಷೇತ್ರದಲ್ಲಿ ದೊಡ್ಡ ಸೇವೆ ಸಲ್ಲಿಕೆಯಾಗುತ್ತಿದೆ ಎಂದರು.

ಸಿಂಗಲ್ ಡೋನರ್ ಆಫ್ ಪ್ಲೇಟ್ ಲೆಟ್ ಸಾಧಕ ಝುನೈದ್, ರಕ್ತದಾನಿಗಳಾದ ಸಂತೋಷ್ ಮೋನಪ್ಪ ಮಾರಿಪಳ್ಳ, ನೀಲನ್ ಡಿಸೋಜ ಪೆಲಪಾಡಿ, ಸುಕೇಶ್ ಶೆಟ್ಟಿ ತೇವು, ಪ್ರಶಾಂತ್ ಕುಮಾರ್ ತುಂಬೆ ಅವರನ್ನು ಸಮ್ಮಾನಿಸಲಾಯಿತು. ಶಿಬಿರದಲ್ಲಿ ಒಟ್ಟು ಸುಮಾರು 73 ಯುನಿಟ್ ರಕ್ತ ಸಂಗ್ರಹಿಸಲಾಯಿತು.

ಎಸ್‌ಎಸ್‌ಪಿಯು ಕಾಲೇಜಿನಲ್ಲಿ ಮಾದರಿ ಚುನಾವಣೆ ಮೂಲಕ ಮತದಾನ ಜಾಗೃತಿ

ಸುಬ್ರಹ್ಮಣ್ಯ: ಸುಬ್ರಹ್ಮಣ್ಯದ ಎಸ್‌ಎಸ್ ಪಿಯು ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವದಲ್ಲಿನ ಚುನಾವಣಾ ವ್ಯವಸ್ಥೆ ತಿಳಿಯಪಡಿಸುವ ಸಲುವಾಗಿ ವಿದ್ಯಾರ್ಥಿ ನಾಯಕರ ಆಯ್ಕೆಗಾಗಿ ವ್ಯವಸ್ಥಿತ ಮಾದರಿ ಮತದಾನವು ಶನಿವಾರ ನೆರವೇರಿತು.



ಚುನಾವಣಾಧಿಕಾರಿಗಳ ಆಯ್ಕೆ

ಪ್ರಾಚಾರ್ಯ ಸೋಮಶೇಖರ ನಾಯಕ್ ಮುಖ್ಯಚುನಾವಣಾಧಿಕಾರಿಯಾಗಿದ್ದರು. ಚುನಾವಣೆಯಲ್ಲಿ ಸೆಕ್ಟರ್ ಅಧಿಕಾರಿಯಾಗಿದ್ದ ಉಪನ್ಯಾಸಕ ಜಯಪ್ರಕಾಶ್ ಆರ್. ಮುಖ್ಯ ಚುನಾವಣಾ ಆಯುಕ್ತರಾಗಿ, ಇನ್ನೋರ್ವ ಸೆಕ್ಟರ್ ಆಫೀಸರ್ ಆಗಿ ಕರ್ತವ್ಯ ನಿರ್ವಹಿಸಿದ್ದ ಗಿರೀಶ್ ಅವರನ್ನು ಚುನಾವಣಾ ವೀಕ್ಷಕರಾಗಿ ಮುಖ್ಯಚುನಾವಣಾಧಿಕಾರಿಗಳು ಆದೇಶ ನೀಡಿದರು. ಉಪನ್ಯಾಸಕರು ಹಾಗೂ ಸಿಬ್ಬಂದಿಗಳಿಗೆ ಮತಗಟ್ಟೆ ಅಧಿಕಾರಿಗಳಾಗಿ ಮತ್ತು ಸಹಾಯಕ ಮತಗಟ್ಟೆ ಅಧಿಕಾರಿಗಳಾಗಿ ಆದೇಶ ನೀಡಿದರು. ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಜತೆಕಾರ್ಯದರ್ಶಿ, ಸಾಂಸ್ಕೃತಿಕ ಕಾರ್ಯದರ್ಶಿ, ಕ್ರೀಡಾ ಜತೆ ಕಾರ್ಯದರ್ಶಿ, ಸಾಂಸ್ಕೃತಿಕ ಜತೆ ಕ್ರೀಡಾ ಕಾರ್ಯದರ್ಶಿ ಹುದ್ದೆಗೆ ಇಚ್ಚಿತ ಸ್ಪರ್ಧಾಳುಗಳು ನಾಮಪತ್ರ ಸಲ್ಲಿಸಿದರು. ನಾಮಪತ್ರ ಹಿಂತೆಗೆದುಕೊಳ್ಳುವಿಕೆ ಹಾಗೂ ಪರಿಶೀಲನೆ ನಡೆದು ಅಂತಿಮವಾಗಿ ಒಟ್ಟು 05 ಸ್ಥಾನಕ್ಕೆ 18 ಸ್ಪರ್ಧಿಗಳು ಕಣದಲ್ಲಿ ಉಳಿದರು.

97.41% ಮತದಾನ

ಒಟ್ಟು 734 ಮತದಾರರಲ್ಲಿ 715 ಮಂದಿ ಮತ ಚಲಾಯಿಸಿ 97.41% ಮತದಾನವಾಯಿತು. ಇದರಲ್ಲಿ 23 ಮತಗಳು ಅಸಿಂಧುವಾಗಿದ್ದು ತಿರಸ್ಕೃತ ವಾಯಿತು.26 ಮತಗಳು ನೋಟವಾಗಿತ್ತು. ಚುನಾವಣೆಯಲ್ಲಿ ಅಧ್ಯಕ್ಷರಾಗಿ ಬಿಪಿನ್ ಐ.ಕೆ ಆಯ್ಕೆಯಾದರೆ, ಚಿಂತನಾ.ಕೆ(ಉಪಾಧ್ಯಕ್ಷೆ), ಆಕಾಶ್ ಪ್ರಕಾಶ್ (ಕಾರ್ಯದರ್ಶಿ), ಮೋನಿಷಾ ರೈ (ಸಾಂಸ್ಕೃತಿಕ ಜತೆ ಕಾರ್ಯದರ್ಶಿ), ಮನ್ವಿತ್ ಎ.ಜೆ (ಕ್ರೀಡಾ ಜತೆ ಕಾರ್ಯದರ್ಶಿ) ಆಯ್ಕೆಯಾದರು.

ಯುವವಾಹಿನಿಯಿಂದ ಮಾಣಿ ಘಟಕ: ವೃಕ್ಷೋತ್ಸವ ಕಾರ್ಯಕ್ರಮ, ಪರಿಸರ ಜಾಗೃತಿ



ಬಂಟ್ವಾಳ: ಯುವವಾಹಿನಿ ಮಾಣಿ ಘಟಕದಿಂದ ಎರಡನೇ ಹಂತದ ಯುವ ವೃಕ್ಷೋತ್ಸವ ಕಾರ್ಯಕ್ರಮದ ಅಂಗವಾಗಿ ವಿವಿಧ ಶಿಕ್ಷಣ ಸಂಸ್ಥೆಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಗಿಡ ನೆಡುವ ಮೂಲಕ ಮರದ ನೆರಳು ಬದುಕಿಗೆ ನೆರಳು ಎಂಬ ಧ್ಯೇಯವಾಕ್ಯದೊಂದಿಗೆ ಕಾರ್ಯಕ್ರಮ ನಡೆಸಲಾಯಿತು. ಕಾರ್ಯಕ್ರಮದ ಪ್ರಯುಕ್ತ ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಂಘ ಕೆದಿಲ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಬರಿಮಾರು, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನೇರಳಕಟ್ಟೆ ಹಾಗೂ ಅಂಗನವಾಡಿ ಕೇಂದ್ರ ಪೆರಾಜೆಗಳಲ್ಲಿ ವಿವಿಧ ಜಾತಿಯ ಗಿಡಗಳನ್ನು ನೆಡುವ ಮೂಲಕ ಪರಿಸರ ಜಾಗೃತಿಯನ್ನು ಮೂಡಿಸಲಾಯಿತು. ಯುವವಾಹಿನಿ ಮಾಣಿ ಘಟಕದ ಅಧ್ಯಕ್ಷರಾದ ಗಣೇಶ್ ಸಾಯಿ, ಉಪಾಧ್ಯಕ್ಷ ಸುಜಿತ್ ಅಂಚನ್, ಕೋಶಾಧಿಕಾರಿಯಾದ ಡಾ. ತ್ರಿವೇಣಿ ರಮೇಶ್,ನಿತಿನ್ ಅಂಗರಾಜೆ,ಸತೀಶ್ ಮುರುವ, ಮಾರಪ್ಪ ಸುವರ್ಣ, ರಾಜೇಶ್ ಬಲ್ಯ, ಬಾಲಕೃಷ್ಣದೇಲಬೆಟ್ಟು ಹಾಗೂ ಯುವವಾಹಿನಿಯ ಸದಸ್ಯರು ಉಪಸ್ಥಿತರಿದ್ದರು.

ಸಂಪಾಜೆ ವಲಯ ಕಾಂಗ್ರೆಸ್ ಸಭೆಯಲ್ಲಿ ಪಕ್ಷದ ವಿರುದ್ಧ ಕಾರ್ಯಕರ್ತರ ಆಕ್ರೋಶ

ಸುಳ್ಯ: ಸುಳ್ಯ ಬ್ಲಾಕ್ ಅಧ್ಯಕ್ಷ ರಾಧಾಕೃಷ್ಣ ಬೊಳ್ಳೂರು ಪಕ್ಷ ವಿರೋಧ ಮಾಡುವವರಿಗೆ ಬೆಂಬಲವಾಗಿ ನಿಂತಿದ್ದಾರೆ. ಪಕ್ಷಕ್ಕೆ ವಿರೋಧ ಮಾಡಿದವರನ್ನು ಪಧಾಧಿಕಾರಿಯಾಗಿ ನೇಮಕಗೊಳಿಸಿ ಪಕ್ಷ ವಿರೋಧ ಮಾಡುವವರಿಗೆ ಪ್ರೋತ್ಸಾಹ ಕೊಟ್ಟಂತಾಗಿದೆ ಎಂದು ವಲಯ ಕಾಂಗ್ರೆಸ್ ಸಭೆಯಲ್ಲಿ ಕಾರ್ಯಕರ್ತರು ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಘಟನೆ ಭಾನುವಾರ ಕಲ್ಲುಗುಂಡಿಯಲ್ಲಿ ನಡೆದ ಸಂಪಾಜೆ ವಲಯ ಕಾಂಗ್ರೆಸ್ ಸಭೆಯಲ್ಲಿ ನಡೆದಿದೆ.

ರಾಜ್ಯದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ, ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ನೂತನ ಕೆ.ಪಿ.ಸಿ.ಸಿ. ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಪಕ್ಷದ ಶಿಸ್ತು ಬದ್ಧತೆ ಸಿದ್ಧಾಂತಕ್ಕೆ ಮಾದರಿಯಾಗಿ ವರ್ತಿಸು ತ್ತಿರುವುದನ್ನು ನೋಡುತ್ತಿರುವ ಸಂದರ್ಭದಲ್ಲಿ ಸುಳ್ಯದಲ್ಲಿ ವ್ಯತಿರಿಕ್ತವಾಗಿ ರಾಧಾಕೃಷ್ಣ ಬೊಳ್ಳೂರು ಅಧ್ಯಕ್ಷರಾದ ಬಳಿಕ ಪಕ್ಷದ ಶಿಸ್ತು ಮತ್ತು ಸಿದ್ಧಾಂತವನ್ನು ಗಂಭೀರವಾಗಿ ಪರಿಗಣಿಸಿದ ಅಧ್ಯಕ್ಷನಂತೆ ಕಾಣುತ್ತಿಲ್ಲ



ಎಂದು ಸಭೆಯಲ್ಲಿ ಕಾರ್ಯಕರ್ತರು ಆಕ್ರೋಶ ಹೊರಹಾಕಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಸಂಪಾಜೆ ವಲಯ ಕಾಂಗ್ರೆಸ್ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದ ಸೋಮಶೇಖರ್ ಕೊಯಿಂಗಾಜೆ ಸುಮಾರು 30 ವರ್ಷಗಳಿಂದ ಪಕ್ಷದ ಶಿಸ್ತು ಸಿದ್ಧಾಂತಕ್ಕೆ ಗೌರವ ಕೊಟ್ಟು, ಪಕ್ಷ ಕಷ್ಟದಲ್ಲಿದ್ದಾಗಲೂ ಎದೆಗುಂದದೆ ಪಕ್ಷವನ್ನು ಕಟ್ಟಿ ಬೆಳೆಸಿದ ವ್ಯಕ್ತಿ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಪತ್ರ ಕಳುಹಿಸಿದಾಗ ಸೌಜನ್ಯಕ್ಕೂ ವಿಚಾರಿಸುವ ಕೆಲಸವಾಗಿಲ್ಲ ಎಂದು ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ಗ್ರಾ.ಪಂ. ಚುನಾವಣೆಯಲ್ಲಿ ಪ್ರಥಮ ಬಾರಿಗೆ ಸ್ಪರ್ಧಿಸಿ ಸಂಪಾಜೆ ಗ್ರಾ.ಪಂ. ಸದಸ್ಯರಾಗಿ ಆಯ್ಕೆಯಾಗಿದ್ದ ಎಸ್.ಕೆ.ಹನೀಫ್ ಅವರು ಗ್ರಾ.ಪಂ. ಉಪಾಧ್ಯಕ್ಷರ ಚುನಾವಣೆಯ ಸಂದರ್ಭದಲ್ಲಿ ತಾವೂ ನಾಮಪತ್ರ ಸಲ್ಲಿಸಿದಾಗ ಈ ಬಾರಿ ತಮ್ಮಿಂದಲೂ ಹಿರಿಯರಿಗೆ ಅವಕಾಶ ಕೊಡಿ. ಮುಂದೆ ನಿಮಗೆ ಅವಕಾಶ ಕೊಡಲಾಗುವುದು ಎಂದು ಬ್ಲಾಕ್ ಹಾಗೂ ಸ್ಥಳೀಯ ನಾಯಕರ ಕೋರಿಕೆಗೆ ಬೆಲೆ ನೀಡದೇ ಬಿಜೆಪಿಯ ಬೆಂಬಲವನ್ನು ಪಡೆದುಕೊಂಡು ಸ್ಪರ್ಧಿಸಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದರು. ಪಕ್ಷದ ಸಿದ್ಧಾಂತ ಹಾಗು ಶಿಸ್ತಿನ ವಿರುದ್ಧ ನಿಂತವರನ್ನು ಬ್ಲಾಕ್ ಕಾಂಗ್ರೆಸ್ ಪ್ರದಾನ ಕಾರ್ಯದರ್ಶಿಯನ್ನಾಗಿ ಮಾಡಿರುವ ರಾಧಾಕೃಷ್ಣ ಬೊಳ್ಳೂರು ಅವರ ನಿರ್ಧಾರ ಅತ್ಯಂತ ಖಂಡನೀಯ ಎಂದು ಕಾರ್ಯಕರ್ತರು ಹೇಳಿದರು. ಈ ನಡೆ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಶಿಸ್ತು ಸಿದ್ಧಾಂತ ಮತ್ತು ಪಕ್ಷದ ಮೇಲಿನ ಪ್ರೀತಿಯ ಕಾರಣಕ್ಕೆ ಹಗಲು ರಾತ್ರಿ ಬಿಸಿಲು ಮಳೆ ಎನ್ನದೆ ದುಡಿಯುವ ಕಾರ್ಯಕರ್ತರ ನೈತಿಕ ಧೈರ್ಯ ಕುಂದಿಸುವುದಾಗಿರುತ್ತದೆ. ಈ ಕಾರಣದಿಂದ ಬ್ಲಾಕ್ ಅಧ್ಯಕ್ಷ ರಾಧಾಕೃಷ್ಣ ಬೊಳ್ಳೂರು ಅವರು ನಿಜವಾಗಿಯೂ ಕಾಂಗ್ರೆಸ್ ಪಕ್ಷಕ್ಕೆ ಒಳ್ಳೆಯದಾಗಲಿ ಎಂದೇ ಬಯಸುವವರಾಗಿದ್ದರೆ ಕೂಡಲೇ ಎಸ್.ಕೆ. ಹನೀಫ್ ಅವರನ್ನು ಬ್ಲಾಕ್ ಕಾಂಗ್ರೆಸ್ ಹುದ್ದೆಯಿಂದ ಕೈ ಬಿಡಬೇಕು ಎಂದು ಪತ್ರ ಬರೆಯಬೇಕು. ಇಲ್ಲದಿದ್ದಲ್ಲಿ ಬ್ಲಾಕ್ ಸಂಪಾಜೆ ವಲಯ ಕಾಂಗ್ರೆಸ್ ಕಾರ್ಯಕರ್ತರ ಈ ಬೇಡಿಕೆಯಂತೆ ನಡೆಯದಿದ್ದರೆ ಮುಂದೆ ಪಕ್ಷ ವಿರೋಧ ಚಟುವಟಿಕೆ ಮಾಡುವವರಿಗೆ ಅವರು ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಹೀಗಾದರೆ ಮುಂದೆ ಸಂಪಾಜೆ ಕಾಂಗ್ರೆಸ್ ವತಿಯಿಂದ ಕಠಿಣ ನಿರ್ಧಾರಗಳನ್ನು ಕೈಗೊಳ್ಳಲು ಮತ್ತು ನೂತನ ರಾಜ್ಯಾಧ್ಯಕ್ಷರಲ್ಲಿಗೆ ಈ ವಿಷಯಗಳನ್ನು ತಲುಪಿಸಲು ಒಕ್ಕೊರಲಿನಿಂದ ನಿರ್ಣಯಿಸಲಾಯಿತು.

ಸಭೆಯಲ್ಲಿ ಸಂಪಾಜೆ ಸಹಕಾರಿ ಸಂಘದ ನಿರ್ದೇಶಕ ರಾಜು ನೆಲ್ಲಿಕುಮೇರಿ, ಜಿಲ್ಲಾ ಕಾಂಗ್ರೆಸ್ ನಾಯಕ ಮಹಮ್ಮದ್ ಕುಂಞ ಗೂನಡ್ಕ ಪ್ರಮೀಳಾ ಪೆಡ್ಕ, ಸಂಪಾಜೆ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲಲನ ಕೆ.ಆರ್., ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯೆ ಕಾಂತಿ ಬಿ.ಎಸ್., ಹಿರಿಯ ಕಾಂಗ್ರೆಸ್ ನಾಯಕರಾದ ಬೆಂಜಮಿನ್ ಡಿ'ಸೋಜ, ಸಾಜಿದ್ ಗೂನಡ್ಕ, ಕೆ.ಪಿ.ಸಿ.ಸಿ. ಪ್ರಚಾರ ಸಮಿತಿ ಮುಖ್ಯ ಸಂಯೋಜಕ ಜಾನಿ ಕೆ.ಪಿ. ಮತ್ತಿತರು ಉಪಸ್ಥಿತರಿದ್ದರು.

ಸುತ್ತಮುತ್ತ

ಆಧಾರ್ ಕಾರ್ಡ್ ನವೀಕರಣ: ಸೆಪ್ಟೆಂಬರ್ ತನಕ ವಿಸ್ತರಣೆ

ಕಾಸರಗೋಡು: ಐದರಿಂದ 15 ವರ್ಷದ ಮಧ್ಯೆ ಪ್ರಾಯದ ಮಕ್ಕಳ ಆಧಾರ್ ಬಯೋಮೆಟ್ರಿಕ್ ಮಾಹಿತಿಗಳನ್ನು ಉಚಿತವಾಗಿ ನವೀಕರಿಸುವ ಸಮಯವನ್ನು ಸೆಪ್ಟೆಂಬರ್ 30ರ ತನಕ ವಿಸ್ತರಿಸಲಾಗಿದೆ. ಅದರಂತೆ ಮಕ್ಕಳ ಬೆರಳಚ್ಚು, ಕಣ್ಣು ಇತ್ಯಾದಿ ಫೋಟೋಗಳನ್ನು ನವೀಕರಿಸಬಹುದಾಗಿದೆ. ಅಕ್ಷಯ ಕೇಂದ್ರಗಳು ಮತ್ತು ಅಂಗೀಕೃತ ಆಧಾರ್ ಕೇಂದ್ರಗಳಲ್ಲಿ ಇಂತಹ ಆಧಾರ್ ಕಾರ್ಡ್‌ಗಳನ್ನು ಉಚಿತವಾಗಿ ನವೀಕರಿಸಬಹುದಾಗಿದೆ ಎಂದು ಐಟಿ ಮಿಷನ್ ತಿಳಿಸಿದೆ. ಈ ವಯೋಮಿತಿಯ ವಿದ್ಯಾರ್ಥಿಗಳು ತಮ್ಮ ಆಧಾರ್ ಕಾರ್ಡ್‌ನ್ನು ತಾತ್ಕಾಲಿಕವಾಗಿ ಅಸಿಂಧುಗೊಳ್ಳುವ ಸಾಧ್ಯತೆಯಿದೆ. ಸ್ಕಾಲರ್ ಶಿಪ್, ರೇಶನ್ ಕಾರ್ಡ್‌ಗಳಲ್ಲಿ ಹೆಸರು ಸೇರ್ಪಡೆ, ಶಾಲಾ ಕಾಲೇಜುಗಳಿಗೆ ಪ್ರವೇಶ, ಡಿಜಿಲಾಕರ್, ಆಧಾರ್, ಪಾನ್ ಕಾರ್ಡ್ ಇತ್ಯಾದಿಗಳಿಗೆ ಆಧಾರ್ ಕಾರ್ಡ್ ಕಡ್ಡಾಯವಾಗಿದೆ. ಮಾತ್ರವಲ್ಲದೆ ನೀಟ್, ಜೆಇಇ, ಕಿಮ್ ಇತ್ಯಾದಿ ಸ್ಪರ್ಧಾತ್ಮಕ ಪರೀಕ್ಷೆಗೂ ಆಧಾರ್ ಕಾರ್ಡ್ ಅಗತ್ಯವಾಗಿದೆ. ಮೊಬೈಲ್ ನಂಬ್ರ ಮತ್ತು ಇ-ಮೇಲ್ ಐಡಿಯೊಂದಿಗೂ ಆಧಾರ್ ಕಾರ್ಡ್ ನಂಬ್ರ ಜೋಡಣೆ ನಡೆಸಬೇಕಾಗಿದೆ. ಆದರೆ ಐದಕ್ಕಿಂತ ಕೆಳಗಿನ ಪ್ರಾಯದ ಮಕ್ಕಳಿಗೆ ಇಂತಹ ಬಯೋಮೆಟ್ರಿಕ್ ಮಾಹಿತಿಗಳು ಅಗತ್ಯವಿಲ್ಲವೆಂದು ಐಟಿ ಮಿಷನ್ ತಿಳಿಸಿದೆ.

ವಾಹನ ಟೆಂಡರ್ ಆಹ್ವಾನ

ಕಾಸರಗೋಡು: ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಮಾನಸಿಕ ಆರೋಗ್ಯ ಶಿಬಿರಗಳು, ಚಿಕಿತ್ಸಾಲಯಗಳು, ಜಾಗೃತಿ ತರಗತಿಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಚಾಲಕನೊಂದಿಗೆ ವಾಹನಕ್ಕಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳು ಜೂ.16 ರಿಂದ 26ರ ಸಂಜೆ 4ರ ವರೆಗೆ ಲಭ್ಯವಿರುತ್ತವೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಜೂ.27ರಂದು ಮಧ್ಯಾಹ್ನ 12 ಗಂಟೆಗೆ ವರೆಗೆ ಆಗಿದೆ. ಟೆಂಡರ್‌ನ್ನು ಜೂ.27ರಂದು ಮಧ್ಯಾಹ್ನ 3 ಗಂಟೆಗೆ ತೆರೆಯಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಅಧೀಕ್ಷಕರು, ಜಿಲ್ಲಾ ಆಸ್ಪತ್ರೆ ಕಾಞಂಗಾಡು, ಪಿ.ಒ.ಬಲ್ಲ ಕಾಸರಗೋಡು – 671531 ಅಥವ ದೂರವಾಣಿ ಸಂಖ್ಯೆ 0467 2207018 ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಾರ್ವಜನಿಕ ಸ್ಥಳಗಳಲ್ಲಿನ ಫ್ಲೆಕ್ಸ್ ಬ್ಯಾನರ್ ತೆರವಿಗೆ ಸೂಚನೆ

ಕಾಸರಗೋಡು: ಕಲ್ಲಾರ್ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸಾರ್ವಜನಿಕ ಸ್ಥಳಗಳು ಮತ್ತು ರಸ್ತೆ ಬದಿಗಳಲ್ಲಿ ಅಕ್ರಮವಾಗಿ ನಿರ್ಮಿಸಲಾದ ಧ್ವಜ ಸ್ತಂಭಗಳು, ಬ್ಯಾನರ್‌ಗಳು ಮತ್ತು ಫ್ಲೆಕ್ಸ್ ಬೋರ್ಡ್‌ಗಳನ್ನು ಏಳು ದಿನಗಳ ಒಳಗೆ ಸಂಬಂಧ ಪಟ್ಟವರು ತೆಗೆದುಹಾಕಬೇಕು. ಇಲ್ಲದಿದ್ದರೆ ಪಂಚಾಯತ್ ಅಧಿಕಾರಿಗಳು ಅವುಗಳನ್ನು ತೆಗೆದುಹಾಕಿ ಸಂಬಂಧಪಟ್ಟ ವ್ಯಕ್ತಿಗಳಿಂದ ವೆಚ್ಚ ಮತ್ತು ದಂಡವನ್ನು ಸಂಗ್ರಹಿಸಿ ಕಾನೂನು ಕ್ರಮ ಕೈಗೊಳ್ಳುವರು ಎಂದು ಕಲ್ಲಾರ್ ಗ್ರಾಮ ಪಂಚಾಯತ್ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರಿಸರ ದಿನಾಚರಣೆ



ಬದಿಯಡ್ಕ: ವಿಶ್ವಪರಿಸರ ದಿನದ ಅಂಗವಾಗಿ ಕಾಸರಗೋಡು ಸರಕಾರಿ ಕಾಲೇಜಿನ ಎನ್‌ಸಿಸಿ ವಿದ್ಯಾರ್ಥಿಗಳು ಕಾಲೇಜು ಪ್ರಾಧ್ಯಾಪಕ ಡಾ.ರತ್ನಾಕರ ಮಲ್ಲಮೂಲೆಯವರ ಬನವಾಸಿ ಪ್ರಕೃತಿ ಧಾಮಕ್ಕೆ ಭೇಟಿ ನೀಡಿ ವಿಶ್ವಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಿದರು.

ಎನ್‌ಸಿಸಿ ಹಿರಿಯ ಹಾಗೂ ಕಿರಿಯ ಕೇಡೆಟ್ಸ್‌ಗಳು ಪಾಲ್ಗೊಂಡರು. ಬನವಾಸಿಯ ಸೌರಯೋಜನೆ, ಜಲಮರುಪೂರಣ ವ್ಯವಸ್ಥೆ, ಮಳೆಕೊಯ್ಲು ವ್ಯವಸ್ಥೆಗಳನ್ನು ವೀಕ್ಷಿಸಿದರು. ಈ ಕುರಿತು ಡಾ.ರತ್ನಾಕರ ಮಲ್ಲಮೂಲೆಯವರ ಜೊತೆ ಸಂವಾದ ನಡೆಸಿದರು. ಎಲ್ಲರೂ ಜೊತೆಸೇರಿ ಬನವಾಸಿಯ ಸೀತಾವನ ಔಷಧೀಯ ತೋಟದಲ್ಲಿ ರಾಮಪತ್ರೆ ಗಿಡವೊಂದನ್ನು ನೆಟ್ಟು ವಿಶ್ವಪರಿಸರ ದಿನವನ್ನು ಅರ್ಥಪೂರ್ಣಗೊಳಿಸಿದರು.

ತಂಡದಲ್ಲಿ ಸೀನಿಯರ್ ಅಂಡರ್ ಆಫೀಸರ್ ವರ್ಷ ಎಂ.ಆರ್., ಅಂಡರ್ ಆಫೀಸರ್ ಅಮೃತಾ ಪಿ., ಸರ್ಜೆಂಟ್ ಸಾಯಿರಾಜ್, ಸರ್ಜೆಂಟ್ ಹರ್ಷಿಣಿ ಬಿ.ಎನ್., ಕೇಡೆಟ್ಸ್‌ಗಳಾದ ರೇವತಿ ಕೆ., ಅರ್ಜುನ್ ಕೆ., ಶಿವನಂದನ ಕೆ.ವಿ., ಏನೋಲ ಡಿಸೋಜ, ಮಿಥುನ್‌ರಾಜ್, ಸಮೀಕ್ಷಾ, ಹರ್ಷಕುಮಾರ್, ದಿವ್ಯಾ, ಸುಸ್ಮಿತಾ ಈ ಮುಂತಾದವರು ಭಾಗವಹಿಸಿದ್ದರು. ವರ್ಷ ಎಂ.ಆರ್. ನೇತೃತ್ವ ನೀಡಿದ್ದರು.

ಅರ್ಜಿ ಆಹ್ವಾನ

ಕಾಸರಗೋಡು: ಜಿಲ್ಲಾ ವಾರ್ತಾ ಇಲಾಖೆಯ ನೇತೃತ್ವದಲ್ಲಿ ಓದುವ ಹಬ್ಬದ ಅಂಗವಾಗಿ ಯುವಕರಿಗೆ ನೀಡಲಾಗುತ್ತಿರುವ ಬಶೀರ್ ಸಣ್ಣಕಥೆ ಪ್ರಶಸ್ತಿಗೆ ಜಿಲ್ಲೆಯ ಯುವಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಯೋಮಿತಿ 40 ವರ್ಷ. ಈ ಹಿಂದೆ ಪ್ರಕಟವಾಗದ ಕೃತಿಗಳನ್ನು ಜೂ.25ರೊಳಗೆ ಕಾಸರಗೋಡು ಸಿವಿಲ್ ಸ್ಟೇಷನ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ವಾರ್ತಾ ಕಚೇರಿಗೆ ಅಂಚೆ ಅಥವಾ ಇ-ಮೇಲ್ ಮೂಲಕ ಸಲ್ಲಿಸಬಹುದು. ಜಿಲ್ಲಾ ಮಾಹಿತಿ ಅಧಿಕಾರಿ, ಜಿಲ್ಲಾ ವಾರ್ತಾ ಕಚೇರಿ, ಸಿವಿಲ್ ಸ್ಟೇಷನ್, ವಿದ್ಯಾನಗರ, ಕಾಸರಗೋಡು – 671 123 ಎಂಬ ವಿಳಾಸಕ್ಕೆ ಕಳುಹಿಸಬಹುದು. ಹೆಚ್ಚಿನ ವಿವರಗಳಿಗೆ 04994 255145 ಕರೆ ಮಾಡಬಹುದು ಎಂದು ಪ್ರಕಟಣೆ ಮೂಲಕ ತಿಳಿಸಲಾಗಿದೆ.

ಕಾಸರಗೋಡು ಸೇರಿದಂತೆ ಉಪ್ಪಳ, ಪೆರ್ಲ, ಕುಂಬಳೆಯಲ್ಲಿ ಯೋಜನೆಗೆ ಹಸಿರು ನಿಶಾನೆ

ಕೆಎಸ್ಸಾರ್ಟಿಸಿ ಬಸ್‌ಗಳಲ್ಲಿ ಸ್ತ್ರೀಯರಿಗೆ ಉಚಿತ ಪಯಣ



ಕಾಸರಗೋಡು



ಉಪ್ಪಳ



ಪೆರ್ಲ

ಕಾಸರಗೋಡು: ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಕಲ್ಪಿಸುವ ಕೇರಳ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಗಳಲ್ಲಿ ಒಂದಾದ 'ಪ್ರಿಯದರ್ಶಿನಿ' ಯೋಜನೆಯ ಉದ್ಘಾಟನಾ ಕಾರ್ಯಕ್ರಮವು ಕಾಸರಗೋಡು ಸೇರಿದಂತೆ ಉಪ್ಪಳ, ಪೆರ್ಲ, ಕುಂಬಳೆಯಲ್ಲಿ ಸೋಮವಾರ ಬೆಳಗ್ಗೆ ಅಲ್ಲಲ್ಲಿ ಸಂಭ್ರಮದಿಂದ ನಡೆಯಿತು.

ಮೊದಲ ಟ್ರಿಪ್‌ಗೆ ಚಾಲನೆ!

ಕಾಸರಗೋಡಿನ ಕೆಎಸ್‌ಆರ್‌ಟಿಸಿ ಡಿಪ್ಪೋದಲ್ಲಿ ನಡೆದ ಯೋಜನೆಯ ಉದ್ಘಾಟನಾ ಸಮಾರಂಭದಲ್ಲಿ ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ಭಾಗವಹಿಸಿ, ಶಾಸಕರು ಮತ್ತು ಸಾರ್ವಜನಿಕ ಪ್ರತಿನಿಧಿಗಳ ಮೊದಲ 'ಪ್ರಿಯದರ್ಶಿನಿ' ಟ್ರಿಪ್‌ಗೆ ಚಾಲನೆ ನೀಡಿದರು. ಕಾಸರಗೋಡು ನಗರಸಭಾ ಅಧ್ಯಕ್ಷೆ ಶಾಹಿನಾ ಸಲೀಂ ಅಧ್ಯಕ್ಷತೆ ವಹಿಸಿದ್ದರು. ಕಾಸರಗೋಡು ಬ್ಲಾಕ್ ಪಂಚಾಯತ್ ಅಧ್ಯಕ್ಷ ಅಬ್ದುಲ್ಲಕುಂಞಿ ಚೆರ್ಕಳ, ಮಾಜಿ ಸಚಿವ ಸಿ.ಟಿ.ಅಹಮ್ಮದಾಲಿ, ರಾಷ್ಟ್ರೀಯ ಪಕ್ಷದ ಪ್ರತಿನಿಧಿಗಳಾದ ಪಿ.ಕೆ. ಫೈಸಲ್, ವಿ.ಕೆ. ರವೀಂದ್ರನ್, ಹರೀಶ್ ಬಿ.ನಂಬ್ಯಾರ್, ಎ.ಗೋವಿಂದನ್ ನಾಯರ್, ಮಾಹಿನ್ ಕೇಳೋಟ್, ಮಿನಿ ಚಂದ್ರನ್, ಟಿ.ವಿ.ಉಮೇಶನ್, ಎಟಿಒ ಕೆ.ಪ್ರಿಯೇಶ್ ಕುಮಾರ್ ಸ್ವಾಗತಿಸಿ, ಎ.ವಿ.ಅಶೋಕನ್ ವಂದಿಸಿದರು.

ಮಂಜೇಶ್ವರ ತಾಲೂಕು

ಮಂಜೇಶ್ವರ ತಾಲೂಕು ಮಟ್ಟದ ಯೋಜನೆಯ ಉದ್ಘಾಟನಾ ಕಾರ್ಯಕ್ರಮ ಸೋಮವಾರ ಬೆಳಗ್ಗೆ ಉಪ್ಪಳದಲ್ಲಿ ನಡೆಯಿತು. ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ಅವರು ಬಸ್‌ನ ಡಬಲ್ ಬೆಲ್ ಬಾರಿಸಿದ್ದಲ್ಲದೇ ಧ್ವಜ ಹಾರಾಡಿಸಿ ಉದ್ಘಾಟಿಸಿದರು.



ಕುಂಬಳೆ

ಬಸ್‌ನೊಳಗೆ ಎಣ್ಮಕಜೆ ಗ್ರಾಮ ಪಂಚಾಯತ್ ಅಧ್ಯಕ್ಷೆ ಕುಸುಮಾವತಿ ಅವರಿಗೆ ಶಾಸಕರು ಮೊದಲ ಟಿಕೆಟ್ ಹಂಚಿದರು. ಬಳಿಕ ಬಸ್ಸಿನ ಮೊದಲ ಸಂಚಾರಕ್ಕೆ ಶುಭನಾಂದಿ ಪ್ರಾರ್ಥಿಸಿ ತೆಂಗಿನಕಾಯಿ ಒಡೆಯಲಾಯಿತು. ಯುಡಿಎಫ್ ಸರಕಾರ ಹಾಗೂ ಶಾಸಕ ಎ.ಕೆ.ಎಂ.ಅಶ್ರಫ್ ಅವರಿಗೆ ಶುಭಾಶಯದ ಅಭಿನಂದನೆ ಕೋರಿ ಕಾರ್ಯಕರ್ತರು ಸಂಭ್ರಮಿಸಿ ಸಿಹಿ ಹಂಚಿದರು. ಉದ್ಘಾಟನಾ ಸಮಾರಂಭದಲ್ಲಿ ಡಿಸಿಸಿ ಕಾರ್ಯದರ್ಶಿಗಳಾದ ಸೋಮಶೇಖರ್ ಶೇಣಿ, ಲಕ್ಷ್ಮಣ ಪ್ರಭು ಕುಂಬಳೆ, ಮಂಜೇಶ್ವರ ಬ್ಲಾಕ್ ಪಂಚಾಯತ್ ಅಧ್ಯಕ್ಷ ಸೈಫುಲ್ಲಾ ತಂಙಳ್, ಅಜೀರ್ಝ್ ಮರಿಕ್ಕೆ, ಮಂಜುನಾಥ ಆಳ್ವ ಮಡ್ವ, ಅಬ್ಬಾಸ್ ಮಂಗಲ್ಪಾಡಿ, ಅಶ್ರಫ್ ಕಾರ್ಲೆ, ಕುಂಬಳೆ ಗ್ರಾಮ ಪಂಚಾಯತ್ ಅಧ್ಯಕ್ಷ ವಿ.ಪಿ.ಅಬ್ದುಲ್ ಖಾದರ್, ಮಂಗಲ್ಪಾಡಿ ಪಂಚಾಯತ್ ಅಧ್ಯಕ್ಷ ಗೋಲ್ಡನ್ ಅಬ್ದುಲ್ ರೆಹ್ಮಾನ್, ಎ.ಕೆ.ಆರಿಫ್, ಅರಿಬೀರ್ಝ್ ಕಳತ್ತೂರು, ಎಣ್ಮಕಜೆ ಪಂಚಾಯತ್ ಅಧ್ಯಕ್ಷೆ ಕುಸುಮಾವತಿ, ಪುತ್ತಿಗೆ ಪಂಚಾಯತ್ ಅಧ್ಯಕ್ಷೆ ಫಿದಾ ಉಜಂಪದವು, ಕುಂಬಳೆ, ಮಂಗಲ್ಪಾಡಿ, ಮಂಜೇಶ್ವರ, ಮೀಂಜಾ, ವರ್ಕಾಡಿ, ಪೈವಳಿಕೆ ಗ್ರಾಮ ಪಂಚಾಯತ್ ಸದಸ್ಯರು ಮತ್ತು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಪೆರ್ಲದಲ್ಲಿ ಸಂಭ್ರಮ

ಯುಡಿಎಫ್ ನೀಡಿದ ಚುನಾವಣಾ ಭರವಸೆಯಾದ ಮಹಿಳೆಯರಿಗೆ ಉಚಿತ ಕೆಎಸ್‌ಆರ್‌ಟಿಸಿ ಬಸ್ ಪ್ರಯಾಣ ಸೌಲಭ್ಯದ ಪ್ರಿಯದರ್ಶಿನಿ ಯೋಜನೆಯನ್ನು ಎಣ್ಮಕಜೆ ಪಂಚಾಯತ್‌ನ ಪೆರ್ಲ ಪೇಟೆಯಲ್ಲಿ ಕಾಸರಗೋಡು – ಪುತ್ತೂರು ರೂಟ್‌ನ ಬಸ್‌ಗೆ ಯುಡಿಎಫ್ ವತಿಯಿಂದ ಉಜ್ವಲ ಸ್ವಾಗತ ನೀಡಲಾಯಿತು. ಯೋಜನೆ ಅನುಷ್ಠಾನಕ್ಕೆ ಬಂದ ಮೊದಲ ದಿನವೇ ನೂರಾರು ಮಹಿಳೆಯರು ಉಚಿತ ಪ್ರಯಾಣ ಅನುಭವಿಸಿ ಸಂಭ್ರಮಿಸಿದರು. ಕಾಸರಗೋಡು ಜಿಲ್ಲೆಯ ಪ್ರಮುಖ ಅಂತಾರಾಜ್ಯ ರೂಟ್ ಆದ ಕಾಸರಗೋಡು – ಮಂಗಳೂರಿನ ಹೊರತು ಪುತ್ತೂರು-ಸುಳ್ಯ ರೂಟ್‌ನಲ್ಲೂ ಮಹಿಳೆಯರಿಗೆ ಉಚಿತ ಪ್ರಯಾಣ ಘೋಷಿಸಲಾಗಿದ್ದು, ಈ ಹಿನ್ನೆಲೆಯಲ್ಲಿ ಪೆರ್ಲದಲ್ಲಿ ಯುಡಿಎಫ್ ಕಾರ್ಯಕರ್ತರು ಬಸ್‌ಗೆ ಹೂವಿನ ಹಾರ ಹಾಕಿ, ಸಿಹಿತಿಂಡಿ ವಿತರಿಸಿ ಸಂಭ್ರಮಿಸಿದರು.

> **ಗಡಿನಾಡ ವಿದ್ಯಾರ್ಥಿಗಳಿಗೆ ಉಚಿತ ಪ್ರಯಾಣ: ಅಭಿನಂದನೆ**
>
> **ಕುಂಬಳೆ ಮಂಡಲ ಕಾಂಗ್ರೆಸ್ ಅಧ್ಯಕ್ಷ ರವಿ ಪೂಜಾರಿ ಮನವಿ ಮೇರೆಗೆ ಕರ್ನಾಟಕ ಕೆಎಸ್ ಆರ್‌ಟಿಸಿ ಬಸ್‌ಗಳಲ್ಲಿ ಕಾಸರಗೋಡಿನ ಗಡಿನಾಡ ವಿದ್ಯಾರ್ಥಿಗಳಿಗೆ ಉಚಿತ ಪ್ರಯಾಣದ ಸವಲತ್ತು ವಿಸ್ತರಿಸಲು ಕ್ರಮ ಕೈಗೊಂಡ ಕರ್ನಾಟಕ ಸಿಎಂ ಹಾಗೂ ಸಾರಿಗೆ ಸಚಿವರನ್ನು ಕುಂಬಳೆ ಮಂಡಲ ಕಾಂಗ್ರೆಸ್ ಅಭಿನಂದಿಸಿದೆ. ಕರ್ನಾಟಕ ಸರಕಾರ ಕಾಸರಗೋಡಿನ ವಿದ್ಯಾರ್ಥಿಗಳಿಗೆ ಕರ್ನಾಟಕ ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೌಲಭ್ಯ ನೀಡಿದಂತೆಯೇ ಕೇರಳ ಕೆಎಸ್ ಆರ್‌ಟಿಸಿ ಬಸ್ಸಿನಲ್ಲೂ ವಿದ್ಯಾರ್ಥಿಗಳಿಗೆ ಅಂತರಾಜ್ಯ ಉಚಿತ ಪ್ರಯಾಣ ಸೌಲಭ್ಯ ಒದಗಿಸಬೇಕೆಂದು ಕುಂಬಳೆ ಮಂಡಲ ಕಾಂಗ್ರೆಸ್ ಅಧ್ಯಕ್ಷ ರವಿ ಪೂಜಾರಿ ಒತ್ತಾಯಿಸಿದ್ದಾರೆ.**

ಪ್ರಿಯದರ್ಶಿನಿ ಯೋಜನೆ ಗಡಿಭಾಗದ ಪ್ರದೇಶಗಳ ವಿಸ್ತರಣೆಗೆ ಕಾರಣರಾದ ಜಿಲ್ಲೆಯ ಯುಡಿಎಫ್ ಶಾಸಕರನ್ನು ಅಭಿನಂಸಲಾಯಿತು. ಡಿಸಿಸಿ ಪ್ರಧಾನ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್ ಸದಸ್ಯ ಸೋಮಶೇಖರ್ ಜೆ.ಎಸ್., ಎಣ್ಮಕಜೆ ಪಂಚಾಯತ್ ಅಧ್ಯಕ್ಷೆ ಕುಸುಮಾವತಿ, ಪಂಚಾಯತ್ ಉಪಾಧ್ಯಕ್ಷ ಸಿದ್ದಿಕ್ ವಳಮುಗೇರ್, ಸ್ಥಾಯೀ ಸಮಿತಿ ಅಧ್ಯಕ್ಷೆ ರಮ್ಲಾ, ಪಂಚಾಯತ್ ಸದಸ್ಯೆ ಆಯಿಷಾ ಎ.ಎ., ರಾಬಿಯ, ಎಣ್ಮಕಜೆ ಮಂಡಲ ಕಾಂಗ್ರೆಸ್ ಅಧ್ಯಕ್ಷ ಬಿ.ಎಸ್.ಗಾಂಭೀರ್, ಮುಸ್ಲಿಂಲೀಗ್ ನೇತಾರರಾದ ಹಮಿದಾಲಿ, ಅಶ್ರಫ್ ಅಮೆಕ್ಕಳ, ಹಮೀದ್ ಅಜಿಲಡ್ಕ, ಸಿಡಿಎಸ್ ಅಧ್ಯಕ್ಷೆ ನವೀನ ಕುಮಾರಿ, ಮಹಿಳಾ ಕಾಂಗ್ರೆಸ್‌ನ ಸತ್ಯಭಾಮ, ಕಾಂಗ್ರೆಸ್ ನೇತಾರರಾದ ಅಮು ಅಡ್ಕಸ್ಥಳ, ಅಬ್ದುಲ್ಲ ಕುರೆಡ್ಕ, ಮಾಯಿಲ ನಾಯ್ಕ್, ರಜಾಕ್ ನಲ್ಕ, ನಜಿಬುಲ್ಲ ಶೇಣಿ, ಜಬ್ಬಾರ್ ನಲ್ಕ, ಶ್ರೀನಿವಾಸ ಶೆಣೈ, ಮಾಜಿ ಪಂಚಾಯತ್ ಸದಸ್ಯೆ ಪುಷ್ಪಾ ಶೇಣಿ ಮೊದಲಾದವರು ನೇತೃತ್ವ ನೀಡಿದರು. ಯುಡಿಎಫ್ ಕಾರ್ಯಕರ್ತರು ಉಪಸ್ಥಿತರಿದ್ದರು.

ಕುಂಬಳೆಯಲ್ಲಿ ಸ್ವಾಗತ

ಕುಂಬಳೆ ಮಂಡಲ ಕಾಂಗ್ರೆಸ್ ಘಟಕದ ವತಿಯಿಂದ ಕುಂಬಳೆಯಲ್ಲಿ ಮಹಿಳೆಯರ ಉಚಿತ ಸಂಚಾರದ ಬಸ್‌ಗೆ ಸ್ವಾಗತ ನೀಡಲಾಯಿತು. ಈ ವೇಳೆ ಯುಡಿಎಫ್ ಚುನಾವಣಾ ಭರವಸೆಯನ್ನು ಸಾಕಾರಗೊಳಿಸಿದ ಮುಖ್ಯಮಂತ್ರಿ ವಿ.ಡಿ.ಸತೀಶನ್ ಹಾಗೂ ಯೋಜನೆಯನ್ನು ಕಾಸರಗೋಡು – ಮಂಗಳೂರು ಸಹಿತ ಕಾಸರಗೋಡಿನಿಂದ ಅಂತಾ ರಾಜ್ಯಕ್ಕೆ ವಿಸ್ತರಿಸಲು ಕಾರಣರಾದ ಶಾಸಕ ಎ.ಕೆ.ಎಂ.ಅಶ್ರಫ್ ಅವರನ್ನು ಅಭಿನಂದಿಸಲಾಯಿತು.

ಕಾಞಂಗಾಡ್ ಬ್ಲಾಕ್ ಪಂಚಾಯತ್: ಜೀವ ವೈವಿಧ್ಯದ ಕುರಿತು ಕಾರ್ಯಾಗಾರ



ಕಾಸರಗೋಡು: ಕಾಞಂಗಾಡು ಬ್ಲಾಕ್ ಪಂಚಾಯತ್ ಜೀವ ವೈವಿಧ್ಯ ನಿರ್ವಹಣಾ ಸಮಿತಿಯ ನೇತೃತ್ವದಲ್ಲಿ ಬ್ಲಾಕ್ ಮಟ್ಟದಲ್ಲಿ ಒಂದು ದಿನದ ಕಾರ್ಯಾಗಾರ ಬ್ಲಾಕ್ ಪಂಚಾಯತ್ ಸಭಾಂಗಣದಲ್ಲಿ ಸೋಮವಾರ ಆಯೋಜಿಸಲಾಯಿತು.

ಕಾರ್ಯಾಗಾರವನ್ನು ಬ್ಲಾಕ್ ಪಂಚಾಯತ್ ಅಧ್ಯಕ್ಷೆ ಕೆ.ಸುಜಾತ ಉದ್ಘಾಟಿಸಿದರು. ಬ್ಲಾಕ್ ಪಂಚಾಯತ್ ಉಪಾಧ್ಯಕ್ಷ ಪಿ. ಗೋವಿಂದನ್ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಜೀವ ವೈವಿಧ್ಯ ಮಂಡಳಿ ಸದಸ್ಯ ಕಾರ್ಯದರ್ಶಿ ವಿ.ಬಾಲಕೃಷ್ಣನ್ ಭಾಗವಹಿಸಿದ್ದರು. ಕಾರ್ಯಾಗಾರದಲ್ಲಿ ಬ್ಲಾಕ್ ಪಂಚಾಯತ್‌ನ 5 ಗ್ರಾಮ ಪಂಚಾಯತ್ ಬಿಎಂಸಿ ಸದಸ್ಯರು ಭಾಗವಹಿಸಿದ್ದರು. ಮಡಿಕೈ ಗ್ರಾ.ಪಂ. ಅಧ್ಯಕ್ಷ ವಿ. ಪ್ರಕಾಶನ್, ಪಳ್ಳಿಕೆರೆ ಗ್ರಾ.ಪಂ. ಅಧ್ಯಕ್ಷ ಟಿ.ಶೋಭನಾ, ಪುಲ್ಲೂರ್ ಪೆರಿಯ ಗ್ರಾ.ಪಂ. ಅಧ್ಯಕ್ಷ ಡಾ.ಸಿ.ಕೆ.ಸಬಿತಾ, ಉದುಮ ಗ್ರಾ.ಪಂ. ಅಧ್ಯಕ್ಷ ಪಿ.ವಿ.ರಾಜೇಂದ್ರನ್ ಮತ್ತು ಅಜಾನೂರು ಗ್ರಾ.ಪಂ. ಅಧ್ಯಕ್ಷ ವಿ.ವಿ.ತುಳಸಿ ಮಾತನಾಡಿದರು.

ಜಿ.ಪಂ. ಬಿಎಂಸಿ ಸಂಚಾಲಕ ಪಿ.ಕೆ. ಮುಕುಂದನ್ ಮತ್ತು ಬಿಎಂಸಿ ಜಿಲ್ಲಾ ಸಂಯೋಜಕಿ ವಿ.ಎಂ.ಅಖಿಲಾ ತರಗತಿ ನಡೆಸಿಕೊಟ್ಟರು. ಬ್ಲಾಕ್ ಪಂಚಾಯತ್ ಕಾರ್ಯದರ್ಶಿ ಕೆ.ಸಿ.ರಜಿತಾ ಸ್ವಾಗತಿಸಿ, ಬ್ಲಾಕ್ ಪಂ. ಬಿಎಂಸಿ ಸಂಚಾಲಕ ಪ್ರೊಫೆಸರ್ ಎಂ.ಗೋಪಾಲನ್ ವಂದಿಸಿದರು.

ಜೂ.17: ಪೆರಡಾಲ ಸೇವಾ ಸಹಕಾರಿ ಬ್ಯಾಂಕ್ ಸುಸಜ್ಜಿತ ಕಟ್ಟಡಕ್ಕೆ ಸ್ಥಳಾಂತರ

ಬದಿಯಡ್ಕ: 1919ರಲ್ಲಿ ನೀರ್ಚಾಲಿನಲ್ಲಿ ಸ್ಥಾಪಿತವಾದ ಪೆರಡಾಲ ಸೇವಾ ಸಹಕಾರಿ ಬ್ಯಾಂಕ್‌ನ ಶಾಖೆಯು ಬದಿಯಡ್ಕ ಗಣೇಶ ಮಂದಿರದ ಮುಂಭಾಗದಲ್ಲಿ ಕಳೆದ ಅನೇಕ ವರ್ಷಗಳಿಂದ ಕಾರ್ಯಾಚರಿಸುತ್ತಿದ್ದು, ಜೂ.17ರಂದು ಬದಿಯಡ್ಕ ಬಸ್ ತಂಗುದಾಣದ ಪಕ್ಕದಲ್ಲಿರುವ ಶಾಸ್ತ್ರೀಸ್ ಕಾಂಪ್ಲೆಕ್ಸ್‌ಗೆ ಸ್ಥಳಾಂತರಗೊಳ್ಳಲಿದೆ.

ಜೂ.17ಕ್ಕೆ ಬೆಳಗ್ಗೆ 8.45ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಬ್ಯಾಂಕ್‌ನ ಅಧ್ಯಕ್ಷ ಕೆ. ಗಣಪತಿಪ್ರಸಾದ ಅಧ್ಯಕ್ಷತೆ ವಹಿಸಲಿದ್ದಾರೆ. ಕಾಸರಗೋಡು ಸಹಕಾರಿ ಇಲಾಖೆಯ ಸಹಾಯಕ ನೋಂದಾವಣಾಧಿಕಾರಿ ವಿನೋದ್‌ಕುಮಾರ್ ಸಿ. ಸೇಫ್ ಲಾಕರ್ ವ್ಯವಸ್ಥೆ ಉದ್ಘಾಟಿಸುವರು. ಬದಿಯಡ್ಕ ಗ್ರಾ.ಪಂ. ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ., ಜಿ.ಪಂ. ಸದಸ್ಯ ರಾಮಪ್ಪ ಮಂಜೇಶ್ವರ, ಬ್ಲಾಕ್ ಪಂ. ಸದಸ್ಯ ಮೊಯ್ದೀನ್ ಎಂ.ಎಸ್., ಸಹಕಾರ ಭಾರತಿ ಕಾಸರಗೋಡು ಜಿಲ್ಲಾಧ್ಯಕ್ಷ ಹಾಗೂ ಕ್ಯಾಂಪ್ಕೋ ಉಪಾಧ್ಯಕ್ಷ ಪದ್ಮರಾಜ ಪಟ್ಟಾಜೆ, ನಿವೃತ್ತ ಕಾರ್ಯದರ್ಶಿ ಅಜಿತಾಕುಮಾರಿ ಎ., ಬದಿಯಡ್ಕ ವ್ಯಾಪಾರಿ ವ್ಯವಸಾಯಿ ಏಕೋಪನಾ ಸಮಿತಿಯ ಅಧ್ಯಕ್ಷ ನರೇಂದ್ರ ಬಿ.ಎನ್., ಬ್ಯಾಂಕ್‌ನ ಮಾಜಿ ಅಧ್ಯಕ್ಷರಾದ ವಿ.ಶ್ರೀಕೃಷ್ಣ ಭಟ್, ಕೆ.ವಿಷ್ಣು ಭಟ್ ಕೋರಿಕ್ಕಾರು, ಜಯದೇವ ಖಂಡಿಗೆ, ಕಾರ್ಯದರ್ಶಿ ಪಿ.ವಿಷ್ಣುಶರ್ಮ, ಉಪಾಧ್ಯಕ್ಷ ಅವಿನಾಶ್ ರೈ ಭಾಗವಹಿಸುವರು.

ಸಾಂಕ್ರಾಮಿಕ ರೋಗಗಳ ತಡೆಗೆ ಕಾಞಂಗಾಡು ನಗರಸಭೆಯಿಂದ ಜಾಗೃತಿ



ಕಾಸರಗೋಡು: ಮಳೆಗಾಲದ ರೋಗಗಳು ಮತ್ತು ಸಾಂಕ್ರಾಮಿಕ ರೋಗ ಗಳನ್ನು ಎದುರಿಸಲು ಕಾಞಂಗಾಡು ನಗರಸಭೆಯಲ್ಲಿ ತಡೆಗಟ್ಟುವ ಚಟುವಟಿಕೆಗಳನ್ನು ತೀವ್ರಗೊಳಿಸಲಾಗಿದೆ.

ಕಾಞಂಗಾಡು ನಗರಸಭೆ, ಮಹಿಳಾ ಮತ್ತು ಮಕ್ಕಳ ಸರಕಾರಿ ಆಸ್ಪತ್ರೆ, ಜಿಲ್ಲಾ ರೋಗವಾಹಕ ನಿಯಂತ್ರಣ ಘಟಕ ಮತ್ತು ಬಲ್ಲಾ ಆಯುಷ್ಮಾನ್ ಆರೋಗ್ಯ ಮಂದಿರದ ಜಂಟಿ ಆಶ್ರಯದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಭಾಗವಾಗಿ ಮನೆಗಳಿಗೆ ಭೇಟಿ, ಜಾಗೃತಿ ಕರಪತ್ರಗಳ ವಿತರಣೆ, ಸೊಳ್ಳೆ ಪರದೆಗಳ ಅಳವಡಿಕೆಗೆ ಸೂಚನೆ ಮತ್ತು ಸೊಳ್ಳೆ ಉತ್ಪತ್ತಿ ತಾಣಗಳ ನಾಶ ಮಾಡುವ ಚಟುವಟಿಕೆ ಆಯೋಜಿಸಲಾಗಿತ್ತು. ಚೆಮ್ಮಟ್ಟಂವಯಲ್, ನೆಲ್ಲಿಕಾಡ್, ಕಾಞರವಯಲ್, ಮಾಂಗಾಡ್, ಕೊಟ್ಟಚ್ಚೇರಿ, ಕುನ್ನುಮ್ಮಲ್ ಮತ್ತು ಅದಿಯಾಂಪುರ ಪ್ರದೇಶಗಳನ್ನು ಕೇಂದ್ರೀಕರಿಸಿ ಕಾರ್ಯಕ್ರಮದ ಮೊದಲ ಹಂತವನ್ನು ಆಯೋಜಿಸಲಾಗಿತ್ತು.

ಕಾಞಂಗಾಡು ನಗರಸಭಾ ಉಪಾಧ್ಯಕ್ಷೆ ಲತಾ ಬಾಲಕೃಷ್ಣನ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ವಾರ್ಡ್ ಕೌನ್ಸಿಲರ್ ಕೆ.ವಿ.ರಾಧಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ರೋಗ ನಿಯಂತ್ರಣ ಅಧಿಕಾರಿ ಕೆ.ವಿ.ಗಿರೀಶ್ ವಿವರಿಸಿದರು. ನಗರಸಭಾ ಸದಸ್ಯೆ ಪಿ.ವಿ.ವಿದ್ಯಾಲತ, ಆರೋಗ್ಯ ಮೇಲ್ವಿಚಾರಕಿ ಬಿಜು ಬಾಲುಶ್ಶೇರಿ, ಆರೋಗ್ಯ ನಿರೀಕ್ಷಕ ಪಿ.ಮುರಳೀಧರನ್, ಸಾರ್ವಜನಿಕ ಆರೋಗ್ಯ ನರ್ಸ್ ವಿ.ಚಂದ್ರಿಕಾ, ಸಾಂಕ್ರಾಮಿಕ ರೋಗ ತಜ್ಞೆ ಡಾ.ತುಷಾರ, ಕಿರಿಯ ಆರೋಗ್ಯ ನಿರೀಕ್ಷಕರಾದ ಎ.ಶೀಕುಮಾರ್, ಪಿ.ಪ್ರಮೋದ್, ಎಂ.ಎಂ.ನಿಮಿಷಾ, ಕಿರಿಯ ಸಾರ್ವಜನಿಕ ಆರೋಗ್ಯ ನರ್ಸ್‌ಗಳಾದ ಕೆ.ಎಸ್.ಅಮೃತಾ, ಕೆ.ಲಿಬಿನಾ, ಕೆ.ವಿ.ದೀಪಾ, ಸಿಮಿ ಇಮ್ಯಾನುಯೆಲ್ ಮತ್ತು ಕ್ಷೇತ್ರ ಸಹಾಯಕ ವಿ.ಸುರೇಶನ್ ಮಾತನಾಡಿದರು. ಕಾರ್ಯಕ್ರಮದ ಭಾಗವಾಗಿ ಮುಂದಿನ ದಿನಗಳಲ್ಲಿ ಮನೆ ಮನೆ ಭೇಟಿ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುವುದು.


ಜೂ.17ರಂದು ಉಪನ್ಯಾಸಕರ ನೇಮಕಾತಿಗಾಗಿ ಸಂದರ್ಶನ

ಕಾಸರಗೋಡು: ಪೆರಿಯ ಕಾಸರಗೋಡು ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಉಪನ್ಯಾಸಕರ ನೇಮಕಾತಿಗಾಗಿ ಸಂದರ್ಶನವು ಜೂ.17ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ. ಅರ್ಹತೆಯು ಸಂಬಂಧಿತ ವಿಷಯದಲ್ಲಿ ಶೇಕಡಾ 60ಕ್ಕಿಂತ ಕಡಿಮೆಯಿಲ್ಲದ ಅಂಕಗಳೊಂದಿಗೆ ಇಂಜಿನಿಯರಿಂಗ್ ಪದವಿ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0467-2234020 ಕರೆ ಮಾಡಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಸೂದೆಯಿಂದ ಕನ್ನಡಿಗರಿಗೆ ಸಮಸ್ಯೆ: ಉಸ್ತುವಾರಿ ಸಚಿವರಿಗೆ ಮನವಿ ಸಲ್ಲಿಕೆ



ಕಾಸರಗೋಡು: ರಾಜ್ಯದಲ್ಲಿ ಕಳೆದ ಎಡರಂಗ ಸರಕಾರ ಜಾರಿಗೆ ತಂದ ಮಲೆಯಾಳ ಭಾಷಾ ಕಡ್ಡಾಯ ಮಸೂದೆಯಿಂದಾಗಿ ಭಾಷಾ ಅಲ್ಪಸಂಖ್ಯಾತರಾದ ಕನ್ನಡಿಗರಿಗೆ ಆಗಬಹುದಾದ ತೊಂದರೆಗಳ ಬಗ್ಗೆ ಹಾಗೂ ಆ ಮಸೂದೆಯಲ್ಲಿರುವ ಕನ್ನಡ ವಿರೋಧಿ ಅಂಶಗಳ ಬಗ್ಗೆ ನೂತನ ಸರಕಾರಕ್ಕೆ ಮನವರಿಕೆ ಮಾಡಲು ಮನವಿ ಸಲ್ಲಿಸಲಾಯಿತು. ಸೋಮವಾರ ಬೆಳಗ್ಗೆ ಜಿಲ್ಲೆಗೆ ತಲುಪಿದ ರಾಜ್ಯ ಸ್ಥಳೀಯಾಡಳಿತ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಾಜಿಯವರಿಗೆ ಕರ್ನಾಟಕ ಸಮಿತಿ ಮೂಲಕ ಈ ಮನವಿ ಸಲ್ಲಿಸಲಾಗಿದೆ. ಕರ್ನಾಟಕ ಸಮಿತಿ ಅಧ್ಯಕ್ಷ ವಕೀಲ ಮುರಳೀಧರ ಬಳ್ಳಕ್ಕುರಾಯ, ಕಸಾಪ ಗಡಿನಾಡ ಘಟಕದ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಕೇರಳ ಕನ್ನಡ ಮಾಧ್ಯಮ ಅಧ್ಯಾಪಕರ ಸಂಘದ ಅಧ್ಯಕ್ಷ ಸುಕೇಶ ಎ., ಕರ್ನಾಟಕ ಗಮಕ ಕಲಾ ಪರಿಷತ್‌ನ ಅಧ್ಯಕ್ಷ ತೆಕ್ಕೆಕೆರೆ ಶಂಕರನಾರಾಯಣ ಭಟ್, ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಎ.ಆರ್.ಸುಬ್ಬಯ್ಯಕಟ್ಟೆ ಮೊದಲಾದವರು ಹಾಜರಿದ್ದರು.



ಮಳೆಗಾಲದ ಹಾನಿಗೆ ಸಂಬಂಧಿಸಿದಂತೆ ಕಾಞಂಗಾಡು ಕ್ಷೇತ್ರದ ಜನಪ್ರತಿನಿಧಿಗಳು ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆ ಸೋಮವಾರ ಹೊಸದುರ್ಗ ತಾಲೂಕು ಕಚೇರಿ ಸಮ್ಮೇಳನ ಸಭಾಂಗಣದಲ್ಲಿ ಜರಗಿತು. ಶಾಸಕ ಗೋವಿಂದನ್ ಪಳ್ಳಿಕಾಪ್ಪಿಲ್, ಕಾಞಂಗಾಡು ಬ್ಲಾಕ್ ಪಂಚಾಯತ್ ಅಧ್ಯಕ್ಷೆ ಕೆ.ಸುಜಾತ, ಪರಪ್ಪ ಬ್ಲಾಕ್ ಪಂಚಾಯತ್ ಉಪಾಧ್ಯಕ್ಷೆ ಟಿ.ಕೆ.ದೀಪಾ, ಕಾಞಂಗಾಡು ನಗರಸಭಾ ಉಪಾಧ್ಯಕ್ಷೆ ಲತಾ ಬಾಲಕೃಷ್ಣನ್, ಕಿನಾನೂರು ಕರಿಂದಳಂ ಪಂಚಾಯತ್ ಅಧ್ಯಕ್ಷ ಎಂ.ರಾಜನ್, ಅಜಾನೂರು ಪಂಚಾಯತ್ ಅಧ್ಯಕ್ಷ ವಿ.ವಿ.ತುಳಸಿ, ಹೊಸದುರ್ಗ ಹೆಚ್ಚುವರಿ ತಹಸೀಲ್ದಾರ್ ಎಂ.ಪಿ.ಶನಿಜ್ ಉಪಸ್ಥಿತರಿದ್ದರು.

ಬದಿಯಡ್ಕ ಗ್ರಾಮ ಪಂಚಾಯತ್‌ನ 'ಶ್ರೀಭವನ'ಕ್ಕೆ ಶಿಲಾನ್ಯಾಸ ನೆರವೇರಿಸಿ ಸ್ಥಳೀಯಾಡಳಿತ ಇಲಾಖೆ ಸಚಿವ ಶಾಜಿ ಭರವಸೆ

ಕುಟುಂಬಶ್ರೀಯಿಂದ ಹಿಂದುಳಿದ, ಬಡ ವರ್ಗದ ಜನರ ಅಭಿವೃದ್ಧಿಗೆ ನೆರವು

ಬದಿಯಡ್ಕ: ಕುಟುಂಬಶ್ರೀ ಜಿಲ್ಲಾ ಮಿಶನ್ ಕಾಸರಗೋಡು, ಬದಿಯಡ್ಕ ಗ್ರಾಮ ಪಂಚಾಯತ್‌ನ ನೇತೃತ್ವದಲ್ಲಿ ಕುಟುಂಬಶ್ರೀಯ ಸಂಗ್ರಹದಲ್ಲಿ ಬಡ ಕುಟುಂಬಕ್ಕೆ ನೀಡುವ 'ಶ್ರೀಭವನ'ದ ಶಿಲಾನ್ಯಾಸ ಕಾರ್ಯಕ್ರಮ ಸೋಮವಾರ ಬದಿಯಡ್ಕ ಸಮೀಪದ ಕಿಳಿಂಗಾರು ಶ್ರೀ ಸಾಯಿ ಮಂದಿರದಲ್ಲಿ ಜರಗಿತು. ಕೇರಳ ರಾಜ್ಯ ಸ್ಥಳೀಯಾಡಳಿತ ಇಲಾಖೆ ಸಚಿವ ಕೆ.ಎಂ.ಶಾಜಿ ಶಿಲಾನ್ಯಾಸದ ನಾಮಫಲಕವನ್ನು ಅನಾವರಣಗೊಳಿಸಿದರು.

ಬಳಿಕ ಅವರು ಮಾತನಾಡಿ, ಕುಟುಂಬಶ್ರೀಯ ಮೂಲಕ ಮಹಿಳೆಯರೂ ಸ್ವಾವಲಂಬಿಗಳಾಗಿ ಬದುಕಲು ಸಾಧ್ಯವಿದೆ ಎಂಬುದನ್ನು ನಾವೆಲ್ಲಾ ಕಾಣಬಹುದು. ಎಲ್ಲರ ಒಗ್ಗಟ್ಟಿನ ಪರಿಶ್ರಮದಿಂದ ಬಡಮಹಿಳೆಗೆ ಮನೆ ಲಭಿಸುತ್ತಿರುವುದು ಸಂತಸ ತಂದಿದೆ. ನಾಡಿನ ದುರ್ಬಲ ಜನರನ್ನು ಹತ್ತಿರದಿಂದ ಬಲ್ಲ ಕುಟುಂಬಶ್ರೀ ಘಟಕಗಳು ಅವರನ್ನು ಮೇಲೆತ್ತುವಲ್ಲಿ ಪಣತೊಟ್ಟಿದೆ ಎಂದು ತಿಳಿಸಿದ ಅವರು ಸತ್ಯವೇ ದೇವರು ಎಂಬುದನ್ನು ಸಾಯಿರಾಂ ಭಟ್ ಕುಟುಂಬವು ತೋರಿಸಿಕೊಟ್ಟಿದೆ. ಅನೇಕ ಬಡಜನರಿಗೆ ಮನೆ ಹಾಗೂ ಇನ್ನಿತರ ಸಹಾಯವನ್ನು ನೀಡುತ್ತಾ ಮನುಷ್ಯನಾಗಿ ಜೀವಿಸುವುದು ಯಾಕೆ ಎಂಬುದಕ್ಕೆ ಈ ಕುಟುಂಬವು ಸಾಕ್ಷಿಯಾಗಿದೆ ಎಂದರು.



> **ಸ್ವಂತ ಸೂರು ಬೇಕು ಎಂಬುದು ಪ್ರತಿಯೊಬ್ಬರ ಕನಸು. ಅನೇಕ ವರ್ಷಗಳಿಂದ ಕೇವಲ ಕನಸನ್ನು ಕಾಣುತ್ತಿದ್ದ ಕುಟುಂಬಕ್ಕೆ ನಮ್ಮ ಕುಟುಂಬಶ್ರೀಯು ಆಶಾಕಿರಣವಾಗಿದೆ.**
>
> **• ಶಂಕರ ಡಿ., ಬದಿಯಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷ**

ಬದಿಯಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷ ಶಂಕರ ಡಿ. ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾಸರಗೋಡು ಕುಟುಂಬಶ್ರೀಯ ರತೀಶ್ ಪಿಲಿಕ್ಕೋಡ್ ಯೋಜನೆಯ ಕುರಿತು ವಿವರಿಸಿದರು. ಬದಿಯಡ್ಕ ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ., ಬ್ಲಾಕ್ ಪಂಚಾಯತ್ ಸ್ಥಾಯೀ ಸಮಿತಿ ಅಧ್ಯಕ್ಷ ಎಂ.ಎಸ್.ಮೊಯ್ದು, ಸದಸ್ಯರುಗಳಾದ ಮಹೇಶ್ ವಳಕ್ಕುಂಜ, ಖಾದರ್ ಮಾನ್ಯ, ಬದಿಯಡ್ಕ ಗ್ರಾಮ ಪಂಚಾಯತ್ ಸ್ಥಾಯೀ ಸಮಿತಿ ಸದಸ್ಯರುಗಳಾದ ಹಮೀದ್ ಕೆಡೆಂಜಿ, ರಜನಿ ಸಂದೀಪ್, ಅವಿನಾಶ್ ರೈ, ವಿವಿಧ ವಾರ್ಡ್‌ಗಳ ಸದಸ್ಯರು, ರಾಜಕೀಯ ಪಕ್ಷಗಳ ಪ್ರತಿನಿಧಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಗ್ರಾಮ ಪಂಚಾಯತ್ ಸದಸ್ಯ ಮಾಹಿನ್ ಕೇಳೋಟ್ ಸ್ವಾಗತಿಸಿ, ಸಿಡಿಎಸ್ ಅಧ್ಯಕ್ಷೆ ಸುಲೋಚನ ವಂದಿಸಿದರು. ಬದಿಯಡ್ಕ ಸಿಡಿಎಸ್ ಸದಸ್ಯರು ಪ್ರಾರ್ಥನೆ ಹಾಡಿದರು. ಫಲಾನುಭವಿ ಶಶಿಕಲಾ ಕಾಕುಂಜೆ ಅವರ ಮನೆಕಟ್ಟುವ ಸ್ಥಳಕ್ಕೆ ಸಚಿವರು, ಗ್ರಾಮ ಪಂಚಾಯತ್ ಅಧ್ಯಕ್ಷ ಶಂಕರ ಡಿ. ಸಹಿತ ಜನಪ್ರತಿನಿಧಿಗಳು ಭೇಟಿ ನೀಡಿದರು.

ಸುತ್ತಮುತ್ತ

ಜೂ.17ರಂದು ಪರಿಸರ ದಿನಾಚರಣೆ

ಕುಂದಾಪುರ: ಕುಂದಾಪುರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಅರಣ್ಯ ಇಲಾಖೆ ಕುಂದಾಪುರ ಹಾಗೂ ಬಸ್ರೂರು ಶ್ರೀ ಶಾರದಾ ಕಾಲೇಜು ಸಹಯೋಗದೊಂದಿಗೆ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪರಿಸರ ಜಾಗೃತಿ ಕಾರ್ಯಕ್ರಮ ಬಸ್ರೂರಿನ ಶ್ರೀ ಶಾರದಾ ಕಾಲೇಜಿನಲ್ಲಿ ಜೂ.17ರಂದು ಬೆಳಿಗ್ಗೆ 9 ಗಂಟೆಗೆ ನಡೆಯಲಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕುಂದಾಪುರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ನಾಗರಾಜ್ ರಾಯಪ್ಪನಮಠ ವಹಿಸಲಿದ್ದು, ಕುಂದಾಪುರ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ಕುಂದಾಪುರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ರುಥ್ರನ್ ಪಿ., ಶ್ರೀ ಶಾರದಾ ಕಾಲೇಜಿನ ಸಂಚಾಲಕಿ ಅನುಪಮಾ ಎಸ್. ಶೆಟ್ಟಿ ಬಾಂಡ್ಯ, ಹಾಗೂ ಪ್ರಾಂಶುಪಾಲ ಡಾ. ದಯಾನಂದ ಎನ್ ಭಾಗವಹಿಸಲಿದ್ದಾರೆ. ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ಭಟ್ (ಸುಜಿ ಕುರ್ಯ), ಪ್ರಧಾನ ಕಾರ್ಯದರ್ಶಿ ನಜೀರ್ ಪೊಲ್ಯ ಹಾಗೂ ಕಾರ್ಯದರ್ಶಿ ಟಿ. ಲೋಕೇಶ್ ಆಚಾರ್ಯ ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪಳ್ಳಿ ರಾಜಾಪುರ ಸಾರಸ್ವತ ಸಂಘದ ಅಧ್ಯಕ್ಷರಾಗಿ ಮೋಹನದಾಸ್ ಆಯ್ಕೆ

ಶಿರ್ವ: ಶಿರ್ವ ಸಮೀಪದ ಪಳ್ಳಿ ರಾಜಾಪುರ ಸಾರಸ್ವತ ಸಂಘ ಪಳ್ಳಿ ಇದರ 28ನೇ ಸಾಲಿನ



ಅಧ್ಯಕ್ಷರಾಗಿ ಪ್ರಗತಿಪರ ಕೃಷಿಕರು, ಸಾಮಾಜಿಕ ಕಾರ್ಯಕರ್ತರಾದ ಮೋಹನದಾಸ್ ನಾಯಕ್ ದಾದಬೆಟ್ಟು ಪಳ್ಳಿ ಇವರು ನಿಕಟಪೂರ್ವ ಅಧ್ಯಕ್ಷ ಅರುಣ್ ನಾಯಕ್ ಉಬರಬೆಟ್ಟು ನಿಂಜೂರು ಇವರಿಂದ ರವಿವಾರ ಜವಾಬ್ದಾರಿ ವಹಿಸಿಕೊಂಡರು.

ಇತರ ಪದಾಧಿಕಾರಿಗಳು: ಉಪಾಧ್ಯಕ್ಷರು: ಸಂತೋಷ್ ನಾಯಕ್ ದಾದಬೆಟ್ಟು, ಕಾರ್ಯದರ್ಶಿ: ಶಿವಾನಂದ ನಾಯಕ್ ಕಡಂಬು ಶಿರ್ವ, ಜೊತೆ ಕಾರ್ಯದರ್ಶಿ: ರವಿಶಂಕರ್ ನಾಯಕ್ ಕಡಂಬು ಶಿರ್ವ, ಕೋಶಾಧಿಕಾರಿ: ಹರೀಶ್ ನಾಯಕ್ ದಾದಬೆಟ್ಟು ಪಳ್ಳಿ, ಸಂಘಟನಾ ಕಾರ್ಯದರ್ಶಿ: ಬಾಲಕೃಷ್ಣ ನಾಯಕ್ ಅಡಪಾಡಿ ಪಳ್ಳಿ, ಕ್ರೀಡಾ ಕಾರ್ಯದರ್ಶಿ: ಅರುಣ್ ನಾಯಕ್ ಉಬರಬೆಟ್ಟು ನಿಂಜೂರು, ಪ್ರವಾಸ ಸಂಘಟಕರು: ಕೃಷ್ಣನಾಯಕ್ ಜಡ್ಡು ಪಳ್ಳಿ, ಸಹಿತ ಕಾರ್ಯಕಾರಿ ಮಂಡಳಿ ಸದಸ್ಯರು ಜವಾಬ್ದಾರಿ ವಹಿಸಿದ್ದಾರೆ.

ಅಖಂಡ ಭಜನಾ ಕಾರ್ಯಕ್ರಮ

ಕುಂದಾಪುರ: ಬಸ್ರೂರಿನ ಶ್ರೀ ಮಹಾಲಸಾ ನಾರಾಯಣಿ ದೇವಸ್ಥಾನದಲ್ಲಿ ಅಧಿಕ ಮಾಸದ ಅಂಗವಾಗಿ ಅಖಂಡ ಭಜನಾ ಕಾರ್ಯಕ್ರಮ ಭಕ್ತಿ, ಶ್ರದ್ಧೆ ಹಾಗೂ ಸಂಭ್ರಮದಿಂದ ಶುಕ್ರವಾರ ನಡೆಯಿತು. ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ ಅನೇಕ ಭಜನಾ ಮಂಡಳಿಗಳು ಭಾಗವಹಿಸಿ ತಮ್ಮ ಭಕ್ತಿಮಯ ಭಜನೆಗಳ ಮೂಲಕ ಭಕ್ತರನ್ನು ಆಧ್ಯಾತ್ಮಿಕ ಭಾವದಲ್ಲಿ ತೇಲಿಸಿದರು. ದಿನವಿಡೀ ನಡೆದ ಭಜನಾ ಕಾರ್ಯಕ್ರಮದಲ್ಲಿ ಊರು ಹಾಗೂ ಪರವೂರಿನ ನೂರಾರು ಭಕ್ತರು ಭಾಗವಹಿಸಿ ದೇವಿಯ ಕೃಪೆಗೆ ಪಾತ್ರರಾದರು. ಶ್ರೀ ದೇವಿಗೆ ವಿಶೇಷ ಪುಷ್ಪಾಲಂಕಾರವನ್ನು ನೆರವೇರಿಸಲಾಗಿದ್ದು, ದೇವಿಯ ದಿವ್ಯ ಸಾನ್ನಿಧ್ಯವು ಭಕ್ತರನ್ನು ಆಕರ್ಷಿಸಿತು.

ಮೊದಲನೇ ಪುಟದಿಂದ

ಸಿಕ್ಕಿಲ್ಲ ಕ್ಲೀನ್ ಭಾಗ್ಯ

ಸೇಡಿಯಾಪು ಬಳಿಯಲ್ಲಿ ಚತುಷ್ಪಥ ರಸ್ತೆಯ ಕಾಮಗಾರಿ ಕುಂಟುತ್ತಾ ನಡೆಯುತ್ತಿದೆ. ನೆಕ್ಕಿಲಾಡಿಯಲ್ಲಿ ಹೆದ್ದಾರಿಯನ್ನು ಸಂಪರ್ಕಿಸುವ ಭಾಗದ ರಸ್ತೆ ಮಾತ್ರ ಸುಗಮ ಸಂಚಾರಕ್ಕೆ ಯೋಗ್ಯವಾಗಿಲ್ಲ ಎಂಬುವುದನ್ನು ಹೊರತುಪಡಿಸಿದರೆ ಪುತ್ತೂರು-ಉಪ್ಪಿನಂಗಡಿ ರಸ್ತೆ ಪ್ರಸ್ತುತ ಉತ್ತಮವೆನಿಸುವಂತೆ ಇದೆ.

ಚರಂಡಿ ಇಲ್ಲದೆ ರಸ್ತೆ ಹಾನಿ ಭೀತಿ

ಉಪ್ಪಿನಂಗಡಿಯಿಂದ ಪುತ್ತೂರು ತನಕದ ಈ ರಸ್ತೆಯ ಎರಡೂ ಬದಿಗಳಲ್ಲಿ ಮಳೆನೀರು ಹರಿದು ಹೋಗಲು ಸಾಧ್ಯವಿಲ್ಲದಂತೆ ಚರಂಡಿಗಳು ಮುಚ್ಚಿ ಹೋಗಿವೆ. ರಸ್ತೆಯ ಸುವ್ಯವಸ್ಥೆ ಕಾಪಾಡಿಕೊಳ್ಳಬೇಕಾದರೆ ಚರಂಡಿಗಳು ಮುಂಗಾರು ಪೂರ್ವದಲ್ಲೇ ದುರಸ್ತಿಯಾಗಬೇಕು. ಆದರೆ ಮುಂಗಾರು ಪೂರ್ವದ ಒಂದೆರಡು ಮಳೆಗೇ ಪುತ್ತೂರು-ಉಪ್ಪಿನಂಗಡಿ ರಸ್ತೆ ಬಹುತೇಕ ಕಡೆಗಳಲ್ಲಿ ತೋಡುಗಳಾಗಿ ಬದಲಾಗಿವೆ. ಚರಂಡಿಗಳಲ್ಲಿ ಮಳೆನೀರು ಹರಿಯದೆ ರಸ್ತೆಯಲ್ಲಿಯೇ ಹರಿಯುವಂತಾಗಿದೆ. ಇದೇ ಸ್ಥಿತಿ ಮುಂದುವರಿದರೆ ಮಳೆಗಾಲದಲ್ಲಿ ಚತುಷ್ಪಥ ರಸ್ತೆ ಸಂಪೂರ್ಣ ಹಾಳಾಗುವುದರಲ್ಲಿ ಯಾವುದೇ ಸಂದೇಹ ಇಲ್ಲ.

ಗುಡ್ಡ ಜರಿದ ಮಣ್ಣೂ ಇದೆ

ಪ್ರಸ್ತುತ ಈ ರಸ್ತೆಯ ಚರಂಡಿಗಳಲ್ಲಿ ಹುಲ್ಲು ಪೊದೆಗಳು ಆವರಿಸಿಕೊಂಡಿವೆ. ಕೆಲವು ಕಡೆಗಳಲ್ಲಿ ಮಣ್ಣು ತುಂಬಿ ಚರಂಡಿಗಳೇ ಮುಚ್ಚಿ ಹೋಗಿವೆ. ಮಳೆಗಾಲದ ಆರಂಭವಾಗುತ್ತಿದ್ದರೂ ಲೋಕೋಪಯೋಗಿ ಇಲಾಖೆ ಈ ಚರಂಡಿಗಳನ್ನು ದುರಸ್ತಿಪಡಿಸಲು ಮುಂದಾಗಿಲ್ಲ. ಚತುಷ್ಪಥ ರಸ್ತೆ ನಿರ್ಮಾಣಕ್ಕಾಗಿ ಗುಡ್ಡಗಳನ್ನು ಲಂಬವಾಗಿ ಕಡಿದ ಪರಿಣಾಮ ಕೆಲ ಕಡೆಗಳಲ್ಲಿ ಗುಡ್ಡದ ಮಣ್ಣು ಜರಿದುಬಿದ್ದಿದೆ. ಅದನ್ನು ತೆರವು ಮಾಡಿಲ್ಲ. ಕೆಲವು ಭಾಗದಲ್ಲಿ ತಡೆಗೋಡೆ ನಿರ್ಮಿಸಿದ್ದರೂ ಅಲ್ಲಿಯೂ ಸಮರ್ಪಕ ಚರಂಡಿಗಳ ನಿರ್ಮಾಣವಾಗಿಲ್ಲ. ಈ ತಡೆಗೋಡೆಗಳ ಬಳಿ ನಿರ್ಮಿಸಿದ ಚಿಕ್ಕ ಚರಂಡಿಗಳಲ್ಲಿ ಮಳೆ ನೀರು ಹರಿಯಲು ಅನುಕೂಲಕರವಾಗಿಲ್ಲ. ಇದರಿಂದ ಮಳೆಗಾಲದಲ್ಲಿ ರಸ್ತೆಯಲ್ಲಿ ಕೃತಕ ನೆರೆ ಉಂಟಾಗುವ ಸಾಧ್ಯತೆ ಹೆಚ್ಚಾಗಿದೆ.

ಕಾರ್ಕಳ ತಾಪಂನಲ್ಲಿ ಮಳೆಗಾಲ ಮುನ್ನೆಚ್ಚರಿಕಾ ಸಭೆ | ಅಧಿಕಾರಿಗಳಿಗೆ ಶಾಸಕ ಸುನೀಲ್ ಸೂಚನೆ

ಪ್ರಕೃತಿ ವಿಕೋಪ ತಡೆಗೆ ಸಮನ್ವಯತೆಯಿಂದ ಕೆಲಸ ಮಾಡಿ

ಕಾರ್ಕಳ: ಮುಂಗಾರು ಮಳೆ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ತಾಲೂಕಿನ ಎಲ್ಲ ಇಲಾಖೆಗಳು ಮುಂದಿನ ಮೂರ್ನಾಲ್ಕು ತಿಂಗಳುಗಳ ಕಾಲ ಅತ್ಯಂತ ಸಮನ್ವಯತೆಯಿಂದ ಕೆಲಸ ಮಾಡಬೇಕು ಹಾಗೂ ಜನರ ಸಮಸ್ಯೆಗೆ ತಕ್ಷಣ ಸ್ಪಂದಿಸಬೇಕು ಎಂದು ಶಾಸಕ ವಿ. ಸುನಿಲ್ ಕುಮಾರ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಕಾರ್ಕಳ ತಾ.ಪಂ. ಸಭಾಂಗಣದಲ್ಲಿ ಸೋಮವಾರ ಅವರ ಅಧ್ಯಕ್ಷತೆಯಲ್ಲಿ ನಡೆದ ಮಳೆಗಾಲದ ಮುನ್ನೆಚ್ಚರಿಕೆ ಸಭೆಯಲ್ಲಿ ಅವರು ಮಾತನಾಡಿದರು. ತುರ್ತು ಪರಿಸ್ಥಿತಿ ಎದುರಿಸಲು ಸ್ಥಳೀಯ ಯುವಕ ಮಂಡಲ ಹಾಗೂ ಸಾಮಾಜಿಕ ಸಂಘಟನೆಗಳ ಸಂಪರ್ಕದಲ್ಲಿರಲು ಅವರು ತಿಳಿಸಿದರು.

ಇಲಾಖೆಗಳ ಸನ್ನದ್ಧತೆ ಮತ್ತು ಮಾಹಿತಿ

ಆರೋಗ್ಯ ಇಲಾಖೆ: ಡಿಎಚ್‌ಒ ಡಾ. ಸಂದೀಪ್ ಕುಡ್ವ ಮಾತನಾಡಿ, ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾವು ಕಡಿತಕ್ಕೆ ಅಗತ್ಯ ಔಷಧಿ, ಆಂಟಿ ಬಯಾಟಿಕ್ ಹಾಗೂ ಬ್ಲೀಚಿಂಗ್ ಪೌಡರ್ ದಾಸ್ತಾನು



ಮಾಡಲಾಗಿದೆ. ಜ್ವರ ಮತ್ತು ಲಾರ್ವಾ ಸಮೀಕ್ಷೆ ನಡೆಯುತ್ತಿದ್ದು, ಮಳೆಗಾಲಕ್ಕಾಗಿ 24 ಹೆಚ್ಚುವರಿ ಸಿಬ್ಬಂದಿ ಒಳಗೊಂಡ 'ಮಾನ್ಸೂನ್ ಗ್ಯಾಂಗ್' ಸನ್ನದ್ಧವಾಗಿದೆ ಎಂದರು.

ಮೆಸ್ಕಾಂ ಮತ್ತು ಅಗ್ನಿಶಾಮಕ

ಜಿಲ್ಲೆಯಲ್ಲಿ ಈಗಾಗಲೇ 90 ವಿದ್ಯುತ್ ಕಂಬಗಳು ಧರೆಗುರುಳಿವೆ ಎಂದು ಮೆಸ್ಕಾಂ ಅಧಿಕಾರಿಗಳು ತಿಳಿಸಿದರು. ಅಗ್ನಿಶಾಮಕ ಅಧಿಕಾರಿಯವರು ಮಾತನಾಡಿ, ಇಲಾಖೆಯಲ್ಲಿ 13 ಸಿಬ್ಬಂದಿ ಇದ್ದು, ಬೋಟ್ ಹಾಗೂ ಲೈಫ್ ಜಾಕೆಟ್ ವ್ಯವಸ್ಥೆ ಇದೆ. ಆದರೆ ಒಂದೇ ಟ್ಯಾಂಕರ್ ವಾಹನ ಇರುವುದರಿಂದ ಕಾರ್ಕಳ ಮತ್ತು ಹೆಬ್ರಿ ಎರಡೂ ಭಾಗಗಳನ್ನು ನಿಭಾಯಿಸಬೇಕಿದೆ ಎಂದರು.

ಲೋಕೋಪಯೋಗಿ ಮತ್ತು ಶಿಕ್ಷಣ ಇಲಾಖೆ

ಕೆಲವು ರಸ್ತೆಗಳು ಸಂಚಾರಕ್ಕೆ ಅಯೋಗ್ಯವಾಗಿದ್ದು, ಗ್ಯಾಂಗ್‌ಮೆನ್ ಮೂಲಕ ಚರಂಡಿ ಸ್ವಚ್ಛತೆ ಮಾಡಲಾಗುತ್ತಿದೆ ಎಂದು ಲೋಕೋಪಯೋಗಿ ಇಲಾಖೆ ತಿಳಿಸಿತು. ಬಿಇಒ ಗಿರಿಜಮ್ಮ ಮಾತನಾಡಿ, ತಾಲೂಕಿನಲ್ಲಿ 51 ಶಾಲೆಗಳಿಗೆ ತುರ್ತು ದುರಸ್ತಿ ಬೇಡಿಕೆ ಇದೆ ಎಂದು ಮಾಹಿತಿ ನೀಡಿದರು.

> **ಅನಧಿಕೃತ ಅಂಗಡಿಗಳ ತೆರವು, ಸ್ವಚ್ಛತೆಗೆ ತಾಕೀತು**
>
> ಸುಪ್ರೀಂ ಕೋರ್ಟ್ ಆದೇಶದಂತೆ ರಸ್ತೆ ಬದಿಯ ಅನಧಿಕೃತ ಅಂಗಡಿಗಳನ್ನು ತೆರವುಗೊಳಿಸಲು ಗ್ರಾಮ ಪಂಚಾಯತ್ ಮತ್ತು ಪುರಸಭೆಗೆ ಸಂಪೂರ್ಣ ಅಧಿಕಾರವಿದೆ. ಯಾವುದೇ ಪರ್ಮನೆಂಟ್ ಸ್ಟ್ರಕ್ಚರ್‌ಗಳಿಗೆ ಅವಕಾಶ ನೀಡಬಾರದು (ತಳ್ಳುವ ಗಾಡಿಗಳಿಗೆ ಆಕ್ಷೇಪವಿಲ್ಲ). ಕೊಳಚೆ ನೀರು ಮತ್ತು ತ್ಯಾಜ್ಯದಿಂದಾಗಿ ಆರೋಗ್ಯ ಸಮಸ್ಯೆ ಉಂಟಾಗಿ ಕಾರ್ಕಳದ ಸೌಂದರ್ಯ ಹಾಳಾಗುತ್ತಿದ್ದು, ಈ ಬಗ್ಗೆ ತಹಶಿಲ್ದಾರ್, ಇಒ ಮತ್ತು ಪಿಡಿಒಗಳು ತಕ್ಷಣವೇ ಕಠಿಣ ಕ್ರಮ ಕೈಗೊಳ್ಳಬೇಕು.
>
> ● ವಿ. ಸುನಿಲ್ ಕುಮಾರ್, ಕಾರ್ಕಳ ಶಾಸಕರು

ಕಟ್ಟುನಿಟ್ಟಿನ ಆದೇಶ

- ಕೃತಕ ನೆರೆ ಉಂಟಾಗುವ ಸ್ಥಳಗಳಲ್ಲಿ ತಕ್ಷಣ ಹೂಳು ತೆಗೆಯಬೇಕು ಹಾಗೂ ಹೆಬ್ರಿ ಗ್ರಾ.ಪಂ ಎದುರು ನೀರು ನಿಲ್ಲುವ ಸಮಸ್ಯೆಯನ್ನು ಶೀಘ್ರ ಬಗೆಹರಿಸಬೇಕು.
- ಹಳ್ಳ ದಾಟಿ ಬರುವ ಮಕ್ಕಳ ಶಾಲೆಗಳ ಪಟ್ಟಿ ನೀಡುವಂತೆ ಬಿಇಒ ಅವರಿಗೆ ಸೂಚಿಸಿದ ಅವರು, ಶಾಲಾ ಆವರಣದ ಅಪಾಯಕಾರಿ ಮರಗಳ ತೆರವುಗೊಳಿಸಲು ಅರಣ್ಯ ಇಲಾಖೆ ಜೊತೆ ತುರ್ತು ಸಭೆ ನಡೆಸಬೇಕು.
- ಪುರಸಭೆ ವ್ಯಾಪ್ತಿಯ ಆನೆಕೆರೆ, ಪೆರ್ವಾಜೆ-ತೆಳ್ಳಾರು ರಸ್ತೆ ಮತ್ತು ಭವಾನಿ ಸರ್ಕಲ್ ಬಳಿ ನಿರಂತರ ಸ್ವಚ್ಛತೆ ನಡೆಸಬೇಕು

ರಾಷ್ಟ್ರಮಟ್ಟದ ಉಸ್ತಾದ್ ಬಿಸ್ಮಿಲ್ಲಾಖಾನ್ ಯುವ ಪುರಸ್ಕಾರಕ್ಕೆ ಆಯ್ಕೆ

ವಿದುಷಿ ಮಹಾಲಕ್ಷ್ಮೀ ಶೆಣೈಗೆ ಅಭಿನಂದನೆ

ಕಾರ್ಕಳ: ರಾಷ್ಟ್ರಪತಿಗಳಿಂದ ಪ್ರತಿಷ್ಠಿತ ಪ್ರಶಸ್ತಿ ಸ್ವೀಕರಿಸಲಿರುವ ಹಿಂದೂಸ್ತಾನಿ ಶಾಸ್ತ್ರೀಯ ಗಾಯಕಿ ವಿದುಷಿ ಮಹಾಲಕ್ಷ್ಮೀ ಶೆಣೈ ಅವರನ್ನು ಕಾರ್ಕಳದ ಸಾಹಿತ್ಯ ಸಂಘ, ಸಂಗೀತಾಭಿಮಾನಿಗಳಿಂದ ಬನ್ನಂಜೆ 90 ವಿಶ್ವ ನಮನ ಕಾರ್ಯಕ್ರಮದಲ್ಲಿ ಗೌರವಿಸಲಾಯಿತು.

ಸ್ಫೂರ್ತಿಯಾಗಿದ್ದಾರೆ

ಸಮರ್ಪಣಾ ಮನೋಭಾವದಿಂದೊಂದಿಗೆ ನಿರಂತರ ಅಭ್ಯಾಸ ಮಾಡಿದರೆ ಅನನ್ಯ ಸಾಧನೆ ಸಾಧ್ಯ ಎನ್ನುವುದಕ್ಕೆ ಸಾಕ್ಷಿಯಾಗಿರುವ ವಿದುಷಿ ಮಹಾಲಕ್ಷ್ಮೀ ಶೆಣೈ ಕರುನಾಡಿನ ಯುವ ಗಾಯಕರಿಗೆ ದೊಡ್ಡ ಸ್ಫೂರ್ತಿಯಾಗಿದ್ದಾರೆ ಎಂದು ಕಾರ್ಕಳ ತಾಲೂಕು ಕಸಾಪ ಪರಿಷತ್ತಿನ ಅಧ್ಯಕ್ಷ ಕೊಂಡಳ್ಳಿ ಪ್ರಭಾಕರ ಶೆಟ್ಟಿ ಹೇಳಿದ್ದಾರೆ.

ಅವರು ಕೇಂದ್ರ ಸರಕಾರದ ಸಂಸ್ಕೃತಿ ಸಚಿವಾಲಯದ ಸಂಗೀತ ನಾಟಕ ಅಕಾಡೆಮಿ ನೀಡುವ 2024ರ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರಕ್ಕೆ ಆಯ್ಕೆಯಾಗಿರುವ ಹಿಂದುಸ್ತಾನಿ ಶಾಸ್ತ್ರೀಯ ಗಾಯಕಿ ವಿದುಷಿ ಮಹಾಲಕ್ಷ್ಮೀ ಶೆಣೈ ಅವರನ್ನು ಅಭಿನಂದಿಸಿ ಮಾತನಾಡಿದರು. ಯುವ ಗಾಯಕರಿಗೆ ನೀಡುವ ರಾಷ್ಟ್ರಮಟ್ಟದ ಅತ್ಯುತ್ತಮ ಪುರಸ್ಕಾರಕ್ಕೆ ಆಯ್ಕೆಯಾಗಿರುವ ವಿದುಷಿ ಮಹಾಲಕ್ಷ್ಮೀ ಶೆಣೈ ಕಾರ್ಕಳದ ಸಂಗೀತ ಸಭಾದ ಮೂಲಕ ಜನಪ್ರಿಯರಾಗಿರುವ ಕಾರ್ಕಳ ಮಾರುಕಟ್ಟೆ ರಸ್ತೆಯ ಸತ್ಯನಾರಾಯಣ ನಗರದ ನಿವಾಸಿ



> **ಜನ ಮೆಚ್ಚುಗೆ ಪಡೆದಿದ್ದಾರೆ**
>
> ವಿದುಷಿ ಮಹಾಲಕ್ಷ್ಮೀ ಶೆಣೈ ಅವರು ತಮ್ಮ 3ನೇ ವಯಸ್ಸಿನಲ್ಲಿಯೇ ಸಂಗೀತದತ್ತ ಆಸಕ್ತರಾಗಿ ಶ್ರೀ ಸುಧೀಂದ್ರ ತೀರ್ಥ ಸ್ವಾಮೀಜಿ ಆಶೀರ್ವಾದದೊಂದಿಗೆ ಭಕ್ತಿಯಿಂದ ಹಿಂದೂಸ್ತಾನಿ ಶಾಸ್ತ್ರೀಯಸಂಗೀತ ಅಭ್ಯಾಸ ಮಾಡಿದರು. ಅಂತಾರಾಷ್ಟ್ರೀಯ ಖ್ಯಾತಿಯ ಗ್ರ್ಯಾಮಿ ಪ್ರಶಸ್ತಿ ಪುರಸ್ಕೃತರಾದ ಪಂಡಿತ್ ವಿಶ್ವಮೋಹನ ಭಟ್ ಆಪ್ತ ಶಿಷ್ಯೆಯಾಗಿ ಹಿಂದೂಸ್ತಾನಿ ಶಾಸ್ತ್ರೀಯ ಗಾಯನದ ಎಲ್ಲಾ ಪಟ್ಟು ಕರಗತ ಮಾಡಿಕೊಂಡು ದೇಶ ವಿದೇಶಗಳಲ್ಲಿ ಒಂದುವರೆ ಸಾವಿರಕ್ಕೂ ಅಧಿಕ ಸಂಗೀತ ಕಛೇರಿ ನಡೆಸಿ ಅಪಾರ ಜನ ಮೆಚ್ಚುಗೆಯನ್ನು ಗಳಿಸಿದ್ದಾರೆ.

ಡಾ.ಪ್ರಕಾಶ್ ಶೆಣೈ ಮತ್ತು ಭಾರತಿ ಶೆಣೈ ಅವರ ಸುಪುತ್ರಿಯಾಗಿದ್ದು ಉಡುಪಿಯ ಮಾಜಿ ಸಂಸದ ದಿ. ರಂಗನಾಥ ಶೆಣೈಯವರ ಮೊಮ್ಮಗಳು. ಸಂಗೀತವಲ್ಲದೆ ಶೈಕ್ಷಣಿಕವಾಗಿಯೂ ಉನ್ನತ ಸಾಧನೆ ಮಾಡಿರುವ ಇವರು ಉದಯಪುರದ ವಿಶ್ವವಿದ್ಯಾಲಯದಿಂದ ಹಿಂದೂಸ್ತಾನಿ ವೋಕಲ್‌ನಲ್ಲಿ ಸ್ನಾತಕೋತ್ತರ ಪದವಿ ಮೂಡಬಿದ್ರೆಯಲ್ಲಿ ಕೌನ್ಸಿಲಿಂಗನಲ್ಲಿ ಮಾಸ್ಟರ್ ಪದವಿ ಮತ್ತು ಶಿವಮೊಗ್ಗದಲ್ಲಿ ಸೈಕೊ ಥೆರಪಿಯಲ್ಲಿಯೂ ಉನ್ನತ ಪದವಿ ಗಳಿಸಿಕೊಂಡಿದ್ದಾರೆ.

ಹಿರಿಯ ಸಾಹಿತಿಗಳಾದ ಪಾದೆಕಲ್ಲು ವಿಷ್ಣು ಭಟ್, ಮಲ್ಲೇಪುರಂ ಜಿ. ವೆಂಕಟೇಶ್ , ರಮೇಶ್ ವಾಸುದೇವ್ ರಾವ್ ಸಾಹಿತ್ಯ ಸಂಘದ ಅಧ್ಯಕ್ಷ ಕೆ.ಪಿ. ಶೆಣೈ, ಉದ್ಯಮಿ ಎಸ್ ನಿತ್ಯಾನಂದ ಪೈ ಪೋಷಕರಾದ ಡಾ ಪ್ರಕಾಶ್ ಶೆಣೈ, ಭಾರತಿ ಶೆಣೈ, ಸಾಹಿತ್ಯ ಸಂಘದ ಬೇಬಿ ಈಶ್ವರಮಂಗಲ, ಕೊಂಡಳ್ಳಿ ಪ್ರಭಾಕರ ಶೆಟ್ಟಿ ಸುಲೋಚನ ಉಪಸ್ಥಿತರಿದ್ದರು.

ಆತ್ಮೀಯ ಕಡಂಬ ನಿರೂಪಿಸಿದರು.

ಸುಬ್ರಮಣ್ಯ ಕುರ್ಯಗೆ 'ಯಶೋ ಮಾಧ್ಯಮ' ಪ್ರಶಸ್ತಿ ಪ್ರದಾನ

ಪುಸ್ತಕ ವಿತರಣೆ ಜೊತೆ ಪ್ರಶಸ್ತಿ ವಿತರಣೆ ಶ್ಲಾಘನೀಯ

ಉಡುಪಿ: ಉಡುಪಿಯವರು ನಡೆಸುವ ಪ್ರತಿಯೊಂದು ಕಾರ್ಯಕ್ರಮದಲ್ಲೂ ಇಲ್ಲಿನ ಮಣ್ಣಿನ ಮತ್ತು ಪದ್ಧತಿಗಳ ಬಾಂಧವ್ಯ ಕಾಣುತ್ತದೆ ಎಂದು ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್ ಹೇಳಿದ್ದಾರೆ.

ಬೆಂಗಳೂರಿನ ರಾಜಾಜಿ ನಗರದ ಸ್ಪಂದನ ಸೇವಾ ಸಂಸ್ಥೆ ವತಿಯಿಂದ ಉಡುಪಿ ಜಿಲ್ಲೆಯ ಕಲ್ಯಾಣಪುರದ ಹಿಂದೂ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಉಚಿತ ಪುಸ್ತಕ ವಿತರಣಾ ಸಮಾರಂಭದಲ್ಲಿ ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸುಬ್ರಮಣ್ಯ ಜಿ. ಕುರ್ಯ ಅವರಿಗೆ 'ಯಶೋ ಮಾಧ್ಯಮ-2026' ಪ್ರಶಸ್ತಿಯನ್ನು ವಿತರಿಸಿ ಅವರು ಮಾತನಾಡಿದರು.

ಪತ್ರಕರ್ತ ಜನಾರ್ದನ್ ಕೊಡವೂರು ಮಾತನಾಡಿ, ಮಕ್ಕಳಿಗೆ ಉಚಿತ ನೋಟ್ ಪುಸ್ತಕ ವಿತರಣೆಯ ಜೊತೆಗೆ ಉಡುಪಿ ಜಿಲ್ಲೆಯ ಪತ್ರಕರ್ತರಿಗೆ ನೀಡುವ 'ಯಶೋ ಮಾಧ್ಯಮ-2026' ಪ್ರಶಸ್ತಿಯನ್ನು ಸುಬ್ರಹ್ಮಣ್ಯ. ಜಿ. ಕುರ್ಯಗೆ ನೀಡಿರುವುದು ಶ್ಲಾಘನೀಯ ಎಂದರು.

ಕಲ್ಯಾಣಪುರದ ಶ್ರೀ ವೆಂಕಟರಮಣ ದೇವಸ್ಥಾನದ ಆಡಳಿತ ಮೊಕ್ತೇಸರರಾದ ರಾಮರಾಯ್ ಕಿಣಿ ಮಾತನಾಡಿದರು. ಹಿಂದೂ ಹಿರಿಯ ಪ್ರಾಥಮಿಕ ಶಾಲೆಯ



> **ಸಮಾಜ ಮೆಚ್ಚುವ ಕಾರ್ಯ**
>
> ಸ್ಪಂದನಾ ಸೇವಾ ಸಂಸ್ಥೆ ಸುಮಾರು 18 ವರ್ಷಗಳಿಂದ ಹಿಂದೂ ಹಿ. ಪ್ರಾ. ಶಾಲಾ ಮಕ್ಕಳಿಗೆ ಉಚಿತವಾಗಿ ಪುಸ್ತಕ ವಿತರಣೆ ಜೊತೆ ಪತ್ರಕರ್ತರಿಗೆ ಪ್ರಶಸ್ತಿ, ಗಿಡ ನೆಡುವ ಕಾರ್ಯಕ್ರಮ ಸಮಾಜ ಮೆಚ್ಚುವ ಕಾರ್ಯ.
>
> ● ರಾಮರಾಯ್ ಕಿಣಿ

ಆಡಳಿತಾಧಿಕಾರಿಗಳಾದ ಸುಬ್ರಮಣ್ಯ ಕಾರಂತ್, ಮಣಿಪಾಲ ಕಾಲೇಜ್ ಆಫ್ ನರ್ಸಿಂಗ್ ನ ಸಹಾಯಕ ಪ್ರಾಧ್ಯಾಪಕಿ ಡಾ.ಮರಿಯಾ ಪಾಯಸ್, ಕಲ್ಯಾಣಪುರ ಗ್ರಾ.ಪಂ.ಮಾಜಿ ಅಧ್ಯಕ್ಷ ಕೃಷ್ಣ ದೇವಾಡಿಗ, ಸ್ಪಂದನಾ ಸೇವಾ ಸಂಸ್ಥೆಯ ಕಾರ್ಯ ಚಟುವಟಿಕೆಗಳ ಬಗ್ಗೆ ಮಾತನಾಡಿದರು. ರಾಘವೇಂದ್ರ ಪ್ರಭು ಕರ್ವಾಲುರವರ ನೇತೃತ್ವದಲ್ಲಿ 'ಪರಿಸರ ದಿನಾಚರಣೆ'ಯ ಅಂಗವಾಗಿ ಶಾಲೆಯ ಸುತ್ತಮುತ್ತ ವಿವಿಧ ಹಣ್ಣಿನ ಗಿಡಗಳನ್ನು ನೆಡಲಾಯಿತು.

ಪ್ರಕಾಶ್ ಕಾಮತ್‌ಗೆ ಸನ್ಮಾನ

ಜಿ.ಎಸ್.ಬಿ ಸಮುದಾಯದ 'ರುದ್ರ ಭೂಮಿ'ಯ ಅಭಿವೃದ್ಧಿಗೆ ಸದಾ ದುಡಿಯುತ್ತಿರುವ ಸಮಾಜ ಸೇವಕರಾದ ಪ್ರಕಾಶ್ ಕಾಮತ್ ರವರಿಗೆ ವಿಶೇಷವಾಗಿ ಸನ್ಮಾನಿಸಲಾಯಿತು.

ಸುಮನ ಪೈ, ಸ್ಪಂದನಾ ಸೇವಾ ಸಂಸ್ಥೆ ಅಧ್ಯಕ್ಷ ವೆಂಕಟೇಶ್ ಪೈ, ಖಜಾಂಜಿ ರಜನಿ ವಿ.ಪೈ, ಮುಖ್ಯೋಪಾಧ್ಯಾಯರಾದ ಸಂತೋಷ್ ಕುಮಾರ್ ಶೆಟ್ಟಿ ಯೂತ್ ಆಫ್ ಜಿ.ಎಸ್.ಬಿಯ ಸದಸ್ಯ ಅಜಿತ್ ಪೈ, ಸ್ಥಳೀಯರು, ಶಿಕ್ಷಕ ವೃಂದದವರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.. ವೆಂಕಟೇಶ್ ಪೈ ಸ್ವಾಗತಿಸಿದರು. ಸಂತೋಷ್ ಕಾಮತ್ ವಂದಿಸಿದರು.

ನೂಜಾಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ: ಅಕ್ಷರಾಭ್ಯಾಸ, ಪ್ರತಿಭಾ ಪುರಸ್ಕಾರ



ಕುಂದಾಪುರ: ಬೈಂದೂರು ವಲಯದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನೂಜಾಡಿ-2 ಬಗ್ವಾಡಿ ಇಲ್ಲಿ ಉಚಿತ ನೋಟ್ ಪುಸ್ತಕ ವಿತರಣಾ ಸಮಾರಂಭ, ಎಲ್.ಕೆ.ಜಿ ಪುಟಾಣಿಗಳ ಅಕ್ಷರಭ್ಯಾಸ ಕಾರ್ಯಕ್ರಮ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಶನಿವಾರ ನಡೆಯಿತು.

ಎಸ್‌ಡಿಎಂಸಿ ಅಧ್ಯಕ್ಷ ರಾಧಾಕೃಷ್ಣ ಗಾಣಿಗ ಅಧ್ಯಕ್ಷತೆ ವಹಿಸಿದ್ದರು. ಊರ ಹಿರಿಯ ಪುರೋಹಿತ ನಾಗಪ್ಪಯ್ಯ ಭಟ್ ನೇತೃತ್ವದಲ್ಲಿ ಎಲ್.ಕೆ.ಜಿ ಪುಟಾಣಿಗಳ ಅಕ್ಷರಭ್ಯಾಸ ಕಾರ್ಯಕ್ರಮ ನಡೆಯಿತು. ದಾನಿಗಳಾದ ಕುಂಭಾಶಿಯ ಎಂ.ಎನ್ ಚಂದನ್ ಮತ್ತು ಮೀನಾ ಚಂದನ್ ದಂಪತಿಗಳು ಎಲ್ಲಾ ಮಕ್ಕಳಿಗೆ ಒಂದು ವರ್ಷಕ್ಕೆ ಆಗುವಷ್ಟು ನೋಟ್ ಪುಸ್ತಕಗಳನ್ನು ವಿತರಿಸಿದರು.

ಗೌರವ

ಈ ಶಾಲೆಯಲ್ಲಿ ಕಲಿತು 2026 ಮಾರ್ಚ್‌ನಲ್ಲಿ ನಡೆದ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ.75ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಎಂ.ಎನ್. ಚಂದನ್ ದಂಪತಿಗಳು ವಿದ್ಯಾರ್ಥಿ ವೇತನ ವಿತರಿಸಿ ಶಾಲಾ ವತಿಯಿಂದ ಗೌರವಿಸಲಾಯಿತು.

ದಾನಿಗಳಾದ ಎಂ.ಎನ್ ಚಂದನ್, ಮೀನಾ ಚಂದನ್, ಶತಮಾನೋತ್ಸವ ಸಮಿತಿಯ ಅಧ್ಯಕ್ಷ ಬಿ.ಎನ್ ಶೆಟ್ಟಿ, ಹಳೆ ವಿದ್ಯಾರ್ಥಿ ಸಂಘದ ಗೌರವಾಧ್ಯಕ್ಷ ರಾಜೀವ ಶೆಟ್ಟಿ, ಹೊಸಾಡು ಕ್ಲಸ್ಟರ್ ಸಿಆರ್‌ಪಿ ಸತೀಶ್ ಶೆಟ್ಟಿ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಪ್ರಕಾಶ್ ಆಚಾರ್ಯ, ಪೋಷಕರು, ಎಸ್.ಡಿ.ಎಂ.ಸಿ ಸದಸ್ಯರು, ಶಿಕ್ಷಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮುಖ್ಯೋಪಾಧ್ಯಾಯನಿ ಶೈಲಜಾ ಶೆಟ್ಟಿ ಸ್ವಾಗತಿಸಿದರು. ಸಹ ಶಿಕ್ಷಕಿ ಪೂರ್ಣಿಮಾ ಶೆಟ್ಟಿ ಕಾರ್ಯಕ್ರಮ ನಿರೂಪಿಸಿ, ಶಿಕ್ಷಕಿಯರಾದ ಉಷಾ, ರೇಷ್ಮಾ, ಚೈತ್ರ, ಸ್ವಾತಿ, ಶ್ವೇತ, ಹರ್ಷಿತ ಸಹಕರಿಸಿದರು. ಸತ್ಯವತಿ ವಂದಿಸಿದರು.

ರಕ್ತದಾನದಲ್ಲಿ ಉಡುಪಿ ಜಿಲ್ಲೆಯು ರಾಜ್ಯಕ್ಕೇ ಮಾದರಿಯಾಗಿದೆ: ಬಸ್ರೂರು ರಾಜೀವ ಶೆಟ್ಟಿ



ಉಡುಪಿ: ಉಡುಪಿ ಜಿಲ್ಲೆಯಲ್ಲಿ ಸಾವಿರಾರು ರಕ್ತದಾನಿಗಳಿದ್ದಾರೆ. ಇಂದು ಅವರಿಂದಾಗಿ ಜಿಲ್ಲೆಯಲ್ಲಿ ವೈದ್ಯಕೀಯ ಕ್ಷೇತ್ರವು ಮಹತ್ವ ಪಡೆದಿದೆ. ಜಿಲ್ಲೆಯು ರಾಜ್ಯದಲ್ಲೇ ರಕ್ತದಾನಿಗಳ ಜಿಲ್ಲೆ ಎಂದು ಗುರುತಿಸಲ್ಪಟ್ಟು ಮಾದರಿಯಾಗಿದೆ ಎಂದು ಕರ್ನಾಟಕ ರಾಜ್ಯ ರೆಡ್‌ಕ್ರಾಸ್ ಸಂಸ್ಥೆಯ ಸಭಾಪತಿ ಬಸ್ರೂರು ರಾಜೀವ ಶೆಟ್ಟಿ ಹೇಳಿದ್ದಾರೆ.

ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಉಡುಪಿ ಜಿಲ್ಲಾ ಶಾಖೆ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ರಕ್ತನಿಧಿ ಕೇಂದ್ರ ಕುಂದಾಪುರ ಮತ್ತು ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರ ಉಡುಪಿ ಆಶ್ರಯದಲ್ಲಿ ನಡೆದ ವಿಶ್ವ ರಕ್ತದಾನಿಗಳ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತಾನಾಡಿದರು.

ಕುಂದಾಪುರ ರೆಡ್‌ಕ್ರಾಸ್ ಸಭಾಪತಿ ಜಯಕರ ಶೆಟ್ಟಿ ಮಾತನಾಡಿ, ಜಿಲ್ಲೆಯಲ್ಲಿ ರಕ್ತದ ತೀವ್ರ ಕೊರತೆಯಿದ್ದು ರಕ್ತದಾನದ ಬಗ್ಗೆ ಇನ್ನಷ್ಟು ಅರಿವು ಮೂಡಿಸುವ ಅಗತ್ಯವಿದೆ ಎಂದರು.

ಜಿಲ್ಲಾ ವಿಕಲಚೇತನರ - ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಕಲ್ಯಾಣಾಧಿಕಾರಿ ರತ್ನ ಸುವರ್ಣ ರಕ್ತದಾನದ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭ ಹಲವು ಬಾರಿ ರಕ್ತದಾನ ಮಾಡಿ ಅಮೂಲ್ಯ ಜೀವ ಉಳಿಸಿದ ರಕ್ತದಾನಿಗಳಾದ ಸುಕನ್ಯಾ ಎಂ. ಕಳಸ, ಅಕ್ಷತ್ ನಾಯಕ್,ವಿಶ್ವನಾಥ ನಾಯಕ್, ರಘುರಾಮ್, ಶಿವಕುಮಾರ್ ಶೆಟ್ಟಿಗಾರ್, ರಮೇಶ್ ಕರ್ಕೇರ ಅವರನ್ನು ಜಿಲ್ಲಾ ರೆಡ್ ಕ್ರಾಸ್ ಪರವಾಗಿ ಸನ್ಮಾನಿಸಲಾಯಿತು.

ಸುಕನ್ಯ ಎಂ. ಕಳಸ, ಶಿವಕುಮಾರ್ ಶೆಟ್ಟಿಗಾರ್ ಸನ್ಮಾನಿತರ ಪರವಾಗಿ ರಕ್ತದಾನದ ಬಗ್ಗೆ ಅನುಭವ ಹಂಚಿಕೊಂಡರು. ಜಿಲ್ಲಾ ರೆಡ್ ಕ್ರಾಸ್ ಉಪಸಭಾಪತಿ ಡಾ. ಅಶೋಕ್ ಕುಮಾರ್ ವೈ.ಜಿ, ಆಡಳಿತ ಮಂಡಳಿ ಸದಸ್ಯ ಟಿ. ಚಂದ್ರಶೇಖರ್ ಉಪಸ್ಥಿತರಿದ್ದರು. ರೆಡ್‌ಕ್ರಾಸ್ ಕಾರ್ಯದರ್ಶಿ ಡಾ. ಗಣನಾಥ ಎಕ್ಕಾರು ಸ್ವಾಗತಿಸಿ, ಪ್ರೊ. ದಯಾನಂದ ಡಿ. ನಿರೂಪಿಸಿ, ರಮಾದೇವಿ ವಂದಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಯೋಜನೆ: ಸ್ವ-ಉದ್ಯೋಗ ಪ್ರೇರಣಾ ಶಿಬಿರ



ಕೋಟ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಬ್ರಹ್ಮಾವರ ತಾಲೂಕಿನ ಕೋಟ ವಲಯದಲ್ಲಿ ಸ್ವ ಉದ್ಯೋಗ ಪ್ರೇರಣಾ ಶಿಬಿರ ಕೋಟತಟ್ಟು ಗ್ರಾ.ಪಂ. ಸಭಾಂಗಣದಲ್ಲಿ ಭಾನುವಾರ ಜರಗಿತು.

ಬ್ರಹ್ಮಾವರ ರುಡ್‌ಸೆಟ್ ಸಂಸ್ಥೆ ನಿರ್ದೇಶಕ ಡಾ.ಬೊಮ್ಮಯ್ಯ ಕಾರ್ಯಕ್ರಮ ಉದ್ಘಾಟಿಸಿ, ಮಹಿಳೆಯರು ಸ್ವ ಉದ್ಯೋಗ ಮಾಡುವುದರಿಂದ ಸ್ವಾವಲಂಬನೆ ಜೀವನ ಮಾಡಲು ಸಾಧ್ಯ, ತಮ್ಮ ಸಂಸ್ಥೆಯಲ್ಲಿರುವ ತರಬೇತಿ ಬಗ್ಗೆ ಅಣಬೆ ಕೃಷಿ, ಟೈಲರಿಂಗ್, ಫ್ಯಾಶನ್ ಡಿಸೈನ್, ಮೊಬೈಲ್ ರಿಪೇರಿ, ಚಟ್ನಿ ಪುಡಿ, ಹಪ್ಪಳ, ಉಪ್ಪಿನಕಾಯಿ ಎಂಬ್ರಾಯ್ಡರಿ ವರ್ಕ್, ಬ್ಯೂಟಿ ಪಾರ್ಲರ್ ಮೊದಲಾದ ತರಬೇತಿ ಬಗ್ಗೆ ಮಾಹಿತಿ ನೀಡಿದ ಅವರು ಈ ತರಬೇತಿಗಳ ಪ್ರಯೋಜನ ಪಡೆದುಕೊಳ್ಳಲು ಕರೆ ನೀಡಿದರು.

ಶ್ರೀ ಕ್ಷೇತ್ರ ಯೋಜನಾಧಿಕಾರಿ ರಮೇಶ್ ಪಿ.ಕೆ., ಸ್ವ ಉದ್ಯೋಗಕ್ಕೆ ಬೇಕಾದ ತರಬೇತಿ ನಡೆಯಲಿದ್ದು , ಸದುಪಯೋಗ ಪಡೆದುಕೊಳ್ಳಿ ಎಂದರು.

ಕೋಟತಟ್ಟು ಗ್ರಾ.ಪಂ.ನ ಮಾಜಿ ಅಧ್ಯಕ್ಷ ಸತೀಶ್ ಕುಂದರ ಅಧ್ಯಕ್ಷತೆ ವಹಿಸಿದ್ದರು. ಒಕ್ಕೂಟದ ಅಧ್ಯಕ್ಷ ಪ್ರೇಮ, ಕೋಟ ವಿವೇಕ ಪ್ರೌಢಶಾಲಾ ಶಿಕ್ಷಕಿ ಮಹಾಲಕ್ಷ್ಮಿ, ಜ್ಞಾನವಿಕಾಸ ಸಮನ್ವಯ ಅಧಿಕಾರಿ ಪುಷ್ಪಲತಾ, ಸೇವಾ ಪ್ರತಿನಿಧಿ ಶೋಭಾ ಉಪಸ್ಥಿತರಿದ್ದರು.

ಶ್ರೀಕ್ಷೇತ್ರ ಧ.ಗ್ರಾ.ಯೋಜನೆ ಬಿ.ಸಿ.ಟ್ರಸ್ಟ್ ಬ್ರಹ್ಮಾವರ ತಾಲೂಕಿನ ಕೋಟ ವಲಯದಲ್ಲಿ ಸ್ವ ಉದ್ಯೋಗ ಪ್ರೇರಣಾ ಶಿಬಿರವನ್ನು ಬ್ರಹ್ಮಾವರ ರುಡ್‌ಸೆಟ್ ಸಂಸ್ಥೆ ನಿರ್ದೇಶಕ ಡಾ. ಬೊಮ್ಮಯ್ಯ ಕಾರ್ಯಕ್ರಮ ಉದ್ಘಾಟಿಸಿದರು. ಶ್ರೀ ಕ್ಷೇತ್ರ ಯೋಜನಾಧಿಕಾರಿ ರಮೇಶ್ ಪಿ.ಕೆ., ಸತೀಶ್ ಕುಂದರ್ ಮತ್ತಿತರರಿದ್ದರು.

ಸಾಣೂರು ಸರಕಾರಿ ಪ.ಪೂ., ಪ್ರೌಢಶಾಲಾ, ಕಾಲೇಜು ವಿಭಾಗದ ಸಾಧಕ ವಿದ್ಯಾರ್ಥಿಗಳಿಗೆ ಗೌರವ ಅಭಿನಂದನಾ ಕಾರ್ಯಕ್ರಮ

ಮಕ್ಕಳಿಗೆ ಸಂದ ಗೌರವ ಮುಂದಿನ ಶೈಕ್ಷಣಿಕ ಜೀವನದ ಸಾಧನೆಗೆ ಪ್ರೇರಣೆಯಾಗಲಿ

ಕಾರ್ಕಳ: ಇಲ್ಲಿನ ಸಾಣೂರು ಯುವಕ ಮಂಡಲ ವತಿಯಿಂದ 2025-26 ನೇ ಸಾಲಿನ ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ಅಂತಿಮ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಅಧಿಕ ಅಂಕ ಪಡೆದ ಸಾಣೂರು ಗ್ರಾಮದ ಹಾಗೂ ಸರಕಾರಿ ಪ.ಪೂ. ಕಾಲೇಜು, ಸಾಣೂರು ಇಲ್ಲಿನ ಪ್ರೌಢಶಾಲಾ, ಕಾಲೇಜು ವಿಭಾಗದ ವಿದ್ಯಾರ್ಥಿಗಳಿಗೆ ಗೌರವ ಅಭಿನಂದನಾ ಕಾರ್ಯಕ್ರಮ ಸಾಣೂರು ಮುರತಂಗಡಿ ರೆಜೆನ್ಸಿ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಸಾಣೂರು ಮಹಾಲಿಂಗೇಶ್ವರ ದೇವಳ ಪ್ರಧಾನ ಅರ್ಚಕ ವೇ. ಮೂ. ಶ್ರೀರಾಮ ಭಟ್ ಶುಭ ಹಾರೈಸಿದರು. ಅಧ್ಯಕ್ಷತೆಯನ್ನು ವಿಜಯ ಶೆಟ್ಟಿ ವಹಿಸಿ, ಮಕ್ಕಳಿಗೆ ತಮ್ಮ ಸಂದ ಗೌರವ ಮುಂದಿನ ಶೈಕ್ಷಣಿಕ ಜೀವನದಲ್ಲಿ ಸಾಧನೆ ಮಾಡಲು ಪ್ರೇರಣೆ ಸಿಗಲಿ. ಸಾಣೂರು ಯುವಕ



ಮಂಡಲ ಸಾಮಾಜಿಕ ಚಟುವಟಿಕೆ ಇಡೀ ರಾಜ್ಯಕ್ಕೆ ಮಾದರಿ. ನಾವೆಲ್ಲ ಯುವಕ ಮಂಡಲದ ಪ್ರತಿ ಕಾರ್ಯಕ್ರಮಕ್ಕೆ ಜೊತೆ ಇದ್ದೇವೆ ಎಂದು ತಿಳಿಸಿದರು. ಶಿಕ್ಷಕ ಮಹೇಶ್ ಕುಮಾರ್. ವಿ. ಕರ್ಕೇರ, ಪೈಪೋಟಿ ಯುಗದಲ್ಲಿ ಇತರರಿಗೆ ಹೋಲಿಸಿಕೊಳ್ಳದೆ ನಾವು ನಾವಾಗಿಯೇ ಸಾಧನೆಗೈದು ಇತರರಿಗೆ ಮಾದರಿಯಾಗೋಣ ಕೇವಲ ಅಂಕ ಗಳಿಸುವ ಗುರಿ ಹೊಂದದೆ ಜೀವನದ ಯಶಸ್ವಿಗೆ ಮುನ್ನಡೆಯೋಣ ಎಂದರು.

ವಿದ್ಯಾನಂದ ಕರ್ಕೇರ ಗೌರವ ನಿರ್ದೇಶಕರು ಭಾರತ್ ಕೋಪರೇಟಿವ್ ಬ್ಯಾಂಕ್ ಮುಂಬೈ ಮತ್ತು ಇವರ ಪತ್ನಿ ಗುಣ ವಿ. ಕರ್ಕೇರ ಇವರು ರೂಪಾಯಿ 25000 ಮೊತ್ತದ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಗಳಿಗೆ ನೀಡಿ ವಿದ್ಯಾರ್ಥಿಗಳಿಗೆ ಹಾಗೂ ಮಂಡಲದ ಸೇವಾ ಕಾರ್ಯಕ್ರಮಗಳಿಗೆ ಅಭಿನಂದನೆ ತಿಳಿಸಿದರು.

> **ಸನ್ಮಾನಿತರು**
>
> ಎಸ್ಸೆಸ್ಸೆಲ್ಸಿಯ 11 ವಿದ್ಯಾರ್ಥಿಗಳು, ದ್ವಿತೀಯ ಪಿಯುಸಿಯ 38 ಒಟ್ಟು 49 ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಇದರೊಂದಿಗೆ ಪದೊನ್ನತಿ ಹೊಂದಿದ ಸುಧೀರ್ ನಾಯಕ್ , ಕಲಾವತಿ ಅವರನ್ನು ಅಭಿನಂದಿಸಲಾಯಿತು.

ಸುಚೇತಾ ಕಾಮತ್, ಸುಧೀರ್ ನಾಯಕ್ ಸಚ್ಚರಿಪೇಟೆ, ಕಲಾವತಿ ವೇದಿಕೆಯಲ್ಲಿದ್ದರು.

ನವದೀಪ್ ಆರ್. ಶೆಟ್ಟಿಗಾರ್ ಗೌರವ

ವಿಶೇಷವಾಗಿ ಭಾರತೀಯ ಸೇನೆ ಅಗ್ನಿವೀರ್‌ಗೆ ಆಯ್ಕೆಯಾದ ನವದೀಪ್ ಆರ್. ಶೆಟ್ಟಿಗಾರ್ ಅವರನ್ನು ಗೌರವಿಸಲಾಯಿತು. ಮಂಡಲದ ಮಾಜಿ ಅಧ್ಯಕ್ಷರಾದ ರಘು ಪೂಜಾರಿ, ದೇವಾನಂದ್ ಶೆಟ್ಟಿ ಮಹೇಶ್ ಕುಮಾರ್ ಜಗದೀಶ್ ಕುಮಾರ್ ಶಂಕರ್ ಶೆಟ್ಟಿ ಪ್ರಕಾಶ್ ಮಡಿವಾಳ ಹಿರಿಯ ಸದಸ್ಯರಾದ ರಾಮದಾಸ್ ಭಟ್, ಸುಂದರ್ ಶೆಟ್ಟಿ ಆನಂದ್ ಸುವರ್ಣ ಪ್ರಶಾಂತ್ ಶೆಟ್ಟಿ ದಿನೇಶ್ ನಾಯಕ್ ಕಿರಣ್ ಕುಲಾಲ್ ಸಮಿತಿ ಸದಸ್ಯರಾದ ಅನಿಲ್ ಕೋಟ್ಯಾನ್ ಪ್ರಶಾಂತ್ ಆಚಾರ್ಯ ಪ್ರಭಾಕರ್ ಶೆಟ್ಟಿ ದಿನೇಶ್ ಮಡಿವಾಳ ಜಯ ಶೆಟ್ಟಿಗಾರ್ ದಿನೇಶ್ ಶೆಟ್ಟಿಗಾರ್, ವಿದ್ಯಾನಂದ್ ಕೋಟ್ಯಾನ್, ಪ್ರಸನ್ನ ಆಚಾರ್ಯ, ಜಿತೇಶ್ ರಾವ್ , ಸುನಿಲ್ ಕುಲಾಲ್ ಹರೀಶ್ ರಾವ್ ಮತ್ತಿತರರಿದ್ದರು. ಮಂಡಲದ ಅಧ್ಯಕ್ಷ ಪ್ರಸಾದ್ ಶೆಟ್ಟಿ ಸ್ವಾಗತಿಸಿ, ಮೋಹನ್ ಶೆಟ್ಟಿ ನಿರೂಪಿಸಿದರು. ಚಂದ್ರಹಾಸ್ ಪೂಜಾರಿ, ಸುದರ್ಶನ್ ನಾಯ್ಕ್ ಸನ್ಮಾನಿತರ ಪಟ್ಟಿ ವಾಚಿಸಿದರು. ಪ್ರಕಾಶ್ ರಾವ್ ವಿದ್ಯಾರ್ಥಿ ಗಳ ವಿವರ ವಾಚಿಸಿದರು. ರಾಜೇಶ್ ಪೂಜಾರಿ ವಂದಿಸಿದರು.